ವಾರ್ಷಿಕ ವರದಿ
ANNUAL REPORT
2018-19

ಐವತ್ತನಾಲ್ಕನೆಯ ವಾರ್ಷಿಕ ವರದಿ

(ಏಪ್ರಿಲ್ 1, 2018 ರಿಂದ ಮಾರ್ಚ್ 31, 2019)

FIFTY-FOURTH ANNUAL REPORT

(April 1, 2018 to March 31, 2019)



ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
UNIVERSITY OF AGRICULTURAL SCIENCES
BANGALORE

2019



ಶ್ರೀ ವಜುಭಾಯಿ ವಾಲಾ, ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರು ಕೃಷಿಮೇಳ–2018 ಅನ್ನು ಉದ್ಘಾಟಿಸುತ್ತಿರುವುದು.
ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ, ಸನ್ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರ, ಕುಲಪತಿಗಳು, ವಿಸ್ತರಣಾ ನಿರ್ದೇಶಕರು
ಹಾಗೂ ಸಂಶೋಧನಾ ನಿರ್ದೇಶಕರು ಉಪಸ್ಥಿತರಿದ್ದಾರೆ.

Sri Vajubhai Vala, Hon'ble Governor of Karnataka inaugurating the Krishmela.
Sri N. H. Shivashankar Reddy, Hon'ble Minister of Agriculture, Vice-Chancellor, Director of Extension and Director of Research are seen



ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳು ಇತರೆ ಗಣ್ಯ ವ್ಯಕ್ತಿಗಳ ಜೊತೆ ಕೃಷಿಮೇಳ–2018ರ
ಪ್ರಶಸ್ತಿ ವಿಜೇತರೊಂದಿಗೆ

Sri H. D. Kumaraswamy, Hon'ble Chief Minister of Karnataka and other dignitaries with the awardees during Krishimela - 2018

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

UNIVERSITY OF AGRICULTURAL SCIENCES BANGALORE

ಐವತ್ತನಾಲ್ಕನೆಯ ವಾರ್ಷಿಕ ವರದಿ

(ಏಪ್ರಿಲ್ 1, 2018 ರಿಂದ ಮಾರ್ಚ್ 31, 2019)

FIFTY-FOURTH ANNUAL REPORT

(April 1, 2018 to March 31, 2019)

2018-19

ಪ್ರಕಾಶಕರು Published by	**ಡಾ. ಕೆ. ಹೆಚ್. ನಾಗರಾಜ್** ಸಂಪಾದಕರು ಸಂವಹನ ಕೇಂದ್ರ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Dr. K. H. Nagaraj** Editor Communication Centre UAS, GKVK, Bengaluru-560 065
ಸಂಕಲನ, ಪ್ರಕ್ರಿಯೆ ಹಾಗೂ ಸಂಪಾದನೆ Compiled, Processed & Edited by	**ಡಾ. ಕೆ. ಹೆಚ್. ನಾಗರಾಜ್** ಸಂಪಾದಕರು ಸಂವಹನ ಕೇಂದ್ರ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Dr. K. H. Nagaraj** Editor Communication Centre UAS, GKVK, Bengaluru-560 065
	ಡಾ. ಸಿ. ಎಂ. ಸವಿತ ಸಹ ಸಂಪಾದಕರು ಸಂವಹನ ಕೇಂದ್ರ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Dr. C. M. Savitha** Associate Editor Communication Centre UAS, GKVK, Bengaluru-560 065
ಅಕ್ಷರ ಜೋಡಣೆ, ವಿನ್ಯಾಸ Designed, Layout & Type Setting	**ಶ್ರೀ ಎನ್. ರಾಮಕೃಷ್ಣ** ಡಿ.ಟಿ.ಪಿ. ಘಟಕ ಸಂವಹನ ಕೇಂದ್ರ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Mr. N. Ramakrishna** DTP Section Communication Centre UAS, GKVK, Bengaluru-560 065
ಕನ್ನಡ ಅನುವಾದ Kannada Translation by	**ಡಾ. ಜೆ. ಬಾಲಕೃಷ್ಣ** ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಕನ್ನಡ ಅಧ್ಯಯನ ವಿಭಾಗ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Dr. J. Balakrishna** Professor & Head Dept. of Kannada Studies UAS, GKVK, Bengaluru-560 065
	ಡಾ. ಜಿ. ವೀರಭದ್ರಗೌಡ ಸಹಾಯಕ ಪ್ರಾಧ್ಯಾಪಕರು ಕನ್ನಡ ಅಧ್ಯಯನ ವಿಭಾಗ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Dr. G. Veerabhadragouda** Assistant Professor Dept. of Kannada Studies UAS, GKVK, Bengaluru-560 065
ಕನ್ನಡ ಬೆರಳಚ್ಚು Kannada Typing	**ಶ್ರೀ ಎಲ್. ಆರ್. ದೊಡ್ಡರಂಗಯ್ಯ** ಕನ್ನಡ ಅಧ್ಯಯನ ವಿಭಾಗ ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ, ಬೆಂಗಳೂರು	**Mr. L. R. Doddarangaiah** Dept. of Kannada Studies UAS, GKVK, Bengaluru-560 065

ಮಾಹಿತಿ ಒದಗಿಸಿದವರು
Information Source

ಕುಲಸಚಿವರ ಕಛೇರಿ, ಶಿಕ್ಷಣ ನಿರ್ದೇಶಕರ ಕಛೇರಿ, ಸಂಶೋಧನಾ ನಿರ್ದೇಶಕರ ಕಛೇರಿ, ವಿಸ್ತರಣಾ ನಿರ್ದೇಶಕರ ಕಛೇರಿ, ವಿವಿಧ ಕೃಷಿ ಮಹಾವಿದ್ಯಾಲಯಗಳ ಡೀನ್‌ರವರು, ಡೀನ್ (ವಿದ್ಯಾರ್ಥಿ ಕಲ್ಯಾಣ), ಡೀನ್ (ಸ್ನಾತಕೋತ್ತರ), ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಆಡಳಿತಾಧಿಕಾರಿಗಳ ಕಛೇರಿ, ಆಸ್ತಿ ಅಧಿಕಾರಿಗಳ ಕಛೇರಿ, ಗ್ರಂಥಾಲಯ, ಸಂವಹನ ಕೇಂದ್ರ, ವಿಶ್ವವಿದ್ಯಾನಿಲಯದ ಪರೀಕ್ಷಾ ಘಟಕ ಮತ್ತು ಪ್ರಾಯೋಜನೆ ಯೋಜನೆ ಮತ್ತು ಮೇಲುಸ್ತುವಾರಿ ಘಟಕ.

Office of Registrar, Directorate of Education, Directorate of Research, Directorate of Extension, Deans of constituent Colleges, Dean of Student Welfare, Dean PGS, Comptroller Office, Administrative Office, Estate Office, Library, Communication Centre, Examination Cell and PPMC.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಮುನ್ನುಡಿ



ಡಾ. ಎಸ್. ರಾಜೇಂದ್ರ ಪ್ರಸಾದ್
ಕುಲಪತಿಗಳು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು 6ನೇ ಜೂನ್ 1963 ರಂದು ಮೈಸೂರು (ಕರ್ನಾಟಕ) ಸರ್ಕಾರದ ಅಧಿನಿಯಮದ ಮೂಲಕ ಸ್ಥಾಪಿಸಲಾಯಿತು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 1ನೇ ಏಪ್ರಿಲ್, 2018 ರಿಂದ 31ನೇ ಮಾರ್ಚ್ 2019 ರವರೆಗಿನ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕ್ಷೇತ್ರಗಳ ಸಾಧನೆಯನ್ನು ಹಾಗೂ ಸಾಮಾನ್ಯ ಆಡಳಿತವನ್ನು ಚಿತ್ರಿಸುವ ಐವತ್ತನಾಲ್ಕನೇ ವಾರ್ಷಿಕ ವರದಿಯನ್ನು ತಮ್ಮೆದುರಿಗೆ ಇಡಲು ನನಗೆ ಸಂತೋಷವಾಗುತ್ತದೆ. ರಾಜ್ಯದ ರೈತ ಸಮುದಾಯದ ಒಳಿತಿಗಾಗಿ ವಿಶ್ವವಿದ್ಯಾನಿಲಯವು ಕೃಷಿ ವಿಜ್ಞಾನ ಕ್ಷೇತ್ರಗಳ ಹೊಸ ಚಿಂತನೆಗಳನ್ನು ಸ್ವೀಕರಿಸಲು, ನವೀನ ತಂತ್ರಜ್ಞಾನಗಳ ಹಾಗೂ ಕೌಶಲ್ಯಯುಕ್ತ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಬದ್ಧವಾಗಿದೆ. ವಿಶ್ವವಿದ್ಯಾನಿಲಯವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಸಾಮಾನ್ಯ ಬೆಂಬಲಕ್ಕೆ ಪಾತ್ರವಾಗಿದ್ದು ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳಿಗೆ ಸಹಭಾಗಿತ್ವವನ್ನು ಹೊಂದಿದೆ.

ವಿಶ್ವವಿದ್ಯಾನಿಲಯವು ಕೃಷಿ; ರೇಷ್ಮೆಕೃಷಿ; ಕೃಷಿ ಮಾರುಕಟ್ಟೆ ಮತ್ತು ಸಹಕಾರ; ಕೃಷಿ ಜೈವಿಕ ತಂತ್ರಜ್ಞಾನ; ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೃಷಿ ಇಂಜಿನಿಯರಿಂಗ್ ನಲ್ಲಿ ಆರು ಸ್ನಾತಕ ಪದವಿ ಕಾರ್ಯಕ್ರಮಗಳನ್ನು ತನ್ನ ಐದು ಬೋಧನಾ ಆವರಣಗಳಲ್ಲಿ ನಡೆಸುತ್ತಿದೆ. ವಿಶ್ವವಿದ್ಯಾನಿಲಯವು ಕೃಷಿ ವ್ಯವಹಾರ ನಿರ್ವಹಣೆಯಲ್ಲಿ ಎಂ.ಬಿ.ಎ. ಒಳಗೊಂಡಂತೆ 22 ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳ ಮತ್ತು 15 ಡಾಕ್ಟೊರಲ್ ಪದವಿ ಕಾರ್ಯಕ್ರಮಗಳನ್ನು ತನ್ನ ಜಿ.ಕೆ.ವಿ.ಕೆ. ಆವರಣದಲ್ಲಿ ನೀಡುತ್ತಿದೆ. ಐದು ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಮತ್ತು ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾವನ್ನು ಮಂಡ್ಯದ ವಿ.ಸಿ.ಫಾರಂನಲ್ಲಿ ನೀಡಲಾಗುತ್ತಿದೆ. ಒಂದು ವರ್ಷದ ಡಿಪ್ಲೊಮಾ, ಸ್ನಾತಕೋತ್ತರ ಡಿಪ್ಲೊಮಾ ಹಾಗೂ ಹಲವಾರು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣದ ಮೂಲಕ ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ವಿದ್ಯಾರ್ಥಿವೇತನಗಳು ಮತ್ತು ಫೆಲೋಶಿಪ್‌ಗಳನ್ನು ನೀಡಲಾಗುತ್ತದೆ. ವಿದ್ಯಾರ್ಥಿ ಚಟುವಟಿಕೆಗಳಿಗಾಗಿ ಹಲವಾರು ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ / ನವೀಕರಣಗೊಳಿಸಲಾಗುತ್ತಿದೆ. ನಮ್ಮ ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದಲ್ಲಿ ಶೈಕ್ಷಣಿಕ, ಕ್ರೀಡೆ ಮತ್ತು ಆಟೋಟಗಳಲ್ಲಿ, ಪಠ್ಯೇತರ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆಂದು ಹೇಳಲು ಹೆಮ್ಮೆಯೆನ್ನಿಸುತ್ತದೆ. ವಿಶ್ವವಿದ್ಯಾನಿಲಯವು ಐ.ಸಿ.ಎ.ಆರ್.–ಜೆ.ಆರ್.ಎಫ್. ಪರೀಕ್ಷೆಗಳಲ್ಲಿ 1ನೇ ಸ್ಥಾನ ಗಳಿಸಿದೆ. ಈ ಸಂದರ್ಭದಲ್ಲಿ, ವಿಶ್ವವಿದ್ಯಾನಿಲಯಕ್ಕೆ ಕೀರ್ತಿಯನ್ನು ತಂದುಕೊಟ್ಟ ಅಧ್ಯಾಪಕರನ್ನು ಮತ್ತು ವಿದ್ಯಾರ್ಥಿಗಳನ್ನು ಹಾಗೂ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಕೊಡುಗೆ ನೀಡಿದ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮತ್ತು ಉದ್ಯೋಗಗಳಿಗೆ ನಡೆಯುವ ಆವರಣ ಸಂದರ್ಶನಗಳಿಗೆ ಕೋಚಿಂಗ್ ತರಗತಿಗಳನ್ನು ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿತ್ತು. ಹೊಸ ಆಕ್ಸೆಶನ್‌ಗಳ, ಸಂಪರ್ಕಜಾಲ ಹಾಗೂ ವೈಫೈನಿಂದ ಇ–ಕಲಿಕೆ ಸೌಲಭ್ಯಗಳ ಮೂಲಕ ಗ್ರಂಥಾಲಯ ಸೌಲಭ್ಯಗಳನ್ನು ಸದೃಢಗೊಳಿಸಲಾಗಿದೆ.

ವಿಶ್ವವಿದ್ಯಾನಿಲಯವು ರಾಜ್ಯದ ಹತ್ತು ಕೃಷಿ ಹವಾಮಾನ ವಲಯಗಳಲ್ಲಿ 13 ಸಂಶೋಧನಾ ಕೇಂದ್ರಗಳನ್ನು ದಕ್ಷಿಣ ಕರ್ನಾಟಕದ ವಲಯ ನಿರ್ದಿಷ್ಟ ಹಾಗೂ ಅವಶ್ಯಕತೆ ಆಧಾರಿತ ಸಂಶೋಧನೆಗಳನ್ನು ಕೈಗೊಳ್ಳಲು ಹೊಂದಿದೆ. 2018–19ರ ಸಾಲಿನಲ್ಲಿ 81 ಸಂಶೋಧನಾ ಪ್ರಾಯೋಜನೆಗಳು ಒಟ್ಟು ರೂ. 438.40 ಲಕ್ಷಗಳ ವೆಚ್ಚದೊಂದಿಗೆ ಕಾರ್ಯಾಚರಣೆಯಲ್ಲಿವೆ. ಭತ್ತದ ಗಂಗಾವತಿ ಸೋನಾ (ಐ.ಇ.ಟಿ.–20594) ತಳಿ, ಅಲಸಂದೆಯ ಪಿ.ಜಿ.ಸಿ.ಪಿ.–6 ತಳಿ, ಉದ್ದಿನ ಎಲ್.ಬಿ.ಜಿ.–791 ತಳಿ, ಕಬ್ಬಿನ ಸಿ.ಓ.ವಿ.ಸಿ.– 16061 ಮತ್ತು ಸಿ.ಓ.ವಿ.ಸಿ. –16062 ತಳಿಗಳು ಮತ್ತು ಹಲಸಿನ ಲಾಲ್ ಬಾಗ್ ಮಧುರ ತಳಿಗಳನ್ನು ಇತರ 18 ತಂತ್ರಜ್ಞಾನಗಳೊಂದಿಗೆ ಬಿಡಗಡೆ ಮಾಡಿ ಬೇಸಾಯಕ್ಕೆ ಶಿಫಾರಸ್ಸು ಮಾಡಲಾಗಿದೆ. ವಿಶ್ವವಿದ್ಯಾನಿಲಯವು ಮುಂಚೂಣಿ ಪ್ರಾತ್ಯಕ್ಷಿಕೆ, ಕ್ಷೇತ್ರ ಪರೀಕ್ಷೆ, ಚರ್ಚಾ ಸಭೆಗಳು, ರೈತರ ಕ್ಷೇತ್ರ ಶಾಲೆ, ಕ್ಷೇತ್ರೋತ್ಸವಗಳಂತಹ ಹಲವಾರು ವಿಸ್ತರಣಾ ಚಟುವಟಿಕೆಗಳನ್ನು ನಡೆಸುವುದರ ಜೊತೆಗೆ ಕೃಷಿ ಪರಿಕರಗಳನ್ನು ಮತ್ತು ಕೃಷಿ ಪ್ರಕಟಣೆಗಳನ್ನು ವಿತರಿಸಿ ತನ್ನ ಹಲವಾರು ಚಟುವಟಿಕೆಗಳೊಂದಿಗೆ ರೈತ ಸಮುದಾಯದ ಅವಶ್ಯಕತೆಗಳನ್ನು ಪೂರೈಸುತ್ತಿದೆ. ವಿಶ್ವವಿದ್ಯಾನಿಲಯವು ಅಭಿವೃದ್ಧಿ ಇಲಾಖೆಗಳ ವಿಸ್ತರಣಾ ಚಟುವಟಿಕೆಗಳಿಗೆ ತನ್ನ ಕೃಷಿ ವಿಜ್ಞಾನ ಕೇಂದ್ರಗಳು ಹಾಗೂ ವಿಸ್ತರಣಾ ಶಿಕ್ಷಣ ಘಟಕಗಳ ಮೂಲಕ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ.

ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ, ಭಾರತೀಯ ಕೃಷಿ ಸಂಶೋಧನಾ ಮಂಡಳಿ ಮತ್ತು ಇತರ ಸಹಯೋಜಕರಿಗೆ ಅವರು ನೀಡುವ ಆರ್ಥಿಕ ಬೆಂಬಲಕ್ಕಾಗಿ ಕೃತಜ್ಞವಾಗಿದೆ. ಆಡಳಿತ ನಿರ್ವಹಣಾ ಮಂಡಳಿಯ ಸದಸ್ಯರ, ಶೈಕ್ಷಣಿಕ ಪರಿಷತ್, ಸಂಶೋಧನಾ ಪರಿಷತ್, ವಿಸ್ತರಣಾ ಶಿಕ್ಷಣ ಪರಿಷತ್, ಆರ್ಥಿಕ ಸಮಿತಿಗಳು ಮತ್ತು ಅಧ್ಯಯನ ಮಂಡಳಿಗಳಿಗೆ (ಸ್ನಾತಕ ಮತ್ತು ಸ್ನಾತಕೋತ್ತರ) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳಲ್ಲಿ ಅವರು ನೀಡಿರುವ ಮಾರ್ಗದರ್ಶನ ಮತ್ತು ಬೆಂಬಲವನ್ನೂ ಸಹ ಈ ಸಮಯದಲ್ಲಿ ಸ್ಮರಿಸಲಾಗುತ್ತಿದೆ. ರಾಜ್ಯದ ಹಾಗೂ ತನ್ಮೂಲಕ ದೇಶದ ರೈತ ಸಮುದಾಯಕ್ಕೆ ತನ್ನ ಆಧ್ಯಾದೇಶ ಮತ್ತು ಗುರಿಯನ್ನು ತಲುಪಿ ಸೇವೆ ಸಲ್ಲಿಸಲು ವಿಶ್ವವಿದ್ಯಾನಿಲಯದ ಬೆನ್ನೆಲುಬಾಗಿ ಅದರ ಅಧಿಕಾರಿಗಳು, ಬೆಂಬಲ ಸಿಬ್ಬಂದಿ ಮತ್ತು ಕೃಷಿ ಕಾರ್ಮಿಕರಿದ್ದಾರೆ.

ಜುಲೈ 19, 2019
ಬೆಂಗಳೂರು

(ಎಸ್. ರಾಜೇಂದ್ರ ಪ್ರಸಾದ್)
ಕುಲಪತಿಗಳು

UNIVERSITY OF AGRICULTURAL SCIENCES BANGALORE

FOREWORD



Dr. S. Rajendra Prasad
Vice-Chancellor

The University of Agricultural Sciences, Bangalore was established through an Act of the Government of Mysore (Karnataka) on June 6, 1963. I am pleased to introduce the Fifty-fourth Annual Report of the University of Agricultural Sciences, Bangalore which illustrates the University commitment to advancing excellence in Education, Research and Extension apart from general Administration from 1st April, 2018 to 31st March, 2019. The University is powerfully committed to soak up newer paradigms within the field of agricultural sciences, develop innovative technology and generate accomplished human resource to serve the farming community of the State. The University is the grateful recipient of an exceptional level of support from State and Central Government and has established collaborations with several National and International establishments in the field of teaching, research and extension.

The University offers six Undergraduate degree programmes *viz.,* Agriculture; Sericulture; Agricultural Marketing and Co-operation; Agricultural Bio-technology; Food Science and Technology and Agricultural Engineering at five of its constituent teaching campuses. The University also offers Master's degree in 22 disciplines in addition to MBA in Agri Business Management and 15 Doctoral degree programmes at GKVK campus. Master's degree in five disciplines and two-year Diploma in Agriculture at VC Farm, Mandya are being offered. One year Diploma, PG Diploma and several certificate courses through Distance Education are offered in the University. Students are awarded with scholarships and fellowships to pursue education. Physical and infrastructural facilities are created/restored to facilitate student's activities. I am happy to put on record that the students have excelled in tutorial, sports & games, additional co-curricular and cultural activities at all India level. The University was awarded 1st position in ICAR-JRF Examination. On this occasion, I wish to congratulate all the teachers and students, who brought laurels to the University and appreciate everyone who contributed for the development of the University. Coaching classes for competitive examinations and campus interviews for placements were organized for the well-being of students. The library facilities were reinforced through new accessions, adding e-learning through network and wi-fi facilities.

The University has 13 research stations spread over four out of ten agro-climatic zones of the State to carry out need-based and zone-specific research in southern Karnataka. During 2018-19, 81 new research projects were in operation with a total outlay of Rs.438.40 lakhs. Ganagvathi Sona (IET-20594) variety of paddy, PGCP-6 variety of cowpea, LBG-791 variety of blackgram, COVC-16061 & COVC-16062 variety of sugarcane and Lalbagh Madhura variety of jack have been released and recommended for cultivation in addition to several other 18 technologies. The University is catering to the needs of farming community by undertaking various extension activities *viz.,* front line demonstration, on farm testing, discussion meetings, farmers field school, capacity building, krishimela, field days etc., besides supplying agricultural inputs and publications. The University supplements and complements the extension activities of Development Departments through KVKs and Extension Education Units of the University.

The University punctually acknowledges the support and co-operation of Government of Karnataka, Indian Council of Agricultural Research and alternative Collaborators for the financial backing. The timely guidance and support given by the Members of the Board of Management, the Academic Council, the Research Council, the Extension Education Council, Finance Committee and the Board of Studies (Undergraduate / Postgraduate) in implementing teaching, research and extension programmes is duly acknowledged. The University is competently supported by the Officers, Supporting Staff and Karmikas to foster its mandates to serve the farming community of the State in particular and the Country at giant.

19th July, 2019
Bangalore

(S. Rajendra Prasad)
Vice-Chancellor

ಕಾರ್ಯಕಾರಿ ವರದಿ

ಉಗಮ ಮತ್ತು ಬೆಳವಣಿಗೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು ಆಗಿನ ಮೈಸೂರು ಸರ್ಕಾರವು 1963ರಲ್ಲಿ ಅಧಿನಿಯಮ 22ರನ್ವಯ ಸ್ಥಾಪಿಸಿತು. ವಿಶ್ವವಿದ್ಯಾನಿಲಯವು 1964ರ ಆಗಸ್ಟ್ 21ರಂದು ಅಸ್ತಿತ್ವಕ್ಕೆ ಬಂದಿತು, ಆದರೆ ಅದರ ಸ್ಥಾಪನೆಯ ಪರಿಕಲ್ಪನೆಯು 1899ರಲ್ಲೇ 30 ಎಕರೆ ಜಾಗದಲ್ಲಿ ಒಂದು ಪ್ರಾಯೋಗಿಕ ಕ್ಷೇತ್ರ ಸ್ಥಾಪನೆಯೊಂದಿಗೆ ಪ್ರಾರಂಭವಾಗಿತ್ತು. ಆ ಕ್ಷೇತ್ರವನ್ನು 202 ಎಕರೆಗಳಿಗೆ ಹೆಚ್ಚಿಸಿ 1913ರಲ್ಲಿ ಬೆಂಗಳೂರಿನ ಹೆಬ್ಬಾಳದಲ್ಲಿ ಒಂದು ಕೃಷಿ ಶಾಲೆಯನ್ನು ಸ್ಥಾಪಿಸಲಾಯಿತು ಹಾಗೂ ಅದು ಈಗ "ಮುಖ್ಯ ಸಂಶೋಧನಾ ಕೇಂದ್ರ"ವಾಗಿದೆ. ಇಂದು ಕೃಷಿ ವಿಶ್ವವಿದ್ಯಾನಿಲಯವು ಅದರ ಕನಸು ಕಂಡು ಹಲವಾರು ದಶಕಗಳ ಕಾಲ ಪೋಷಿಸಿರುವ ದಾರ್ಶನಿಕರ ಸ್ಮರಣೆಯ ಕೊಡುಗೆಯಾಗಿದೆ. ವಿಶ್ವವಿದ್ಯಾನಿಲಯದ ಅದ್ಭುತ ಬೆಳವಣಿಗೆ ಮತ್ತು ರಾಜ್ಯದ ಅವಶ್ಯಕತೆಗಳನ್ವಯ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು 1986ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಒಂದು ಅಧಿನಿಯಮದ ತಿದ್ದುಪಡಿಯ ಮೂಲಕ ವಿಭಜಿಸಿ ಧಾರವಾಡ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿತು. ವಿಷಯಗಳ ಮತ್ತು ಪ್ರಾಂತ್ಯಗಳ ಪ್ರಾಮುಖ್ಯತೆಯನ್ನು ಕರ್ನಾಟಕ ಸರ್ಕಾರವು ಪರಿಗಣಿಸಿ ಅಧಿನಿಯಮಗಳ ಮೂಲಕ "ಕರ್ನಾಟಕ ಪಶುವೈದ್ಯಕೀಯ, ಜಾನುವಾರು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ"ವನ್ನು, 2005ರಲ್ಲಿ ಬೀದರ್‌ನಲ್ಲಿ, ರಾಯಚೂರಿನಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು 2008ರಲ್ಲಿ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು 2009ರಲ್ಲಿ ಮತ್ತು ಶಿವಮೊಗ್ಗದಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು 2013 ಸ್ಥಾಪಿಸಿತು. ಮಾತೃ ವಿಶ್ವವಿದ್ಯಾನಿಲಯವಾದ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ರಾಜ್ಯದ 10 ಜಿಲ್ಲೆಗಳನ್ನು ಮಾತ್ರ ಕಾರ್ಯಾಚರಣೆಯ ಭೌಗೋಳಿಯ ವ್ಯಾಪ್ತಿಯಲ್ಲಿ ಹೊಂದಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2013–14ರಲ್ಲಿ ತನ್ನ ಸುವರ್ಣ ಮಹೋತ್ಸವವನ್ನು ಹಾಗೂ 2015–16ರಲ್ಲಿ ತನ್ನ ಘಟಿಕೋತ್ಸವದ ಸುವರ್ಣ ಮಹೋತ್ಸವವನ್ನು ಆಚರಿಸಿತು.

ಗುರಿ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು ವಿಶ್ವದರ್ಜೆಯ ಕೃಷಿ ವಿಶ್ವವಿದ್ಯಾನಿಲಯವಾಗಿ ರೂಪಾಂತರಗೊಳಿಸುವುದು

ಉದ್ದೇಶ: ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಅತ್ಯುತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವುದು, ಸ್ಪರ್ಧಾತ್ಮಕ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ ರಾಜ್ಯ ಮತ್ತು ದೇಶದ ರೈತಸಮುದಾಯದ ಸೇವೆಗಾಗಿ ಸಮರ್ಥ ಪ್ರಸಾರ ತಾಂತ್ರಿಕತೆಯನ್ನು ವಿಕಸಿತಗೊಳಿಸುವುದು

ಆಧ್ಯಾದೇಶ: ವಿಶ್ವವಿದ್ಯಾನಿಲಯ ಅಧಿನಿಯಮದಲ್ಲಿ ಸೂಚಿತ ಗೊಂಡಿರುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಧ್ಯಾದೇಶಗಳು ಈ ಮುಂದಿನಂತಿವೆ: ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ವಿವಿಧ ಅಧ್ಯಯನ ಶಾಖೆಗಳಲ್ಲಿ ಮಾನವ ಸಂಪನ್ಮೂಲ

EXECUTIVE SUMMARY

Genesis and Growth

The University of Agricultural Sciences, Bangalore (UAS-B) was established by the Act No. 22 of the then Mysore Government in the year 1963. The University came into existence on 21st August, 1964, but its conception took birth in 1899 with the establishment of experimental farm on 30 acres, followed by an Agricultural School in the expanded farm area of 202 acres during 1913, which is now the 'Main Research Station (MRS)' located at Hebbal, Bengaluru. Today University of Agricultural Sciences, Bangalore is a tribute to the visionaries who founded and nurtured it over the past several decades. The phenomenal growth of the University and needs of the regions of State, lead to bifurcation of the University of Agricultural Sciences, Bangalore through an Amendment to UAS-B Act in 1986 and University of Agricultural Sciences, Dharwad was established. Considering the importance of subjects and regions, Government of Karnataka through Acts, established 'Karnataka Veterinary, Animal and Fishery Sciences University' at Bidar during 2005; 'University of Agricultural Sciences, Raichur' during 2008; 'University of Horticultural Sciences, Bagalkot' during 2009 and 'University of Agriculture and Horticulture Sciences, Shivamogga' during 2013. The University of Agricultural Sciences, Bangalore, the mother University has operational geographical jurisdiction of 10 districts only in the State. The UAS-B has celebrated its Golden Jubilee year during 2013-14 and Golden Jubilee Convocation during 2015-16.

Vision : Transforming University of Agricultural Sciences, Bangalore in to a World Class Farm University

Mission **:** Generate quality human resources in the area of agriculture and allied disciplines, generate cutting-edge competitive technologies and evolve efficient disseminating mechanism so as to serve the farming community of the State and the Country

Mandate : The mandate of the University of Agricultural Sciences, Bangalore as specified in the University Act are : Making provision for imparting education towards development of

ಅಭಿವೃದ್ಧಿಗಾಗಿ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡುವುದು; ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆ ಮತ್ತು ಸಂಶೋಧನೆಯ ಅಭಿವೃದ್ಧಿಗೆ ಒತ್ತು ನೀಡುವುದು; ರಾಜ್ಯದ ವಿಶೇಷವಾಗಿ ಗ್ರಾಮೀಣ ಜನತೆಗೆ ಅಂತಹ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕುರಿತಂತೆ ವಿಸ್ತರಣಾ ಶಿಕ್ಷಣ ಒದಗಿಸುವುದು; ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ಇತರ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ, ಕೈಗಾರಿಕೆ, ಸಂಶೋಧನೆ ಮತ್ತು ಇತರ ಸಂಸ್ಥೆಗಳಲ್ಲಿ ಪಾಲುಗಾರಿಕೆ ಮತ್ತು ಸಂಬಂಧಗಳನ್ನು ಪ್ರೋತ್ಸಾಹಿಸುವುದು.

ದೃಢೀಕರಣ ಮತ್ತು ಆಡಳಿತ

1963ರ ಮೈಸೂರು ಅಧಿನಿಯಮ ಸಂ.22 ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಪದವಿ, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪದವಿಗಳ ಪ್ರದಾನ ಮಾಡಲು ಅಧಿಕಾರ ವಹಿಸಿಕೊಟ್ಟಿದೆ. 2010ರ ಕರ್ನಾಟಕ ಅಧಿನಿಯಮ ಸಂ.10ರಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಾದರಿ ಅಧಿನಿಯಮದ ವೈಶಿಷ್ಟ್ಯಗಳನ್ನು ಅಳವಡಿಸಲಾಗಿದ್ದು ಅದೂ ಸಹ ಆ ಅಧಿಕಾರವನ್ನು ಪುನರುಚ್ಚರಿಸಿದೆ. ಕೃಷಿ ಮತ್ತು ಸಂಬಂಧಿತ ವಿಷಯಗಳು ಹಾಗೂ ವಿಶ್ವವಿದ್ಯಾನಿಲಯ ಸೂಕ್ತವೆನ್ನಿಸುವ ಇತರ ವಿಷಯಗಳಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ಬೋಧನೆ ಒದಗಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಹೊಂದಿದೆ. ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ವಿಷಯಗಳಿಗೆ ಸಂಬಂಧಿಸಿದ ಮಹಾ ವಿದ್ಯಾಲಯಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು, ಅಧ್ಯಯನಕ್ಕೆ ಕೋರ್ಸ್ ಗಳನ್ನು ಪರಿಚಯಿಸಲು, ಪದವಿಗಳಿಗೆ, ಡಿಪ್ಲೊಮಾಗಳಿಗೆ ಕಾರಣವಾಗುವ ಪರೀಕ್ಷೆಗಳನ್ನು ನಡೆಸಲು ಮತ್ತು ವಿಶ್ವವಿದ್ಯಾನಿಲಯದಲ್ಲಿ ಅಥವಾ ವಿಶ್ವವಿದ್ಯಾನಿಲಯ ಗುರುತಿಸಿದ ಸಂಸ್ಥೆಯಲ್ಲಿ ಅಧ್ಯಯನ ಮಾಡುವ ಮತ್ತು / ಅಥವಾ ಸಂಶೋಧನೆ ನಡೆಸುವವರಿಗೆ ಶೈಕ್ಷಣಿಕ ಸ್ಥಾನಮಾನ ನೀಡುವ ಅಧಿಕಾರವನ್ನು ವಿಶ್ವವಿದ್ಯಾನಿಲಯಕ್ಕೆ ನೀಡಲಾಗಿದೆ. ಫೆಲೋಶಿಪ್, ವಿದ್ಯಾರ್ಥಿವೇತನಗಳು, ಪದಕಗಳು/ ಬಹುಮಾನಗಳು ಹಾಗೂ ಗೌರವ ಡಾಕ್ಟೊರಲ್ ಪದವಿಗಳು ಅಥವಾ ಸನ್ಮಾನಗಳನ್ನು ಸಾರ್ವಜನಿಕ ಖ್ಯಾತಿಯ ಪ್ರತಿಷ್ಠಿತ ವ್ಯಕ್ತಿಗಳಿಗೆ ನೀಡುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಹೊಂದಿದೆ. ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳ ಉಸ್ತುವಾರಿ ನೋಡಿಕೊಳ್ಳುವ ವಿಶ್ವವಿದ್ಯಾನಿಲಯದ ಶಾಸನಬದ್ಧ ಪ್ರಾಧಿಕಾರವೆಂದರೆ: ಶೈಕ್ಷಣಿಕ ಪರಿಷತ್, ಸಂಶೋಧನಾ ಪರಿಷತ್, ವಿಸ್ತರಣಾ ಶಿಕ್ಷಣ ಮಂಡಳಿ ಮತ್ತು ಅಧ್ಯಯನ ಮಂಡಳಿಯಾಗಿವೆ. ಆಡಳಿತ ನಿರ್ವಹಣಾ ಮಂಡಳಿಯು ಒಂದು ಕಾರ್ಯನೀತಿ ರಚನಾ ನಿಕಾಯವಾಗಿದ್ದು ವಿಶ್ವವಿದ್ಯಾನಿಲಯದ ಪರಿಣಾಮಕಾರಿ ಆಡಳಿತ ನಿರ್ವಹಣೆಗೆ ತನಗೆ ನೀಡಿರುವ ವಿಶ್ವವಿದ್ಯಾನಿಲಯದ ಅಧಿನಿಯಮ ಹಾಗೂ ಪರಿನಿಯಮಗಳನ್ವಯ ತನ್ನ ಅಧಿಕಾರವನ್ನು ಚಲಾಯಿಸುತ್ತದೆ. ಅಧಿನಿಯಮದಲ್ಲಿ ಆಡಳಿತ ನಿರ್ವಹಣಾ ಮಂಡಳಿಯ ಸಂರಚನೆಯನ್ನು ನಿರ್ದಿಷ್ಟಪಡಿಸಲಾಗಿದೆ; ಕುಲಪತಿಗಳು ಮಂಡಳಿಯ ಅಧ್ಯಕ್ಷರಾಗಿರುತ್ತಾರೆ ಹಾಗೂ ಮೂವರು ಪದನಿಮಿತ್ತ ಮತ್ತು ಒಂಭತ್ತು ನಾಮನಿರ್ದೇಶನಗೊಂಡ ಸದಸ್ಯರಿರುತ್ತಾರೆ. ಪ್ರಸ್ತುತ ವರದಿಯ ವರ್ಷದಲ್ಲಿ ವಿಶ್ವವಿದ್ಯಾನಿಲಯವು ಆಧ್ಯಾದೇಶದನ್ವಯ ತನ್ನ

quality human resource in different branches of agriculture and allied sciences; Furthering the advancement of learning and conducting research, particularly in agriculture and other allied sciences; Undertaking the extension education of such science and technologies, especially for the rural people of the State; Promoting partnership and linkages with national and international educational, industries, research & other institutions and Such other purposes specified by State Government from time to time and notified in the official gazette.

Authorisation and Governance

Mysore Act No.22 of 1963 vested powers with University of Agricultural Sciences, Bangalore to institute degrees, diplomas and other academic distinctions. Powers have been reiterated in Karnataka Act No.10 of 2010 that incorporates the features of ICAR Model Act. The University has powers to provide for undergraduate and postgraduate instruction in Agriculture and other allied branches of learning as the university may deem fit. The University has been authorized to establish and maintain colleges related to agriculture and allied sciences, introduce courses of study and hold examinations leading to conferring degrees, diplomas and other academic distinctions on persons who pursue a course of study and / or carry out research or both in the University or in an institution recognized in this behalf by the University. The University is empowered to award fellowships, scholarships, medals/ prizes, besides, conferring honorary doctoral degree or other distinctions on distinguished personalities of public eminence. The Statutory Authorities of the University are; Academic Council, Research Council, Extension Education Council and Board of Studies which are empowered to oversee the education, research and extension programmes. The Board of Management (BoM) exist as a policy making body of the University and exercise its power on provisions provided in the University Act and Statutes for effective administrative management of the University. The composition of the BoM is well defined in the Act; Vice-Chancellor is the Chairperson of the Board with three Ex-officio members and nine nominated members. The University throughout the year underneath report has performed its functions competently as per the

ಕಾರ್ಯಗಳನ್ನು ತನ್ನ ಗುರಿಯನ್ನು ಸಾಧಿಸುವತ್ತ ಉತ್ತಮವಾಗಿ ನಿರ್ವಹಿಸಿದೆ ಮತ್ತು ತನ್ನ ಸ್ಥಾಪನೆಗೆ ಕಾರಣವಾದ ಅಂಶಗಳಿಗೆ ಸಾಕಾರ ರೂಪ ಕೊಟ್ಟಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರೋಲ್ ಪದವಿ ಕಾರ್ಯಕ್ರಮಗಳನ್ನೊಳಗೊಂಡ ತನ್ನ ನಾಲ್ಕು ಮಹಾ ವಿದ್ಯಾಲಯಗಳೊಂದಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇವರ ರಾಷ್ಟ್ರೀಯ ಅಕ್ರೆಡಿಟೇಶನ್ ಮಂಡಳಿಯವರಿಂದ 28ನೇ ಮಾರ್ಚ್ 2016ರಿಂದ 27ನೇ ಮಾರ್ಚ್ 2021ರವರೆಗೆ ಐದು ವರ್ಷಗಳ ಅವಧಿಗೆ ಅಂಗೀಕೃತಗೊಂಡಿದೆ. ಕೃಷಿ ಮತ್ತು ಸಂಬಂಧಿತ ವಿಷಯಗಳ (ಕೃಷಿ, ತೋಟಗಾರಿಕೆ, ಕೃಷಿ ಇಂಜಿನಿಯರಿಂಗ್, ಹೈನು ತಂತ್ರಜ್ಞಾನ, ಅರಣ್ಯಶಾಸ್ತ್ರ, ಪಶುವೈದ್ಯಕೀಯ ಮತ್ತು ಜಾನುವಾರು ವಿಜ್ಞಾನ) ಸ್ನಾತಕ ಪದವಿಗಳನ್ನು ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ವೃತ್ತಿಪರ ಪದವಿಗಳೆಂದು ಘೋಷಿಸಿದೆ. ಆಹಾರ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಮೀನುಗಾರಿಕೆ, ರೇಷ್ಮೆ ಕೃಷಿ, ಗೃಹ/ಸಮುದಾಯ ವಿಜ್ಞಾನಗಳು ಮತ್ತು ಆಹಾರ, ಪೋಷಣೆ ಮತ್ತು ಪಥ್ಯಕ್ರಮ) ಸ್ನಾತಕ ಪದವಿಗಳನ್ನು ಪತ್ರ ಸಂ. ಈ. ಓಶಿ. ಇಜಟಿ/13/1/2016–ಊಖಿಆ ದಿನಾಂಕ: 06ನೇ ಅಕ್ಟೋಬರ್, 2016ರ ಮೂಲಕ ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ವೃತ್ತಿಪರ ಪದವಿಗಳೆಂದು ಘೋಷಿಸಿದೆ. 2018–19ರ ಸಾಲಿನಲ್ಲಿ, ಎರಡು ಹೊಸ ಮಹಾ ವಿದ್ಯಾಲಯಗಳನ್ನು, ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯ ಜಿ.ಕೆ.ವಿ.ಕೆ. ಆವರಣದಲ್ಲಿ ಮತ್ತು ಕೃಷಿ ಮಹಾವಿದ್ಯಾಲಯ ಚಾಮರಾಜನಗರದಲ್ಲಿ ಪ್ರಾರಂಭಿಸಲಾಗಿದೆ.

ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು

ಶೈಕ್ಷಣಿಕ ಆಡಳಿತ ವ್ಯವಸ್ಥೆಯು ಸಮಗ್ರವಾಗಿ ಶಿಕ್ಷಣ ನಿರ್ದೇಶನಾಲಯವನ್ನು ಹೊಂದಿದ್ದು ಅದರ ಬೆಂಬಲಕ್ಕೆ ಕುಲಸಚಿವರು, ಸಂಬಂಧಿತ ಮಹಾವಿದ್ಯಾಲಯಗಳ ಡೀನ್‌ರವರು, ಸ್ನಾತಕೋತ್ತರ ಡೀನ್, ವಿದ್ಯಾರ್ಥಿ ಕಲ್ಯಾಣ ಡೀನ್, ಪರೀಕ್ಷಾ ನಿಯಂತ್ರಕರು ಮತ್ತು ಸಂವಹನ ಮತ್ತು ಪ್ರಕಟಣಾ ಕೇಂದ್ರ, ಕನ್ನಡ ಅಧ್ಯಯನ ವಿಭಾಗ ಹಾಗೂ ವಿಶ್ವವಿದ್ಯಾನಿಲಯ ಗ್ರಂಥಾಲಯವನ್ನು ಹೊಂದಿದೆ.

ಪ್ರವೇಶಾತಿ

ವಿಶ್ವವಿದ್ಯಾನಿಲಯವು ನಾಲ್ಕು ವರ್ಷಗಳ ಅವಧಿಯ ಸೆಮಿಸ್ಟರ್ ವ್ಯವಸ್ಥೆಯಡಿಯಲ್ಲಿ (21 ವಾರ) ಆರು ಸ್ನಾತಕ ಪದವಿ ಕಾರ್ಯಕ್ರಮಗಳನ್ನು ಇಂಗ್ಲಿಷ್ ಮಾಧ್ಯಮದಲ್ಲಿ ತನ್ನ ನಾಲ್ಕು ಮಹಾ ವಿದ್ಯಾಲಯಗಳಲ್ಲಿ ನಡೆಸುತ್ತಿದೆ. ಬೆಂಗಳೂರು ಜಿ.ಕೆ.ವಿ.ಕೆ.ಯಲ್ಲಿನ ಕೃಷಿ ಮಹಾವಿದ್ಯಾಲಯ ಮೂರು ಸ್ನಾತಕ ಪದವಿಗಳನ್ನು – ಬಿ.ಎಸ್ಸಿ. (ಕೃಷಿ); ಬಿ.ಎಸ್ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ) ಮತ್ತು ಬಿ.ಟೆಕ್. (ಕೃಷಿ ಇಂಜಿನಿಯರಿಂಗ್) ಹಾಗೂ 22 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ 15 ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ನೀಡುತ್ತಿದೆ. ಹಾಸನದ ಕೃಷಿ ಮಹಾವಿದ್ಯಾಲಯವು ಮೂರು ಸ್ನಾತಕ ಪದವಿಗಳನ್ನು – ಬಿ.ಎಸ್ಸಿ. (ಕೃಷಿ); ಬಿ.ಎಸ್ಸಿ. (ಕೃಷಿ ಜೈವಿಕತಂತ್ರಜ್ಞಾನ) ಮತ್ತು ಬಿ.ಟೆಕ್. (ಆಹಾರ ವಿಜ್ಞಾನ ಮತ್ತು

mandate in synchronism with envisaged vision and delivered fitly and timely for the cause that it is established.

The University of Agricultural Sciences, Bangalore, and its constituent four colleges with Bachelor's, Master's and Doctoral Degree programmes are 'Accredited' by National Accreditation Board of Indian Council of Agricultural Research, New Delhi for five years from 28th March, 2016 to 27th March, 2021. The ICAR, New Delhi, has declared Bachelor Degree in Agriculture and allied subjects (Agriculture, Horticulture, Agricultural Engineering, Dairy Technology, Forestry, Veterinary & Animal Science. Food Technology, Biotechnology, Fisheries, Sericulture, Home / Community Sciences and Food Nutrition & Dietetics) as 'Professional Degree' courses vide letter no. F. No. Edn/13/1/2016-HRD dated 06th October, 2016. During 2018-19, two new colleges viz., College of Agricultural Engineering at GKVK campus and College of Agriculture at Chamarajanagara have been inaugurated.

Administrative Management System and Functions

The Academic administrative system at gross consists of Directorate of Education ably supported by Registrar, Deans of constituent colleges, Dean of Postgraduate Studies, Dean of Student Welfare and further facilitated by Controller of Examinations, Communication Centre, Department of Kannada Studies and University Library.

Admissions

The University is offering six Under Graduate programmes of four years' duration under semester system (21 weeks) with English as medium of instruction, in its five colleges. College of Agriculture, GKVK, Bengaluru has offered three Bachelor Degree programmes viz., B.Sc. (Agri.), B.Sc. (Ag.Maco.) & B.Tech. (Agri.Engg.); Master's degree in 22 disciplines and Ph.D. in 15 disciplines. College of Agriculture, Hassan, has offered three Bachelor Degree programmes viz., B.Sc. (Agri.); B.Sc. (Agri-Biotech.) and B.Tech. (Food Science and Technology). College of Sericulture, Chintamani has offered two degree programmes

ತಂತ್ರಜ್ಞಾನ) ನೀಡುತ್ತಿದೆ. ಚಿಂತಾಮಣಿ ರೇಷ್ಮೆಕೃಷಿ ಮಹಾವಿದ್ಯಾಲಯವು ಎರಡು ಸ್ನಾತಕ ಪದವಿಗಳನ್ನು – ಬಿ.ಎಸ್ಸಿ. (ಕೃಷಿ); ಬಿ.ಎಸ್ಸಿ. (ರೇಷ್ಮೆಕೃಷಿ) ನೀಡುತ್ತಿದೆ. ಮಂಡ್ಯ ಕೃಷಿ ಮಹಾವಿದ್ಯಾಲಯವು ಬಿ.ಎಸ್ಸಿ. (ಕೃಷಿ) ಹಾಗೂ 5 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಪದವಿಗಳನ್ನು ನೀಡುತ್ತಿದೆ. ಹಾಸನದ ಕೃಷಿ ಮಹಾವಿದ್ಯಾಲಯವು ಬಿ.ಎಸ್ಸಿ. (ಕೃಷಿ) ಸ್ನಾತಕ ಪದವಿ ನೀಡುತ್ತಿದೆ.

viz., B.Sc. (Agri.) and B.Sc. (Seri.). College of Agriculture, Mandya has offered B.Sc. (Agri.), Bachelor Degree programme, Master's Degree in five subjects and two years Diploma in Agriculture. College of Agriculture, Chamarajanagara has offered Bachelor Degree programmes in B.Sc. (Agri.).

ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ / ಭಾರತೀಯ ಕೃಷಿ ಅನುಸಂಧಾನ ಪರಿಷತ್ / ನಿಯಮಗಳು / ರೋಸ್ಟರ್ ಅನುಸರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ – ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಸ್ನಾತಕ ಪದವಿಗಳಿಗೆ ಪ್ರವೇಶಾತಿಯನ್ನು ನೀಡುತ್ತದೆ. ವಿಶ್ವವಿದ್ಯಾನಿಲಯವು ಶೇ.40ರಷ್ಟು ಸ್ಥಾನವನ್ನು ಕೃಷಿಕರ ಮಕ್ಕಳಿಗೆ ಮೀಸಲಿಟ್ಟಿದೆ. ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿ ಪ್ರವೇಶಗಳನ್ನು ರಾಜ್ಯದಲ್ಲಿನ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳೊಂದಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಹಾಗೂ ಸಲಹಾ ಸೇವೆಯ ಮೂಲಕ ಮಾಡಲಾಗುತ್ತದೆ. ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಪ್ರವೇಶವನ್ನು ಶೈಕ್ಷಣಿಕ ಅರ್ಹತೆಯ ಆಧಾರದ ಮೇಲೆ, ಅಂದರೆ 10ನೇ ತರಗತಿಯ ಆಧಾರದ ಮೇಲೆ ರೋಸ್ಟರ್ ಆಧಾರಿತ ವಿಶ್ವವಿದ್ಯಾನಿಲಯ ಅನುಮೋದಿತ ಸ್ಥಾನ ಮ್ಯಾಟ್ರಿಕ್ಸ್ ಮತ್ತು ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ವಯ ಮಾಡಲಾಗುತ್ತದೆ.

The University admits students to Bachelor degree programmes through KEA-CET by following Government of Karnataka / ICAR guidelines / norms / roaster. The University has reserved 40 per cent of seats in favour of children of Agriculturists. Postgraduate admissions to Masters and Doctoral Degree programmes are made through Common Entrance Test followed by counselling of the Farm Universities in the State. Admissions to Two Year Diploma in Agriculture is made based on the merit in 10th Standard as per University approved seat matrix with roaster based on guidelines of Government of Karnataka.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 1046 ಇದ್ದು ಒಟ್ಟು 926 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 473 ಬಾಲಕರು (51.07%) ಮತ್ತು 453 ಬಾಲಕಿ(44.31%)ಯರಾಗಿದ್ದಾರೆ. ಎಲ್ಲ ವರ್ಷದ ಸ್ನಾತಕ ಪದವಿಗಳಲ್ಲಿ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 3012 ಆಗಿದ್ದು ಅವರಲ್ಲಿ 1632 ಬಾಲಕರು (54.18%) ಹಾಗೂ ಬಾಲಕಿಯರು 1380 (45.81%) ಇದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 342 ಇದ್ದು ಒಟ್ಟು 325 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 169 ಬಾಲಕರು ಮತ್ತು 156 ಬಾಲಕಿಯರಾಗಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿಗಳಿಗೆ ಒಟ್ಟು 596 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 310 ಬಾಲಕರು ಮತ್ತು 286 ಬಾಲಕಿಯರಾಗಿದ್ದಾರೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಡಾಕ್ಟೊರಲ್ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 128 ಇದ್ದು ಒಟ್ಟು 117 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅವರಲ್ಲಿ 58 ಬಾಲಕರು ಮತ್ತು 59 ಬಾಲಕಿಯರಾಗಿದ್ದಾರೆ. ಹಾಜರಾತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 313 ಇದ್ದು ಅವರಲ್ಲಿ 157 ಬಾಲಕರು ಮತ್ತು 156 ಬಾಲಕಿಯರಾಗಿದ್ದಾರೆ. ಪ್ರಸ್ತುತ ವರ್ಷದಲ್ಲಿ ಎರಡು ವರ್ಷಗಳ ಡಿಪ್ಲೊಮಾಗೆ ಪ್ರವೇಶ ಸಾಧ್ಯ ಸಂಖ್ಯೆಯು 50 ಇದ್ದು ಪ್ರವೇಶಾತಿ ನೀಡಿದ ಸಂಖ್ಯೆಯೂ 47 ಆಗಿದೆ. ಈ ಕಾರ್ಯಕ್ರಮಕ್ಕೆ ಹಾಜರಾತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 99 ಆಗಿದ್ದು ಅವರಲ್ಲಿ 58 ಬಾಲಕರು ಮತ್ತು 41 ಬಾಲಕಿಯರಾಗಿದ್ದಾರೆ. ಸ್ನಾತಕ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪದವಿ ಕಾರ್ಯಕ್ರಮಗಳ ಒಟ್ಟಾರೆ ಪ್ರವೇಶ ಸಾಧ್ಯತೆ 1566 ಇದ್ದು ಪ್ರವೇಶಾತಿ ಪಡೆದವರ ಸಂಖ್ಯೆ 1415 ಆಗಿದೆ. ಪ್ರಸ್ತುತ ವರ್ಷ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 4020 ಆಗಿದ್ದು ಅವರಲ್ಲಿ 2157 ಬಾಲಕರು ಹಾಗೂ 1863 ಬಾಲಕಿಯರು ಇದ್ದಾರೆ. ಪ್ರಸ್ತುತ ವರ್ಷ ಸ್ನಾತಕ ಪದವಿಯಲ್ಲಿ ಒಟ್ಟು 661 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ

The student intake for Bachelor's degree was 1046 and admitted 926 students of which 473 were boys (51.07%) and 453 were girls (48.92%). The total number of students on roll were 3012 of which 1632 were boys (54.18%) and 1380 were girls (45.81 %). Intake for Master's degree was 342 and admitted 325 students of which 169 were boys and 156 were girls. The total number of students on roll for Master's degree programme was 596 of which 310 were boys and 286 were girls. Doctoral degree intake was 128 and admitted 117 students of which 58 were boys and 59 were girls. The total number of students on roll were 313 of which 157 were boys and 156 were girls. During the year, the intake for two-year diploma was 50 students and admission made was 47. The student on roll for the programme was 99 of which 58 were boys and 41 were girls. The overall intake for the Bachelor, Postgraduate degree programmes and diploma programme was 1566 and admitted 1415 candidates. The number of students on roll during the year was 4020 of which 2157 were boys and 1863 were girls. A total of 661 students passed out with Bachelor degree successfully of which 367 were boys and 294 were girls. At Masters level 309 students passed out, of which 151 were boys and 158 were girls. At Doctoral

367 ಬಾಲಕರು ಹಾಗೂ 294 ಬಾಲಕಿಯರಿದ್ದಾರೆ. ಪ್ರಸ್ತುತ ವರ್ಷ ಸ್ನಾತಕ ಪದವಿಯಲ್ಲಿ ಒಟ್ಟು 309 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ 151 ಬಾಲಕರು ಹಾಗೂ 158 ಬಾಲಕಿಯರಿದ್ದಾರೆ. ಡಾಕ್ಟೊರಲ್ ಪದವಿಯಲ್ಲಿ 72 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ 44 ಬಾಲಕರು ಹಾಗೂ 28 ಬಾಲಕಿಯರಿದ್ದಾರೆ. ಅದರಂತೆ, 1534 ಕ್ರೆಡಿಟ್ ಗಂಟೆಗಳ 695 ಕೋರ್ಸ್‌ಗಳನ್ನು ನೀಡಲಾಗಿದ್ದು 1684 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು ನಾಲ್ಕು ಮಹಾ ವಿದ್ಯಾಲಯಗಳ ಎಲ್ಲಾ ಸ್ನಾತಕ ಪದವಿಗಳ 126392 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಸ್ನಾತಕೋತ್ತರ ಪದವಿಗಳಿಗೆ 682 ಕ್ರೆಡಿಟ್ ಗಂಟೆಗಳ 301 ಕೋರ್ಸ್‌ಗಳನ್ನು ನೀಡಲಾಗಿದ್ದು 1142 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು 112893 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಡಾಕ್ಟೊರಲ್ ಪದವಿಗಳಿಗೆ 249 ಕ್ರೆಡಿಟ್ ಗಂಟೆಗಳ 118 ಕೋರ್ಸ್‌ಗಳನ್ನು ನೀಡಲಾಗಿದ್ದು 441 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು 19071 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಎರಡು ವರ್ಷಗಳು ಕೃಷಿಯಲ್ಲಿ ಡಿಪ್ಲೊಮಾಗೆ 69 ಕ್ರೆಡಿಟ್ ಗಂಟೆಗಳ 33 ಕೋರ್ಸ್‌ಗಳನ್ನು ನೀಡಲಾಗಿದ್ದು 67 ಪರೀಕ್ಷೆಗಳನ್ನು ನಡೆಸಲಾಗಿದೆ ಮತ್ತು 2446 ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗಿದೆ. ಒಟ್ಟಾರೆಯಾಗಿ ವಿಶ್ವವಿದ್ಯಾನಿಲಯವು 2534 ಕ್ರೆಡಿಟ್ ಗಂಟೆಗಳ 1149 ಕೋರ್ಸ್‌ಗಳನ್ನು ವಾರ್ಷಿಕ ನಡೆಸುತ್ತಿದೆ. ಈ ಕೋರ್ಸ್‌ಗಳನ್ನು 21 ಪ್ರಾಧ್ಯಾಪಕರು, 56 ಸಹ ಪ್ರಾಧ್ಯಾಪಕರು ಮತ್ತು 173 ಸಹಾಯಕ ಪ್ರಾಧ್ಯಾಪಕರನ್ನೊಳಗೊಂಡಂತೆ 250 ಅಧ್ಯಾಪಕರು ನಡೆಸಿಕೊಟ್ಟಿದ್ದಾರೆ.

ವಿಶ್ವವಿದ್ಯಾನಿಲಯವು ಭಾರತೀಯ ಕೃಷಿ ಅನುಸಂಧಾನ ಪರಿಷತ್, 5ನೇ ಡೀನ್‌ರವರ ಸಮಿತಿಯ ಶಿಫಾರಸ್ಸುಗಳನ್ನು ಅಳವಡಿಸಿಕೊಂಡಿದ್ದು ಅದರಂತೆ 2019–20 ಶೈಕ್ಷಣಿಕ ವರ್ಷದಿಂದ ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ 'ರೆಡಿ' (ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ವಿದ್ಯಾರ್ಥಿಗಳ ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆ ಕಾರ್ಯಕ್ರಮವು ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ವಿದ್ಯಾರ್ಥಿಗಳ ಒಂದು ದಿಕ್ಸೂಚಿ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮವು ಅನುಭವದ ಮೂಲಕ ಕಲಿಕೆ, ಗ್ರಾಮೀಣ ಕಾರ್ಯಾನುಭವ, ಘಟಕದಲ್ಲಿನ ತರಬೇತಿ / ಔದ್ಯಮಿಕ ಸೇರ್ಪಡಿಕೆ, ಪ್ರಾಯೋಗಿಕ ತರಬೇತಿ / ಕೌಶಲ್ಯ ಅಭಿವೃದ್ಧಿ ತರಬೇತಿ ಮತ್ತು ವಿದ್ಯಾರ್ಥಿಗಳ ಪ್ರಾಯೋಜನೆಗಳಂತಹ ಐದು ಅಂಶಗಳನ್ನು ಒಳಗೊಂಡಿದೆ. ಎಲ್ಲಾ ಮಹಾ ವಿದ್ಯಾಲಯಗಳ ಒಟ್ಟು 631 ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ ಕಾರ್ಯಕ್ರಮದಲ್ಲಿ ಒಂದು ಸೆಮಿಸ್ಟರ್ ಭಾಗವಹಿಸಿದ್ದಾರೆ. ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮತ್ತು ಕರ್ನಾಟಕ ಸರ್ಕಾರ ಅದರ ಅನುಷ್ಠಾನಕ್ಕಾಗಿ ಆರ್ಥಿಕ ಸಹಾಯ ನೀಡಿದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಆರು ತಿಂಗಳುಗಳ ಕಾಲ ಮಾಹೆಯಾನ ರೂ.3000/– ಶಿಷ್ಯವೇತನವನ್ನು ನೀಡಲಾಗಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳು 20 ಕ್ರೆಡಿಟ್‌ಗಳವರೆಗೆ ತಮ್ಮ ಆಯ್ಕೆಯ ತಜ್ಞತೆಯ ವಿಷಯದಲ್ಲಿ ಆತ್ಮವಿಶ್ವಾಸ ಹಾಗೂ ಕೌಶಲ್ಯತೆಯನ್ನು ಗಳಿಸಿಕೊಳ್ಳಲು ಪ್ರಾಯೋಗಿಕ ತರಬೇತಿ ಕೋರ್ಸ್ ಪೂರ್ಣಗೊಳಿಸಿಕೊಳ್ಳಬೇಕಾಗಿರುತ್ತದೆ.

ಸ್ನಾತಕ ಪದವಿ ಹಾಗೂ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಸೂಚಿಸಿದ ವಿದ್ಯಾರ್ಥಿವೇತನಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅದರಂತೆ 74 ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.1000 ಕೃಷಿ ವಿಶ್ವವಿದ್ಯಾನಿಲಯ ಅರ್ಹತಾ

level, 72 students passed out, of which 44 were boys and 28 were girls. Totally, 695 courses were offered with credit hours of 1534; 1684 examinations were conducted and 126392 answer scripts of all Bachelor's degree programme were evaluated across four colleges. As many as 301 courses were offered for Master's degree programmes with 682 credit hours, conducted 1142 examinations and evaluated 112893 answer papers. 118 courses with 249 credit hours were offered to Doctoral degree students and 441 examinations were conducted evaluating 19071 answer papers. Thirty-five courses with 69 credit hours were offered for Two Years Diploma in Agriculture, conducted 67 examinations and evaluated 2446 answer scripts. In the nutshell, annually the university offers 1149 courses with 2534 credit hours. These courses were offered by 250 faculties consisting of 21 Professors, 56 Associate Professors and 173 Assistant Professors who were in position.

The university has adopted the ICAR, V Deans committee recommendations and the Student READY (Rural Entrepreneurship Awareness Development Yojana) programme for all bachelor degrees would be implemented from 2019-20 onwards. Student READY programme is a new initiative of ICAR, New Delhi to reorient graduates. It has five components *i.e.,* Experiential learning, Rural Awareness Work Experience (RAWE), In-plant training / Industrial attachment, Hands- on training (HOT) / Skill development training and Student's Projects. A total of 631 students across all colleges have undergone RAWE programme for one semester. The ICAR, New Delhi and the Government of Karnataka provided financial assistance for its implementation. Each student was provided with a stipend of Rs.3000/- per month for six months. The students of all the degree programmes during their final year completed Hands on Training Courses (HoT) of 20 credit hours to gain confidence and skills in the area of specialization of their choice.

The students admitted to Bachelor Degree and Postgraduate Degree programmes are eligible to apply for defined scholarships. Accordingly, 74 students were awarded UAS-merit

ವಿದ್ಯಾರ್ಥಿವೇತನ, 371 ವಿದ್ಯಾರ್ಥಿಗಳಿಗೆ ಮಾಹೆಯಾನ ರೂ.500/– ಕೃಷಿ ವಿಶ್ವವಿದ್ಯಾನಿಲಯ–ಸಾಮಾನ್ಯ ವಿದ್ಯಾರ್ಥಿವೇತನ ನೀಡಲಾಗಿದೆ. ವಿಶ್ವವಿದ್ಯಾನಿಲಯ ಸ್ಥಾನಿಕ ಅರ್ಹತಾ ವಿದ್ಯಾರ್ಥಿವೇತನ ರೂ.2000/– ಮಾಹೆಯಾನ 73 ಸ್ನಾತಕ್ಕೋತ್ತರ ಪದವಿ ವಿದ್ಯಾರ್ಥಿಗಳಿಗೆ, ದಾನಿಗಳ ರೂ.3000/– ವಿದ್ಯಾರ್ಥಿವೇತನವನ್ನು 95 ಡಾಕ್ಟೊರಲ್ ಪದವಿ ವಿದ್ಯಾರ್ಥಿಗಳಿಗೆ ನೀಡಲಾಗಿದೆ. ಇದರ ಜೊತೆಗೆ, ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡಗಳ, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಭಾರತ ಸರ್ಕಾರದ ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿವೇತನಗಳಿಗೆ, ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕರ್ನಾಟಕ ಸರ್ಕಾರ ಪ್ರಾಯೋಜಿತ ವಿದ್ಯಾರ್ಥಿವೇತನಗಳಿಗೆ ಅರ್ಜಿ ಅಲ್ಲಿಸಲು ಸೌಲಭ್ಯ ಕಲ್ಪಿಸಿದೆ. 2018–19ರ ಸಾಲಿನಲ್ಲಿ, 458 ಅನುಸೂಚಿತ ಜಾತಿ/ಅನುಸೂಚಿತ ವರ್ಗ ವಿದ್ಯಾರ್ಥಿಗಳಿಗೆ ಒಟ್ಟು ಸಾದಿಲ್ವಾರು ಮೊತ್ತ ರೂ.9,16,000/– ಆವರ್ತನ ನಿಧಿಯಡಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅನುಸೂಚಿತ ಜಾತಿ/ಅನುಸೂಚಿತ ವರ್ಗ ವಿದ್ಯಾರ್ಥಿಗಳಿಗೆ ಕಲ್ಯಾಣ ಅನುದಾನವಾಗಿ ನೀಡಲಾಗಿದೆ. ಸ್ನಾತಕೋತ್ತರ ಹಂತದ ವಿದ್ಯಾರ್ಥಿಗಳಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್–ಸಿ.ಎಸ್.ಐ.ಆರ್.–ಯು.ಜಿ.ಸಿ. ಡಿ.ಎಸ್.ಟಿ.–ಡಿ.ಬಿ.ಟಿ. ಮೂಲಕ ಹಾಗೂ ಕಿರಿಯ ಸಂಶೋಧನಾ ಫೆಲೋಶಿಪ್/ಹಿರಿಯ ಸಂಶೋಧನಾ ಫೆಲೊಶಿಪ್ ಪಡೆದವರಿಗೆ ಪ್ರವೇಶ ನೀಡಲಾಗಿದೆ.

ಶಿಕ್ಷಣ ನಿರ್ದೇಶನಾಲಯದ ಚಟುವಟಿಕೆಗಳು

ವಿಶ್ವವಿದ್ಯಾನಿಲಯವು 2011–12ರಲ್ಲಿ "ವಿಶ್ವವಿದ್ಯಾನಿಲಯ ಪರೀಕ್ಷಾ ಕೇಂದ್ರ"ವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ, ಜಿ.ಕೆ.ವಿ.ಕೆ.ಯಲ್ಲಿ ಹಾಗೂ ಪ್ರತಿಯೊಂದು ಮಹಾವಿದ್ಯಾಲಯದಲ್ಲಿ ಒಂದೊಂದು ಉಪ–ಕೇಂದ್ರವನ್ನು ಸ್ಥಾಪಿಸಿದೆ. ಈ ಕೇಂದ್ರವು ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಅಂತಿಮ ಬಾಹ್ಯ ಥಿಯರಿ ಪರೀಕ್ಷೆಯ ಕಾರ್ಯಸೂಚಿ ಹಾಗೂ ಅದನ್ನು ನಡೆಸುವ ಮತ್ತು ಉತ್ತರ ಪತ್ರಿಕೆಗಳ ಮೌಲ್ಯಮಾಪನ ಪ್ರಕ್ರಿಯೆ ನಡೆಸುವ ಹಾಗೂ ಫಲಿತಾಂಶಗಳನ್ನು ಘೋಷಿಸುವ ಹೊಣೆಗಾರಿಕೆ ಹೊಂದಿರುತ್ತದೆ. ಸಂವಹನ ಕೇಂದ್ರವು ವಿಶ್ವವಿದ್ಯಾನಿಲಯ ಆಡಳಿತೆಯ, ಸಂಶೋಧನೆ, ಬೋಧನೆ ಮತ್ತು ವಿಸ್ತರಣಾ ಅಂಗಗಳ ಪ್ರಕಟಣೆ ಮತ್ತು ಇತರ ಮುದ್ರಣ ಕಾರ್ಯಗಳ ಸಂಯೋಜನಾ ಕೇಂದ್ರವಾಗಿದೆ. ಸಂವಹನ ಕೇಂದ್ರವು ಮೈಸೂರ್ ಜರ್ನಲ್ ಆಫ್ ಅಗ್ರಿಕಲ್ಚರಲ್ ಸೈನ್ಸ್‌ನ 4 ಸಂಚಿಕೆಗಳನ್ನು, ಕೃಷಿ ವಿಜ್ಞಾನ (ಕನ್ನಡ) ಪತ್ರಿಕೆಯ 4 ಸಂಚಿಕೆಗಳನ್ನು ಹಾಗೂ ಕೃವಿವಿ, ಬೆಂಗಳೂರು ವಾರ್ತಾಪತ್ರದ 12 ಸಂಚಿಕೆಗಳನ್ನು ಮತ್ತು ಇತರ 30 ಪ್ರಕಟಣೆಗಳನ್ನು ಹೊರತಂದಿದೆ. ಕನ್ನಡ ಅಧ್ಯಯನ ವಿಭಾಗವು ಕೃಷಿ ಮತ್ತು ಸಂಬಂಧಿತ ವಿಷಯ ಕುರಿತ ಕನ್ನಡ ಪುಸ್ತಕಗಳ ಸಂಪಾದನೆ, ಅನುವಾದ ಹಾಗೂ ಪ್ರಕಟಣಾ ಕಾರ್ಯದ ಜವಾಬ್ದಾರಿಯನ್ನು ಹೊತ್ತಿದೆ. ಪ್ರಸ್ತುತ ವರದಿಯ ವರ್ಷದಲ್ಲಿ ವಿಭಾಗವು ಹಲವಾರು ಕೃಷಿ ಮತ್ತು ಸಂಬಂಧಿತ ವಿಷಯಗಳ ಕುರಿತು ಕನ್ನಡದಲ್ಲಿ 25 ಪುಸ್ತಕಗಳನ್ನು ಪ್ರಕಟಿಸಿದೆ.

ವಿದ್ಯಾರ್ಥಿಗಳ ಕ್ರೀಡೆ, ಆಟೋಟ ಮತ್ತು ಪಠ್ಯೇತರ ಚಟುವಟಿಕೆಗಳು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ವಲಯ ಮಟ್ಟದ ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಪಠ್ಯೇತರ ಚಟುವಟಿಕೆಗಳನ್ನೊಳಗೊಂಡಂತೆ ಅಂತರ ಆವರಣ ಟೂರ್ನಮೆಂಟ್, ಅಥ್ಲೆಟಿಕ್ ಮೀಟ್ ಮತ್ತು ಯುವಜನೋತ್ಸವಗಳಂತಹ ಹಲವಾರು

scholarships @ Rs.1000/- per month and 371 students were awarded UAS-General Scholarships @ Rs.500/- per month. University Resident Merit Scholarship @ Rs.2000/- per month was awarded to 73 Masters' degree students and Donors Scholarship of Rs.3000/- per month was awarded to 95 Doctoral degree students. University also facilitated SC/ST & Minorities students to apply for Government of India post-metric scholarships and backward class students to Government of Karnataka Sponsored scholarships. During the 2018-19, 458 SC/ST students were awarded contingency amounting to Rs.9,16,000/ under revolving fund for UAS-B SC/ST students' welfare grant. At postgraduate level students admitted with ICAR-CSIR-UGC, DST-DBT were awarded JRF/SRF and also some International fellowships / sponsored fellowships.

Activities of Directorate of Education

The University has established 'University Examination Center' during 2011-12 at GKVK, Bengaluru and one sub-centre in each of its constituent Colleges. The centre is responsible for coordinating in scheduling, conducting final external theory examinations for all Bachelor's degree programmes, answer script evaluation process and declaration of results. The communication centre is coordinating with the University administration, research, teaching and extension wings in respect of publications and other printing works. The centre has published 4 issues of Mysore Journal of Agricultural Sciences, 4 issues of Krishi Vignana (Kannada), 12 issues of UAS Bangalore Newsletter and 30 other publications. The Department of Kannada Studies is vested with the responsibility of translating, editing, proof reading and publication of books in Kannada pertaining to agriculture and allied subjects. During the year, 25 books on various agricultural and allied subjects in Kannada were published.

Sports, Games and Co-Curricular Activities for Students

The students of University of Agricultural Sciences, Bangalore participated in various co-curricular activities including participation in Inter Campus Tournament, Athletic Meet and Youth Festival, in addition to participation in

ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ. ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನಾ ಚಟುವಟಿಕೆಗಳಲ್ಲೂ ಸಹ ಭಾಗವಹಿಸಿದ್ದಾರೆ.

Zonal, State and National Level co-curricular activities. The students have also participated in NSS activities.

ಹಾಸನದ ಕೃಷಿ ಮಹಾವಿದ್ಯಾಲಯದಲ್ಲಿ 2019ರ ಮಾರ್ಚ್ 20ರಿಂದ 21ರವರೆಗೆ ಅಂತರ ಕಾಲೇಜು ಚೆಸ್ (ಪುರುಷರು) ಟೂರ್ನಮೆಂಟ್ ನಡೆಯಿತು. ಜಿ.ಕೆ.ವಿ.ಕೆ.ಯ ಕೃಷಿ ಮಹಾವಿದ್ಯಾಲಯದಲ್ಲಿ (ಸ್ನಾತಕೋತ್ತರ) 2018ರ ನವೆಂಬರ್ 3ರಿಂದ 5ರವರೆಗೆ ಅಂತರ ಕಾಲೇಜು (ಪುರುಷರು ಮತ್ತು ಮಹಿಳೆಯರು) ವಾಲಿಬಾಲ್ ಟೂರ್ನಮೆಂಟ್ ನಡೆಯಿತು. ಜಿ.ಕೆ.ವಿ.ಕೆ.ಯ ಕೃಷಿ ಮಹಾವಿದ್ಯಾಲಯ (ಸ್ನಾತಕ) ಪುರುಷರು ಮತ್ತು ಮಹಿಳೆಯರ ವಿಭಾಗಗಳಲ್ಲಿ ಅನುಕ್ರಮವಾಗಿ ಚೆಸ್ ಮತ್ತು ವಾಲಿಬಾಲ್ ಕ್ರೀಡೆಗಳಲ್ಲಿ ಮೊದಲ ಸ್ಥಾನ ಗಳಿಸಿದರು. ಚಿಂತಾಮಣಿಯ ರೇಷ್ಮೆಕೃಷಿ ಮಹಾವಿದ್ಯಾಲಯದಲ್ಲಿ 2018ರ ಸೆಪ್ಟೆಂಬರ್ 10–12ರವರೆಗೆ ಅಂತರ ಕಾಲೇಜು ಖೊ–ಖೊ (ಪುರುಷರು ಮತ್ತು ಮಹಿಳೆಯರು) ಟೂರ್ನಮೆಂಟ್ ನಡೆಸಲಾಯಿತು. ಜಿ.ಕೆ.ವಿ.ಕೆ.ಯ ಕೃಷಿ ಮಹಾವಿದ್ಯಾಲಯ(ಸ್ನಾತಕ)ದಲ್ಲಿ 2018ರ ಅಕ್ಟೋಬರ್ 12–14ರವರೆಗೆ ಅಂತರ ಕಾಲೇಜು ಟೇಬಲ್ ಟೆನ್ನಿಸ್ (ಪುರುಷರು ಮತ್ತು ಮಹಿಳೆಯರು) ಟೂರ್ನಮೆಂಟ್ ನಡೆಸಲಾಯಿತು. ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಂತಾಮಣಿಯು ಪುರುಷರ ಮತ್ತು ಮಹಿಳೆಯರ ಎರಡೂ ವಿಭಾಗಗಳಲ್ಲಿ ಖೊ–ಖೊ ಕ್ರೀಡೆಯಲ್ಲಿ 1ನೇ ಸ್ಥಾನವನ್ನು ಹಾಗೂ ಹಾಸನದ ಕೃಷಿ ಮಹಾವಿದ್ಯಾಲಯವು ಪುರುಷರ ಮತ್ತು ಮಹಿಳೆಯರ ಎರಡೂ ವಿಭಾಗಗಳಲ್ಲಿ ಟೇಬಲ್ ಟೆನ್ನಿಸ್ ಕ್ರೀಡೆಯಲ್ಲಿ 1ನೇ ಸ್ಥಾನವನ್ನು ಗಳಿಸಿದೆ. ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ರೋಲರ್ ಕ್ರೀಡಾ (ಪುರುಷರು) ಟೂರ್ನಮೆಂಟ್ –2018–19 ಹರಿಯಾಣಾದ ರೋಹ್ತಾಕ್ ನಲ್ಲಿನ ಮಹರ್ಷಿ ದಯಾನಂದ್ ವಿಶ್ವವಿದ್ಯಾನಿಲಯದಲ್ಲಿ 2019ರ ಜನವರಿ 27ರಿಂದ 31ರವರೆಗೆ ನಡೆಯಿತು. ಶ್ರೀ. ಎಸ್. ಅಂಕಿತ್, ಕೃಷಿ ಮಹಾವಿದ್ಯಾಲಯ (ಸ್ನಾತಕ), ಜಿ.ಕೆ.ವಿ.ಕೆ ಇವರು ರೋಲರ್ ಕ್ರೀಡೆ (ಪುರುಷರು) ಟೂರ್ನಮೆಂಟ್ ನಲ್ಲಿ ಕಂಚಿನ ಪದಕ ಗಳಿಸಿದರು.

Inter Collegiate Chess (Men) tournament was held at COA, Hassan from 20th to 21st March, 2019. Inter Collegiate Volleyball (Men & Women) tournament was held at COA, (PG) GKVK from 3rd to 5th November, 2018. CoA(UG), GKVK won 1st position in chess & volleyball under men & women category respectively. Inter Collegiate Kho-Kho (Men & Women) tournament was held at CoS, Chintamani from 10-12 September, 2018. The Inter Collegiate Table Tennis (Men & Women) tournament was held at CoA (UG), GKVK from 12-14 October, 2018. College of Sericulture, Chintamani won 1st position in Kho-Kho under both men and women category, while College of Agriculture, Hassan also won 1st position in Table tennis under both men and women category. All India Inter University Roller Sports (Men) Tournament-2018-19 was held at Maharshi Dayanand University, Rohthak, Haryana, from 27th to 31st January 2019. Mr. S. Ankith, College of Agriculture (UG), GKVK secured Bronze Medal in Roller Sports (Men) tournament.

ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಕರಾಟೆ (ಪುರುಷರು) ಚಾಂಪಿಯನ್ ಶಿಪ್ 2018–19 ಹರಿಯಾಣಾದ ರೋಹ್ತಾಕ್ ನಲ್ಲಿನ ಮಹರ್ಷಿ ದಯಾನಂದ್ ವಿಶ್ವವಿದ್ಯಾನಿಲಯದಲ್ಲಿ 2019ರ ಫೆಬ್ರವರಿ 20ರಿಂದ 24ರವರೆಗೆ ನಡೆಯಿತು. ಶ್ರೀ. ಜೆ.ರಕ್ಷಿತ್ ರೆಡ್ಡಿ, ಕೃಷಿ ಮಹಾವಿದ್ಯಾಲಯ (ಸ್ನಾತಕ), ಜಿ.ಕೆ.ವಿ.ಕೆ ಇವರು ಕರಾಟೆ (ಪುರುಷರು) ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗಳಿಸಿದರು. ಪಂಜಾಬ್‌ನ ಲೂಧಿಯಾನಾದ ಪಂಜಾಬ್ ಕೃಷಿ ವಿಶ್ವವಿದ್ಯಾನಿಲಯದಲ್ಲಿ 2019ರ ಜನವರಿ 2ರಿಂದ 5ರವರೆಗೆನಡೆದ 19ನೇ ಅಖಿಲ ಭಾರತ ಅಂತರ ಕೃಷಿ ವಿಶ್ವವಿದ್ಯಾನಿಲಯಗಳ ಕ್ರೀಡೆ ಮತ್ತು ಆಟೋಟಗಳ ಕೂಟವನ್ನು ಆಯೋಜಿಸಲಾಗಿತ್ತು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಈ ಕ್ರೀಟಾ ಕೂಟದಲ್ಲಿ ಒಟ್ಟಾರೆ 3ನೇ ಸ್ಥಾನವನ್ನು ಗಳಿಸಿತು. ಅಂತರ ಕಾಲೇಜು ಯುವ ಜನೋತ್ಸವವನ್ನು 2018ರ ಡಿಸೆಂಬರ್ 27ರಿಂದ 28ರವರೆಗೆ ಮಂಡ್ಯದ ಕೃಷಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು. ಹಾಸನದ ಕೃಷಿ ಮಹಾವಿದ್ಯಾಲಯ, ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯ ಹಾಗೂ ಜಿ.ಕೆ.ವಿ.ಕೆ. ಕೃಷಿ ಮಹಾವಿದ್ಯಾಲಯದ (ಸ್ನಾತಕ)ದ ವಿದ್ಯಾರ್ಥಿಗಳು ಅನುಕ್ರಮವಾಗಿ ಮೊದಲ, ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿದರು.

All India Inter University Karate (Men) Championship-2018-19 was held at Maharshi Dayanand University, Rohthak, Haryana from 20th to 24th February 2019. Mr. J. Rakshith Reddy, College of Agriculture (UG), GKVK secured Bronze Medal in Karate (Men) championship. The 19th All India Inter Agricultural University Sports & Games Meet was held at Punjab Agricultural University, Ludhiana, Punjab from 2nd to 5th January, 2019. UAS-B Secured overall 3rd position in the event. Inter Collegiate Youth Festival was held at College of Agriculture, Mandya from 27-28 December, 2018. College of Agriculture, Hassan; College of Sericulture, Chintamani and College of Agriculture (UG), GKVK were the winners, runners and secured 3rd position respectively.

ಪದವಿ ಪಡೆಯುವ ವಿದ್ಯಾರ್ಥಿಗಳಿಗೆ ವಿವಿಧ ನೇಮಕಾತಿ ಏಜೆನ್ಸಿಗಳಿಂದ ಉದ್ಯೋಗ ಸ್ಥಾನೀಕರಣಕ್ಕಾಗಿ ವಿಶ್ವವಿದ್ಯಾನಿಲಯವು ತನ್ನ ಕೇಂದ್ರ

The University has placement cell at main campus with coordinator and so also in

ಆವರಣದಲ್ಲಿ ಹಾಗೂ ತನ್ನ ಇತರ ಆವರಣಗಳಲ್ಲಿಯೂ ಸಹ ಉದ್ಯೋಗ ಕೋಶವನ್ನು ಹೊಂದಿದ್ದು ಅದರ ಉಸ್ತುವಾರಿಗೆ ಒಬ್ಬರು ಸಂಯೋಜಕರಿದ್ದಾರೆ, ಪ್ರಸ್ತುತ ವರ್ಷದಲ್ಲಿ 219 ವಿದ್ಯಾರ್ಥಿಗಳು ಉದ್ಯೋಗ ಕೋಶದ ಮೂಲಕ ವಿವಿಧ ಖಾಸಗಿ ಕಂಪೆನಿಗಳಿಗೆ ನೇಮಕಾತಿಗೊಂಡಿದ್ದಾರೆ. ವಿಶ್ವವಿದ್ಯಾನಿಲಯವು ರಾಷ್ಟ್ರೀಯ ಸೇವಾ ಯೋಜನೆಯನ್ನು ಅಳವಡಿಸಿಕೊಂಡಿದೆ. ಆಧ್ಯಾದೇಶದ ಕಾರ್ಯಕ್ರಮಗಳನ್ನು ಆಯೋಜಿಸಲು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಅದು ಒಬ್ಬ ಸಂಯೋಜಕರನ್ನು ಹಾಗೂ ಪ್ರತಿಯೊಂದು ಕಾಲೇಜಿನಲ್ಲಿ ಸಹಾಯಕ ಸಂಯೋಜಕರನ್ನು ಹೊಂದಿದೆ. ವಿಶ್ವವಿದ್ಯಾನಿಲಯವು ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಮತ್ತು ಗಣ್ಯರ ಜನ್ಮ ಶತಾಬ್ದಿಗಳನ್ನು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಘೋಷಿಸಿರುವ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ದಿನಾಚರಣೆಗಳನ್ನು ಆಚರಿಸಿದೆ.

ವಿಶ್ವವಿದ್ಯಾನಿಲಯವು ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ತನ್ನ ಎಲ್ಲಾ ಮಹಾ ವಿದ್ಯಾಲಯಗಳ ಆವರಣಗಳಲ್ಲಿ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿದೆ. ಬೆಂಗಳೂರಿನಲ್ಲಿ 2018–19ರ ಸಾಲಿನಲ್ಲಿ, ಒಟ್ಟು 18,012 ರೋಗಿಗಳಿಗೆ ವೈದ್ಯಕೀಯ ಸಲಹಾ ಸೇವೆ ಒದಗಿಸಲಾಗಿದೆ. ಇದರ ಜೊತೆಗೆ 2183 ಮಾದರಿಗಳ ಪ್ರಯೋಗಾಲಯ ಪರೀಕ್ಷೆ ಹಾಗೂ ವಿಶ್ಲೇಷಣೆಗಳನ್ನು ನಡೆಸಿ ನಂತರ ಸೂಕ್ತ ಔಷಧಗಳ ಸೇವನೆಗೆ ಸೂಚಿಸಲಾಗಿದೆ. ಇತರ ಮಹಾ ವಿದ್ಯಾಲಯ ಆವರಣಗಳಲ್ಲಿ ಭೇಟಿ ನೀಡುವ ವೈದ್ಯರ ಸೇವೆಗಳನ್ನು ಒದಗಿಸಲಾಗಿದೆ. ಇದರ ಜೊತೆಗೆ, ವಿದೇಶಿ ವಿದ್ಯಾರ್ಥಿಗಳನ್ನೊಳಗೊಂಡಂತೆ ವಿಶ್ವವಿದ್ಯಾನಿಲಯಕ್ಕೆ ಪ್ರವೇಶ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ತುರ್ತು ವೈದ್ಯಕೀಯ ವೆಚ್ಚ ಭರಿಸಲು ಸಾಧ್ಯವಾಗುವಂತೆ ಕಡ್ಡಾಯ ಗುಂಪು ಆರೋಗ್ಯ ವಿಮೆ ಯೋಜನೆಯ ರಕ್ಷಣೆಯಿದೆ.

ಕೃಷಿ ವಿಶ್ವವಿದ್ಯಾನಿಲಯವು ಜಿ.ಕೆ.ವಿ.ಕೆ.ಯಲ್ಲಿ ಪ್ರಮುಖ ಗ್ರಂಥಾಲಯ ಹಾಗೂ ತನ್ನ ಇತರ ಮಹಾ ವಿದ್ಯಾಲಯಗಳಲ್ಲಿ ಒಳಗೊಂಡಂತೆ ಒಟ್ಟು ನಾಲ್ಕು ಗ್ರಂಥಾಲಯಗಳನ್ನು ಹೊಂದಿದೆ. ಗ್ರಂಥಾಲಯದ ಪ್ರಮುಖ ಗುರಿಯು ಬೋಧಕ ಸಿಬ್ಬಂದಿ, ವಿಜ್ಞಾನಿಗಳು, ವಿಸ್ತರಣಾ ತಜ್ಞರು ಮತ್ತು ವಿದ್ಯಾರ್ಥಿಗಳಿಗೆ ಸೇವೆಯನ್ನು ಒದಗಿಸುವುದಾಗಿದೆ. ಸ್ನಾತಕೋತ್ತರ ಹಂತದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಸೇವೆಯನ್ನು ನಾನ್ ಕ್ರೆಡಿಟ್ ಕೋರ್ಸ್ ಆಗಿ ಬೋಧಿಸಲು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸೂಚಿಸಿದೆ. ಗ್ರಂಥಾಲಯ ಉಪ ಸಮಿತಿಯು ಅವಶ್ಯಕತೆ ಆಧಾರಿತ ವಿಷಯಗಳ ಕುರಿತಂತೆ ಸಭೆ ನಡೆಸಿ, ಪರಾಮರ್ಶಿಸಿ ಹೊಸ ಪುಸ್ತಕ ಮತ್ತು ಹೊಸ ಪತ್ರಿಕೆಗಳಿಗೆ ಚಂದಾದಾರರಾಗುವ ಕುರಿತಂತೆ ಶಿಫಾರಸ್ಸುಗಳನ್ನು ನೀಡುತ್ತದೆ. ಗ್ರಂಥಾಲಯಗಳನ್ನು ಸದೃಢಗೊಳಿಸಲು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಅನುದಾನವನ್ನು ಬಳಸಿಕೊಂಡು ಪ್ರಸ್ತುತ ವರ್ಷ 3240 ಶೀರ್ಷಿಕೆಗಳನ್ನು ಪಡೆದಿದ್ದು 16 ವಿದೇಶಿ ಪತ್ರಿಕೆಗಳನ್ನು, 33 ಭಾರತೀಯ ಪತ್ರಿಕೆಗಳನ್ನು, 68 ಇ–ಪುಸ್ತಕಗಳನ್ನು ಮತ್ತು ಸಿ.ಡಿ.ಗಳನ್ನು ಹಾಗೂ 5 ಇ–ಜರ್ನಲ್‌ಗಳನ್ನು ನವೀಕರಿಸಲಾಗಿದೆ.

ವಿಶ್ವವಿದ್ಯಾನಿಲಯದ 53ನೇ ಸಂಸ್ಥಾಪನಾ ದಿನಾಚರಣೆಯನ್ನು 2018ರ ಅಕ್ಟೋಬರ್ 4ರಂದು ವಿಶ್ವವಿದ್ಯಾನಿಲಯದ ಸ್ಥಾಪನೆಯ ಸ್ಮರಣೆಗಾಗಿ ಮಾತ್ರವಲ್ಲ ಅದರ ಸಂಸ್ಥಾಪಕರ ಸ್ಮರಣೆಗಾಗಿ ಹಾಗೂ ಅದು ಸ್ಥಾಪನೆಯಾದ ದಿನದಿಂದ ಇದುವರೆಗೆ ನೀಡಿರುವ ಗಮನಾರ್ಹ ಅಭಿವೃದ್ಧಿಯ ಕೊಡುಗೆಯ ಸ್ಮರಣೆಗಾಗಿ ಆಚರಿಸಲಾಯಿತು. ಶ್ರೀ. ಎನ್.ಎಚ್. ಶಿವಶಂಕರ ರೆಡ್ಡಿ, ಸನ್ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಡಾ. ಎನ್.ಸಿ.

constituent colleges for the purpose of placement of graduating student in different employing agencies. During the year, 219 graduating students were recruited by different private companies through Placement Cell. The University adopted the National Service Scheme. It has Coordinator at the University level and Assistant coordinators at each college to organise mandated activities. Independence Day, Republic Day, Kannada Rajoythsava Day, Birth Anniversaries and National & International days were organised.

The University provides medical services to all the students and the employees, in all its constituent college campuses. During 2018-19, consultation was rendered to 18,012 patients at Bengaluru. Besides, 2,183 samples were subjected to laboratory tests and analysis after which suitable medicines were prescribed. At satellite college campuses, visiting doctor services were arranged. All the students admitted to the University including foreign Nationals were covered under compulsory Group Health Insurance Scheme to meet the emergency medical expenses.

The UAS has four libraries; main Library at GKVK and one each in constituent colleges. The main motto of the Library is to provide the services to faculty, scientists, extension specialists and students. The ICAR has prescribed the Library and information service course at Post Graduate Level as a Non-credit course. The Library Sub-Committee meets, reviews and recommends for procurement of new books and subscription of new Journals. During the year, 3240 titles were procured and 16 Foreign journals, 33 Indian journals, 68 e-books & CDs and five e-journals were renewed for strengthening libraries utilizing ICAR grants.

The 53rd Foundation Day of the University was celebrated on 4th October, 2018 to commemorate the remembrance of not only the beginnings of the University and its founders, but also the significant development since the inception of the University. Sri. N.H. Shivashankara Reddy, Hon'ble Minister for Agriculture, GoK

ಪಟೇಲ್, ಕುಲಪತಿಗಳು, ಆನಂದ್ ಕೃಷಿ ವಿಶ್ವವಿದ್ಯಾನಿಲಯ, ಆನಂದ್, ಗುಜರಾತ್ ಇವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು ಹಾಗೂ ಡಾ. ಎಸ್. ರಾಜೇಂದ್ರ ಪ್ರಸಾದ್, ಕುಲಪತಿಗಳು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಇವರು ಅಧ್ಯಕ್ಷತೆ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಆಡಳಿತ ನಿರ್ವಹಣಾ ಮಂಡಳಿಯ ಸನ್ಮಾನ್ಯ ಸದಸ್ಯರು ಭಾಗವಹಿಸಿದ್ದರು. ವಿವಿಧ ಪ್ರಶಸ್ತಿಗಳಾದಂತಹ ಶ್ರೀಮತಿ. ನಾಗಮ್ಮ ದತ್ತಾತ್ರೇಯ ರಾವ್ ದೇಸಾಯಿ ಪ್ರಶಸ್ತಿ; ಡಾ॥ಕಾಳಯ್ಯ ಕೃಷ್ಣಮೂರ್ತಿ ರಾಷ್ಟ್ರೀಯ ಪ್ರಶಸ್ತಿ; ಮೆ.ಜುವಾರಿ ಇಂಡಸ್ಟ್ರೀಸ್ ಲಿ. ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ; ಭಾರತೀಯ ಕೃಷಿ ಅನುಸಂಧಾನ ಪರಿಷತ್– ಅತ್ಯುತ್ತಮ ಅಧ್ಯಾಪಕ ಪ್ರಶಸ್ತಿ; ಅತ್ಯುತ್ತಮ ಸೇವಾ ಸಿಬ್ಬಂದಿ ಪ್ರಶಸ್ತಿ ಹಾಗೂ ಅತ್ಯುತ್ತಮ ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗಳನ್ನು ವಿಜೇತರಿಗೆ ನೀಡಿ ಸನ್ಮಾನಿಸಲಾಯಿತು.

ಸಂಕೇತ ಮತ್ತು ಸಂಪ್ರದಾಯ ಭರಿತ 53ನೇ ಘಟಿಕೋತ್ಸವವನ್ನು 2019ರ ಮಾರ್ಚ್ 25ರಂದು ವಿದ್ಯಾರ್ಥಿಗಳ ಅಧ್ಯಯನ ಮತ್ತು ಶ್ರದ್ಧೆಯನ್ನು ಗುರುತಿಸುವ ಸಲುವಾಗಿ ಆಯೋಜಿಸಲಾಗಿತ್ತು. ಕುಲಾಧಿಪತಿಗಳು ಮತ್ತು ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರ ಅನುಪಸ್ಥಿತಿಯಲ್ಲಿ ಡಾ.ಎಸ್.ರಾಜೇಂದ್ರ ಪ್ರಸಾದ್, ಕುಲಪತಿಗಳು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಈ ಘಟಿಕೋತ್ಸವದಲ್ಲಿ ಒಟ್ಟು, 1042 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಅರ್ಹ ವಿದ್ಯಾರ್ಥಿಗಳಿಗೆ 72 ಪಿಎಚ್.ಡಿ, 309 ಸ್ನಾತಕೋತ್ತರ ಪದವಿ ಮತ್ತು 661 ಸ್ನಾತಕ ಪದವಿಗಳನ್ನು ಪ್ರದಾನ ಮಾಡಲಾಗಿದೆ. ಪದ್ಮಶ್ರೀ ಪ್ರಶಸ್ತಿ ವಿಜೇತರಾದ ಡಾ. ಬಲದೇವ್ ಸಿಂಗ್ ಧಿಲ್ಲೋನ್, ಸನ್ಮಾನ್ಯ ಕುಲಪತಿಗಳು, ಪಂಜಾಬ್ ಕೃಷಿ ವಿಶ್ವವಿದ್ಯಾನಿಲಯ, ಲೂಧಿಯಾನ ಇವರು ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿದ್ದರು. ಆಡಳಿತ ನಿರ್ವಹಣಾ ಮಂಡಳಿಯ ಸನ್ಮಾನ್ಯ ಸದಸ್ಯರು ಶೈಕ್ಷಣಿಕ ಪರಿಷತ್ ನ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ

ರಾಜ್ಯದ ಕೃಷಿ ಸಂಶೋಧನೆಯ ಸಮಸ್ಯೆಗಳನ್ನು ಹಾಗೂ ನಿರ್ದಿಷ್ಟವಾಗಿ ರೈತರ ಸಮಸ್ಯೆಗಳನ್ನು ಪರಿಹರಿಸಲು ವಿಶ್ವವಿದ್ಯಾನಿಲಯದಲ್ಲಿ ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆಯು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಅಧಿಕ ಸಂಖ್ಯೆಯ ರೈತರಿಗೆ ಸಹಾಯ ಮಾಡಲು ಮಳೆನೀರಿನ ಪರಿಣಾಮಕಾರಿ ನಿರ್ವಹಣೆ ಮತ್ತು ಪೂರಕ ಹಾಗೂ ಸಣ್ಣ ಪ್ರಮಾಣದ ನೀರಾವರಿಯ ಮೂಲಕ ಮಣ್ಣಿನ ತೇವಾಂಶ ನಿರ್ವಹಣೆ ಪ್ರಮುಖ ಅಂಶಗಳಾಗಿವೆ. ಕ್ಷೇತ್ರ ಮಟ್ಟದಲ್ಲಿ ಉತ್ತಮ ವಿಧಾನಗಳ ಮೂಲಕ ಮಣ್ಣು ಮತ್ತು ಜಲಸಂಪನ್ಮೂಲಗಳ ನಿರ್ವಹಣೆಯನ್ನೂ ಮೀರಿದ ಮಳೆಯಾಶ್ರಿತ ಕೃಷಿಯನ್ನು ಮೇಲ್ದರ್ಜೆಗೇರಿಸಲು ಜಲ ಬಂಡವಾಳ ಹೂಡಿಕೆಯಂತಹ ಹೊಸ ಯುಗದ ಪ್ರಾರಂಭಕ್ಕೆ ವಿಶ್ವವಿದ್ಯಾನಿಲಯವು ನಾಂದಿ ಹಾಡುತ್ತಿದೆ. ಗುರಿಯ ಜಿಲ್ಲೆಗಳಲ್ಲಿ ಗ್ರಾಮೀಣ ಜೀವನೋಪಾಯದ ಸುಧಾರಣೆಗೆ ಒಂದು ಸರ್ವತೋಮುಖ ಸಮಗ್ರ ಕೃಷಿ ವ್ಯವಸ್ಥೆ ವಿಧಾನವನ್ನು ಗತದ ಅನುಭವಗಳನ್ನು, ಇರುವ ಅವಕಾಶಗಳನ್ನು ಮತ್ತು ಕೌಶಲ್ಯಗಳನ್ನು ಪರಿಗಣಿಸಿ ಹಾಗೂ ಪಾಲುದಾರಿಕೆಯ ಬೆಂಬಲದೊಂದಿಗೆ ವಿಶ್ವವಿದ್ಯಾನಿಲಯವು ಪರಿಣಾಮಕಾರಿಯಾಗಿ ಅಳವಡಿಸಿಕೊಂಡಿದೆ. ರಾಜ್ಯದ ದಕ್ಷಿಣದ 10 ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ತನ್ನ 13 ಕೃಷಿ

inaugurated the program. Dr. N.C. Patel, Vice-Chancellor, Anand Agricultural University, Anand, Gujarat was the chief guest of the function Dr. S. Rajendra Prasad, Vice-Chancellor of UAS-B presided over the function. Hon'ble Members, Board of Management participated in the celebration. Various awards viz., Smt. Nagamma Dattatreya Rao Desai Award; Dr. Kalaiah Krishnamurthy National Award; M/s. Zuari Industries Ltd., Best Extension Worker Award; ICAR-Best teacher award; Best Service Personnel Awards and Best Kannada Book Award were bestowed to deserving candidates.

The 53rd Convocation ceremony filled with symbolism and tradition was celebrated on 25th March, 2019 to recognise the years of study and dedication of the students. Dr. S. Rajendra Prasad, Vice-Chancellor awarded degrees in the absence of Hon'ble Governor of Karnataka and Chancellor of the University. In total, 1042 students were awarded degrees during the convocation. 72 Ph.D. degrees, 309 Master degrees and 661 Bachelor's degrees were conferred to qualified candidates. Dr. Baldev Singh Dhillon, Hon'ble Vice-Chancellor, Punjab Agricultural University, Ludhiana and Padma Shri awardee was the chief guest of the function. Hon'ble Members, Board of Management and Members of Academic Council graced the occasion.

Agricultural Research and Development

Research is a continuous process in the University to address the problems faced by farmers of the State. Effective management of rainwater and soil moisture using supplemental and small-scale irrigation holds the key to help the large number of farmers. University has called for a new era of water investments for upgrading rainfed agriculture that would go beyond managing soil and water resources through better management practices at field level. In an effective convergence mode for improving the rural livelihoods in the target districts, a holistic integrated farming system approach is adopted by the University by drawing attention of the past experiences, existing opportunities & skills and supported partnerships for improving the socio-economic status of the farmers. Farmer Centric Research programmes have addressed the challenges faced by the farming

ಸಂಶೋಧನಾ ಕೇಂದ್ರಗಳ ರೈತ ಸಮುದಾಯವು ಎದುರಿಸಲು ಸಮಸ್ಯೆಗಳ ಪರಿಹಾರಕ್ಕಾಗಿ ರೈತ ಕೇಂದ್ರಿತ ಸಂಶೋಧನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪ್ರಸ್ತುತ ಒಟ್ಟು 309 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದು ಅವುಗಳಲ್ಲಿ 32 ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಹಯೋಜಿತ ಸಂಶೋಧನಾ ಪ್ರಾಯೋಜನೆಗಳು, 11 ಭಾರತೀಯ ಕೃಷಿ ಅನುಸಂಧಾನ ಪರಿಷತ್ ತಾತ್ಪೂರ್ತಿಕ ಪ್ರಾಯೋಜನೆಗಳು, 22 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 66 ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ಡಿ.ಬಿ.ಟಿ.), 31 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು ಹಾಗೂ 41 ಇತರ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು ಹಾಗೂ 100 ಸಂಶೋಧನಾ ಪ್ರಾಯೋಜನೆಗಳು (ತಳಿ ಅಭಿವೃದ್ಧಿ = 69, ಬೇಡಿಕೆ ಆಧಾರಿತ –9 ಮತ್ತು ಹವಾಮಾನ ಚತುರ ಕೃಷಿ – 22) ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವವಿದ್ಯಾನಿಲಯ ಪ್ರಾಯೋಜಿತವಾಗಿವೆ. ಒಟ್ಟು 2438.4 ಲಕ್ಷ ರೂಗಳ ಆಯವ್ಯಯದಲ್ಲಿ 2 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳನ್ನೊಳಗೊಂಡಂತೆ ವಿವಿಧ ಅನುದಾನದ ಏಜೆನ್ಸಿಗಳು ವಿಶ್ವವಿದ್ಯಾನಿಲಯಕ್ಕೆ 81 ಹೊಸ ಬಾಹ್ಯ ಪ್ರಾಯೋಜಿತ ಸಂಶೋಧನಾ ಪ್ರಾಯೋಜನೆಗಳನ್ನು ಮಂಜೂರು ಮಾಡಿವೆ. ಪ್ರಸ್ತುತ ವರ್ಷದಲ್ಲಿ ವಿಶ್ವವಿದ್ಯಾನಿಲಯವು 334 ಹೊಸ ತಳಿಗಳು/ಸಾಲುಗಳು/ ರಾಸಾಯನಿಕಗಳು/ಅಣುಗಳನ್ನು ಪೀಡೆ/ ರೋಗ/ಕಳೆ ನಿಯಂತ್ರಣಕ್ಕಾಗಿ/ ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟು ರೂ.436 ಲಕ್ಷ ಆದಾಯವನ್ನು ಗಳಿಸಿದೆ. ವಿವಿದ ಸಂಸ್ಥೆಗಳೊಂದಿಗೆ ಪರಸ್ಪರ ಆಸಕ್ತಿಯ ಸಹಯೋಜಿತ ಸಂಶೋಧನೆಯನ್ನು ಕೈಗೊಳ್ಳಲು ಒಟ್ಟು 4 ಒಪ್ಪಂದದ ದಸ್ತಾವೇಜುಗಳು /ಎಂ.ಓ.ಎ.ಗಳು / ಎಂ.ಟಿ.ಎ.ಗಳಿಗೆ ಸಹಿ ಮಾಡಲಾಗಿದೆ. ವಿಶ್ವವಿದ್ಯಾನಿಲಯವು ಏಳು ಹೊಸ ಬೆಳೆ ತಳಿಗಳನ್ನು ಅಭಿವೃದ್ಧಿಪಡಿಸಿದೆ ಮತ್ತು 18 ಹೊಸ ತಂತ್ರಜ್ಞಾನಗಳನ್ನು ರೈತರ ಬಳಕೆಗಾಗಿ ಬಿಡುಗಡೆ ಮಾಡಲಾಗಿದೆ.

ಭಾರತೀಯ ಕೃಷಿ ಅನುಸಂಧಾನ ಪರಿಷತ್– ಉನ್ನತ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಕಾರ್ಯಕ್ರಮದ ಬೆಂಬಲದಡಿ ಹೊಂದಾಣಿಕೆ ಕೃಷಿಯಲ್ಲಿ ಮುಂದಿನ ತಲೆಮಾರಿನ ತಂತ್ರಜ್ಞಾನಗಳ ಕೇಂದ್ರವು (ಎನ್.ಜಿ.ಟಿ.–ಎ.ಎ.) ಕೃಷಿ ವಿಜ್ಞಾನಗಳ ನಾಲ್ಕು ವಿವಿಧ ಆಯ್ದ ಕ್ಷೇತ್ರಗಳಲ್ಲಿ ಮತ್ತು ಹಲವಾರು ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಂಶೋಧನೆಯನ್ನು 2018–19ರಲ್ಲಿ ಪ್ರಾರಂಭಿಸಿದೆ. ನೀರಾವರಿ ನೀರು ಹರಿದುಹೋಗುವುದನ್ನು ಕಡಿಮೆಗೊಳಿಸಿದ ಬೇಸಾಯ, ನಿಖರ ಬೆಳೆ ತಳಿ ಸಂವರ್ಧನೆ, ಎಂಡೋಫೈಟ್ ಸಹಾಯದ ಬೀಜ ಬೀಜ ಮೊಳಕೆ ನಿಯಂತ್ರಣ ಮತ್ತು ಪೀಡೆ ಹಾಗೂ ರೋಗ ಹಾವಳಿಯ ಮುನ್ಸೂಚನೆ ನೀಡುವುದರ ಕುರಿತ ಸಂಶೋಧನಾ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಕೇಂದ್ರವು ಅನುಕ್ರಮವಾಗಿ 215 ಮತ್ತು 209 ಪುರುಷರು ಮತ್ತು ಸ್ತ್ರೀಯರಿಗೆ ತರಬೇತಿ ನೀಡಿದ್ದು ಅದರಲ್ಲಿ ಶೇ.79ರಷ್ಟು ವಿದ್ಯಾರ್ಥಿಗಳು ಹಾಗೂ ಶೇ. 18ರಷ್ಟು ಬೋಧಕ ಸಿಬ್ಬಂದಿ ಮತ್ತು ಉದ್ಯಮ ಸಿಬ್ಬಂದಿಯಾಗಿದ್ದಾರೆ. ಈ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರು 20 ವಿವಿಧ ಸಂಸ್ಥೆ/ ವಿಶ್ವವಿದ್ಯಾನಿಲಯಗಳನ್ನು ಪ್ರತಿನಿಧಿಸಿದ್ದರು.

community through 13 Agricultural Research Stations covering 10 southern districts of the State.

In total, 309 research projects are in operation, of which 32 are ICAR Coordinated Research Projects; 11 ICAR Adhoc projects; 22 RKVY projects; 66 Government of India Projects (DST/ DBT); 31 Government of Karnataka Projects; 41 projects funded by other agencies and 100 research projects (Varietal development-69 Demand driven-9 & Climate Smart Agriculture-22) sponsored by the University to tackle the problems of the farmers. A total of 81 new research projects have been sanctioned to the University during 2018-19 by various funding agencies with a total outlay of Rs. 2438.4 lakhs, including 2 RKVY projects. During the year, the University has tested 334 new varieties / lines/ chemicals/molecules for control of pests / diseases / weeds / soil analysis and agricultural equipment and generated a revenue of Rs.436 lakhs. A total of four MoUs / MoAs / MTA have been signed with different institutions for conducting collaborative research of mutual interest. University has developed seven new crop varieties and 18 new technologies were released for adoption by the farmers.

Centre for Next Generation Technologies in Adaptive Agriculture (NGT_AA) supported under ICAR-CAAST has initiated research in four different chosen areas of agricultural sciences and several HRD activities during the year 2018-19. Research activities related to reduced runoff farming, precision crop breeding, endophyte enabled seed priming and forecasting pest and disease outbreaks have been initiated. The Centre has trained 215 and 209 male and female candidates, respectively of which 79 per cent were students, 18 per cent were young faulty and industry personnel. Participants from 20 different institutions/ universities were benefited by the skill development program.

ಕೃಷಿ ವಿಸ್ತರಣಾ ಶಿಕ್ಷಣ ಮತ್ತು ಸೇವೆಗಳು

ದಕ್ಷಿಣದ 10 ಜಿಲ್ಲೆಗಳಲ್ಲಿ ವಿಸ್ತರಣಾ ಸೇವೆ ಒದಗಿಸುವ ಜವಾಬ್ದಾರಿಯನ್ನು ವಿಸ್ತರಣಾ ನಿರ್ದೇಶನಾಲಯಕ್ಕೆ ವಹಿಸಲಾಗಿದೆ. ಕೃಷಿ ಅಭಿವೃದ್ಧಿಗೆ ಸಂಶೋಧನಾ ಆವಿಷ್ಕಾರಗಳ ಆಧಾರಿತ ತಂತ್ರಜ್ಞಾನವು ರೈತರಿಗೆ ಲಭಿಸಬೇಕೆಂದು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳು ತಂತ್ರಜ್ಞಾನ ಆವಿಷ್ಕಾರ, ಸುಧಾರಣೆ ಮತ್ತು ತಂತ್ರಜ್ಞಾನ ಅಳವಡಿಕೆಯನ್ನು ಕೆಂದ್ರೀಕರಿಸುತ್ತವೆ. ಪ್ರಶಸ್ತಿ ವಿಜೇತ ರೈತರಿಂದ ಇತರ ರೈತರ ತರಬೇತಿ, ರೈತರ ಆದಾಯ ದುಪ್ಪಟ್ಟುಗೊಳಿಸುವುದು, ಬೀಜ ಕೇಂದ್ರ ಮತ್ತು ಹವಾಮಾನ ಸಹಿಷ್ಣು ಸಮಗ್ರ ಬೇಸಾಯ ವ್ಯವಸ್ಥೆಯ ಪ್ರಾತ್ಯಕ್ಷಿಕೆ, ಕೌಶಲ್ಯ ಅಭಿವೃದ್ಧಿ ಮುಂತಾದ ಹೊಸ ಕಾರ್ಯಕ್ರಮಗಳನ್ನು ವಿಸ್ತರಣಾ ನಿರ್ದೇಶನಾಲಯವು ಕೈಗೊಂಡಿದೆ. ವಿಸ್ತರಣಾ ನಿರ್ದೇಶನಾಲಯ 154 ಮುಂಚೂಣಿ ಪ್ರಾತ್ಯಕ್ಷಿಕೆಗಳು, 22 ಕ್ಷೇತ್ರ ಪರೀಕ್ಷೆಗಳು, 2125 ಕ್ಷೇತ್ರ ಭೇಟಿಗಳು ಮತ್ತು 622 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. 25 ರೇಡಿಯೋ ಭಾಷಣಗಳನ್ನು ಮತ್ತು 8 ದೂರದರ್ಶನ ಕಾರ್ಯಕ್ರಮಗಳನ್ನು ಸಹ ನೀಡಲಾಗಿದೆ/ ಆಯೋಜಿಸಲಾಗಿದೆ. ವಿಸ್ತರಣಾ ನಿರ್ದೇಶನಾಲಯವು 2018ರ ಕೃಷಿಮೇಳವನ್ನು 2018ರ ನವೆಂಬರ್ 15–18ರವರೆಗೆ 'ಕೃಷಿ ಆದಾಯ ವರ್ಧನೆಗೆ ಪೂರಕ ತಂತ್ರಜ್ಞಾನಗಳು' ಎನ್ನುವ ವಿಷಯದೊಂದಿಗೆ ಕರ್ನಾಟಕ ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೃಷಿ ವಿಶ್ವವಿದ್ಯಾನಿಲಯಗಳು, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಂಸ್ಥೆಗಳ ಮತ್ತು ಖಾಸಗಿ ಹಾಗೂ ಸಾರ್ವಜನಿಕ ಕ್ಷೇತ್ರ ಸಂಸ್ಥೆಗಳ ಸಹಯೋಗದಿಂದ ಆಯೋಜಿಸಿತ್ತು. ಈ ಕೃಷಿಮೇಳದಲ್ಲಿ ಸುಮಾರು 700 ವಿವಿಧ ರೀತಿಯ ಪ್ರದರ್ಶನ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಕೃಷಿಮೇಳವನ್ನು 2018ರ ನವೆಂಬರ್ 15ರಂದು ಕರ್ನಾಟಕದ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ವಜುಭಾಯಿ ವಾಲಾರವರು ಉದ್ಘಾಟಿಸಿದರು ಹಾಗೂ ಕರ್ನಾಟಕ ಸರ್ಕಾರದ ಸನ್ಮಾನ್ಯ ಕೃಷಿ ಸಚಿವರಾದ ಶ್ರೀ ಎಚ್.ಎನ್. ಶಿವಶಂಕರ ರೆಡ್ಡಿಯವರು ಉಪಸ್ಥಿತರಿದ್ದರು. ಕೃಷಿ ಮೇಳದಲ್ಲಿ ಹೊಸ ತಳಿಗಳು / ತಂತ್ರಜ್ಞಾನಗಳ ಮತ್ತು ಕೃ.ವಿ.ವಿ. ದಿನಸೂಚಿ –2019 ಬಿಡುಗಡೆ ಮಾಡಲಾಯಿತು. ಶ್ರೀ. ಎಚ್.ಡಿ. ದೇವೇಗೌಡರು, ಭಾರತದ ಮಾಜಿ ಸನ್ಮಾನ್ಯ ಪ್ರಧಾನ ಮಂತ್ರಿಗಳು ಹಾಗೂ ಸಂಸದರು, ಹಾಸನ ಇವರು ಕೃಷಿಮೇಳದ ಕಾರ್ಯಕ್ರಮದಲ್ಲಿ 2018ರ ನವೆಂಬರ್ 17ರಂದು ಭಾಗವಹಿಸಿದ್ದರು. ಶ್ರೀ. ಎಚ್.ಡಿ.ಕುಮಾರಸ್ವಾಮಿ, ಕರ್ನಾಟಕದ ಸನ್ಮಾನ್ಯ ಮುಖ್ಯ ಮಂತ್ರಿಗಳು 2018ರ ನವೆಂಬರ್ 18ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದರು ಹಾಗೂ 'ಬೀಜ ಆಧಾರ್' ಮತ್ತು 'ತಂತ್ರಾಂಶ ಆಧಾರಿತ ಮಣ್ಣು ಪರೀಕ್ಷೆ' ಆಪ್‌ಗಳನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ 150 ಪ್ರಶಸ್ತಿಗಳನ್ನು ರೈತರಿಗೆ ಮತ್ತು ವಿಸ್ತರಣಾ ಕಾರ್ಯಕರ್ತರಿಗೆ ವಿತರಿಸಲಾಯಿತು.

ಶೈಕ್ಷಣಿಕ ಚಟುವಟಿಕೆಗಳ, ಪ್ರಶಸ್ತಿ / ಮಾನ್ಯತೆ ಮತ್ತು ಪ್ರಕಟಣೆಗಳು

ವಿಶ್ವವಿದ್ಯಾನಿಲಯವು 802 ಸಮಾವೇಶ / ವಿಚಾರ ಸಂಕಿರಣ / ಕಾರ್ಯಾಗಾರ / ತರಬೇತಿ ಕಾರ್ಯಕ್ರಮಗಳು / ಚಳಿಗಾಲದ ಮತ್ತು ಬೇಸಿಗೆ ಶಾಲೆಗಳನ್ನು ಆಯೋಜಿಸಿದೆ. ಇನ್ನೂರ ಎಪ್ಪತ್ತೇಳು ಬೋಧಕ ಸಿಬ್ಬಂದಿ ವಿವಿಧ ಬೋಧಕ ಸಿಬ್ಬಂದಿ ಅಭಿವೃದ್ಧಿ

Agricultural Extension Education & Services

The Directorate of Extension is vested with the responsibility to carry out the extension services in 10 districts of southern Karnataka. Extension education programmes focuses on technology assessment & refinement and facilitating adoption of technology by the farmers & extension functionaries based on research findings for accelerated agricultural growth. The Directorate of Extension has taken up new initiatives such as training of farmers by awardee farmers, doubling farmers' income, demonstrations of climate resilient integrated farming system, seed hub, skill development programmes, etc. The Directorate of Extension has organised 154 Front Line Demonstrations, 22 On-farm testing's, 2125 Field visits and 622 Training programmes. As many as 25 Radio talks and 8 TV programmes were also given / arranged. The Directorate of Extension organized Krishimela-2018 from 15-18 November, 2018 at GKVK, Bengaluru with the theme 'Auxiliary Technologies for Enhancing Agriculture Income' in collaboration with Development Departments of GoK, Farm Universities, ICAR Institutes and Private & Public Sector Organisations. About 700 exhibition stalls were arranged during the programme. Sri Vajubhai Vala, Hon'ble Governor of Karnataka inaugurated the Krishimela on 15th November, 2018 in the presence of Sri H.N. Shivashankara Reddy, Hon'ble Minister of Agriculture, GoK. New varieties / technologies and UAS Calender-2019 were released. Sri. H.D. Devegowdaji, Hon'ble former Prime Minister of India and MP, Hassan participated in the programme on 17th November 2018. Sri. H.D. Kumaraswamy, Hon'ble Chief Minister of Karnataka participated in the valedictory function of Krishimela on 18th November, 2018 and released 'Beej Aadhar' and 'Thathramsha Aadharitha Mannu Parikshe' Apps. During the programme, 150 Awards were presented to farmers and extension functionaries.

Educational Activities, Awards / Recognitions and Publications

The University has organised 802 Conferences / Seminars / Workshops / Training Programmes / Winter & Summer Schools. Two hundred and seventy seven faculty members

ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಏಳು ಪ್ರಾಧ್ಯಾಪಕರು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹಲವಾರು ಸಮಿತಿಗಳಿಗೆ ಸದಸ್ಯರಾಗಿ ನಾಮಕರಣಗೊಂಡಿದ್ದಾರೆ. ಬೋಧಕ ಸಿಬ್ಬಂದಿ ಸುಮಾರು 107 ರೇಡಿಯೋ ಭಾಷಣ, 116 ದೂರದರ್ಶನ ಕಾರ್ಯಕ್ರಮಗಳು ಮತ್ತು 2547 ಕ್ಷೇತ್ರ ಭೇಟಿ ಹಾಗೂ 737 ರೈತ ತರಬೇತಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿದ್ದಾರೆ. ಒಟ್ಟು 1373 ಪ್ರಕಟಣೆಗಳನ್ನು ಹೊರತರಲಾಗಿದ್ದು ಅವುಗಳಲ್ಲಿ 724 ಸಂಶೋಧನಾ ಪ್ರಬಂಧಗಳು, 127 ಜನಪ್ರಿಯ ಲೇಖನಗಳು, 73 ಪುಸ್ತಕಗಳು / ಬುಲೆಟಿನ್ ಗಳು, 258 ಕರಪತ್ರಗಳು/ ಫೋಲ್ಡರ್ ಗಳು ಹಾಗೂ 191 ಇತರ ಸಾಹಿತ್ಯವಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು "ಮೊದಲ ಸ್ಥಾನ" ಗಳಿಸಿದ್ದು, ಭಾರತೀಯ ಕೃಷಿ ಅನುಸಂಧಾನ ಪರಿಷತ್ – ಕಿರಿಯ ಸಂಶೋಧನಾ ಫೆಲೋಶಿಪ್ ಪ್ರಶಸ್ತಿಗೆ ಭಾಜನವಾಗಿದೆ ಹಾಗೂ 56 ವಿದ್ಯಾರ್ಥಿಗಳು ಕೃಷಿ ವಿಷಯದಲ್ಲಿ ಮತ್ತು ಇಂಜಿನಿಯರಿಂಗ್ ತಂತ್ರಜ್ಞಾನದಲ್ಲಿ 2ನೇ ಸ್ಥಾನ ಹಾಗೂ ಏಳು ವಿದ್ಯಾರ್ಥಿಗಳು ಭಾರತೀಯ ಕೃಷಿ ಅನುಸಂಧಾನ ಪರಿಷತ್ ನಡೆಸುವ ಕಿರಿಯ ಸಂಶೋಧನಾ ಫೆಲೋಶಿಪ್ ಗೆ ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉನ್ನತ ಶಿಕ್ಷಣ ಮುಂದುವರಿಸಲು ಅರ್ಹರಾಗಿದ್ದಾರೆ.

ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕ ಪತ್ರ ಮತ್ತು ನಿರ್ವಹಣೆ

ಕರ್ನಾಟಕ ಸರ್ಕಾರವು ಯೋಜನೇತರ ಅನುದಾನದಡಿ ಪ್ರಗತಿಯಲ್ಲಿರುವ ಬದ್ಧತೆಗಳ ಮುಂದುವರಿಕೆಗೆ ನಿರ್ವಹಣಾ ಅನುದಾನ ನೀಡಿದೆ. ಚಾಲನೆಯಲ್ಲಿರುವ ಯೋಜನೆಗಳ ಮುಂದುವರಿಕೆಗೆ ಹಾಗೂ ಹೊಸ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಶಿಕ್ಷಣ ಕಾರ್ಯಕ್ರಮಗಳಿಗಾಗಿ ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಮಂಡಳಿಯು ಅನುದಾನವನ್ನು ನೀಡಿದೆ. ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಮತ್ತು ತಾತ್ಪೂರ್ತಿಕ ಸಂಶೋಧನಾ ಕಾರ್ಯಕ್ರಮಗಳಿಗೆ ಸಹ ಅನುದಾನವನ್ನು ಒದಗಿಸಲಾಗಿದೆ. ಕೃಷಿಯಲ್ಲಿ ನಿರ್ದಿಷ್ಟ ಸಂಶೋಧನೆಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ಹಲವಾರು ಇಲಾಖೆಗಳು ಸಹ ಹಣಕಾಸು ಸೌಲಭ್ಯ ಒದಗಿಸಿವೆ. ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆ/ಏಜೆನ್ಸಿಗಳು ಅನುದಾನ ಒದಗಿಸುತ್ತಿವೆ. ಬೆಳೆ ಬೇಸಾಯ, ಬೀಜೋತ್ಪಾದನೆ ಮತ್ತು ಸಸಿಮಡಿ ಚಟುವಟಿಕೆಗಳು, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಮುಂತಾದವುಗಳ ಮೂಲಕ ಆಂತರಿಕ ಆದಾಯವನ್ನು ಸಹ ಗಳಿಸಲಾಗುತ್ತಿದೆ. 2018–19ರ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಒಟ್ಟು ಸ್ವೀಕೃತಿಯು ರೂ31856.13 ಲಕ್ಷಗಳಾಗಿದ್ದು ಅದರಲ್ಲಿ ಒಟ್ಟು ಖರ್ಚು ರೂ.29488.36 ಲಕ್ಷಗಳಷ್ಟಿದೆ.

ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ

ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿ ಮತ್ತು ಬೆಂಬಲ ಸಿಬ್ಬಂದಿಯ ನೇಮಕಾತಿಯಿಂದ ನಿವೃತ್ತಿ ಹೊಂದುವವರೆಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳನ್ನು ಆಡಳಿತ ಕಚೇರಿಯ ಮುಖ್ಯಸ್ಥರಾಗಿ ಆಡಳಿತಾಧಿಕಾರಿಗಳು ನೋಡಿಕೊಳ್ಳುತ್ತಾರೆ. ವಿಶ್ವವಿದ್ಯಾನಿಲಯವು

participated in various faculty development programmes. Several Professors have been nominated as Members for various committees at State and National Level. As many as 107 radio talks, 116 TV programmes and 2547 field visits and 737 training programmes were organised / performed by the faculty members. In total, 1373 publications have been brought out, of which 724 were research papers, 127 popular articles, 73 books / bulletins, 258 leaflets / folders and 191 other literatures. The University of Agricultural Sciences, Bangalore secured 'First Position' and was conferred ICAR - Junior Research Fellowship award wherein, 56 students qualified for JRF in Agriculture and secured 2nd position in Engineering Technology with the award of JRF to seven students under all India competitive examination of ICAR for continuing higher studies.

Financial Resources, Allocation, Accounting and Management

The State Government provided maintenance grants under non-plan to continue the on-going commitments under establishment. Indian Council of Agricultural Research, New Delhi provided funds for the continuation of the existing schemes and to start new teaching, research and extension education programmes. Grants were also provided under All India Co-ordinated Research Schemes and Ad-hoc Research programmes. Several Departments of Government of India also provided financial assistance to conduct specific research in agriculture. Grants are being provided by several National and International Organizations / Agencies to conduct research and extension programmes in the University. Revenue was also generated by utilizing the internal resources through crop cultivation, seed production & nursery activities, collection of student's fee, etc. During 2018-19, the total receipt of the University was Rs.31856.13 lakhs out of which the expenditure was Rs.29488.36 lakhs.

Human Resource Development

The University has administrative Office headed by Administrative Officer looking after the Human Resource Developmental activities from recruitment to retirement of teaching

ಮಂಜೂರಾದ ಆರು ಪ್ರಾಧ್ಯಾಪಕರ (ಎಚ್.ಎ.ಜಿ.), 48 ಪ್ರಾಧ್ಯಾಪಕರ, 144 ಸಹ ಪ್ರಾಧ್ಯಾಪಕರ ಮತ್ತು 387 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಹೊಂದಿದೆ. ಒಟ್ಟು 585 ಮಂಜೂರಾದ ಹುದ್ದೆಗಳಲ್ಲಿ, 411 ಭರ್ತಿಯಾಗಿದ್ದು 174 (ಶೇ.30) ಖಾಲಿ ಇವೆ. ಅವಶ್ಯಕತೆಯ ಆಧಾರದ ಮೇಲೆ ಬೋಧಕ ಸಿಬ್ಬಂದಿಗೆ ಗುತ್ತಿಗೆ ಆಧಾರದ ಮೇಲೆ ಕೆಲಸ ವಹಿಸಿಕೊಡಲಾಗುತ್ತಿದೆ. ವಿಶ್ವವಿದ್ಯಾನಿಲಯವು ಮಂಜೂರಾದ 1579 ಬೋಧಕೇತರ ಸಿಬ್ಬಂದಿಯ ಹುದ್ದೆಗಳನ್ನು ಹೊಂದಿದ್ದು ಅವುಗಳಲ್ಲಿ 565 ಭರ್ತಿಯಾಗಿವೆ ಮತ್ತು 1014 ಖಾಲಿ ಇವೆ. ವರದಿಯ ಅವಧಿಯಲ್ಲಿ, 26 ಬೋಧಕ ಸಿಬ್ಬಂದಿ ಮತ್ತು 45 ಬೋಧಕೇತರ ಸಿಬ್ಬಂದಿ ನಿವೃತ್ತಿ ಹೊಂದಿದ್ದಾರೆ.

faculty and supporting staff of the University. The University has a sanctioned post of six Professors (HAG), 48 Professors, 144 Associate Professors and 387 Assistant Professors. Out of 585 sanctioned posts, 411 are filled and 174 (30%) are vacant. On need base, the faculties are assigned work on contractual basis also. The University has 1579 sanctioned supporting staff positions, of which 565 are filled and 1014 are vacant. During the period, 26 teaching faculty and 45 supporting staff have been retired.

ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ನಿರ್ವಹಣೆ

ಎಲ್ಲ ಆವರಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು ಕೇಂದ್ರ ಕಚೇರಿಯಲ್ಲಿ ವಿಶ್ವವಿದ್ಯಾನಿಲಯವು ಆಸ್ತಿ ಕಚೇರಿಯನ್ನು ಹೊಂದಿದ್ದು ಆಸ್ತಿ ಅಧಿಕಾರಿಗಳು ಅದರ ಮುಖ್ಯಸ್ಥರಾಗಿದ್ದಾರೆ ಹಾಗೂ ಅವರ ಸಹಾಯಕ್ಕೆ ಕಾರ್ಯಕಾರಿ ಮತ್ತು ಸಹಾಯಕ ಕಾರ್ಯಕಾರಿ ಅಭಿಯಂತರರು ಎಲ್ಲಾ ಆವರಣಗಳಲ್ಲಿದ್ದಾರೆ. ಆಸ್ತಿ ಕಚೇರಿಯು ರಾಸಾಯನಿಕಗಳು, ಗಾಜಿನ ಸಲಕರಣೆಗಳು, ಉಪಕರಣಗಳು, ಲೇಖನ ಸಾಮಗ್ರಿ ಮುಂತಾದವುಗಳನ್ನು ಕೇಂದ್ರೀಕೃತ ಉಗ್ರಾಣ ಖರೀದಿ ಕಚೇರಿಯ ಮೂಲಕ ಖರೀದಿಸಲು ಟೆಂಡರಿಂಗ್ ವ್ಯವಸ್ಥೆ ಮಾಡುತ್ತದೆ.

Infrastructure Development and Maintenance

In order to develop and maintain the infrastructure in all the campuses and at the Head quarters, the University has Estate Office headed by Estate Officer and supported by Executive and Assistant Executive Engineers. The Estate Office facilitates tendering for various activities like procurement of chemicals, glassware, equipment's, stationery, etc. through Centralized Store Purchase Office.

ಆಸ್ತಿ ಕಚೇರಿಯು ರಾಜ್ಯ ಸರ್ಕಾರದ ಅನುದಾನದಡಯಲ್ಲಿ ಕೈಗೊಂಡಿರುವ ಅಭಿವೃದ್ಧಿ ಮತ್ತು ನವೀಕರಣ ಕಾರ್ಯಗಳೆಂದರೆ, ಜಿ.ಕೆ.ವಿ.ಕೆ.ಯ ಕೃಷಿ ಮಹಾವಿದ್ಯಾಲಯದಲ್ಲಿ (ದಕ್ಷಿಣ ಬ್ಲಾಕ್) ರೂ.375.00 ಲಕ್ಷಗಳ ವೆಚ್ಚದಲ್ಲಿ ತರಗತಿ ಕೊಠಡಿ (ಕಾರ್ಯ ಪ್ರಗತಿಯಲ್ಲಿದೆ), ಚಾಮರಾಜನಗರದ ಕೃಷಿ ವಿಜ್ಞಾನ ಕೇಂದ್ರದಲ್ಲಿ ಪ್ರಸ್ತುತವಿರುವ ಆಡಳಿತ ಕಟ್ಟಡಕ್ಕೆ ರೂ. 100.00 ಲಕ್ಷಗಳ ವೆಚ್ಚದಲ್ಲಿ ಮೊದಲನೆ ಮಹಡಿಯ ನಿರ್ಮಾಣ (ಕಾರ್ಯ ಪ್ರಗತಿಯಲ್ಲಿದೆ) ಮತ್ತು ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯದ ಕಟ್ಟಡದ ಮೊದಲನೆ ಮಹಡಿಯಲ್ಲಿ ರೂ. 135.00 ಲಕ್ಷಗಳ ವೆಚ್ಚದಲ್ಲಿ ಪ್ರಯೋಗಾಲಯ ನಿರ್ಮಾಣ (ಕಾರ್ಯ ಪ್ರಗತಿಯಲ್ಲಿದೆ).

Infrastructure developed and renovation undertaken by the Estate Office under State grants includes; Construction of class room at Agriculture College (South Block) at GKVK with a total cost of Rs. 375.00 lakhs (work is under progress), Construction of First floor over the existing Administrative building at KVK, Chamrajanagar, with a total cost of Rs.100.00 lakhs (work is under progress) and Construction of Laboratory building at first floor of Sericulture College, Chintamani with a total cost of Rs.135.00 lakhs (work is under progress).

ಭಾರತ ಸರ್ಕಾರದ ಅನುದಾನದಡಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಿ.ಕೆ.ವಿ.ಕೆ. ಆವರಣದಲ್ಲಿನ ಕೃಷಿ ಅರ್ಥಶಾಸ್ತ್ರ ವಿಭಾಗದ ಬೇಸಾಯದ ವೆಚ್ಚ ಯೋಜನೆಯ ಕಟ್ಟಡದ ವಿಚಾರ ಸಂಕಿರಣ ಕೊಠಡಿಗೆ ರೂ.21.40 ಲಕ್ಷಗಳ ವೆಚ್ಚದಲ್ಲಿ ಹುಸಿ ಛಾವಣಿ ಮತ್ತು ಗೋಡೆಯ ಪ್ಯಾನೆಲಿಂಗ್ ಕಾರ್ಯಗಳನ್ನು ಕೈಗೊಂಡಿದ್ದು ಕಾರ್ಯವು ಪ್ರಗತಿಯಲ್ಲಿದೆ. ಮಂಡ್ಯದ ವಿ.ಸಿ.ಫಾರಂನ ವಲಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ರೂ. 32.00 ಲಕ್ಷಗಳ ವೆಚ್ಚದಲ್ಲಿ ಬೀಜ ಆರೋಗ್ಯ ಮತ್ತು ಪರಿಶುದ್ಧತೆ ಪ್ರಯೋಗಾಲಯ ನಿರ್ಮಾಣವನ್ನು ಕೈಗೊಂಡಿದ್ದು ಕಾರ್ಯವು ಪೂರ್ಣಗೊಂಡಿದೆ.

Under GoI grants Providing False Ceiling & Wall Paneling to the Seminar Hall of Cost of Cultivation Building at Department of Agricultural Economics, UAS, GKVK, was taken up for execution at a total cost of Rs.21.40 lakhs and the work is under progress. Construction of Seed Health & purity lab at ZARS, VC Farm, Mandya was also taken up for execution at a total cost of Rs.32.00 lakhs and the work is completed.

ಭಾರತೀಯ ಕೃಷಿ ಅನುಸಂಧಾನ ಪರಿಷತ್ ಅನುದಾನದಡಿಯಲ್ಲಿ ಮಂಡ್ಯದ ವಿ.ಸಿ.ಕೃಷಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯವನ್ನು ರೂ. 750.00 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಈಗಾಗಲೇ ಟೆಂಡರ್ ಕರೆಯಲಾಗಿದೆ. (ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪಾಲು: ರೂ. 300.00 ಲಕ್ಷ, ರೂ. 450.00 ಲಕ್ಷ ರಾಜ್ಯ ಸರ್ಕಾರದ ಪಾಲು). ಹಾಸನ ಕೃಷಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯವನ್ನು ರೂ. 780.00 ಲಕ್ಷಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು ಪ್ರಗತಿಯಲ್ಲಿದೆ. (ಭಾರತೀಯ ಕೃಷಿ ಅನುಸಂಧಾನ ಪರಿಷತ್ ಪಾಲು: ರೂ. 300.00 ಲಕ್ಷ, ರೂ. 480.00 ಲಕ್ಷ ರಾಜ್ಯ ಸರ್ಕಾರದ ಪಾಲು). ಜಿ.ಕೆ.ವಿ.ಕೆ. ಆವರಣದಲ್ಲಿ ವಿದ್ಯಾರ್ಥಿ ನಿಲಯಗಳ, ಹಾಸನ ಮತ್ತು ಮಂಡ್ಯದ ಕೃಷಿ ಮಹಾವಿದ್ಯಾಲಯದ, ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯದ ದುರಸ್ತಿ ಮತ್ತು ನವೀಕರಣ ಕಾರ್ಯಗಳನ್ನು ರೂ. 90 ಲಕ್ಷಗಳ ವೆಚ್ಚದಲ್ಲಿ ಕೈಗೊಂಡಿದ್ದು ಕಾರ್ಯವು ಪ್ರಗತಿಯ ವಿವಿಧ ಹಂತಗಳಲ್ಲಿವೆ.

Under ICAR grants, construction of Girls Hostel at College of Agriculture, Mandya was taken up for execution at a total cost of Rs.750.00 lakhs and the tender has been called. (ICAR share: Rs.300.00 lakhs, Rs.450.00 lakhs State share). Construction of Girls Hostel at College of Agriculture, Hassan was taken up for execution at a total cost of Rs.780.00 lakhs and the tender is in progress (ICAR share: Rs.300.00 lakhs, Rs.480.00 lakhs State share). Repair and renovation of Hostel at GKVK; College of Agriculture, Mandya; College of Agriculture, Hassan and College of Sericulture Chintamani were taken up with a total cost of Rs.90 lakhs and the works are at various stages.

ವಿಷಯಾನುಕ್ರಮ / CONTENTS

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
		ಕಾರ್ಯಕಾರಿ ವರದಿ / Executive Summary	...	i-xiv
ಅಧ್ಯಾಯ I Chapter I	**ವಿಶ್ವವಿದ್ಯಾನಿಲಯದ ಆಡಳಿತ / University Administration**			
	1.1	ವಿಶ್ವವಿದ್ಯಾನಿಲಯದ ಸ್ಥಾಪನೆ ಮತ್ತು ನಿಗಮನ Establishment and Incorporation of the Universities	...	2
	1.2	ಕಾರ್ಯವ್ಯಾಪ್ತಿ ಪ್ರದೇಶ Jurisdiction	...	2
	1.3.	ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು Objectives of the University	...	2
	1.4.	ವಿಶ್ವವಿದ್ಯಾನಿಲಯದ ಪ್ರಾಧಿಕಾರ Authorities of the University	...	2
	1.5.	ಆಡಳಿತ ನಿರ್ವಹಣಾ ಮಂಡಳಿ ಮತ್ತು ಅದರ ಸಂರಚನೆ The Board of Management and its Constitution	...	4
	1.6	ವಿಶ್ವವಿದ್ಯಾನಿಲಯದ ಅಧಿಕಾರಿಗಳು Officers of the University	...	6
	1.7	ವಿಶ್ವವಿದ್ಯಾನಿಲಯದ ಗುರಿ, ಧ್ಯೇಯೋದ್ದೇಶ ಮತ್ತು ಆಧ್ಯಾದೇಶ University Vision, Mission and Mandate	...	10
	1.8	ವಿಶ್ವವಿದ್ಯಾನಿಲಯದ ಆಡಳಿತ University Governance	...	10
	1.9	ಮಾಹೆಯಾನ ಕುಲಪತಿಗಳು ಭಾಗವಹಿಸಿದ ಪ್ರಮುಖ ಕಾರ್ಯಕ್ರಮಗಳು ಹಾಗೂ ಸಭೆಗಳು Month-wise important Programmes and Meetings participated by the Vice-Chancellor	...	12
	1.10	ವಿಶ್ವವಿದ್ಯಾನಿಲಯ ಗಳಿಸಿದ ಪ್ರಶಸ್ತಿ ಮತ್ತು ಮಾನ್ಯತೆಗಳು Awards and Recognitions achieved by the University	...	22
	1.11	ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಗಳು Meetings of the Authorities of the University	...	24
ಅಧ್ಯಾಯ II Chapter II	**ಶೈಕ್ಷಣಿಕ ಆಡಳಿತ / Academic Administration**			
	2.1	ಶೈಕ್ಷಣಿಕ ಕಾರ್ಯಕ್ರಮಗಳು Academic programmes	...	26
	2.2	ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು Administrative Management system and functions	...	26
	2.3	ಕೈಗೊಂಡ ಕಾರ್ಯಕ್ರಮ ಮತ್ತು ಚಟುವಟಿಕೆಗಳು Functions and activities performed	...	29
	2.3.1	ಸ್ನಾತಕ ಪದವಿ ಕಾರ್ಯಕ್ರಮಗಳ ಪ್ರವೇಶಾತಿ Admission to Batchelor degree programmes	...	29
	2.3.2	ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ Admission to Masters and Doctoral degree programmes	...	29
	2.3.3	ಡಿಪ್ಲೊಮಾ ಕಾರ್ಯಕ್ರಮಗಳ ಪ್ರವೇಶಾತಿ Admission to Diploma programmes	...	29
	2.3.4	ಪ್ರವೇಶ ಸಮಿತಿ Admission Committee	...	30
	2.3.5	ಪ್ರವೇಶ ಸಾಧ್ಯ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಮತ್ತು ಹಾಜರಾಗುತ್ತಿರುವ ವಿದ್ಯಾರ್ಥಿಗಳು Admission intake, admissions made and students on roll	...	30

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
	2.3.5.1	ಸ್ನಾತಕ ಪದವಿಗಳು Batchelor degrees	...	30
	2.3.5.2	ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿಗಳು Masters and Doctoral degrees	...	31
	2.3.5.3	ಕೃಷಿಯಲ್ಲಿ ಡಿಪ್ಲೊಮಾ Diploma in Agriculture	...	32
	2.3.5.4	ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿಗಳಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳ ಸಂಖ್ಯೆ Number of students passed out in Bachelors', Masters' and Doctoral degree	...	33
	2.3.6	ನೀಡಲಾಗುತ್ತಿರುವ ಕೋರ್ಸ್‌ಗಳು, ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ನಡೆಸಿದ ಪರೀಕ್ಷೆಗಳು Courses offered, faculty strength and examination conducted	...	33
	2.3.7	ವಿದ್ಯಾರ್ಥಿ 'ರೆಡಿ' (ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆ) ಕಾರ್ಯಕ್ರಮದ ಅಳವಡಿಕೆ ಮತ್ತು ಅನುಷ್ಠಾನ Adoption and implementation of student READY	...	33
	2.3.8	ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅನುಷ್ಠಾನ Implementation of RAWEP	...	36
	2.4	ಪ್ರಾಯೋಗಿಕ ತರಬೇತಿ Hands on training	...	42
	2.5	ಬಾಹ್ಯ ಪರೀಕ್ಷೆಗಳು, ಮೌಲ್ಯಮಾಪನ ನಡೆಸುವಿಕೆ ಮತ್ತು ಫಲಿತಾಂಶಗಳ ಘೋಷಣೆ Conduct of external examination, evaluation and declaration of results	...	52
	2.6	ಕನ್ನಡ ಅಧ್ಯಯನ ವಿಭಾಗ Department of Kannada Studies	...	55
	2.7	ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ Financial support provided to students	...	56
	2.8	ವಿದ್ಯಾರ್ಥಿಗಳಿಗೆ ಕ್ರೀಡೆ, ಆಟೋಟ ಮತ್ತು ಪಠ್ಯೇತರ ಚಟುವಟಿಕೆಗಳ ಆಯೋಜನೆ Organising Sports, Games and Co-curricular activities for students	...	61
	2.9	ಉದ್ಯೋಗ ಕೋಶ Placement Cell	...	67
	2.10	ರಾಷ್ಟ್ರೀಯ ಸೇವಾ ಯೋಜನೆ National Service Scheme	...	68
	2.11	ವೈದ್ಯಕೀಯ ಸೇವೆ ನೀಡುವಿಕೆ Medical Services provided	...	69
	2.12	ಗ್ರಂಥಾಲಯ ಸಂಪನ್ಮೂಲಗಳು ಮತ್ತು ಮಾಹಿತಿ ವ್ಯವಸ್ಥೆ Library Resources and Information System	...	70
	2.13	53ನೇ ವಾರ್ಷಿಕ ಘಟಿಕೋತ್ಸವ ಮತ್ತು ಪದವಿ ಗೌರವ Conferment of Degree and Presentation of Medals during 53rd Convocation	...	78
ಅಧ್ಯಾಯ III Chapter III		**ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ / Agricultural Research and Development**		
	3.1	ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಹವಾಮಾನ ವಲಯಗಳು Agricultural Research Stations and Climatic Zones	...	88
	3.2	ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು Projects in Operation	...	89
	3.3	ರುಜು ಹಾಕಲಾದ ಒಪ್ಪಂದಗಳು MoUs Signed	...	90

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
	3.4	ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ಅಣುಗಳು New Chemicals/Varieties/Moleculars tested	...	90
	3.5	ಹೊಸ ಸಂಶೋಧನೆಗೆ ಹಕ್ಕು ಪತ್ರ Patent for Invention	...	90
	3.6	ಪ್ರಮುಖ ಸಂಶೋಧನೆಗಳು Break-through Research	...	90
	3.7	ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು New Technologies developed and Released	...	92
	3.8	ಪ್ರಗತಿಯಲ್ಲಿರುವ ಸಂಶೋಧನೆಗಳು Research in Progress	...	99
	3.9	ಭಾರತೀಯ ಕೃಷಿ ಅನುಸಂಧಾನ ಪರಿಷತ್– ಉನ್ನತ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಕಾರ್ಯಕ್ರಮದ ಬೆಂಬಲದಡಿ ಹೊಂದಾಣಿಕೆ ಕೃಷಿಯಲ್ಲಿ ಮುಂದಿನ ತಲೆಮಾರಿನ ತಂತ್ರಜ್ಞಾನಗಳ ಕೇಂದ್ರ (ಎನ್.ಜಿ.ಟಿ.ಎ.ಎ.) Centre for Next Generation Technologies in Adaptive Agriculture (NGT_AA) supported under ICAR-CAAST program	...	133
ಅಧ್ಯಾಯ IV Chapter IV		**ಕೃಷಿ ವಿಸ್ತರಣಾ ಶಿಕ್ಷಣ ಮತ್ತು ಸೇವೆಗಳು / Agricultural Extension Education & Services**		
	4.1	ಆಧ್ಯಾದೇಶಗಳು Mandates	...	137
	4.2	ಉದ್ದೇಶಗಳು Objectives	...	137
	4.3	ಕಾರ್ಯಚಟುವಟಿಕೆಗಳು Functions	...	137
	4.4	ವಿಸ್ತರಣಾ ನಿರ್ದೇಶನಾಲಯದ ಘಟಕಗಳು Units of Directorate of Extension	...	138
ಅಧ್ಯಾಯ V Chapter V		**ಅಧ್ಯಾಪಕರು ಆಯೋಜಿಸಿದ / ಭಾಗವಹಿಸಿದ ಕಾರ್ಯಕ್ರಮಗಳು, ಸಾಮರ್ಥ್ಯವರ್ಧನಾ ಚಟುವಟಿಕೆಗಳು ಹಾಗೂ ಪಡೆದ ಪ್ರಶಸ್ತಿ ಮತ್ತು ಮನ್ನಣೆಗಳು / Programmes Organised / Participated, Capacity Building Activities and Awards & Recognitions Achieved by the Faculty**		
	5.1	ಆಚರಿಸಿದ ರಾಜ್ಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ದಿನ / ಆಚರಣೆಗಳು Celebration of State and National Days / International Events	...	161
	5.2	ಆಯೋಜಿಸಿದ ಸಮಾವೇಶ/ವಿಚಾರ ಸಂಕಿರ್ಣ/ಕಾರ್ಯಾಗಾರ/ತರಬೇತಿ ಕಾರ್ಯಕ್ರಮಗಳು Conferences/Seminars/Workshops/Training programmes organsied	..	165
	5.3	ಭಾಗವಹಿಸಿದ ಸಮಾವೇಶ/ವಿಚಾರ ಸಂಕಿರಣ/ಕಾರ್ಯಾಗಾರ/ಇತರ ಚಟುವಟಿಕೆಗಳು (ವಿದೇಶ) Participation in Conferences/Seminars/Workshops/Other activities (Abroad)	...	172
	5.4	ವಿಚಾರ ಸಂಕಿರಣ/ಸಮಾವೇಶಗಳಲ್ಲಿ ಪ್ರಬಂಧ ಮಂಡನೆ Presentation of Paper in Seminar/Conference	...	176
	5.5	ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಗೆ ದೊರೆತ ಪ್ರಶಸ್ತಿ ಹಾಗೂ ಮನ್ನಣೆಗಳು Recognitions/Awards Conferred on Faculty & Students	...	178
	5.6	ಸರ್ಕಾರದ ಮತ್ತು ಇತರ ಸಂಸ್ಥೆಗಳಿಗೆ ಅಧ್ಯಾಪಕರ ನಾಮ ನಿರ್ದೇಶನಗಳು Nominations of Teachers for different assignment in Government and other Agencies	...	182
	5.7	ಆಯೋಜಿಸಿದ ಇತರ ಕಾರ್ಯಕ್ರಮಗಳು Other events organised	...	184

ಅಧ್ಯಾಯ ಸಂಖ್ಯೆ/ Chapter number		ಶೀರ್ಷಿಕೆ ಮತ್ತು ಉಪ ಶೀರ್ಷಿಕೆ Title and sub-title		ಪುಟ ಸಂಖ್ಯೆ Page no.
	5.8	ಆಯೋಜಿಸಿದ/ ಭಾಗವಹಿಸಿದ ಇತರ ಕಾರ್ಯಕ್ರಮಗಳು, ಕೈಗೊಂಡ ವಿಸ್ತರಣಾ ಚಟುವಟಿಕೆಗಳು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಯ ಪ್ರಕಟಣೆಗಳು Abstract of different programmes Organised/Participated, Extension Activities carried out and number of Publications brought out by the faculty of UAS-B	...	187
ಅಧ್ಯಾಯ VI Chapter VI		**ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕಪತ್ರ ಮತ್ತು ನಿರ್ವಹಣೆ / Financial Resources, Allocation, Accounting and Management**		
	6.1	ಆರ್ಥಿಕ ಸಂಪನ್ಮೂಲ Source of Finance	...	192
	6.2	ಅನುದಾನಗಳ ಸ್ವೀಕೃತಿ Receipts	...	192
	6.3	2018–19ನೇ ಸಾಲಿನ ಖರ್ಚು Expenditure during 2018-19	...	193
	6.4	ನಿವೃತ್ತಿ ಸೌಲಭ್ಯದ ಲೆಕ್ಕದ ವಿವರಗಳು Accounts details of Retirement Benefits	...	196
	6.5	ಸಾಲ ಮತ್ತು ಮುಂಗಡಗಳ ಲೆಕ್ಕ ವಿವರಗಳು Accounts details of Loans and Advances	...	197
	6.6	ಶಾಸನಬದ್ಧ ಲೆಕ್ಕ ಪರಿಶೋಧಕರಿಂದ ಖಾತೆಗಳ ಲೆಕ್ಕ ಪರಿಶೋಧನೆ Audit of Accounts by the Statutory Auditors	...	197
ಅಧ್ಯಾಯ VII Chapter VII		**ಮಾನವ ಸಂಪನ್ಮೂಲ ಅಭಿವೃದ್ಧಿ / Human Resource Development**		
	7.1	ನೇಮಕಾತಿಗಳು Appointments	...	198
	7.2	ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ವಿವರ Staff position of Teaching and Service Personnel	...	198
	7.3	ದಾಖಲಾದ ವಿಚಾರಣೆ, ನ್ಯಾಯಾಲಯದಲ್ಲಿನ ದಾವೆ ಮತ್ತು ಮಾಹಿತಿ ಹಕ್ಕು ಅಡಿಯಲ್ಲಿ ಬಂದ ಅರ್ಜಿಗಳ ಸಂಖ್ಯೆ Court Cases, RTI and Enquiries	...	199
	7.4	ವಿಚಾರ ಸಂಕಿರಣ/ಸಮ್ಮೇಳನ/ಕಾರ್ಯಗಾರ/ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನೀಡಲಾದ ಅನುಮತಿ Permission accorded to attended Conferences/Seminars/Workshops and Trainings	...	200
	7.5	ನಿವೃತ್ತಿ Retirements	...	200
ಅಧ್ಯಾಯ VIII Chapter VIII		**ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ನಿರ್ವಹಣೆ / Infrastructure Development and Maintenance**		
	8.1	ರಾಜ್ಯ ಸರ್ಕಾರದ ಅನುದಾನಗಳು State Grants	...	201
	8.2	ಭಾರತೀಯ ಕೃಷಿ ಅನುಸಂಧಾನ ಪರಿಷತ್ ಅನುದಾನಗಳು ICAR Grants	...	202
	8.3	ನಬಾರ್ಡ್ ಪ್ರಾಯೋಜಿತ ಆರ್.ಐ.ಡಿ.ಎಫ್–ಎಕ್ಸ್ಸ್ ಎಕ್ಸ್ಸ್ ಅನುದಾನಗಳು NABARD assisted RIDF-XX Grants	...	203
	8.4	ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಅನುದಾನಗಳು SCSP & TSP Grants	...	203
	8.5	ಭಾರತ ಸರ್ಕಾರದ ಅನುದಾನಗಳು Government of India Grants	...	203
ಛಾಯಾ ಚಿತ್ರಗಳು / PHOTOGRAPHS			...	205
ಅನುಬಂಧಗಳು / ANNEXURES			...	221

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು



ವಾರ್ಷಿಕ ವರದಿ

Annual Report

2018–19



University of Agricultural Sciences, Bangalore

1. ವಿಶ್ವವಿದ್ಯಾನಿಲಯ ಆಡಳಿತ

1.1 ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮನ (ಪರಿಚ್ಛೇದ 3)

ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯಗಳ ಅಧಿನಿಯಮ 1963ರ (1963ರ ಕರ್ನಾಟಕ ಅಧಿನಿಯಮ 22) ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳು ಈ ಅಧಿನಿಯಮದಡಿ ಸ್ಥಾಪಿತವಾಗಿದೆಯೆಂದು ಪರಿಗಣಿಸಲಾಗುವುದು ಹಾಗೂ ಅವುಗಳ ಕಾರ್ಯವ್ಯಾಪ್ತಿ ಪ್ರದೇಶವನ್ನು ಈ ಮುಂದಿನಂತೆ ನಿಗದಿಪಡಿಸಲಾಗಿದೆ – ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿದ್ದು ಅದರ ಕಾರ್ಯವ್ಯಾಪ್ತಿ ಪ್ರದೇಶವು ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾಮೀಣ), ಬೆಂಗಳೂರು (ನಗರ), ರಾಮನಗರ, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ ಜಿಲ್ಲೆಗಳನ್ನೊಳಗೊಂಡಿದೆ (ಪರಿಚ್ಛೇದ 3ಎ).

1.2 ಕಾರ್ಯವ್ಯಾಪ್ತಿ ಪ್ರದೇಶ (ಪರಿಚ್ಛೇದ 4)

(1) ಪ್ರತಿಯೊಂದು ವಿಶ್ವವಿದ್ಯಾನಿಲಯವು ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ಕೃಷಿ ಹಾಗೂ ಅರಣ್ಯ ತರಬೇತಿ ಅಥವಾ ಶಿಕ್ಷಣ ಕೇಂದ್ರಗಳು ಮತ್ತು ಸಂಶೋಧನೆ ಹಾಗೂ ಪ್ರಯೋಗ ಕೇಂದ್ರಗಳನ್ನು ಮತ್ತು ಕ್ಷೇತ್ರ ವಿಸ್ತರಣಾ ಕಾರ್ಯಕರ್ತರ ತರಬೇತಿ ಮತ್ತು ತನ್ನ ವ್ಯಾಪ್ತಿಯ ಪ್ರದೇಶದ ವಿವಿಧ ಭಾಗಗಳಲ್ಲಿ ಅವಶ್ಯಕವಿರುವಂತೆ ಅಂತಹ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಹಾಗೂ ಕಾರ್ಯನಿರ್ವಹಣಾ ಜವಾಬ್ದಾರಿಯನ್ನು ಹೊಂದಿರುತ್ತದೆ.

(2) ವಿಶ್ವವಿದ್ಯಾನಿಲಯ ಅಥವಾ ಇತರೆ ಸಂಸ್ಥೆಗಳ ನಿರ್ವಹಣೆಯಡಿಯಿರುವ ಎಲ್ಲಾ ಕಾಲೇಜುಗಳು, ಸಂಶೋಧನೆ ಮತ್ತು ಪ್ರಾಯೋಗಿಕ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು, ವಿಸ್ತರಣಾ ಶಿಕ್ಷಣ ಮತ್ತು ತರಬೇತಿ ಕೇಂದ್ರಗಳು ತಾವಿರುವ ಪ್ರತಿಯೊಂದು ವಿಶ್ವವಿದ್ಯಾನಿಲಯದ ವ್ಯಾಪ್ತಿ ಹಾಗೂ ಅಧಿಕಾರದಡಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಆಯಾ ವಿಶ್ವವಿದ್ಯಾನಿಲಯದ ಘಟಕಗಳಾಗಿರುತ್ತವೆ ಮತ್ತು ಆ ವಿಶ್ವವಿದ್ಯಾನಿಲಯದ ನಿರ್ವಹಣೆ ಹಾಗೂ ನಿಯಂತ್ರಣದಲ್ಲಿರುತ್ತವೆ. ವಿಶ್ವವಿದ್ಯಾನಿಲಯವು ತನ್ನ ಅಂಗ ಸಂಸ್ಥೆ ಮಹಾವಿದ್ಯಾಲಯವೆಂದು ಪರಿಗಣಿಸದ ಹೊರತು ಯಾವುದೇ ಘಟಕವನ್ನು ಅಂಗ ಸಂಸ್ಥೆ ಘಟಕವೆಂದು ಪರಿಗಣಿಸಲಾಗುವುದಿಲ್ಲ.

(3) ಪ್ರತಿಯೊಂದು ವಿಶ್ವವಿದ್ಯಾನಿಲಯವು ಶೈಕ್ಷಣಿಕ ಕಾರ್ಯಕ್ರಮಗಳ ಮತ್ತು ಬಹುಶಿಸ್ತೀಯ ವಿಧಾನದ ಸಂಶೋಧನೆ ಪ್ರಾಯೋಜನೆಗಳ ಕುರಿತಂತೆ ದೇಶ ವಿದೇಶಗಳ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಹಯೋಗ ಹೊಂದಬಹುದಾಗಿದೆ.

(4) ವಿಶ್ವವಿದ್ಯಾನಿಲಯವು ತನ್ನ ವ್ಯಾಪ್ತಿಯ ಪ್ರದೇಶದಲ್ಲಿ ಮತ್ತು ವಿದೇಶಗಳಲ್ಲಿ ಅವಶ್ಯಕವಿದ್ದಂತೆ ತನ್ನ ಅಂಗಸಂಸ್ಥೆಗಳನ್ನು ಸ್ಥಾಪಿಸುವ, ಅಭಿವೃದ್ಧಿಪಡಿಸುವ ಹಾಗೂ ಅದರ ಕಾರ್ಯನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದಾಗಿದೆ.

1.3 ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳು (ಪರಿಚ್ಛೇದ 5)

ಪ್ರತಿಯೊಂದು ವಿಶ್ವವಿದ್ಯಾನಿಲಯವನ್ನು ಈ ಮುಂದಿನ ಧ್ಯೇಯೋದ್ದೇಶಗಳೊಂದಿಗೆ ಸ್ಥಾಪಿಸಿ ನಿಗಮನಗೊಳಿಸಲಾಗಿದೆಯೆಂದು ಪರಿಗಣಿಸಲಾಗಿದೆ: (ಅ) ಪರಿಚ್ಛೇದ 2ರ ಉಪಪರಿಚ್ಛೇದ (3) ರಲ್ಲಿ ನಿರ್ದಿಷ್ಟಪಡಿಸಲಾದ ವಿವಿಧ ಅಧ್ಯಯನ ಶಾಖೆಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡುವುದು (ಆ) ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳಲ್ಲಿ ಕಲಿಕೆ ಮತ್ತು ಸಂಶೋಧನೆಯ ಅಭಿವೃದ್ಧಿಗೆ ಒತ್ತು ನೀಡುವುದು (ಇ) ರಾಜ್ಯದ ವಿಶೇಷವಾಗಿ ಗ್ರಾಮೀಣ ಜನತೆಗೆ ಅಂತಹ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕುರಿತಂತೆ ವಿಸ್ತರಣಾ ಶಿಕ್ಷಣ ಒದಗಿಸುವುದು (ಈ) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ಇತರ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು (ಉ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ, ಕೈಗಾರಿಕೆ, ಸಂಶೋಧನೆ ಮತ್ತು ಇತರ ಸಂಸ್ಥೆಗಳಲ್ಲಿ ಪಾಲುಗಾರಿಕೆ ಮತ್ತು ಸಂಬಂಧಗಳನ್ನು ಪ್ರೋತ್ಸಾಹಿಸುವುದು.

1.4 ವಿಶ್ವವಿದ್ಯಾನಿಲಯದ ಪ್ರಾಧಿಕಾರ (ಪರಿಚ್ಛೇದ 11)

ವಿಶ್ವವಿದ್ಯಾನಿಲಯವು ಈ ಮುಂದಿನ ಪ್ರಾಧಿಕಾರವನ್ನು ಹೊಂದಿರುತ್ತದೆ:

(1) ಆಡಳಿತ ನಿರ್ವಹಣಾ ಮಂಡಳಿ;

(2) ಶೈಕ್ಷಣಿಕ ಪರಿಷತ್ ;

(3) ಸಂಶೋಧನಾ ಪರಿಷತ್ ;

(4) ವಿಸ್ತರಣಾ ಶಿಕ್ಷಣ ಪರಿಷತ್;

(5) ಸ್ನಾತಕೋತ್ತರ ಅಧ್ಯಯನ ಮತ್ತು ಅದರ ಅಧ್ಯಯನ ಮಂಡಳಿಯನ್ನೊಳಗೊಂಡಂತೆ ಬೋಧಕ ಸಿಬ್ಬಂದಿ;

(6) ವಿಶ್ವವಿದ್ಯಾನಿಲಯದ ಪ್ರಾಧಿಕಾರದ ಪರಿನಿಯಮಗಳು ಘೋಷಿಸುವಂತಹ ಇತರ ಅಂತಹ ವಿಶ್ವವಿದ್ಯಾನಿಲಯದ ನಿಕಾಯಗಳು.

Chapter I

1. University Administration

1.1 Establishment and Incorporation of the Universities (Sec.3)

The Universities established under section 3 of the Karnataka Universities of Agricultural Sciences Act, 1963, (Karnataka Act 22 of 1963) shall be deemed to have been established under this Act with their territorial jurisdictions as herein after provided. The University of Agricultural Sciences, Bangalore having head quarter at Bangalore functions with territorial jurisdiction extending over the districts of Kolar, Chikkaballapur, Bangalore (Rural), Bangalore (Urban), Ramanagara, Mandya, Tumkur, Mysore, Chamarajanagara and Hassan (Sec.3a)

1.2 Jurisdiction (Sec.4)

(1) Each University shall be responsible for the maintenance of Agriculture, Animal Husbandry, Fishery, Sericulture, Forestry Training or Educational Centres, Research & experimental stations, training of field extension workers and for the establishment, development & operation of such centres as may be required in various parts within its territorial jurisdiction.

(2) All colleges, research and experimental stations, KVKs and Extension Education and other Training centres under the management of the University or other institutions, which are under the jurisdiction and authority of each University, shall be constituent units of that University and under the management and control of the University. No unit shall be recognized as affiliated unit unless otherwise recognized as affiliated college by the University.

(3) Each University may have collaboration of academic programmes and for research projects having multi-disciplinary approach and academic programmes with other Universities or reputed institutes in India and abroad.

(4) The University may assume responsibility for establishment, development and operation of its constituent bodies in the territorial jurisdiction and abroad as may be required.

1.3 Objectives of the University (Sec.5)

Each University shall be deemed to have been established and incorporated for the following purposes, namely:- (a) Making provision for imparting education towards development of quality human resource in different branches of study specified in sub-section (3) of section 2; (b) Furthering the advancement of learning and conducting of research, particularly in agriculture and other allied sciences; (c) Undertaking the extension education of such science and technologies, specially for the rural people of the State; (d) Such other purposes as the State Government may by notification in the official Gazette specify from time to time and (e) Promoting partnership and linkages with national and international educational, Industries, research and other institutions.

1.4 Authorities of the University (Sec.11)

The following shall be the authorities of the University.

(1) Board of Management

(2) Academic Council

(3) Research Council

(4) Extension Education Council

(5) Faculties including post graduate studies and their Board of Studies;

(6) Such other Bodies of University as may be declared by the Statutes to be authorities of the University

1.5 ಆಡಳಿತ ನಿರ್ವಹಣಾ ಮಂಡಳಿ ಮತ್ತು ಅದರ ಸಂರಚನೆ (ಪರಿಚ್ಛೇದ 11)

(ದಿನಾಂಕ: 9–9–2014ರ ಕರ್ನಾಟಕ ಅಧಿನಿಯಮ 37ರ ತಿದ್ದುಪಡಿ ಮಾಡಿದ ಅಧಿನಿಯಮ 12(2))

(1) ಕುಲಾಧಿಪತಿಗಳು ಆದಷ್ಟು ಬೇಗ ಆಡಳಿತ ನಿರ್ವಹಣಾ ಮಂಡಳಿಯನ್ನು ರಚಿಸಬೇಕು.

(2) ಆಡಳಿತ ನಿರ್ವಹಣಾ ಮಂಡಳಿಯು ಈ ಮುಂದಿನವರನ್ನು ಹೊಂದಿರಬೇಕು:

ಆಡಳಿತ ನಿರ್ವಹಣಾ ಮಂಡಳಿ 31–3–2019ರಂತೆ

i.	ವಿಶ್ವವಿದ್ಯಾನಿಲಯದ ಕುಲಪತಿಗಳು	ಅಧ್ಯಕ್ಷರು	ಡಾ. ಎಂ.ಎಸ್. ನಟರಾಜು ಕುಲಪತಿಗಳು (15–2–2018ರಿಂದ 17–9–2018ರವರೆಗೆ) ಡಾ. ಎಸ್. ರಾಜೇಂದ್ರ ಪ್ರಸಾದ್ ಕುಲಪತಿಗಳು (17–9–2018ರಿಂದ)
ii.	ಪ್ರಧಾನ ಕಾರ್ಯದರ್ಶಿಗಳು ಅಥವಾ ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ ಅಥವಾ ಜಂಟೀ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದ ನಾಮನಿರ್ದೇಶಿತರು	ಸದಸ್ಯರು	
iii.	ಪ್ರಧಾನ ಕಾರ್ಯದರ್ಶಿಗಳು ಅಥವಾ ಸರ್ಕಾರದ ಕಾರ್ಯದರ್ಶಿ, ಹಣಕಾಸು ಇಲಾಖೆ ಅಥವಾ ಉಪ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದ ನಾಮನಿರ್ದೇಶಿತರು	ಸದಸ್ಯರು	
iv.	ಪ್ರಧಾನ ಕಾರ್ಯದರ್ಶಿಗಳು ಅಥವಾ ಸರ್ಕಾರದ ಕಾರ್ಯದರ್ಶಿ, ತೋಟಗಾರಿಕಾ ಇಲಾಖೆ ಅಥವಾ ಜಂಟೀ ಕಾರ್ಯದರ್ಶಿಯ ಹುದ್ದೆಗಿಂತ ಕಡಿಮೆ ಇಲ್ಲದ ನಾಮನಿರ್ದೇಶಿತರು	ಸದಸ್ಯರು	
v.	ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಮೂರು ಜನ ಪ್ರಗತಿಪರ ರೈತರು ಅವರಲ್ಲೊಬ್ಬರು ಪರಿಶಿಷ್ಟಜಾತಿ ಅಥವಾ ಪರಿಶಿಷ್ಟವರ್ಗಗಳಿಂದ ಸರ್ಕಾರದಿಂದ ನಾಮನಿರ್ದೇಶಿತರಾಗಿರಬೇಕು	ಸದಸ್ಯರು	ಶ್ರೀ ಎನ್. ಶ್ರೀನಿವಾಸಯ್ಯ (6–2–2017ರಿಂದ 5–2–2020ರವರೆಗೆ) ಶ್ರೀ ವಿ. ಸುಬ್ರಮಣಿ (6–2–2017ರಿಂದ 5–2–2020ರವರೆಗೆ) ಶ್ರೀ ಎಚ್.ಎ. ಶಿವಕುಮಾರ್ (6–2–2017ರಿಂದ 5–2–2020ರವರೆಗೆ)
vi.	ಕರ್ನಾಟಕ ರಾಜ್ಯ ವಿಧಾನ ಸಭೆಯಿಂದ ಮೂರು ಸದಸ್ಯರು ಸಭಾಧ್ಯಕ್ಷರು ನಾಮನಿರ್ದೇಶನ ಮಾಡಿರಬೇಕು ಮತ್ತು ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಒಬ್ಬರು ಸದಸ್ಯರು ಬೆಂಗಳೂರು, ಧಾರವಾಡ, ರಾಯಚೂರು ಕೃಷಿ ವಿಶ್ವವಿದ್ಯಾನಿಲಯಗಳಿಗೆ ಮತ್ತು ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ಇವುಗಳಿಗೆ ಅಧ್ಯಕ್ಷರು ಆವರ್ತನದ ಆಧಾರದ ಮೇಲೆ	ಸದಸ್ಯರು	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ, ಎಂ.ಎಲ್.ಸಿ., ಉಡುಪಿ (27–5–2017ರಿಂದ 1–1–2019ರವರೆಗೆ) ಶ್ರೀ ಎಂ.ಸಿ. ವೇಣುಗೋಪಾಲ್ (2–1–2017ರಿಂದ 28–5–2020ರವರೆಗೆ)
vii.	ಒಬ್ಬರು ಪ್ರತಿಷ್ಠಿತ ಶಿಕ್ಷಣ ತಜ್ಞರು ಅಥವಾ ಕೃಷಿ ಕ್ಷೇತ್ರದ ತಜ್ಞರು ಕುಲಾಧಿಪತಿಗಳಿಂದ ನಾಮನಿರ್ದೇಶಿತರಾಗಿರಬೇಕು	ಸದಸ್ಯರು	ಶ್ರೀ ಕೆ.ಎನ್. ಶ್ರೀಕಾಂತ್ (06–02–2017ರಿಂದ 27–1–2019) ಡಾ. ಎಸ್.ಸಿ. ಅಶ್ವತನಾರಾಯಣ (28–1–2019ರಿಂದ 5–2–2020)
viii.	ಒಬ್ಬರು ಕೃಷಿ ಉದ್ಯಮಿ ಅಥವಾ ಮಹಿಳಾ ಸಮಾಜ ಸೇವಕರು ಕುಲಾಧಿಪತಿಗಳಿಂದ ನಾಮನಿರ್ದೇಶಿತರಾಗಿರಬೇಕು	ಸದಸ್ಯರು	ಪ್ರೊ. ಶಕುಂತಲಾ ಶ್ರೀಧರ (6–2–2017ರಿಂದ 5–2–2020ರವರೆಗೆ)

1.5 The Board of Management and its Constitution (Sec.11)

(Amended Section 12(2) vide Karnataka Act 37 of 2014 dated 9.9.2014)

(1) The Chancellor shall, as soon as may constitute the Board of Management.

(2) The Board of Management shall consist of the following:

Board of Management as on 31.03.2019

i.	The Vice-Chancellor of the University	Chairman	Dr. M. S. Nataraju Vice-Chancellor (from 15-2-2018 to 17-9-2018) Dr. S. Rajendra Prasad Vice-Chancellor (from 17-9-2018)
ii.	The Principal Secretary or Secretary to Government, Agriculture Department or their nominee not below the rank of Joint Secretary	Member	
iii.	The Principal Secretary or Secretary to Government, Finance Department or their nominee not below the rank of Deputy Secretary	Member	
iv.	The Principal Secretary or Secretary to Government, Horticulture Department or their nominee not below the rank of Joint Secretary	Member	
v.	Three progressive farmers from the jurisdiction of the University of whom one person shall belong to the Scheduled Caste or the Scheduled Tribes to be nominated by the State Government	Member	Sri N. Srinivasaiah (from 6-2-2017 to 5-2-2020) Sri V. Subramani (from 6-2-2017 to 5-2-2020) Sri H. A. Shivakumar (from 6-2-2017 to 5-2-2020)
vi.	Three members of the Karnataka State Legislative Assembly nominated by the Speaker and one member of the Karnataka State Legislative Council nominated by the Chairman to each of the Universities of Bangalore, Dharawad, Raichur and to the University of Agriculture and Horticulture at Shimoga on rotation basis	Member	Sri K. Prathapachandra Shetty MLC, Udupi (from 27-5-2017 to 1-1-2019) Sri M.C. Venugopal (from 2-1-2019 to 28-5-2020)
vii.	One eminent educationist or expert in Agriculture sector to be nominated by the Chancellor	Member	Sri K. N. Srikanth (from 6-2-2017 to 27-1-2019) Dr. S.C. Aswathanarayana (from 28-1-2019 to 5-2-2020)
viii.	One agro-industrialist or woman social worker to be nominated by the Chancellor	Member	Prof. Shakunthala Sridhara (from 6-2-2017 to 5-2-2020)

ix.	ಮಹಾ ನಿರ್ದೇಶಕರು ನಾಮನಿರ್ದೇಶನ ಮಾಡಿದ ಭಾರತೀಯ ಕೃಷಿ ಸಂಶೋಧನಾ ಪರಿಷತ್‌ನ ಒಬ್ಬರು ಸದಸ್ಯರು	ಸದಸ್ಯರು	ಡಾ. ಪಿ.ಎಸ್. ಪಾಂಡೆ (1–6–2016ರಿಂದ 30–5–2019ರವರೆಗೆ)
x.	ಆವರ್ತನಾ ವಿಧಾನದಲ್ಲಿ ಎರಡು ವರ್ಷಗಳ ಅವಧಿಗೆ ಕುಲಪತಿಗಳು ನಾಮನಿರ್ದೇಶನ ಮಾಡಿದ ಒಬ್ಬರು ಡೀನ್‌ರವರು	ಸದಸ್ಯರು	ಡಾ. ಎಸ್. ರಾಜೇಂದ್ರ ಪ್ರಸಾದ್ (17–8–2017ರಿಂದ 16–9–2019ರವರೆಗೆ) ಡಾ. ಎಂ. ಬೈರೇಗೌಡ (20–12–2018ರಿಂದ 16–8–2019ರವರೆಗೆ)
xi.	ವಿಶ್ವವಿದ್ಯಾನಿಲಯದ ಕುಲಸಚಿವರು	ಸದಸ್ಯ ಕಾರ್ಯದರ್ಶಿ	ಡಾ. ಎ.ಬಿ. ಪಾಟೀಲ್ (31–05–2017ರಿಂದ 28–9–2018ರವರೆಗೆ) ಡಾ. ಮಹಾಬಲೇಶ್ವರ್ ಹೆಗಡೆ (28–9–2018ರಿಂದ)

(3) ಆಡಳಿತ ನಿರ್ವಹಣಾ ಮಂಡಳಿಯ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರ ಅವಧಿಯು ಸರ್ಕಾರದ ಅಥವಾ ಕುಲಾಧಿಪತಿಗಳ ಇಚ್ಛೆಗೊಳಪಟ್ಟು ಆಯಾ ಸದಸ್ಯತ್ವಕ್ಕನುಗುಣವಾಗಿ ಮೂರು ವರ್ಷಗಳ ಅವಧಿಯದಾಗಿರುತ್ತದೆ ಹಾಗೂ ಅವರು ವಿಶ್ವವಿದ್ಯಾನಿಲಯದ ಇತರ ಪ್ರಾಧಿಕಾರಗಳಿಗೆ ಮರು ನಾಮನಿರ್ದೇಶನಗೊಳ್ಳಲು ಅರ್ಹರಾಗಿರುವುದಿಲ್ಲ.

(4) ಸಾವು, ರಾಜೀನಾಮೆ, ತೆಗೆದು ಹಾಕಲ್ಪಡುವುದು ಅಥವಾ ಅವಧಿ ಮೀರುವುದನ್ನು ಹೊರತುಪಡಿಸಿ ಇತರ ಯಾವುದೇ ಕಾರಣಗಳಿಂದಾಗಿ ಹುದ್ದೆ ತೆರವುಗೊಂಡಾಗ ಆ ತೆರವಾದ ಜಾಗವನ್ನು ಈ ಅಧಿನಿಯಮದ ಪ್ರಸ್ತಾವನೆಗಳನ್ವಯ ಭರ್ತಿ ಮಾಡಬೇಕು ಮತ್ತು ಆ ಖಾಲಿ ಹುದ್ದೆಯನ್ನು ವಹಿಸಿಕೊಳ್ಳುವ ವ್ಯಕ್ತಿಯು ತೆರವುಗೊಂಡಾತನ ಉಳಿದ ಅವಧಿಯವರೆಗೆ ಅಧಿಕಾರದಲ್ಲಿರುವರು.

(5) ಆಡಳಿತ ಮಂಡಳಿಯ ಸಭೆಗೆ ಒಂದನೇ ಮೂರಷ್ಟು ಮಂಡಳಿಯ ಸದಸ್ಯರು ಕೋರಂ ಆಗುತ್ತಾರೆ. ಆದರೆ ಸಭೆಯೊಂದು ಕೋರಂ ಇಲ್ಲದಿರುವ ಕಾರಣ ಮುಂದೂಡಲ್ಪಟ್ಟಿದ್ದಲ್ಲಿ ಮುಂದೂಡಿದ ಸಭೆಯಲ್ಲಿ ಅದೇ ವ್ಯವಹಾರಗಳ ಚರ್ಚೆಗೆ ಕೋರಂ ಅವಶ್ಯಕತೆ ಇರುವುದಿಲ್ಲ.

(6) ಈ ಅಧಿನಿಯಮದಡಿ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನೊರತುಪಡಿಸಿ ಇತರ ಸದಸ್ಯರಿಗೆ ತಮ್ಮ ಕಾರ್ಯನಿರ್ವಹಿಸಲು ಗೌರವಧನ ಪಡೆಯಲು ಮತ್ತು ಸೂಚಿತ ದಿನನಿತ್ಯದ ಮತ್ತು ಪ್ರವಾಸ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ

(7) ಮಂಡಳಿಯು ಸಲಹಾ ಸೇವೆಯ ಉದ್ದೇಶಕ್ಕಾಗಿ ಅನುಭವ ಅಥವಾ ಸಭೆಯ ವಿಷಯದ ಕುರಿತ ವಿಶೇಷ ಜ್ಞಾನ ಹೊಂದಿರುವಂತಹವರನ್ನು ಸಭೆಗಳಿಗೆ ಹಾಜರಾಗಲು ಆಹ್ವಾನಿಸಬಹುದಾಗಿದೆ ಅಂತಹ ವ್ಯಕ್ತಿಯು ಸಭೆಯಲ್ಲಿ ಮಾತನಾಡಬಹುದು ಅಥವಾ ಕಲಾಪಗಳಲ್ಲಿ ಪಾಲ್ಗೊಳ್ಳಬಹುದು ಆದರೆ ಮತದಾನ ಮಾಡುವ ಅವಕಾಶವಿರುವುದಿಲ್ಲ ಆ ರೀತಿ ಆಹ್ವಾನಿಸಿದ ವ್ಯಕ್ತಿಯು ಸಭೆಯಲ್ಲಿ ಹಾಜರಾಗುವ ಸೂಚಿತ ಭತ್ಯೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

(8) ಸಾಮಾನ್ಯವಾಗಿ ಮಂಡಳಿಯು ಕುಲಪತಿಗಳು ನಿಗದಿಪಡಿಸುವ ದಿನಾಂಕಗಳಂದು ಕನಿಷ್ಠ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರಬೇಕು ಆದರೆ ಮಂಡಳಿಯ ಸದಸ್ಯರಲ್ಲಿ ಅರ್ಧಕ್ಕಿಂತ ಕಡಿಮೆ ಇಲ್ಲದಂತೆ ಸದಸ್ಯರು ಲಿಖಿತ ರೂಪದಲ್ಲಿ ಸಹಿಮಾಡಿ ಕೋರಿಕೆಯನ್ನು ಸಲ್ಲಿಸಿದಲ್ಲಿ ಕುಲಪತಿಗಳು ತಮಗೆ ಸೂಕ್ತವೆನಿಸಿದ ದಿನಾಂಕದಂದು ಮಂಡಳಿಯ ವಿಶೇಷ ಸಭೆಯನ್ನು ಕರೆಯಬಹುದಾಗಿದೆ

1.6 ವಿಶ್ವವಿದ್ಯಾನಿಲಯದ ಅಧಿಕಾರಿಗಳು (ಪರಿಚ್ಛೇದ 24)

		ಪ್ರಸ್ತುತವಿರುವ ಅಧಿಕಾರಿಗಳು
i	ಕುಲಾಧಿಪತಿಗಳು	ಶ್ರೀ ವಜುಬಾಯಿ ವಾಲಾ ಘನತೆವೆತ್ತ ಕರ್ನಾಟಕದ ರಾಜ್ಯಪಾಲರು
2	ಮಾನ್ಯ ಸಹ ಕುಲಾಧಿಪತಿಗಳು,	ಶ್ರೀ ಕೃಷ್ಣ ಬೈರೇಗೌಡ ಮಾನ್ಯ ಕೃಷಿ ಮಂತ್ರಿಗಳು ಕರ್ನಾಟಕ ಸರ್ಕಾರ (23–5–2018 ರವರೆಗೆ) ಶ್ರೀ ಎನ್.ಹೆಚ್. ಶಿವಶಂಕರ ರೆಡ್ಡಿ ಮಾನ್ಯ ಕೃಷಿ ಮಂತ್ರಿಗಳು, ಕರ್ನಾಟಕ ಸರ್ಕಾರ (23–5–2018 ರಿಂದ ಇಲ್ಲಿಯವರೆಗೆ)

ix.	One representative from the Indian Council of Agriculture Research to be nominated by the Director General	Member	Dr. P.S. Pandey (from 1-6-2016 to 30-5-2019)
x.	One Dean to be nominated by the Vice-Chancellor, by rotation for a term of two years	Member	Dr. S. Rajendra Prasad (from 17-8-2017 to 16-9-2018) Dr. M. Byregowda (from 20-12-2018 to 16-8-2019)
xi.	Registrar of the University	Member-Secretary	Dr. A. B. Patil (from 31-5-2017 to 28-9-2018) Dr. Mahabaleshwar Hegde (from 28-9-2018)

(3) The term of office of the members of the Board, other than Ex-officio members, shall, subject to the pleasure of the Government or the Chancellor, as the case may be, for three years and they shall not be eligible for re-nomination to any of the authorities of the University.

(4) When vacancy occurs in the office of any member by the reason of death, resignation, removal or any cause other than the expiry of term, the vacancy shall be filled in accordance with the provisions of this Act and the person who fills such vacancy, shall hold the said office for the remaining period for whose place he is nominated.

(5) One third of the members of the Board shall form quorum at a meeting of the Board, provided that if a meeting of the Board is adjourned for want of quorum, no quorum shall be necessary for the adjourned meeting called for transaction of the same business.

(6) The members of the Board other than the officers of the University shall not be entitled to any remuneration for the performance of their functions under this Act except such daily and traveling allowances as may be prescribed.

(7) The Board may for the purpose of consultation invite any person having experience or special knowledge in any subject under consideration to attend its meeting. Such person may speak or otherwise take part in the proceedings of such meeting but shall not be entitled to vote. Any person so invited shall be entitled to such allowances for attending the meeting as may be prescribed.

(8) Ordinarily the Board shall meet at least once in every three months on such dates as may be fixed by the Vice-Chancellor. However, the Vice-Chancellor may whenever he thinks fit or shall, upon the requisition in writing signed by not less than one half of the members of the Board, convene a special meeting of the Board.

1.6 Officers of the University (Sec. 24)

		Incumbent Officers
i.	The Chancellor	Sri Vajubhai Vala Hon'ble Governor of Karnataka
ii.	Pro-Chancellor	Sri Krishna Byregowda Hon'ble Minister for Agriculture, GoK (upto 23-5-2018) Sri. N.H. Shivashankar Reddy Hon'ble Minister for Agriculture, GoK (From 23-5-2018 till today)

3	ಮಾನ್ಯ ಕುಲಪತಿಗಳು,	ಡಾ. ಎಂ.ಎಸ್. ನಟರಾಜು, (15–2–2018 ರಿಂದ 17–09–2018ರವರಗೆ) ಡಾ. ಎಸ್. ರಾಜೇಂದ್ರ ಪ್ರಸಾದ್ (17–9–2018 ರಿಂದ)
4.	*ನಿರ್ದೇಶಕರುಗಳು (ಪರಿಚ್ಛೇದ 31)*	
1	ಶಿಕ್ಷಣ ನಿರ್ದೇಶಕರು	ಡಾ. ಎಂ.ಎಸ್. ನಟರಾಜು (15–02–2018 ರಿಂದ 17–09–2019ರವರಗೆ) ಡಾ. ಎಸ್. ರಾಜೇಂದ್ರ ಪ್ರಸಾದ್ (17–09–2018 ರಿಂದ)
2	ಸಂಶೋಧನಾ ನಿರ್ದೇಶಕರು	ಡಾ. ವೈ.ಜಿ. ಷಡಕ್ಷರಿ (30–05–2017 ರಿಂದ)
3	ವಿಸ್ತರಣಾ ನಿರ್ದೇಶಕರು	ಡಾ. ಎಂ.ಎಸ್. ನಟರಾಜು (30–05–2017 ರಿಂದ)
4	ಡೀನ್‌ರವರುಗಳು	
1	ಡೀನ್ (ಕೃಷಿ), ಜಿಕೆವಿಕೆ	ಡಾ. ಎಸ್. ರಾಜೇಂದ್ರ ಪ್ರಸಾದ್ (30–5–2017 ರಿಂದ 17–9–2018 ರವರಗೆ) ಡಾ. ವೈ.ಜಿ. ಷಡಕ್ಷರಿ (17–9–2018 ರಿಂದ 10–10–2018) ಡಾ. ಜಿ.ಎನ್. ನಾಗರಾಜ (10–10–2018 ರಿಂದ 31–1–2019) ಡಾ. ಎಂ. ಬೈರೇಗೌಡ (1–2–2019 ರಿಂದ)
2	ಡೀನ್ (ಕೃಷಿ), ಮಂಡ್ಯ	ಡಾ: ಟಿ. ಶಿವಶಂಕರ್ (30–5–2017 ರಿಂದ)
3	ಡೀನ್ (ರೇಷ್ಮೆ ಕೃಷಿ), ಚಿಂತಾಮಣಿ	ಡಾ. ವೆಂಕಟರವಣ (31–7–2017 ರಿಂದ)
4	ಡೀನ್ (ಕೃಷಿ), ಹಾಸನ	ಡಾ. ಎನ್. ದೇವಕುಮಾರ್ (30–5–2017 ರಿಂದ)
5	ಡೀನ್(ಸ್ನಾತಕೋತ್ತರ)	ಡಾ. ಶೈಲಜ ಹಿತ್ತಲಮನಿ (30–5–2017 ರಿಂದ 30–4–2018 ರವರಗೆ) ಡಾ. ಎಂ. ಬೈರೇಗೌಡ (30–04–2018 ರಿಂದ 9–10–2018) ಡಾ. ಬಿ.ಎನ್. ಸತ್ಯನಾರಾಯಣ (10–10–2018 ರಿಂದ 31–05–2019ರವರಗೆ)
6	ಡೀನ್, ವಿದ್ಯಾರ್ಥಿ ಕಲ್ಯಾಣ	ಡಾ. ಎಂ. ಬೈರೇಗೌಡ (30–5–2017 ರಿಂದ)
7	ಕುಲಸಚಿವರು	ಡಾ. ಎ.ಬಿ. ಪಾಟೀಲ್ (31–5–2017 ರಿಂದ 28–9–2018ರ ವರಗೆ) ಡಾ. ಮಹಾಬಲೇಶ್ವರ ಹೆಗ್ಗಡೆ (28–9–2018 ರಿಂದ)
8	ವಿಶ್ರವಿದ್ಯಾನಿಲಯದ ಗ್ರಂಥಪಾಲಕರು	ಡಾ: ದೇವರಾಜ್ (02–9–2015 ರಿಂದ)
9	ಹಣಕಾಸು ನಿಯಂತ್ರಣಾಧಿಕಾರಿಗಳು	ಶ್ರೀ ಡಿ. ವಿಜಯಕುಮಾರ್ (31–5–2017 ರಿಂದ)

iii.	Vice-Chancellors	Dr. M. S. Nataraju (from 15-2-2018 to 17.09.2018) Dr. S. Rajendra Prasad (from 17.09.2018)
iv.	*Directors (Sec.31)*	
1	Director of Education, UAS, GKVK, Bengaluru	Dr. M. S. Nataraju (from 15.2.2018 to 17.09.2018) Dr. S. Rajendra Prasad (from 17.09.2018)
2	Director of Research, UAS, GKVK, Bengaluru	Dr. Y. G. Shadakshari (from 30-5-2017)
3	Director of Extension, UAS, Hebbal, Bengaluru	Dr. M. S. Nataraju (from 30-5-2017)
4	Deans	
1.	Dean (Agri.), CoA, GKVK, Bengaluru	Dr. S. Rajendra Prasad (from 30.5.2017 to 17.09.2018) Dr. Y. G. Shadakshari (17.09.2018 to 10-10-2018) Dr. G.N. Nagaraja (10-10-2018 to 31-1-2019) Dr. M. Byregowda (from 01-2-2019)
2.	Dean (Agri.), CoA, Mandya	Dr. T. Shivashankar (from 30-5-2017)
3.	Dean (Seri.), CoS, Chintamani	Dr. P. Venkataravana (from 31-7-2017)
4.	Dean (Agri.), CoA, Hassan	Dr. N. Devakumar (from 30-5-2017)
5.	Dean (PGS), UAS, GKVK, Bengaluru	Dr. (Mrs.) Shailaja Hittalmani (from 30.5.2017 to 30-4-2018) Dr. M. Byregowda (30-04-2018 to 09-10-2018) Dr.B.N. Satyanarayana (10-10-2018 to 31-05-2019)
6.	Dean (Student Welfare), UAS, GKVK, Bengaluru	Dr. M. Byregowda (from 30-5-2017)
7.	Registrar, UAS, GKVK, Bengaluru	Dr. A. B. Patil (from 31.5.2017 to 28-9-2018) Dr. Mahabaleshwara Hegde (from 28-9-2018)
8.	University Librarian, UAS, GKVK, Bengaluru	Dr. Devaraj (from 02-9-2015)
9.	Comptroller, UAS, GKVK, Bengaluru	Mr. D. Vijayakumar (from 31-5-2017)

ಪರಿಚ್ಛೇದ 24 (ix) ರಡಿ

10	ಆಸ್ತಿ ಅಧಿಕಾರಿಗಳು	ಶ್ರೀ ಎಂ.ಎನ್. ದೇವರಾಜ (21–4–2004 ರಿಂದ)
11	ಆಡಳಿತಾಧಿಕಾರಿಗಳು	ಡಾ. ಆರ್.ಎನ್. ಭಾಸ್ಕರ್ (31–5–2017 ರಿಂದ 16–10–2018 ರವರಗೆ) ಡಾ. ಗೋಪಿನಾಥ್, ಜಿ. (16–10–2018 ರಿಂದ)

1.7 ವಿಶ್ವವಿದ್ಯಾನಿಲಯದ ಗುರಿ, ಧ್ಯೇಯೋದ್ದೇಶ ಹಾಗೂ ಅಧ್ಯಾದೇಶ

ಗುರಿ : ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವನ್ನು ವಿಶ್ವದರ್ಜೆಯ ಕೃಷಿ ವಿಶ್ವವಿದ್ಯಾನಿಲಯವಾಗಿ ರೂಪಾಂತರಗೊಳಿಸುವುದು

ಧ್ಯೇಯೋದ್ದೇಶ: ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಉತ್ತಮ ಗುಣಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ, ಅತ್ಯಾಧುನಿಕ ಸ್ಪರ್ಧಾತ್ಮಕ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ ರಾಜ್ಯ ಮತ್ತು ದೇಶದ ರೈತಸಮುದಾಯದ ಸೇವೆಗಾಗಿ ಸಮರ್ಥ ಪ್ರಸಾರ ತಾಂತ್ರಿಕತೆಯನ್ನು ವಿಕಸಿತಗೊಳಿಸುವುದು

ಆಧ್ಯಾದೇಶಗಳು: ವಿಶ್ವವಿದ್ಯಾನಿಲಯ ಅಧಿನಿಯಮದಲ್ಲಿ ಸೂಚಿತಗೊಂಡಿರುವಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಧ್ಯಾದೇಶಗಳು ಈ ಮುಂದಿನಂತಿವೆ:

ಅ) ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ವಿವಿಧ ವಿಭಾಗಗಳಲ್ಲಿ ಮಾನವಸಂಪನ್ಮೂಲ ಗುಣಮಟ್ಟ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಶಿಕ್ಷಣ ಒದಗಿಸುವ ವ್ಯವಸ್ಥೆ ಮಾಡುವುದು.

ಆ) ಕಲಿಕೆ ಮತ್ತು ಸಂಶೋಧನೆಗೆ ವಿಶೇಷವಾಗಿ ಕೃಷಿ ಮತ್ತು ಸಂಬಂಧಿತ ವಿಜ್ಞಾನಗಳ ಸುಧಾರಣೆಗೆ ಒತ್ತು ನೀಡುವುದು.

ಇ) ವಿಶೇಷವಾಗಿ ರಾಜ್ಯ ಗ್ರಾಮೀಣ ಜನತೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳಂತಹ ವಿಷಯಗಳಲ್ಲಿ ವಿಸ್ತರಣಾ ಶಿಕ್ಷಣ ಒದಗಿಸುವುದು.

ಈ) ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶೈಕ್ಷಣಿಕ, ಕೈಗಾರಿಕೆ, ಸಂಶೋಧನೆ ಮತ್ತು ಇತರ ಸಂಸ್ಥೆಗಳಲ್ಲಿ ಪಾಲುಗಾರಿಕೆ ಮತ್ತು ಸಂಬಂಧಗಳನ್ನು ಪ್ರೋತ್ಸಾಹಿಸುವುದು.

ಉ) ಕಾಲಕಾಲಕ್ಕೆ ರಾಜ್ಯ ಸರ್ಕಾರವು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸುವ ಇತರ ಕಾರ್ಯಗಳನ್ನು ಕೈಗೊಳ್ಳುವುದು.

1.8 ವಿಶ್ವವಿದ್ಯಾನಿಲಯದ ಆಡಳಿತ

ಈ ಮೇಲಿನ ಗುರಿ, ಧ್ಯೇಯೋದ್ದೇಶ ಮತ್ತು ಆಧ್ಯಾದೇಶಗಳನ್ನು ಸಾಧಿಸಲು ವಿಶ್ವವಿದ್ಯಾನಿಲಯವು ಆಡಳಿತ ನಿರ್ವಹಣೆಗಾಗಿ ಅನುಸರಿಸಬೇಕಾದ ಆಡಳಿತ ನಿರ್ವಹಣಾ ರಚನೆ ಈ ಮುಂದಿನಂತಿದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಆಡಳಿತ ನಿರ್ವಹಣಾ ರಚನೆ
Synoptic Structure of Governance of UAS, Bangalore



Under Sec 24(ix)

10. Estate Officer, UAS, GKVK, Bengaluru	Mr. M. N. Devaraja (from 21-4-2004)
11. Administrative Officer, UAS, GKVK, Bengaluru	Dr. R. N. Bhaskar (from 31.5.2017 to 16-10-2018) Dr. G. Gopinath (from 16-10-2018)

1.7 University Vision, Mission and Mandates

Vision : Transforming University of Agricultural Sciences, Bangalore into World Class Farm University

Mission : Generate quality human resources in the area of agriculture and allied disciplines, generate cutting-edge competitive technologies and evolve efficient disseminating mechanism so as to serve the farming community of the State and the country

Mandates: The mandates of the University of Agricultural Sciences, Bangalore as specified in the University Act are:

a) Making provision for imparting education towards development of quality human resource in different branches of agriculture and allied sciences

b) Furthering the advancement of learning and conducting research particularly in agriculture and other allied sciences

c) Undertaking the extension education of such science and technologies specially for the rural people of the State

d) Promoting partnership and linkages with national and international educational, industries, research and other institutions

e) Such other purposes specified by the State Government from time to time and notified in the official gazette

1.8 University Governance

In order to achieve the above Vision, Mission and Mandates of the University, the following is the Governance structure adopted for administrative management.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಸಾಂಸ್ಥಿಕ ರಚನೆ

Organizational Structure of UAS, Bangalore



1.9 ಮಾಹೆಯಾನ ಕುಲಪತಿಗಳು ಭಾಗವಹಿಸಿದ ಪ್ರಮುಖ ಕಾರ್ಯಕ್ರಮಗಳು ಹಾಗೂ ಸಭೆಗಳು

ಏಪ್ರಿಲ್ 2018

ದಿನಾಂಕ 2–3, ಏಪ್ರಲ್, 2018 ರಂದು ಜಿ.ಕೆ.ವಿ.ಕೆಯಲ್ಲಿ ಆಯೋಜಿಸಿದ ಐ.ಸಿ.ಎ.ಆರ್–ಐ.ಐ.ಓಆರ್ ಮತ್ತು ಎ.ಐ.ಸಿ.ಆರ್.ಪಿ–ಎಣ್ಣೆಕಾಳುಗಳ ಪಂಚವಾರ್ಷಿಕ ಪರಾಮರ್ಶನಾ ಸಭೆಯನ್ನು ಡಾ. ಎಂ. ಎಸ್. ನಟರಾಜು, ಕುಲಪತಿಗಳು ಉದ್ಘಾಟಿಸಿದರು. ಕೃಷಿ ಇಲಾಖೆಯ ಕಾರ್ಯದರ್ಶಿಗಳು, ದಿನಾಂಕ 05.04.2018 ರಂದು 2017–18ರ ಯೋಜನೆಗಳ ಮುಂದುವರಿಕೆ, 2018–19ರ ಯೋಜನೆಗಳು ಮತ್ತು ಅವುಗಳ ಅನುಷ್ಠಾನ ಕುರಿತು ನೆರವೇರಿಸಿದ ಸಭೆಯಲ್ಲಿ ಕುಲಪತಿಗಳು ಭಾಗವಹಿಸಿದ್ದರು. ದಿನಾಂಕ 07.04.2018 ರಂದು ಉಪ ಮಹಾ ನಿರ್ದೇಶಕರು (ಶಿಕ್ಷಣ), ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳ ಸಭೆಯಲ್ಲಿ ಮಾನ್ಯ ಕುಲಪತಿಗಳು ಭಾಗವಹಿಸಿ, 5ನೇ ಡೀನ್ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ ಕುರಿತು ಚರ್ಚಿಸಿದರು. ದಿನಾಂಕ 11.04.2018 ರಂದು ರೆಡ್ ಕ್ರಾಸ್ ಸೊಸೈಟಿಯ ವಿಶ್ವವಿದ್ಯಾನಿಲಯ ಮಟ್ಟದ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸೊಸೈಟಿಯ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು. ದಿನಾಂಕ 13.04.2018 ರಂದು ಕುಲಪತಿಗಳು ಕಂದಲಿಯ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಗಳ ಜೊತೆ ಕೇಂದ್ರದ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಕುರಿತು ಪರಿಶೀಲಿಸಿದರು. ಕುಲಪತಿಗಳು ದಿನಾಂಕ 17.04.2018 ರಂದು ಕೊಯಂಬತ್ತೂರಿನ ಐ.ಸಿ.ಎ.ಆರ್ ಕಬ್ಬು ಉತ್ಪಾದನಾ ಸಂಸ್ಥೆಯಲ್ಲಿ ಐ.ಸಿ.ಎ.ಆರ್ ಪ್ರಾದೇಶಿಕ ಸಮಿತಿ ಸಂಖ್ಯೆ VIII ರ 26ನೇ ಪರಾಮರ್ಶನಾ ಸಭೆಯಲ್ಲಿ ಭಾಗವಹಿಸಿದ್ದರು. ಕುಲಪತಿಗಳು ದಿನಾಂಕ 17.04.2018 ರಂದು ಚಾಮರಾಜನಗರದ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ಸಿಬ್ಬಂದಿಗಳ ಜೊತೆ ಕೇಂದ್ರದ ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳ ಕುರಿತು ಪರಿಶೀಲಿಸಿದರು. ಕುಲಪತಿಗಳು ದಿನಾಂಕ 23.04.2018 ರಂದು ಜಿ.ಕೆ.ವಿ.ಕೆ.ಯಲ್ಲಿ ಅನುವಂಶಿಯವಾಗಿ ಮಾರ್ಪಡಿಸಲಾದ ಬೆಳೆಗಳ ಕುರಿತ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮೇ 2018

- 2018–19 ನೇ ಸಾಲಿನಲ್ಲಿ ವಿಶ್ವ ಬ್ಯಾಂಕ್ ನಧಿಯಿಂದ ಮಂಜೂರಾದ ಸೆಂಟರ್ ಫಾರ್ ಅಡ್ವಾನ್ಸ್ಡ್ ಅಗ್ರಿಕಲ್ಚುರಲ್ ಸ್ಯನ್ಸ್ ಅಂಡ್ ಟೆಕ್ನಾಲಜಿ (CAAST) ಅಡಿಯಲ್ಲಿ ಹೊಸದಿಲ್ಲಿಯ ಐ.ಸಿ.ಎ.ಆರ್.ನಂದ 'ಸೆಂಟರ್ ಫಾರ್ ನೆಕ್ಸ್ಟ್ ಜೆನರೇಷನ್ (NGT) ಇನ್ ಅಡಾಪ್ಟೀವ್ ಅಗ್ರಿಕಲ್ಚರ್' ಎಂಬ ಪ್ರಾಯೋಜನೆಯು ವಿಶ್ವವಿದ್ಯಾನಿಲಯಕ್ಕೆ ಕೀರ್ತಿ

1.11 ವಿಶ್ವವಿದ್ಯಾನಿಲಯದ ಅಧಿಕಾರಿಗಳ ಸಭೆಗಳು

ಅ. ಆಡಳಿತ ನಿರ್ವಹಣಾ ಮಂಡಳಿ

378ನೇ ನಿಯತ ಸಭೆ	...	12–06–2018
379ನೇ ನಿಯತ ಸಭೆ	...	05–01–2019
380ನೇ ವಿಶೇಷ ಸಭೆ	...	20–03–2019

ಆ. ಶೈಕ್ಷಣಿಕ ಪರಿಷತ್

187ನೇ ಸಭೆ	...	10–11–2018
188ನೇ ಸಭೆ	...	18–03–2019

ಇ. ಅಧ್ಯಯನ ಮಂಡಳಿ

15ನೇ ಸಭೆ (ಸ್ನಾತಕೋತ್ತರ)	...	01–03–2019
4ನೇ ಸಭೆ (ಸ್ನಾತಕ)	...	01–03–2019

ಈ. ಆರ್ಥಿಕ ಸಮಿತಿ

138ನೇ ಸಭೆ	...	02–06–2018
139ನೇ ಸಭೆ	...	26–12–2018
140ನೇ ಸಭೆ	...	30–03–2018

ಉ. ಸಂಶೋಧನಾ ಪರಿಷತ್

58ನೇ ಸಭೆ	...	29–06–2018

ಊ. ವಿಸ್ತರಣಾ ಶಿಕ್ಷಣ ಪರಿಷತ್

57ನೇ ಸಭೆ	...	29–06–2018

- AICRP on Post-Harvest Engineering & Technology, Bengaluru centre has been conferred with Best Centre Award-2018 by ICAR-CIPHET at 34th Annual Workshop of AICRP on PHET held at TNAU, Coimbatore from 12-15th March 2019
- Project on 'Centre for Next Generation Technologies (NGT) in Adoptive Agriculture' from ICAR, New Delhi under Centre for Advanced Agricultural Science & Technology (CAAST) funded by World Bank during 2018-19 is a feather to the University
- Project on 'Centre for Next Generation Technologies (NGT) in Adoptive Agriculture' from ICAR, New Delhi under Centre for Advanced Agricultural Science & Technology (CAAST) funded by World Bank during 2018-19 is a feather to the University

1.11 Meetings of the Authorities of the University

a.	***Board of Management***		
	378th Regular Meeting	...	12-06-2018
	379th Regular Meeting	...	05-01-2019
	380th Special Meeting	...	20-03-2019
b.	***Academic Council***		
	187th Meeting	...	10-11-2018
	188th Meeting	...	10-03-2019
c.	***Board of Studies***		
	15th Meeting (PG)	...	01-03-2019
	4th Meeting (UG)	...	01-03-2019
d.	***Finance Committee***		
	138th Meeting	...	02-06-2018
	139th Meeting	...	26-12-2018
	140th Meeting	...	30-03-2019
e.	***Research Council***		
	58th Meeting	...	29-06-2018
f.	***Extension Education Council***		
	57th Meeting	...	29-06-2018

2. ಶೈಕ್ಷಣಿಕ ಆಡಳಿತ
Academic Administration

2.1 ಶೈಕ್ಷಣಿಕ ಕಾರ್ಯಕ್ರಮಗಳು

ವಿಶ್ವವಿದ್ಯಾನಿಲಯವು ನಾಲ್ಕು ಕಾಲೇಜುಗಳನ್ನು ಹೊಂದಿದ್ದು ಕೃಷಿ ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಬಂಧಿತ ವಿಜ್ಞಾನ ಕ್ಷೇತ್ರಗಳಲ್ಲಿ ಶಿಕ್ಷಣ ನೀಡುವ ತನ್ನ ಆಧ್ಯಾದೇಶದ ಕಾರ್ಯವನ್ನು ಕೈಗೊಳ್ಳಲು ತನ್ನ ವ್ಯಾಪ್ತಿಯಲ್ಲಿ ಕರ್ನಾಟಕದ 10 ದಕ್ಷಿಣ ಜಿಲ್ಲೆಗಳನ್ನು ಹೊಂದಿದೆ. ಪ್ರಸ್ತುತ ವಿಶ್ವವಿದ್ಯಾನಿಲಯವು ಬಿ.ಎಸ್ಸಿ.(ಕೃಷಿ), ಬಿ.ಎಸ್ಸಿ.(ರೇಷ್ಮೆ ಕೃಷಿ), ಬಿ.ಎಸ್ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ), ಬಿ.ಟೆಕ್.(ಜೈವಿಕ ತಂತ್ರಜ್ಞಾನ), ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) ಮತ್ತು ಬಿ.ಟೆಕ್.(ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಎಂಬ ಆರು ಸ್ನಾತಕ ಪದವಿ ಕಾರ್ಯಕ್ರಮಗಳನ್ನು 22 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು 15 ವಿಷಯಗಳಲ್ಲಿ ಡಾಕ್ಟೊರಲ್ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಶೈಕ್ಷಣಿಕ ಕಾರ್ಯಕ್ರಮಗಳು ಸೆಮಿಸ್ಟರ್ ಪದ್ಧತಿಯಲ್ಲಿ ನಡೆಯುತ್ತಿದ್ದು ಇಂಗ್ಲಿಷ್ ಬೋಧನಾ ಮಾಧ್ಯಮವಾಗಿದೆ. ಮಂಡ್ಯದ ಕೃಷಿ ಮಹಾ ವಿದ್ಯಾಲಯದಲ್ಲಿ ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾವನ್ನು ಸೆಮಿಸ್ಟರ್ ಪದ್ಧತಿಯಲ್ಲಿ ನಡೆಸಲಾಗುತ್ತಿದ್ದು ಅದರ ಬೋಧನಾ ಮಾಧ್ಯಮವು ಕನ್ನಡವಾಗಿದೆ. ಇದರ ಜೊತೆಗೆ, ವಿಸ್ತರಣಾ ನಿರ್ದೇಶನಾಲಯವು ದೂರ ಶಿಕ್ಷಣದ ಮೂಲಕ ಹಲವಾರು ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ.

2.2 ಆಡಳಿತ ನಿರ್ವಹಣಾ ವ್ಯವಸ್ಥೆ ಮತ್ತು ಕಾರ್ಯಗಳು

2.2.1 ಶಿಕ್ಷಣ ನಿರ್ದೇಶಕರು

ಶೈಕ್ಷಣಿಕ ಆಡಳಿತ ವ್ಯವಸ್ಥೆಯು ಶಿಕ್ಷಣ ನಿರ್ದೇಶನಾಲಯವನ್ನು ಹೊಂದಿದ್ದು ಅದರ ಬೆಂಬಲಕ್ಕೆ ಕುಲಸಚಿವರು, ಸಂಬಂಧಿತ ಮಹಾವಿದ್ಯಾಲಯಗಳ ಡೀನ್‌ರವರು, ಸ್ನಾತಕೋತ್ತರ ಡೀನ್, ವಿದ್ಯಾರ್ಥಿ ಕಲ್ಯಾಣ ಡೀನ್, ಪರೀಕ್ಷಾ ನಿಯಂತ್ರಕರು ಮತ್ತು ಸಂವಹನ ಕೇಂದ್ರ, ಕನ್ನಡ ಅಧ್ಯಯನ ವಿಭಾಗ ಹಾಗೂ ಗ್ರಂಥಾಲಯವನ್ನೂ ಸಹ ಹೊಂದಿದೆ. ನಿರ್ದೇಶನಾಲಯಗಳು / ಅಧಿಕಾರಿಗಳ ಪ್ರಮುಖ ಹೊಣೆಗಾರಿಕೆ ಹಾಗೂ ಕಾರ್ಯಗಳನ್ನು ಮತ್ತು ಅವರು 2018–19ರಲ್ಲಿ ಕೈಗೊಂಡ ಚಟುವಟಿಕೆಗಳನ್ನು ಈ ಮುಂದೆ ನೀಡಲಾಗಿದೆ.

i. ಶಿಕ್ಷಣ ನಿರ್ದೇಶಕರು; ಅಧಿನಿಯಮದನ್ವಯ

ಅ. ಶಿಕ್ಷಣ ತಂತ್ರಜ್ಞಾನದ ಸ್ಥಾನಿಕ ಸೂಚನೆ ಮತ್ತು ಅಭಿವೃದ್ಧಿ ಕುರಿತಂತೆ ಎಲ್ಲ ಶೈಕ್ಷಣಿಕ ಕಾರ್ಯನೀತಿ ಸಂಬಂಧಿತ ವಿಷಯಗಳ ಮತ್ತು ವ್ಯವಸ್ಥೆಗಳ ಸಂಯೋಜನೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಪರೀಕ್ಷೆಗಳ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಸಹ ನಿರ್ವಹಿಸುತ್ತಾರೆ.

ಆ. ವಿಶ್ವವಿದ್ಯಾನಿಲಯದ ಗ್ರಂಥಾಲಯ, ಪರೀಕ್ಷಾ ಕೇಂದ್ರ, ಕನ್ನಡ ಅಧ್ಯಯನ ವಿಭಾಗ, ಸಂವಹನ ಕೇಂದ್ರ ಮತ್ತು ವಿಶ್ವವಿದ್ಯಾನಿಲಯದ ಪ್ರಕಟಣೆಗಳ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.

2.1 Academic programmes

The University has four colleges, with a territorial jurisdiction of 10 Southern districts of Karnataka to carry out the mandated education in the areas of agriculture and allied sciences. Presently, the University offers six Bachelor degree programmes *viz.,* B.Sc. (Agriculture), B.Sc.(Sericulture), B.Sc.(Agricultural Marketing & Cooperation), B.Tech. (Biotechnology), B.Tech. (Agri. Engineering) and B.Tech. (Food Science & Technology). University also offers Masters' degree programme in 22 disciplines and Ph.D. programme in 15 disciplines. The academic programmes are offered under semester system with english as medium of instruction. Two year diploma in Agriculture is being offered under semester system in Kannada medium at College of Agriculture, Mandya. Further, the Directorate of Extension offers various Diploma and certificate courses on Distance Education mode.

2.2 Administrative Management system and functions

2.2.1. Directorate of Education

The Academic administrative system consists of Directorate of Education ably supported by Registrar, Deans of constituent colleges, Dean Post Graduate Studies, Dean Student Welfare, Controller of Examination, facilitated by Communication Center, Kannada Department and University Library. Major responsibilities and functions attached with the directorate/officers and functions performed during 2018-19 are detailed hereunder.

i. ***Director of Education; As per the Act***

a. Shall be concerned with co-ordination of all academic policy matters and systems regarding resident instruction and development of educational technology. He shall also oversee examinations.

b. Shall monitor and supervise the University Library, Examination Centre, Kannada Department and Communication Centre

ಇ. ಎಲ್ಲಾ ಮಹಾವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆಗಳ ಮೇಲ್ವಿಚಾರಣೆ

ಈ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮಗಳ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ.

ಉ. ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ಶೈಕ್ಷಣಿಕ ಮಂಡಳಿ ಅಧ್ಯಕ್ಷರಾಗಿ ಶೈಕ್ಷಣಿಕ ಮಂಡಳಿಯ ದಾಖಲಾತಿಗಳ ನಿರ್ವಹಣೆ

ಊ. ಶೈಕ್ಷಣಿಕ ಪರಿಷತ್ತಿನ ಸದಸ್ಯ–ಕಾರ್ಯದರ್ಶಿಗಳಾಗಿ ಮತ್ತು ಶೈಕ್ಷಣಿಕ ಪರಿಷತ್ತಿನ ನಡಾವಳಿಗಳ ನಿರ್ವಹಣೆ

ಎ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮತ್ತು ಬೇರೆ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಮಧ್ಯೆ ಉತ್ತಮ ಬಾಂಧ್ಯವ್ಯ ಬಲಪಡಿಸುವಿಕೆ

ಏ. ವಿಶ್ವವಿದ್ಯಾನಿಲಯದ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳ ಆಯೋಜನೆ

ಐ. ಕೃಷಿ ವಿಶ್ವವಿದ್ಯಾನಿಲಯದ ಎಲ್ಲ ಆಡಳಿತೆಯಲ್ಲಿ ಕುಲಪತಿಗಳಿಗೆ ಸಹಾಯಕರಾಗಿ ಮತ್ತು ಕುಲಪತಿಗಳು ವಹಿಸುವ ಇತರೆ ಕೆಲಸ ಮತ್ತು ಅಧಿಕಾರ ನಿರ್ವಹಣೆ

ಒ. ಆಡಳಿತ ಮಂಡಳಿ ಮತ್ತು/ಅಥವಾ ಕುಲಪತಿಗಳು ನಿರ್ದಿಷ್ಟಪಡಿಸಿರುವುದನ್ನು ಹೊರತುಪಡಿಸಿ ಕುಲಪತಿಗಳ ಅನುಪಸ್ಥಿತಿಯಲ್ಲಿ ಅವರ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ

ii. ಕುಲಸಚಿವರು; ಅಧಿನಿಯಮದನ್ವಯ

ಅ. ಆಡಳಿತ ನಿರ್ವಹಣಾ ಮಂಡಳಿಯ ಸದಸ್ಯ ಕಾರ್ಯದರ್ಶಿ ಮತ್ತು ಎಲ್ಲಾ ಪರಿಷತ್ತುಗಳ ಶಾಶ್ವತ ಸದಸ್ಯರಾಗಿರುತ್ತಾರೆ.

ಆ. ದಾಖಲೆಗಳ ಮತ್ತು ವಿಶ್ವವಿದ್ಯಾನಿಲಯದ ಸರ್ವ ಮುದ್ರೆಯ ಸೂಕ್ತ ರಕ್ಷಣೆಯ ಹೊಣೆಗಾರಿಕೆ ಹೊಂದಿರುತ್ತಾರೆ.

ಇ. ವಿಶ್ವವಿದ್ಯಾನಿಲಯದ ಪ್ರವೇಶ ಅರ್ಜಿಗಳನ್ನು ಸ್ವೀಕರಿಸಬೇಕು ಮತ್ತು ಎಲ್ಲಾ ಕೋರ್ಸ್‌ಗಳ, ಪಠ್ಯವಿಷಯಗಳ ಮತ್ತು ಅವಶ್ಯಕವಿರುವ ಇತರ ಮಹಿತಿಯ ಶಾಶ್ವತ ದಾಖಲೆ ನಿರ್ವಹಿಸಬೇಕು.

ಈ. ವಿಶ್ವವಿದ್ಯಾನಿಲಯದ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾನ್ಯ ಆಡಳಿತದ ಹೊಣೆಗಾರಿಕೆ ಹೊಂದಿರುತ್ತಾರೆ. [ಪರಿಚ್ಛೇದ 31 (7) ಬಿ–ಇ]

iii. ಡೀನ್‌ರವರು; ಅಧಿನಿಯಮದನ್ವಯ

ಮಹಾ ವಿದ್ಯಾಲಯದ ಮುಖ್ಯಸ್ಥರಾಗಿರುತ್ತಾರೆ ಮತ್ತು ಮಹಾ ವಿದ್ಯಾಲಯದಲ್ಲಿನ ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳ ಆಡಳಿತ ಮತ್ತು ಅನುಷ್ಠಾನದ ಹೊಣೆಗಾರಿಕೆ ಹೊಂದಿರುತ್ತಾರೆ. (ಪರಿಚ್ಛೇದ 37/4).

c. Shall supervise the academic activities of constituents colleges

d. Shall be responsible for Human Resource Development in the University and teacher's training programmes

e. Shall be the Chairman of Board of Studies of UG and PG programmes and shall maintain the records of the Board of Studies

f. Shall be the Member-Secretary of Academic Council and custodian of the proceedings of the Academic Council

g. Shall be responsible for strengthening of collaboration between UAS-B and other State, National and International organizations

h. Shall co-ordinate Teaching, Research and Extension Education Programmes of the University

i. Shall assist the Vice-Chancellor in over all administration of the University and assume such other duties and powers as the Vice-Chancellor may assign

j. Shall perform duties of the Vice-Chancellor in his temporary absence, except as otherwise provided by the Board and / or the Vice-Chancellor

ii. Registrar; As per the Act

a. Shall be the Member Secretary of the Board of Management and shall be a permanent Member of all councils.

b. Shall be responsible for due custody of records and common seal of the University.

c. Shall receive applications for entrance to the University and shall keep a permanent record of all the courses, curricula and other information as may be necessary

d. Shall be responsible for Human Resource Development and general administration in the University as prescribed [Sec. 31 (7) b-e]

iii. Deans; As per the Act

Shall be the Head of the college and responsible for administering and implementation of teaching, research and extension activities in the college. (Sec. 37 / 4).

iv. ಸ್ನಾತಕೋತ್ತರ ಅಧ್ಯಯನದ ಡೀನ್‌ರವರು; ಅಧಿನಿಯಮದನ್ವಯ

ಡಿಪ್ಲೊಮಾಗಳನ್ನೊಳಗೊಂಡಂತೆ ಸ್ನಾತಕೋತ್ತರ ಅಧ್ಯಯನಗಳ ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳ ಆಡಳಿತ ಮತ್ತು ಅನುಷ್ಠಾನದ ಹೊಣೆಗಾರಿಕೆ ಹೊಂದಿರುತ್ತಾರೆ (ಪರಿಚ್ಛೇದ 37/5).

v. ವಿದ್ಯಾರ್ಥಿ ಕಲ್ಯಾಣ ಡೀನ್‌ರವರು; ಅಧಿನಿಯಮದನ್ವಯ

ಅ. ವಿದ್ಯಾರ್ಥಿಗಳ ಸಲಹಾ ಸೇವೆಯ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ನಿರ್ದೇಶಿಸುವುದು ಹಾಗೂ ಸಂಭಾವ್ಯ ಉದ್ಯೋಗದಾತರ ಮತ್ತು ಉದ್ಯೋಗ ನೇಮಕಾತಿ ಏಜೆನ್ಸಿಗಳ ಸಹಕಾರವನ್ನು ಪಡೆದು ವಿಶ್ವವಿದ್ಯಾನಿಲಯದ ಪದವೀಧರರ ನೇಮಕಾತಿಗೆ ಸಹಾಯ ಮಾಡುವುದು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಪಾಡುವುದು ಇವರ ಹೊಣೆಗಾರಿಕೆಯಾಗಿರುತ್ತದೆ.

ಆ. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಕ್ರೀಡೆ, ಸಾಂಸ್ಕೃತಿಕ ಮತ್ತು ಇತರ ಮನರಂಜನಾ ಚಟುವಟಿಕೆಗಳಂತಹ ಪಠ್ಯೇತರ ಚಟುವಟಿಕೆಗಳನ್ನು, ಎನ್.ಎಸ್.ಎಸ್., ರಾಷ್ಟ್ರೀಯ ಸೇವಾ ಯೋಜನೆ ಮತ್ತು ಸಂವಹನ ಕೌಶಲ್ಯ ಸುಧಾರಣೆ ಹಾಗೂ ಇತರ ಸಂಬಂಧಿತ ಚಟುವಟಿಕೆಗಳನ್ನು ಯೋಜಿಸುವುದು ಮತ್ತು ಆಯೋಜಿಸುವುದು.

ಇ. ವಿದ್ಯಾರ್ಥಿನಿಲಯ, ಉಪಾಹಾರ ಗೃಹ ಹಾಗೂ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೇಲುಸ್ತುವಾರಿ ಮತ್ತು ನಿರ್ವಹಣೆಯಲ್ಲಿ ಡೀನ್‌ರವರಿಗೆ ಸಹಾಯ ಮಾಡುವುದು.

ಈ. ವಿಶ್ವವಿದ್ಯಾನಿಲಯದಲ್ಲಿ ವೈದ್ಯಕೀಯ ಮತ್ತು ಆರೋಗ್ಯ ಸೇವೆಗಳು ಹಾಗೂ ವಿದ್ಯಾರ್ಥಿಗಳ ಇತರ ಕ್ಷೇಮಾಭಿವೃದ್ಧಿ ಕಾರ್ಯಗಳ ಮೇಲುಸ್ತುವಾರಿ ಮತ್ತು ನಿಯಂತ್ರಣಾ ಕಾರ್ಯಕೈಗೊಳ್ಳುವುದು [ಪರಿಚ್ಛೇದ 37(6) ಎ–ಡಿ].

vi. ಪ್ರಾಂಶುಪಾಲರು– ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ

ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಕುರಿತಂತೆ ಅದರ ಶೈಕ್ಷಣಿಕ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆ.

vii. ಪರೀಕ್ಷಾ ನಿಯಂತ್ರಕರು

ಶಿಕ್ಷಣ ನಿರ್ದೇಶಕರ ಮೇಲುಸ್ತುವಾರಿಯಡಿಯಲ್ಲಿ ಹಾಗೂ ಆಯಾ ಮಹಾವಿದ್ಯಾಲಯಗಳ ಡೀನ್‌ರವರ ಸಂಯೋಜನೆಯೊಂದಿಗೆ ಪರೀಕ್ಷೆಗಳನ್ನು, ಮೌಲ್ಯಮಾಪನವನ್ನು ನಡೆಸುವುದು ಮತ್ತು ಫಲಿತಾಂಶಗಳನ್ನು ಘೋಷಿಸುವ ಹೊಣೆಗಾರಿಕೆ.

viii. ವಿಶ್ವವಿದ್ಯಾನಿಲಯದ ಗ್ರಂಥಪಾಲಕರು; ಅಧಿನಿಯಮದನ್ವಯ

ವಿಶ್ವವಿದ್ಯಾನಿಲಯ ಗ್ರಂಥಾಲಯ ಮಾಹಿತಿ ವ್ಯವಸ್ಥೆಯ ನಿರ್ವಹಣೆ ಮತ್ತು ಶಿಕ್ಷಣ ನಿರ್ದೇಶಕರ ಮೇಲುಸ್ತುವಾರಿಯಡಿಯಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಸಂಬಂಧಿತ ಮಹಾ ವಿದ್ಯಾಲಯಗಳ ಗ್ರಂಥಾಲಯ ಚಟುವಟಿಕೆಗಳನ್ನು ಸಂಯೋಜಿಸಿ ಮಾರ್ಗದರ್ಶನ ನೀಡುವ ಹೊಣೆಗಾರಿಕೆ.

ix. ಸಂವಹನ ಕೇಂದ್ರ

ಜರ್ನಲ್‌ಗಳು, ಸಂಶೋಧನಾ ವರದಿ, ಬುಲೆಟಿನ್, ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಗಳು, ಕ್ಯಾಲೆಂಡರ್‌ಗಳು ಮುಂತಾದವುಗಳ ಪ್ರಕಟಣೆಯ ಹೊಣೆಗಾರಿಕೆ.

iv. Dean of Post Graduate Studies; As per the Act

Shall be responsible for administering and implementation of Post Graduate Studies and other education programmes including diplomas (Sec. 37 / 5).

v. Dean of Student Welfare; As per the Act

a. Shall plan & direct the programme of the students' advisement and counselling and enlist the cooperation of prospective employers and employment agencies to assist in the placement of graduates of the University and to promote discipline amongst the students of the University

b. Shall plan and organize students' extra-curricular activities such as sports, cultural & other recreational activities, NCC, NSS, communication skill improvement and other allied activities at the University level

c. Shall assist the Deans in supervision and management of students' Hostel, Cafeteria and conduct of sports and cultural events

d. Shall supervise and control medical & health services and other welfare measures of students' in the university [Sec. 37(6) a-d]

vi. Principal – Two Years Diploma in Agriculture

Responsible for implementation of Academic Programme in respect of two years diploma in Agriculture

vii. Controller of Examinations

Responsible for conducting of Examinations, evaluation and declaration of results in coordination with the Deans of respective colleges under the supervision of Director of Education.

viii. University Librarian; As per the Act

Shall be responsible for the maintenance and management of the University Library information system and to guide and coordinate library activities of all constituent units of the university under the supervision of Director of Education.

ix. Communication Centre

Responsible for publishing Journals, Books, Research Report, Bulletin and other needed text deemed fit for publication in the university both in Kannada & English.

x. ಕನ್ನಡ ಅಧ್ಯಯನ ವಿಭಾಗ

ಕೃಷಿ ಮತ್ತಿತರೆ ಸಂಬಂಧಿತ ವಿಷಯಗಳ ಬಗ್ಗೆ ರೈತರಿಗೆ, ಕೃಷಿ ವಿದ್ಯಾರ್ಥಿಗಳಿಗೆ, ಕೃಷಿ ವಿಜ್ಞಾನಿಗಳಿಗೆ ಹಾಗೂ ಇನ್ನಿತರರಿಗೆ ಉಪಯುಕ್ತವಾಗಲೆಂದು ಕನ್ನಡದಲ್ಲಿ ಪಠ್ಯಪುಸ್ತಕ ರಚನೆ ಹಾಗೂ ಪಾರಿಭಾಷಿಕ ಪದಕೋಶಗಳ ರಚನೆ ಇತ್ಯಾದಿ ಕೆಲಸ ಕಾರ್ಯಗಳ ಹೊಣೆಗಾಗಿಕೆ.

2.3 ಕೈಗೊಂಡ ಕಾರ್ಯಕ್ರಮ ಮತ್ತು ಚಟುವಟಿಕೆಗಳು

2.3.1 ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ

ವಿಶ್ವವಿದ್ಯಾನಿಲಯವು ಕರ್ನಾಟಕ ಸರ್ಕಾರದ/ಭಾರತೀಯ ಕೃಷಿ ಅನುಸಂಧಾನ ಪರಿಷತ್/ನಿಯಮಗಳು/ರೋಸ್ಟರ್ ಅನುಸರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಸ್ನಾತಕ ಪದವಿಗಳಿಗೆ ಪ್ರವೇಶಾತಿಯನ್ನು ನೀಡುತ್ತದೆ. ವಿಶ್ವವಿದ್ಯಾನಿಲಯವು ಶೇ. 40ರಷ್ಟು ಸ್ಥಾನವನ್ನು ಕೃಷಿಕರ ಮಕ್ಕಳಿಗೆ ಮೀಸಲಿಟ್ಟಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ ನಿರ್ದೇಶನದಂತೆ ಶೇ. 15ರಷ್ಟು ಸ್ಥಾನಗಳನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್–ಎನ್.ಟಿ.ಎಸ್. ಅಭ್ಯರ್ಥಿಗಳಿಗೆ ಮೀಸಲಿಟ್ಟಿದೆ. ವಿಶ್ವವಿದ್ಯಾನಿಲಯವು ವಿದೇಶಿ ವಿದ್ಯಾರ್ಥಿಗಳಿಗೆ ಹಾಗೂ ಹೊರದೇಶದ ಭಾರತೀಯರಿಗೆ ಶೇ. 15ರಷ್ಟು ಪ್ರವೇಶವನ್ನು ನೀಡುತ್ತದೆ. ಸೂಚಿಸಿರುವ ಅರ್ಹತೆಯು ಭೌತಶಾಸ್ತ್ರ, ರಾಸಾಯನಶಾಸ್ತ್ರ, ಗಣಿತ, ಜೀವಶಾಸ್ತ್ರ ವಿಷಯಗಳೊಂದಿಗೆ 10+2 ಆಗಿರಬೇಕು.

2.3.2 ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ

ಸ್ನಾತಕೋತ್ತರ ಪ್ರವೇಶಗಳನ್ನು ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳೊಂದಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ಮತ್ತು ಸಲಹಾ ಸೇವೆಯ ಮೂಲಕ ಮಾಡಲಾಗುತ್ತದೆ. ವಿಶ್ವವಿದ್ಯಾನಿಲಯದ ಅನುಮೋದಿತ ಸ್ಥಾನ ಮ್ಯಾಟ್ರಿಕ್ ಕರ್ನಾಟಕ ಸರ್ಕಾರದ ಮತ್ತು ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮಾರ್ಗಸೂಚಿಗಳಾಧಾರಿತವಿದ್ದು ಪ್ರವೇಶ ಪ್ರಕ್ರಿಯೆಯಲ್ಲಿ ಅದನ್ನು ಅನುಸರಿಸಲಾಗುತ್ತದೆ. ವಿಶ್ವವಿದ್ಯಾನಿಲಯವು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಹಂಚಿಕೆ ಮಾಡುವ ಒಟ್ಟು ಪ್ರವೇಶದ ಶೇ. 25ರಷ್ಟನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ – ಜೆ.ಆರ್.ಎಫ್./ಎನ್ಟಿ.ಎಸ್./ಎಸ್.ಆರ್.ಎಫ್., ಹೊಂದಿರುವ ವಿದ್ಯಾರ್ಥಿಗಳಿಗೆ ನೀಡುತ್ತದೆ. ಇದರ ಜೊತೆಗೆ ವಿಶ್ವವಿದ್ಯಾನಿಲಯದ ಒಟ್ಟು ಪ್ರವೇಶಾತಿಯಲ್ಲಿ ಶೇ. 15ರಷ್ಟು ಪ್ರವೇಶವನ್ನು ಭಾರತ ಸರ್ಕಾರದ ಡಿ.ಎ.ಆರ್.ಇ./ಐ.ಸಿ.ಎ.ಆರ್. ಮೂಲಕ ಹಾಗೂ ದ್ವಿಪಕ್ಷೀಯ ಒಪ್ಪಂದದ ದಸ್ತಾವೇಜಿನ ಮೂಲಕ ವಿದೇಶದ ವಿಶ್ವವಿದ್ಯಾನಿಲಯಗಳು ಪ್ರಾಯೋಜಿಸುವ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ಸ್ನಾತಕೋತ್ತರ ಪದವಿಗೆ ಸೂಚಿತ ಅರ್ಹತೆಯು ಆಯಾ ವಿಷಯಗಳಲ್ಲಿನ ಸ್ನಾತಕ ಪದವಿ ಮತ್ತು ಡಾಕ್ಟೊರಲ್ ಪದವಿಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯಾಗಿರುತ್ತದೆ.

2.3.3 ಡಿಪ್ಲೊಮಾ ಕಾರ್ಯಕ್ರಮಗಳಿಗೆ ಪ್ರವೇಶಾತಿ

ಎರಡು ವರ್ಷಗಳ ಕೃಷಿಯಲ್ಲಿ ಡಿಪ್ಲೊಮಾ ಪ್ರವೇಶವನ್ನು ಸೂಚಿತ ಶೈಕ್ಷಣಿಕ ಅರ್ಹತೆಯ ಆಧಾರದ ಮೇಲೆ ಅಂದರೆ 10ನೇ ತರಗತಿಯ ಆಧಾರದ ಮೇಲೆ ರೋಸ್ಟರ್ ಆಧಾರಿತ ವಿಶ್ವವಿದ್ಯಾನಿಲಯ

x. Department of Kannada Studies

Responsible for publishing text books & dictionary related to Agriculture and other related subjects for the use of farmers, agril. students, scientists and others.

2.3 Functions and activities performed

2.3.1 Admission to Bachelor Degree programmes

The University admits students to Bachelor degree programmes through KEA-CET by following Government of Karnataka / ICAR guidelines/ norms / roaster. The University has reserved 40 per cent of seats in favour of children of Agriculturists. As per the ICAR direction 15 per cent of the seats are reserved for ICAR- NTS candidates. The University also admits foreign students and NRI students to the extent of 15 per cent of intake. The prescribed qualification is 10+2 with PCMB combinations.

2.3.2 Admission to Masters and Doctoral Degree programmes

Postgraduate admissions are made through Common Entrance Test among the Farm Universities in the state through counseling. The University approved seat matrix indicating roasters based on the Government of Karnataka and ICAR, New Delhi guidelines are adopted in admission. The University also admits candidates with ICAR-JRF / NTS /SRF allotted by ICAR to the extent of 25 per cent of the intake. In addition, foreign students are admitted to the extent of 15 per cent of intake to the university through DARE / ICAR, Govt. of India and through bilateral MOU between the foreign universities sponsored candidates. The prescribed qualification for Master degree program is Bachelor Degree in the concerned subject/s and for Doctoral degree programme is Master degree in the concerned subject/s.

2.3.3 Admission to Diploma programmes

Admissions to two year Diploma in Agriculture is made based on the merit of the prescribed qualification *i.e.* 10th Standard by following University approved seat

ಅನುಮೋದಿತ ಸ್ಥಾನ ಮ್ಯಾಟ್ರಿಕ್ ಮತ್ತು ಕರ್ನಾಟಕ ಸರ್ಕಾರದ ಮಾರ್ಗಸೂಚಿಗಳನ್ವಯ ಮಾಡಲಾಗುತ್ತದೆ. ಈ ಅಭ್ಯರ್ಥಿಗಳು ಅವರು ಅಧ್ಯಯನದ ಸಮಯದಲ್ಲಿ ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯು ನೀಡುವ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುತ್ತಾರೆ.

2.3.4 ಪ್ರವೇಶ ಸಮಿತಿ

ವಿಶ್ವವಿದ್ಯಾನಿಲಯದ ಸ್ನಾತಕ ಪದವಿ, ಸ್ನಾತಕೋತ್ತರ ಪದವಿ ಮತ್ತು ಕೃಷಿಯಲ್ಲಿ ಡಿಪ್ಲೊಮಾಗಳಿಗೆ ಶಿಕ್ಷಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಡೀನ್‌ರವರ, ವಿದ್ಯಾರ್ಥಿ ಕಲ್ಯಾಣ ನಿರ್ದೇಶಕರ, ಸ್ನಾತಕೋತ್ತರ ಡೀನ್‌ರವರ, ಪರೀಕ್ಷಾ ನಿಯಂತ್ರಕರ ಹಾಗೂ ಕೃಷಿ ಡಿಪ್ಲೊಮಾ ಪ್ರಾಂಶುಪಾಲರನ್ನು ಸದಸ್ಯರಂತೆ ಹಾಗೂ ಕುಲಸಚಿವರನ್ನು ಸದಸ್ಯ–ಸಮಾವೇಶಕರನ್ನಾಗಿ ಒಳಗೊಂಡ ಸ್ಥಾಯಿ ಸಮಿತಿಯೊಂದನ್ನು ಪ್ರವೇಶಾತಿಗಾಗಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ರಚಿಸುತ್ತದೆ. ಈ ಸಮಿತಿಯು ಸೂಚಿಸಿದ ಹಲವಾರು ಕಾರ್ಯಗಳನ್ನು ಕೈಗೊಂಡು ವಾರ್ಷಿಕ ಪ್ರವೇಶಾತಿಗಾಗಿ ಯೋಜಿಸುತ್ತದೆ. ವಿಶ್ವವಿದ್ಯಾನಿಲಯವು ಪ್ರವೇಶಕ್ಕಾಗಿ ಎಲ್ಲಾ ಪ್ರಮುಖ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಅಧಿಸೂಚನೆಯನ್ನು ಹೊರಡಿಸುತ್ತದೆ ಹಾಗೂ ವಿಶ್ವವಿದ್ಯಾನಿಲಯದ ವೆಬ್ ತಾಣವಾದ www.uasbangalore.edu.inನಲ್ಲಿಯೂ ಸಹ ಪ್ರಕಟಿಸುತ್ತದೆ. ಸಮಿತಿಯು ಸ್ನಾತಕ ಪದವಿ ಕಾರ್ಯಕ್ರಮಕ್ಕೆ, ದಾಖಲೆಗಳ ಪರಿಶೀಲನೆಗೆ, ಪ್ರಾಯೋಗಿಕ ಪರೀಕ್ಷೆ ನಡೆಸಲು ಮತ್ತು ಮೌಲ್ಯಮಾಪನಕ್ಕೆ ಹಾಗೂ ಅರ್ಹತಾ ಪಟ್ಟಿ ಸಿದ್ಧಪಡಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಲು ಕೈಗೊಳ್ಳಬೇಕಾದ ಚಟುವಟಿಕೆಗಳ ಕಾರ್ಯಯೋಜನೆಯೊಂದನ್ನು ಸಿದ್ಧಪಡಿಸುತ್ತದೆ.

ಅದೇ ರೀತಿ ಸಂಯೋಜನಾ ಸಮಿತಿಯ ತೀರ್ಮಾನಗಳಂತೆ ಸಮಿತಿಯು ಇತರ ಕೃಷಿ ವಿಶ್ವವಿದ್ಯಾನಿಲಯಗಳ ಜೊತೆ ಸಂಪರ್ಕದಲ್ಲಿದ್ದು ಸಾಮಾನ್ಯ ಪ್ರವೇಶ ಪರೀಕ್ಷೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಹಾಗೂ ಸಲಹಾ ಸೇವೆಗಳಲ್ಲಿ ಪಾಲ್ಗೊಳ್ಳುತ್ತದೆ. ಎರಡು ವರ್ಷದ ಕೃಷಿಯಲ್ಲಿ ಡಿಪ್ಲೊವಾಗಾಗಿ ಚಟುವಟಿಕೆಗಳ ಯೋಜನೆಯೊಂದನ್ನು ಸಿದ್ಧಪಡಿಸಿ, ಸ್ಥಳೀಯ ವಾರ್ತಾಪತ್ರಿಕೆಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲು ಅಧಿಸೂಚನೆ ಹೊರಡಿಸಲಾಗುವುದು. ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಲಾಗುವುದು ಮತ್ತು ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಿ ಅಭ್ಯರ್ಥಿಗಳಿಗೆ ರೋಸ್ಟರ್ ಮತ್ತು ಅರ್ಹತೆಯ ಆಧಾರದ ಮೇಲೆ ಪ್ರವೇಶ ನೀಡಲಾಗುವುದು.

2.3.5 ಪ್ರವೇಶ ಸಾಧ್ಯ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಮತ್ತು ಹಾಜರಾಗುತ್ತಿರುವ ವಿದ್ಯಾರ್ಥಿಗಳು

2.3.5.1 ಸ್ನಾತಕ ಪದವಿಗಳು

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 1046 ಇದ್ದು ಒಟ್ಟು 926 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅದರಲ್ಲಿ 473 ಬಾಲಕರು (ಶೇ. 51.07) ಹಾಗೂ 453 ಬಾಲಕಿ (ಶೇ. 48.92) ಯರಿದ್ದಾರೆ. ಎಲ್ಲಾ ವರ್ಷದ ಸ್ನಾತಕ ಪದವಿಗಳಲ್ಲಿ ಹಾಜರಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 3012 ಅದರಲ್ಲಿ 1632 ಬಾಲಕರು (ಶೇ. 54.18) ಹಾಗೂ 1380 ಬಾಲಕಿ (ಶೇ. 45.81) ಯರಿದ್ದಾರೆ (ಕೋಷ್ಟಕ 1). ವರ್ಗವಾರು ವಿವರಗಳನ್ನು ಅನುಬಂಧ 1.1, 1.2 ಮತ್ತು 1.3.ರಲ್ಲಿ ನೀಡಲಾಗಿದೆ.

matrix with roaster based on guidelines of Government of Karnataka. These candidates are eligible for scholarship provided by Dept. of Agriculture, Govt. of Karnataka, during their studies.

2.3.4 Admission Committee

The University constitutes Standing committee for admission to Bachelor degree programme, Postgraduate degree programmes, and Diploma in Agriculture under the Chairmanship of Director of Education, Deans, DSW, Dean PGS, Controller of Examinations, Principal, Diploma (Agri.) as members and Registrar as Member-Convener in the beginning of the Academic year. The Committee performs the various functions as prescribed and plan for the annual admissions. The University issues Notifications for admissions in leading Kannada and English daily news papers besides uploading to the University website www.uasbangalore.edu.in. The committee prepares the plan of activities for Bachelor degree programme, verification of documents, conduct of practical test, evaluation, preparation of merit list and submission to Karnataka Examination Authority.

Similarly, the committee coordinates with the other Farm Universities as per the Coordination committee decisions and participate in the conduct of Common Entrance Test, Evaluation of papers and Counselling process. In respect of Two year Diplomain Agriculture, plan of activities are prepared and notifications are issued by inviting applications in the local news papers. Received application are subjected to scrutiny and merit list would be prepared to admit candidates as per the roaster.

2.3.5 Admission intake, Admissions made and Students on roll

2.3.5.1 Bachelor Degrees

During the academic year, the intake strength for Bachelor's degree was 1046. However 926 students were admitted of which 473 were boys (51.07%) and 453 were girls (48.92%). The total number of students on Roll in UG degree programmes were 3012 of which 1632 were boys (54.18%) and 1380 were girls (45.81%) (Table 1). Category-wise details are provided in Annexures 1.1, 1.2 and 1.3.

ಕೋಷ್ಟಕ 1 : 2018–19ರ ಕಾಲೇಜುವಾರು ಸ್ನಾತಕ ಪದವಿಗಳ ಪ್ರವೇಶಾವಕಾಶ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗೂ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳು

Table 1 : College-wise intake of students admitted students and students on roll of Bachelor degree programmes during the year 2018-19

ಕ್ರ.ಸಂ./ Sl.No.	ಕಾಲೇಜುಗಳು ಮತ್ತು ಪದವಿ ಕಾರ್ಯಕ್ರಮಗಳು/ Colleges & Degree programmes	ವಿದ್ಯಾರ್ಥಿಗಳ ಪ್ರವೇಶಾವಕಾಶ/ Student intake	ಪ್ರವೇಶಾತಿ ಪಡೆದ/ Admissions made			ವ್ಯಾಸಂಗದಲ್ಲಿರುವ (4 ವರ್ಷಗಳು)/ Students on Roll (Four years)		
			ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total
1	**ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು**							
	College of Agriculture, GKVK, Bengaluru							
	ಬಿ.ಎಸ್ಸಿ.(ಕೃಷಿ)/B.Sc. (Agri.)	311	142	152	294	479	401	880
	ಬಿ.ಎಸ್ಸಿ.(ಕೃಷಿ ಮಾರುಕಟ್ಟೆ ಮತ್ತು ಸಹಕಾರ)/ B.Sc. (Agri. Marketing & Co-operation)	82	34	30	64	120	107	227
	ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) B.Tech. (Agril. Engineering)	86	47	27	74	158	88	246
2	**ಕೃಷಿ ಕಾಲೇಜು, ವಿ.ಸಿ.ಫಾರಂ, ಮಂಡ್ಯ**							
	College of Agriculture, VC Farm, Mandya							
	ಬಿ.ಎಸ್ಸಿ.(ಕೃಷಿ)/B.Sc. (Agri.)	113	60	51	111	228	151	379
3	**ಕೃಷಿ ಕಾಲೇಜು, ಕಾರೆಕೆರೆ, ಹಾಸನ**							
	College of Agriculture, Karekere, Hassan							
	ಬಿ.ಎಸ್ಸಿ.(ಕೃಷಿ)/B.Sc. (Agri.)	115	47	57	104	175	193	368
	ಬಿ.ಎಸ್ಸಿ.(ಕೃಷಿ ಜೈವಿಕ ತಂತ್ರಜ್ಞಾನ) B.Sc. (Agri. Biotech.)	82	30	29	59	112	106	218
	ಬಿ.ಟೆಕ್.ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ B.Tech. (Food Science & Technology)	82	33	30	63	110	124	234
4	**ರೇಷ್ಮೆ ಕೃಷಿ ಕಾಲೇಜು, ಕುರುಬೂರು, ಚಿಂತಾಮಣಿ**							
	College of Sericulture, Kurubur, Chintamani							
	ಬಿ.ಎಸ್ಸಿ.(ರೇಷ್ಮೆ ಕೃಷಿ)/B.Sc. (Seri.)	102	52	45	97	178	145	323
	ಬಿ.ಎಸ್ಸಿ.(ಕೃಷಿ)/B.Sc. (Agri.)	42	12	18	30	56	51	107
5	**College of Agriculture, Chamarajanagara**							
	ಬಿ.ಎಸ್ಸಿ.(ಕೃಷಿ)/B.Sc. (Hons.) Agriculture	31	16	14	30	16	14	30
		1046	**473**	**453**	**926**	**1632**	**1380**	**3012**

2.3.5.2 ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿಗಳು

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 342 ಇದ್ದು ಒಟ್ಟು 325 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ಹಾಗೂ ಅದರಲ್ಲಿ 169 ಬಾಲಕರು (ಶೇ. 52) ಹಾಗೂ 156 ಬಾಲಕಿ (ಶೇ. 48)ಯರಿದ್ದಾರೆ. ಸ್ನಾತಕೋತ್ತರ ಪದವಿಗಳಲ್ಲಿ ಹಾಜರಾಗುತ್ತಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 596 ಅದರಲ್ಲಿ 310 ಬಾಲಕರು (ಶೇ. 52.01) ಹಾಗೂ 286 ಬಾಲಕಿ (ಶೇ. 47.98)ಯರಿದ್ದಾರೆ (ಕೋಷ್ಟಕ 2). ವರ್ಗಾವಾರು ವಿವರಗಳನ್ನು ಅನುಬಂಧ 1.4ರಲ್ಲಿ ನೀಡಲಾಗಿದೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಡಾಕ್ಟೊರಲ್ ಪದವಿಗಳಿಗೆ ಪ್ರವೇಶ ಸಾಧ್ಯ ಸಂಖ್ಯೆಯು 128 ಇದ್ದು, ಒಟ್ಟು 117 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಅದರಲ್ಲಿ 58 ಬಾಲಕರು(ಶೇ. 49.57) ಹಾಗೂ 59

2.3.5.2 Masters and Doctoral Degrees

During the year, the intake for Master's degree was 342 and admitted was 325 of which 169 were boys (52%) and 156 were girls (48%). The total number of students on roll for Masters degree programme was 596 of which 310 were boys (52.01%) and 286 were girls (47.98%) (Table 2). Category-wise details are provided in the Annexure 1.4.

During the year, the intake for Doctoral degree was 128 and admitted 117 of which 58 were boys (49.57%) and 59 were girls (50.42%). The total number of

ಕೋಷ್ಟಕ 2 : 2018–19ರ ಕಾಲೇಜುವಾರು ಸ್ನಾತಕೋತ್ತರ (ಕೃಷಿ) ಹಾಗೂ ಡಾಕ್ಟೊರಲ್ ಪದವಿಗಳ ಪ್ರವೇಶಾವಕಾಶ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗೂ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳು

Table 2 : College-wise Masters and Doctoral degree programmes, intake, admitted students and students on roll during the year 2018-19

ಕ್ರ.ಸಂ./ Sl.No.	ಕಾಲೇಜುಗಳು ಮತ್ತು ಪದವಿ ಕಾರ್ಯಕ್ರಮಗಳು/ Colleges & Degree programmes	ಅವಧಿ/ Duration	ವಿದ್ಯಾರ್ಥಿಗಳ ಪ್ರವೇಶಾವಕಾಶ/ Student intake	ಪ್ರವೇಶಾತಿ ಪಡೆದ/ Admissions made			ವ್ಯಾಸಂಗದಲ್ಲಿರುವ (2/3 ವರ್ಷಗಳು)/ Students on Roll (2/3 years)		
				ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total
1.	**ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು CoA, GKVK, Bengaluru**								
	ಸ್ನಾತಕೋತ್ತರ ಪದವಿ Masters' degree	2 ವರ್ಷಗಳು/ years	12	153	149	302	282	265	547
2.	**ಕೃಷಿ ಕಾಲೇಜು, ವಿ.ಸಿ.ಫಾರಂ, ಮಂಡ್ಯ CoA, VC Farm, Mandya**								
	ಸ್ನಾತಕೋತ್ತರ ಪದವಿ Masters' degree	2 ವರ್ಷಗಳು/ years	30	16	7	23	28	21	49
	ಒಟ್ಟು/Total		**342**	**169**	**156**	**325**	**310**	**286**	**596**
3.	**ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು CoA, GKVK, Bengaluru**								
	ಡಾಕ್ಟೊರಲ್ ಪದವಿ Doctoral degree	3 ವರ್ಷಗಳು/ years	**128**	**58**	**59**	**117**	**157**	**156**	**313**

ಬಾಲಕಿ (ಶೇ. 50.42)ಯರಿದ್ದಾರೆ. ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 313 ಇದ್ದು ಅವರಲ್ಲಿ 157 ಬಾಲಕರು (ಶೇ. 50.15) ಮತ್ತು 156 ಬಾಲಕಿ (ಶೇ. 49.84)ಯರಿದ್ದಾರೆ (ಕೋಷ್ಟಕ 2).

2.3.5.3 ಕೃಷಿಯಲ್ಲಿ ಡಿಪ್ಲೊಮಾ

ಸ್ನಾತಕ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪದವಿ ಕಾರ್ಯಕ್ರಮಗಳ ಒಟ್ಟಾರೆ ಪ್ರವೇಶ ಸಾಧ್ಯತೆ 50 ಇದ್ದು ಪ್ರವೇಶಾತಿ ಪಡೆದವರ ಸಂಖ್ಯೆ 47 ಆಗಿದೆ. ಪ್ರಸ್ತುತ ವರ್ಷ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 99 ಆಗಿದ್ದು ಅದರಲ್ಲಿ 58 ಬಾಲಕರು ಹಾಗೂ 41 ಬಾಲಕಿಯರಿದ್ದಾರೆ. ಇದರ ವಿವರಗಳನ್ನು ಕೋಷ್ಟಕ 3ರಲ್ಲಿ ನೀಡಲಾಗಿದೆ ಮತ್ತು ವರ್ಗವಾರು ವಿವರಗಳನ್ನು ಅನುಬಂಧ 1.5, 1.6 ಮತ್ತು 1.7ರಲ್ಲಿ ನೀಡಲಾಗಿದೆ.

students on roll were 313 of which 157 were boys (50.15%) and 156 were girls (49.84%) (Table 2).

2.3.5.3 Diploma in Agriculture

During the academic year, the intake for two year diploma in Agriculture was 50 and admission made was 47 students of which 33 were boys (70.21%) and 14 were girls (29.78%). The total number of students on Roll for the programme was 99 of which 58 were boys (58.58%) and 41 were girls (41.41%) (Table 3). Category-wise details are provided in the Annexure 1.5, 1.6 and 1.7.

ಕೋಷ್ಟಕ 3 : 2018–19ರ ಎರಡು ವರ್ಷದ ಡಿಪ್ಲೊಮಾ ಕಾರ್ಯಕ್ರಮಕ್ಕೆ ಪ್ರವೇಶಾವಕಾಶ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗೂ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳು

Table 3 : Two year Diploma programme, intake, admitted students, and students on roll during the year 2018-19

ಕ್ರ.ಸಂ./ Sl.No.	ಕಾಲೇಜುಗಳು ಮತ್ತು ಪದವಿ ಕಾರ್ಯಕ್ರಮಗಳು/ Colleges & Degree programmes	ವಿದ್ಯಾರ್ಥಿಗಳ ಪ್ರವೇಶಾವಕಾಶ/ Student intake	ಪ್ರವೇಶಾತಿ ಪಡೆದ/ Admissions made			ವ್ಯಾಸಂಗದಲ್ಲಿರುವ (02 ವರ್ಷಗಳು)/ Students on Roll (02 years)		
			ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total
1.	ಕೃಷಿ ಕಾಲೇಜು, ವಿ.ಸಿ.ಫಾರಂ, ಮಂಡ್ಯ College of Agriculture, VC Farm, Mandya	50	33	14	47	58	41	99

ಸ್ನಾತಕ, ಸ್ನಾತಕೋತ್ತರ ಮತ್ತು ಡಿಪ್ಲೊಮಾ ಪದವಿ ಕಾರ್ಯಕ್ರಮಗಳ ಒಟ್ಟಾರೆ ಪ್ರವೇಶ ಸಾಧ್ಯತೆ 1566 ಇದ್ದು ಪ್ರವೇಶಾತಿ ಪಡೆದವರ ಸಂಖ್ಯೆ 1415 ಆಗಿದೆ. ಪ್ರಸ್ತುತ ವರ್ಷ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 4020 ಆಗಿದ್ದು ಅದರಲ್ಲಿ 2157 ಬಾಲಕರು ಹಾಗೂ 1863 ಬಾಲಕಿಯರಿದ್ದಾರೆ. ಇದರ ವಿವರಗಳನ್ನು ಕೋಷ್ಟಕ 4ರಲ್ಲಿ ನೀಡಲಾಗಿದೆ.

The overall admission intake for the Bachelor, Postgraduate degree programmes and diploma programme was at 1566 and admitted 1415 students. The number of students on roll during the year was 4020 of which 2157 were boys and 1863 were girls. The details are provided in the Table 4.

ಕೋಷ್ಟಕ 4 : 2018–19ರ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಒಟ್ಟು ಪ್ರವೇಶಾವಕಾಶ ಸಂಖ್ಯೆ, ಪ್ರವೇಶ ಪಡೆದ ವಿದ್ಯಾರ್ಥಿಗಳು ಹಾಗೂ ಹಾಜರಾತಿಯಲ್ಲಿರುವ ವಿದ್ಯಾರ್ಥಿಗಳು

Table 4 : Overall intake, admission and students on roll in the University during 2018-19

ಕ್ರ.ಸಂ./ Sl.No.	ಪದವಿಗಳು / Degree programmes	ವಿದ್ಯಾರ್ಥಿಗಳ ಪ್ರವೇಶಾವಕಾಶ/ Student intake	ಪ್ರವೇಶಾತಿ ಪಡೆದ/ Admissions made			ವ್ಯಾಸಂಗದಲ್ಲಿರುವ ವಿದ್ಯಾರ್ಥಿಗಳು/ Students on Roll		
			ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total
1	ಸ್ನಾತಕ ಪದವಿ/Bachelor degree	1046	473	453	926	1632	1380	3012
2	ಸ್ನಾತಕೋತ್ತರ ಪದವಿ/Master's degre	342	169	156	325	310	286	596
3	ಡಾಕ್ಟೊರಲ್ ಪದವಿ/Doctoral Degree	128	58	59	117	157	156	313
4	2 ವರ್ಷದ ಡಿಪ್ಲೊಮಾ/2 yeas Diploma	50	33	14	47	58	41	99
	ಒಟ್ಟು/Total	**1566**	**733**	**682**	**1415**	**2157**	**1863**	**4020**

2.3.5.4 ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟೊರಲ್ ಪದವಿಗಳಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳ ಸಂಖ್ಯೆ

ಪ್ರಸ್ತುತ ವರ್ಷ ಸ್ನಾತಕ ಪದವಿಯಲ್ಲಿ 661 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅವರಲ್ಲಿ 367 ಬಾಲಕರು ಹಾಗೂ 294 ಬಾಲಕೀಯರಿದ್ದಾರೆ. ಅದರಂತೆ ಸ್ನಾತಕೋತ್ತರ ಪದವಿಯಲ್ಲಿ 309 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಅವರಲ್ಲಿ 151 ಬಾಲಕರು ಹಾಗೂ 158 ಬಾಲಕೀಯರಿದ್ದಾರೆ ಮತ್ತು ಡಾಕ್ಟೊರಲ್ ಪದವಿಯಲ್ಲಿ ಒಟ್ಟು 72 ವಿದ್ಯಾರ್ಥಿಗಳು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು ಅದರಲ್ಲಿ 44 ಬಾಲಕರು ಹಾಗೂ 28 ಬಾಲಕಿಯರಿದ್ದಾರೆ (ಕೋಷ್ಟಕ 5) ವರ್ಗವಾರು ವಿವರಗಳನ್ನು ಅನುಬಂಧ 1.8 ಮತ್ತು 1.9ರಲ್ಲಿ ನೀಡಲಾಗಿದೆ.

2.3.5.4 Number of Students passed out in Bachelors', Masters' & Doctoral degree

During the year, in total 661 students passed out successfully in Bachelor degree of which 367 are boys and 294 are girls. Further, at Masters level 309 students passed out of which 151 are boys and 158 are girls, and at Doctoral level, 72 students passed out of which 44 are boys and 28 are girls (Table 5). Category details are provided in the Annexure 1.8 and 1.9.

2.3.6 ನೀಡಲಾಗುತ್ತಿರುವ ಕೋರ್ಸ್‌ಗಳು, ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ನಡೆಸಿದ ಪರೀಕ್ಷೆಗಳು

ಪ್ರಸ್ತುತ ವರ್ಷದಲ್ಲಿ ಸೂಚಿಸಿದ ಕೋರ್ಸ್‌ಗಳನ್ನು ಕ್ರೆಡಿಟ್‌ಗಳೊಂದಿಗೆ ಪ್ರತಿಯೊಂದು ಪದವಿ ಕಾರ್ಯಕ್ರಮಕ್ಕೂ ಆಯಾ ಮಹಾ ವಿದ್ಯಾಲಯಗಳಲ್ಲಿರುವ ಬೋಧಕ ಸಿಬ್ಬಂದಿಯವರ ಮೂಲಕ ನೀಡಲಾಯಿತು. ಆದರೂ, ಸಾಧ್ಯವಿರುವೆಡೆಯಲ್ಲೆಲ್ಲಾ ಸಂಶೋಧನಾ ನಿರ್ದೇಶನಾಲಯ ಮತ್ತು ವಿಸ್ತರಣಾ ವಿಜ್ಞಾನಿಗಳು ಕೋರ್ಸ್‌ಗಳನ್ನು ನೀಡುವಲ್ಲಿ ಮತ್ತು ಸ್ನಾತಕೋತ್ತರ ಮಾರ್ಗದರ್ಶನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಕಾಲೇಜುವಾರು ಬೋಧಕ ಸಿಬ್ಬಂದಿಯ ಸಂಖ್ಯೆ ಮತ್ತು ನೀಡಿದ ಕೋರ್ಸ್‌ಗಳ ವಿವರಗಳನ್ನು ಕೋಷ್ಟಕ 6ರಲ್ಲಿ ನೀಡಲಾಗಿದೆ.

2.3.6 Courses offered, faculty strength and examination conducted

During the year, prescribed courses with credits for each degree programmes were offered by the faculty in position in respective colleges. However, wherever possible, scientists of Directorate of Research and Directorate of Extension were also involved in offering courses for UG and PG studies and Postgraduate guidance. The details of faculty strength and course offered college wise is presented in the Table 6.

2.3.7 ವಿದ್ಯಾರ್ಥಿ 'ರೆಡಿ' (ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆ) ಕಾರ್ಯಕ್ರಮದ ಅಳವಡಿಕೆ ಮತ್ತು ಅನುಷ್ಠಾನ

ವಿಶ್ವವಿದ್ಯಾನಿಲಯವು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಡೀನ್‌ರವರ ಸಮಿತಿಯ ಶಿಫಾರಸ್ಸುಗಳನ್ನು ಅಳವಡಿಸಿಕೊಂಡಿದ್ದು ಅದರಂತೆ 2018–19ರ ಶೈಕ್ಷಣಿಕ ವರ್ಷದಿಂದ ಎಲ್ಲಾ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ವಿದ್ಯಾರ್ಥಿ READY (ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆ) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ.

2.3.7 Adoption and Implementation of Student READY (Rural Entrepreneurship Awareness Development Yojana)

The University has adopted the Indian Council of Agricultural Research (ICAR) "Deans committee" recommendations and accordingly adopted the Student READY programme for all bachelor degree programme from the Academic year 2018-19.

ಕೋಷ್ಟಕ 5 : 2018–19ರಲ್ಲಿ ಸ್ನಾತಕ, ಸ್ನಾತಕೋತ್ತರ, ಡಾಕ್ಟೊರಲ್ ಪದವಿಗಳಲ್ಲಿ ಮತ್ತು ಕೃಷಿಯಲ್ಲಿ ಡಿಪ್ಲೊಮಾ ಕೋರ್ಸ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ

Table 5 : Details of the Student Passed out with Bachelors', Mastres', Doctoral degrees and Diploma in Agriculture during 2018-19

ಕ್ರ.ಸಂ./ Sl.No.	ಕಾಲೇಜುಗಳು/ Colleges	ಸ್ನಾತಕ/ Bachelors'	ಉತ್ತೀರ್ಣರಾದ ವಿದ್ಯಾರ್ಥಿಗಳು/ Passed out Students			ಸ್ನಾತಕೋತ್ತರ/ Masters'	ಉತ್ತೀರ್ಣರಾದ ವಿದ್ಯಾರ್ಥಿಗಳು / Passed out Students			ಡಾಕ್ಟೊರಲ್/ Doctoral	ಉತ್ತೀರ್ಣರಾದ ವಿದ್ಯಾರ್ಥಿಗಳು/ Passed out Students		
			ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total		ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total		ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total
1	ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು Col. of Agriculture GKVK, Bengaluru	ಬಿ.ಎಸ್ಸಿ. (ಕೃಷಿ)/B.Sc. (Agri.)	100	75	175	ಎಂ.ಎಸ್ಸಿ. (ಕೃಷಿ) M.Sc. (Agri.)	117	120	237	ಪಿಹೆಚ್.ಡಿ. Ph.D.	44	28	72
		ಬಿ.ಎಸ್ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ) B.Sc.(Agri. Marketing & Co-operation)	33	26	59	ಎಂ.ಟೆಕ್. M.Tech.	6	7	13		-	-	-
		ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) B.Tech. (Agri. Engg.)	33	21	54	ಎಂ.ಬಿ.ಎ. M.B.A.	19	17	36		-	-	-
2	ಕೃಷಿ ಕಾಲೇಜು, ವಿ.ಸಿ.ಫಾರಂ, ಮಂಡ್ಯ Col. of Agriculture VC Farm, Mandya	ಬಿ.ಎಸ್ಸಿ. (ಕೃಷಿ)/B.Sc. (Agri.)	41	36	77	ಎಂ.ಎಸ್ಸಿ. (ಕೃಷಿ) M.Sc. (Agri.)	9	14	23		-	-	-
3	ಕೃಷಿ ಕಾಲೇಜು, ಕಾರೆಕೆರೆ, ಹಾಸನ Col. of Agriculture Karekere, Hassan	ಬಿ.ಎಸ್ಸಿ. (ಕೃಷಿ)/B.Sc. (Agri.)	42	41	83	**Total**	**151**	**158**	**309**		**44**	**28**	**72**
		ಬಿ.ಎಸ್ಸಿ. (ಕೃಷಿ ಜೈವಿಕ ತಂತ್ರಜ್ಞಾನ) B.Sc. (Agri. Biotech.)	29	22	51	-	-	-	-		-	-	-
		ಬಿ.ಟೆಕ್. (ಆಹಾರ ವಿಜ್ಞಾನ ಮತ್ತು ತಾಂತ್ರಿಕತೆ/B.Tech. (FS&T)	22	36	58	-	-	-	-		-	-	-
4	ರೇಷ್ಮೆ ಕೃಷಿ ಕಾಲೇಜು, ಕುರುಬೂರು, ಚಿಂತಾಮಣಿ Col. of Sericulture Kurubur, Chintamani	ಬಿ.ಎಸ್ಸಿ. (ರೇಷ್ಮೆ ಕೃಷಿ)//B.Sc.(Seri.)	21	12	33	-	-	-	-		-	-	-
		ಬಿ.ಎಸ್ಸಿ. (ಕೃಷಿ)/B.Sc. (Agri.)	46	25	71								
	ಒಟ್ಟು/Total		**367**	**294**	**661**	**-**	**151**	**158**	**309**		**44**	**28**	**72**
5	ಕೃಷಿ ಕಾಲೇಜು, ವಿ.ಸಿ.ಫಾರಂ, ಮಂಡ್ಯ Col. of Agriculture VC Farm, Mandya	2 ವರ್ಷದ ಡಿಪ್ಲೊಮಾ (ಕೃಷಿ) 2 year Dip. (Agri.)	33	14	47								

ಕೋಷ್ಟಕ 6 : 2018–19ರ ಶೈಕ್ಷಣಿಕ ವರ್ಷದಲ್ಲಿ ನೀಡಲಾಗಿರುವ ಕೋರ್ಸ್‌ಗಳು ಹಾಗೂ ಬೋಧಕ ಸಿಬ್ಬಂದಿಯ ಸಂಖ್ಯೆ

Table 6 : Courses Offered and faculty strength during the academic Year 2018-19

ಕ್ರ.ಸಂ./ Sl No	ಕಾಲೇಜುಗಳು/ Colleges	ಬೋಧಕ ಸಿಬ್ಬಂದಿ/Faculty in position				ಪದವಿ ಕಾರ್ಯಕ್ರಮಗಳು/ Degree Programmes	ನೀಡಲಾದ ಕೋರ್ಸ್‌ಗಳ ಸಂಖ್ಯೆ/ No. of courses offered	ಕ್ರೆಡಿಟ್ ಅವಧಿ/ Credit Hrs.	ಪರೀಕ್ಷೆಗಳ ಸಂಖ್ಯೆ/ No. of examiantion	ಮೌಲ್ಯಮಾಪನೆ ಮಾಡಿದ ಉತ್ತರ ಪತ್ರಿಕೆಗಳ ಸಂಖ್ಯೆ/ No. of papers evaluated
		ಪ್ರಾಧ್ಯಾಪಕರು/ Professor	ಸಹ ಪ್ರಾಧ್ಯಾಪಕರು/ Assoc. Professor	ಸಹಾಯಕ ಪ್ರಾಧ್ಯಾಪಕರು/ Asst. Professor	ಒಟ್ಟು/ Total					
1	ಕೃಷಿ ಕಾಲೇಜು ಜಿಕೆವಿಕೆ, ಬೆಂಗಳೂರು College of Agriculture GKVK, Bengaluru	11	147	82	240	ಬಿ.ಎಸ್ಸಿ.(ಕೃಷಿ)/B.Sc. (Agri.)	83	183	199	46124
						ಬಿ.ಎಸ್ಸಿ.(ಕೃಷಿ ಮಾರುಕಟ್ಟೆ ಮತ್ತು ಸಹಕಾರ) B.Sc.(Agri. Marketing & Co-operation)	78	183	192	12277
						ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) B.Tech. (Agri. Engg.)	73	179	179	11324
						ಸ್ನಾತಕೋತ್ತರ ಪದವಿ–15 ಕೋರ್ಸ್‌ಗಳು ಮತ್ತು 22 ವಿಷಯಗಳು (ಎಂ.ಎಸ್ಸಿ.(ಕೃಷಿ), ಎಂ.ಟೆಕ್, ಎಂ.ಬಿ.ಎ.(ಎ.ಬಿ.ಎಂ.) Master's Degree - 15 courses & 22 disciplines [(M.Sc. (Agri.), M.Tech., MBA (ABM)]	248	560	940	108358
						ಡಾಕ್ಟೊರಲ್ ಪದವಿ – 16 ಕೋರ್ಸ್‌ಗಳು ಮತ್ತು 15 ವಿಷಯಗಳು Doctoral Degree - 16 course & 15 disciplines	118	249	441	19071
2	ಕೃಷಿ ಕಾಲೇಜು ವಿ.ಸಿ.ಫಾರಂ, ಮಂಡ್ಯ College of Agriculture VC Farm, Mandya	6	3	22	31	ಬಿ.ಎಸ್ಸಿ.(ಕೃಷಿ)/B.Sc. (Agri.)	90	219	161	10324
						ಸ್ನಾತಕೋತ್ತರ ಪದವಿ–15 ಕೋರ್ಸ್‌ಗಳು ಮತ್ತು 5 ವಿಷಯಗಳು Master's Degree - 15 courses & 5 Disciplines	53	122	202	4535
						ಎರಡು ವರ್ಷದ ಕೃಷಿಯಲ್ಲಿ ಡಿಪ್ಲೊಮಾ Two year Diploma in Agriculture	35	69	66	2446
3	ಕೃಷಿ ಕಾಲೇಜು ಕಾರೆಕೆರೆ, ಹಾಸನ College of Agriculture Karekere, Hassan	5	7	27	39	ಬಿ.ಎಸ್ಸಿ.(ಕೃಷಿ)/B.Sc. (Agri.)	71	139	187	17436
						ಬಿ.ಎಸ್ಸಿ.(ಕೃಷಿ ಜೈವಿಕ ತಂತ್ರಜ್ಞಾನ) B.Sc. (Agri. Biotech.)	65	139	182	10070
						ಬಿ.ಟೆಕ್.(ಆಹಾರ ವಿಜ್ಞಾನ ಮತ್ತು ತಾಂತ್ರಿಕತೆ) B.Tech. (Food Sci. & Technology)	64	138	203	11647
4	ರೇಷ್ಮೆ ಕೃಷಿ ಕಾಲೇಜು ಕುರುಬೂರು, ಚಿಂತಾಮಣಿ College of Sericulture Kurubur, Chintamani	4	1	24	29	ಬಿ.ಎಸ್ಸಿ.(ರೇಷ್ಮೆ ಕೃಷಿ)/B.Sc. (Seri.)	72	165	56	1576
						ಬಿ.ಎಸ್ಸಿ.(ಕೃಷಿ)/B.Sc. (Agri.)	74	165	58	4744
5	ಕೃಷಿ ಕಾಲೇಜು ಚಾಮರಾಜನಗರ College of Agriculture Chamarajanagara	Only Special Officer is nominated Scientist of KVK and AICRP are deputed for college				ಬಿ.ಎಸ್ಸಿ.(ಕೃಷಿ)/B.Sc. (Agri.)	25	24	42	870
						I year only (Colleg started during 2018-19)				
	ಒಟ್ಟು/Total	**26**	**158**	**155**	**339**		**1149**	**2534**	**3333**	**260802**

ವಿದ್ಯಾರ್ಥಿ ಗ್ರಾಮೀಣ ಉದ್ಯಮಶೀಲತೆ ಅರಿವು ಅಭಿವೃದ್ಧಿ ಯೋಜನೆಯು ಭಾರತೀಯ ಕೃಷಿ ಅನುಸಂಧಾನ ಮಂಡಳಿಯ ಒಂದು ನಾವಿನ್ಯ ಚಿಂತನೆಯಾಗಿದ್ದು, ಅದರಲ್ಲಿ ಕೃಷಿ ಮತ್ತು ಸಂಬಂಧಿತ ವಿಷಯಗಳ ಪದವೀಧರರ ಉದ್ಯೋಗ ಖಾತ್ರಿಗೊಳಿಸುವಿಕೆ ಮತ್ತು ಉಗಮಗೊಳ್ಳುತ್ತಿರುವ ಸಾಂದ್ರಕೃಷಿಯ ಕುರಿತು ಉದ್ಯಮಶೀಲತೆಯನ್ನು ಅಭಿವೃದ್ಧಿಗೊಳಿಸಲಾಗುವುದು. ಈ ಕಾರ್ಯಕ್ರಮವು ಅನುಭವದ ಕಲಿಕೆ, ಗ್ರಾಮೀಣ ಅರಿವು ಕಾರ್ಯಾನುಭವ, ವಿವಿಧ ಘಟಕಗಳಲ್ಲಿ ತರಬೇತಿ/ಔದ್ಯಮಿಕ ಸೇರ್ಪಡಿಕೆ, ಪ್ರಾಯೋಗಿಕ ತರಬೇತಿ/ಕೌಶಲ್ಯ ಅಭಿವೃದ್ಧಿ ತರಬೇತಿ ಮತ್ತು ವಿದ್ಯಾರ್ಥಿಗಳಿಂದ ಪ್ರಾಯೋಜನೆ ತಯಾರಿಕೆಗಳಂತಹ ಐದು ಅಂಶಗಳನ್ನು ಒಳಗೊಂಡಿದೆ.

2.3.8 ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಅನುಷ್ಠಾನ

ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 1995–96ರಲ್ಲಿ ವಿವಿಧ ಪದವಿಗಳ ಎಲ್ಲಾ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ 7ನೇ ಸೆಮಿಸ್ಟರ್‌ನಲ್ಲಿ ಆರು ತಿಂಗಳ ಅವಧಿಗೆ (22 ವಾರಗಳ, ಒಂದು ಸೆಮಿಸ್ಟರ್) ಅನುಷ್ಠಾನಗೊಳಿಸಲಾಯಿತು.

ಗ್ರಾಮೀಣ ಜಾಗೃತಿ ಕಾರ್ಯಾನುಭವ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಪ್ರಾಥಮಿಕವಾಗಿ ಗ್ರಾಮೀಣ ಸಂದರ್ಭಗಳನ್ನು ರೈತರು ಅಳವಡಿಸಿಕೊಂಡಿರುವ ತಂತ್ರಜ್ಞಾನಗಳ ಸ್ಥಿತಿಗತಿಯನ್ನು, ರೈತರ ಸಮಸ್ಯೆಗಳನ್ನು ಆದ್ಯತೆಯನುಸಾರ ಅರಿಯಲು ಸಾಧ್ಯವಾಗುವಂತೆ ಮಾಡಲಾಗುವುದು ಹಾಗೂ ಈ ಕಾರ್ಯಕ್ರಮವು ಗ್ರಾಮೀಣಾಭಿವೃದ್ಧಿಯ ಒಟ್ಟಾರೆ ಅಭಿವೃದ್ಧಿಗಾಗಿ ಕೃಷಿ ಕುಟುಂಬಗಳೊಂದಿಗೆ ಕೆಲಸ ಮಾಡುವ ಕೌಶಲ್ಯತೆ ಹಾಗೂ ಮನೋಭಾವವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಹಾಯಕವಾಗುತ್ತದೆ.

6ನೇ ಸೆಮಿಸ್ಟರ್ ಅಂತ್ಯದ ವೇಳೆಗೆ ಸೂಚಿಸಿದ ಹಾಗೂ ನೀಡಿದ ಎಲ್ಲಾ ಕೋರ್ಸ್‌ಗಳನ್ನು ಸಂಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಗ್ರಾಮೀಣ ಕೃಷಿ ಕಾರ್ಯಾನುಭವದ 20 ಕ್ರೆಡಿಟ್‌ಗಳನ್ನು ಪದವಿಯ 7ನೇ ಸೆಮಿಸ್ಟರ್‌ನಲ್ಲಿ ನೋಂದಾಯಿಸಿಕೊಳ್ಳಲು ಅರ್ಹರಾಗಿರುತ್ತಾರೆ.

ಈ ಕಾರ್ಯಕ್ಕೆ ಆರ್ಥಿಕ ಸಹಾಯವನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ ಹಾಗೂ ರಾಜ್ಯ ಸರ್ಕಾರವು ಒದಗಿಸುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ತಿಂಗಳೊಂದಕ್ಕೆ ರೂ.3,000/–ದಂತೆ ಆರು ತಿಂಗಳ ಅವಧಿಗೆ ಶಿಷ್ಯವೇತನವನ್ನು ನೀಡಲಾಗುವುದು. ಪ್ರಾಯೋಗಿಕ ಕಾರ್ಯವಾಗಿ ಗ್ರಾಮ ವಾಸ್ತವ್ಯದ ಸಮಯದಲ್ಲಿ ವಿದ್ಯಾರ್ಥಿಗಳನ್ನು ಕರ್ನಾಟಕ ಸರ್ಕಾರದ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಲ್ಲಿ ಸ್ಥಾನೀಕರಣ ಮಾಡಲಾಗುವುದು. ಗ್ರಾಮೀಣ ಜಾಗೃತಿ ಕಾರ್ಯಾನುಭವದ ಪ್ರಾಯೋಗಿಕ ಪರಿಚಯ ಮತ್ತು ಅನುಭವ ಪ್ರತಿಯೊಬ್ಬ ವಿದ್ಯಾರ್ಥಿಯು ಉದ್ಯೋಗ ಭವಿಷ್ಯವನ್ನು ರೂಪುಗೊಳಿಸುವುದರ ಮೇಲೆ ಮಹತ್ತರ ಪರಿಣಾಮ ಬೀರುತ್ತದೆ.

ಕೃಷಿ ಕಾಲೇಜಿನ ಡೀನ್‌ರವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯೊಂದನ್ನು ರಚಿಸಲಾಗುವುದು ಹಾಗೂ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಸಂಯೋಜಕರು ಹಾಗೂ ಸಹ ಸಂಯೋಜಕರು ಆ ಸಮಿತಿಯ ಸದಸ್ಯರಾಗಿರುತ್ತಾರೆ. ಈ ಸಮಿತಿಯು ಗ್ರಾಮೀಣ ಜಾಗೃತಿ ಕಾರ್ಯಾನುಭವ ಕಾರ್ಯಕ್ರಮದ ಪ್ರಭಾರಿ ಅಧ್ಯಾಪಕರಿಗೆ ಹಾಗೂ

Student READY Programme is a new initiative of ICAR, New Delhi to reorient graduates of Agriculture and allied subjects for ensuring and assuring employability and develop entrepreneurs for emerging knowledge intensive agriculture. This programme includes five components i.e., Experiential learning, Rural Awareness Work Experience (RAWE), In-plant training /Industrial attachment, Hands on Training (HOT) / Skill development training and student's projects.

2.3.8 Implementation of RAWEP

The Rural Agricultural Work Experience Programme (RAWEP) was implemented in the University of Agricultural Sciences, Bangalore during the year 1995-96 to all the final year students of different degree programmes for a period of six months (one semester of 22 weeks) *i.e.,* 7th semester.

RAWE programme helps the students primarily to understand the rural situation, status of technologies adopted by farmers, prioritize the farmers' problems and to develop skills and attitude of working with farm families for overall development in rural area.

Students who have successfully completed all the prescribed and offered courses till the end of the 6th semester are eligible to register for 20 credits of RAWEP during 7th semester of the degree programme.

The financial assistance is provided by ICAR and the State Government for this programme. Each student is provided with a stipend at the rate of Rs. 3000/- per month for a period of six months'. Students are placed in Raitha Samparka Kendras (RSKs) of Department of Agriculture, Government of Karnataka during the village stay practical's. The practical exposure and experience of RAWEP will have far reaching impact in shaping the career of every student.

Advisory Committee headed by the Dean of the college and all the Heads of the Departments, RAWEP Co-ordinator and Assoc. Co-ordinators are members. The Committee provide guidance to the teachers in-charge of RAWEP and students for

ವಿದ್ಯಾರ್ಥಿಗಳಿಗೆ ಗ್ರಾಮೀಣ ಜಾಗೃತಿ ಕಾರ್ಯಾನುಭವ ಕಾರ್ಯಕ್ರಮದ ಪರಿಣಾಮದ ಅನುಷ್ಠಾನಕ್ಕಾಗಿ ಮಾರ್ಗದರ್ಶನ ನೀಡುತ್ತದೆ. ಮಹಾವಿದ್ಯಾಲಯದಲ್ಲಿ ನಿಯೋಜಿಸಿದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಎಲ್ಲಾ ಅಧ್ಯಾಪಕರು ತಮಗೆ ವಹಿಸಿರುವ ವಿದ್ಯಾರ್ಥಿಗಳ ಮೇಲುಸ್ತುವಾರಿ ಮತ್ತು ಮಾರ್ಗದರ್ಶನದ ಹೊಣೆಗಾರಿಕೆ ಹೊಂದಿರುತ್ತಾರೆ.

2018–19ರ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಮಹಾವಿದ್ಯಾಲಯಗಳು ಕೈಗೊಂಡ ಗ್ರಾಮೀಣ ಜಾಗೃತಿ ಕಾರ್ಯಾನುಭವದ ಕಾರ್ಯಕ್ರಮಗಳ ವಿವರಗಳು ಈ ಮುಂದಿನಂತಿವೆ:

ಅ) ಕೃಷಿ ಕಾಲೇಜು, ಜಿಕೆವಿಕೆ, ಬೆಂಗಳೂರು

ಜಿ.ಕೆ.ವಿ.ಕೆ.ಯ ಕೃಷಿ ಮಹಾವಿದ್ಯಾಲಯವು 04.06.2018 ರಿಂದ 09.11.2018 ರವರೆಗೆ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವನ್ನು ಹಾಗೂ ಪ್ರಾಯೋಗಿಕ ಗ್ರಾಮ ವಾಸ್ತವ್ಯವನ್ನು 02.07.2018 ರಿಂದ 29.09.2018 ರವರೆಗೆ ನಡೆಸಿಕೊಟ್ಟಿದೆ. ವಿದ್ಯಾರ್ಥಿಗಳನ್ನು ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳ ಕೋಲಾರ, ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಗೌರೀಬಿದನೂರು, ಗುಡಿಬಂಡೆ ತಾಲ್ಲೂಕುಗಳಲ್ಲಿ 15 ರೈತ ಸಂಪರ್ಕ ಕೇಂದ್ರಗಳಿಗೆ ವಹಿಸಿಕೊಡಲಾಗಿತ್ತು. ಈ ವಿವರಗಳನ್ನು ಮುಂದೆ ನೀಡಲಾಗಿದೆ:

effective implementation of RAWEP. The designated RAWEP teachers from all the departments of the college are responsible to monitor, supervise and guide the students to attend their designated.

Details of Rural Work Experience programmes conducted by different colleges of the university during 2018-19 is presented below :

a) College of Agriculture, GKVK, Bengaluru

The College of Agriculture, GKVK, Bengaluru conducted RAWE programme from 04.06.2018 to 09.11.2018 and village stay practical from 02.07.2018 to 29.09.2018. The students were attached to 15 Raitha Samparka Kendras of Kolar, Chikkaballapura, Shidlaghatta, Gowribidanur and Gudibande taluks. Particulars are given in the below table.

ಕೋಷ್ಟಕ 7 : ಕೃಷಿ ಮಹಾವಿದ್ಯಾಲಯ, ಜಿಕೆ.ವಿ.ಕೆ ಯಿಂದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿದ ರೈತ ಸಂಪರ್ಕ ಕೇಂದ್ರ ಹಾಗೂ ಹಳ್ಳಿಗಳ ವಿವರ

Table 7 : Details of RSKs and Villages Selected for RAWEP by CoA, GKVK

ಜಿಲ್ಲೆ/District	ತಾಲ್ಲೂಕು/Taluks	ರೈತ ಸಂಪರ್ಕ ಕೇಂದ್ರ/RSK / ಹೋಬಳಿ/Hobli	ಹಳ್ಳಿ/Village
ಚಿಕ್ಕಬಳ್ಳಾಪುರ Chikkaballapura	ಶಿಡ್ಲಘಟ್ಟ Sidlaghatta	ಶಿಡ್ಲಘಟ್ಟ (ಕಸಬಾ) Sidlaghatta (Kasaba)	ಶೆಟ್ಟಿಹಳ್ಳಿ ಮಲ್ಲಹಳ್ಳಿ Shettihalli Mallahalli
		ಜಂಗಮಕೋಟೆ Jangamakote	ಭಕ್ತರಹಳ್ಳಿ Bhaktharahalli
		ಬಾಶೆಟ್ಟಿಹಳ್ಳಿ Bashettahalli	ಧನಮಿಟ್ಟೆನಹಳ್ಳಿ ಮತ್ತು ಗೌಡಹಳ್ಳಿ Danamittenahalli & Gowdanahalli
	ಗೌರೀಬಿದನೂರು Gowribidanur	ಮಂಚೇನಹಳ್ಳಿ Manchenahalli	ಸಾದನಹಳ್ಳಿ Sadanahalli
		ಹೊಸೂರು Hosur	ಕಾಚಮಾಚೇನಹಳ್ಳಿ Kachamachenahalli
		ತೊಂಡೇಬಾವಿ Thondebavi	ವೀರಮ್ಮನಹಳ್ಳಿ Veerammanahalli
	ಗುಡಿಬಂಡೆ Gudibande	ಸೋಮೇನಹಳ್ಳಿ Somenahalli	ಸೋಮೇನಹಳ್ಳಿ Somenahalli
		ಗುಡಿಬಂಡೆ Gudibande	ಕೊಂಡವಲಹಳ್ಳಿ Kondavalahalli
	ಚಿಕ್ಕಬಳ್ಳಾಪುರ Chikkaballapura	ಮಂಡಿಕಲ್ Mandikal	ಬಂಡಿನರೇನಹಳ್ಳಿ Bodinarenahalli

ಜಿಲ್ಲೆ/District	ತಾಲ್ಲೂಕು/Taluks	ರೈತ ಸಂಪರ್ಕ ಕೇಂದ್ರ/RSK / ಹೋಬಳಿ/Hobli	ಹಳ್ಳಿ/Village
ಕೋಲಾರ Kolar	ಕೋಲಾರ Kolar	ಹೋಳೂರು Holooru	ವನರಾಶಿ Vanarasi
		ಹುಟ್ಟೂರು Huttooru	ವಿಟ್ಟಪ್ಪನಹಳ್ಳಿ Vitappanahalli
		ಸುಗಟೂರು Sugatoor	ಬೈಯಪ್ಪನಹಳ್ಳಿ Byyappanahalli
		ವಕ್ಕಲೇರಿ Vakkeleri	ಮೈಲಂಡನಹಳ್ಳಿ Mylandahalli
		ವೇಮಗಲ್ Vemagal	ರಾಜಕಲ್ಲಹಳ್ಳಿ Rajakallahalli
		ನರಸಾಪುರ Narasapura	ಕಾಜಿಕಲ್ಲನಹಳ್ಳಿ Kajikallahalli

ಕೋಷ್ಟಕ 8 : ಕೃಷಿ ಮಹಾವಿದ್ಯಾಲಯ, ಜಿ.ಕೆ.ವಿ.ಕೆ. RAWEP ವಿದ್ಯಾರ್ಥಿಗಳ ವಿವರ ಹಾಗೂ ಅನುಷ್ಠಾನಗೊಳಿಸಿದ ವಿಸ್ತರಣಾ ಚಟುವಟಿಕೆಗಳು
Table 8 : Details of students of CoA, GKVK who have undergone RAWEP and extension activities conducted

ಕ್ರಮ ಸಂಖ್ಯೆ/ Sl. No.	ಕೋರ್ಸ್/ Course	ನಿಯೋಜಿಸಿದ ವಿದ್ಯಾರ್ಥಿಗಳ ಸಂಖ್ಯೆ/ No. of Students			ಹಳ್ಳಿಗಳ ಸಂಖ್ಯೆ/ No. of Villages
		ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	
1	ಬಿ.ಎಸ್ಸಿ. (ಕೃಷಿ)/B.Sc. (Agri.)	94	72	166	15
2	ಬಿ.ಎಸ್ಸಿ (ಕೃಷಿ ಮಾರುಕಟ್ಟೆ ಮತ್ತು ಸಹಕಾರ)/ B.Sc. (Ag. Maco. & Co-op.)	28	26	54	15
3	ಬಿ.ಟೆಕ್. (ಕೃಷಿ ಇಂಜಿನಿಯರಿಂಗ್) B.Tech. (Agri. Engineering)	36	17	53	15

ಕೈಗೊಂಡ ವಿಸ್ತರಣಾ ಚಟುವಟಿಕೆಗಳು : ಮಣ್ಣಿನ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ : 900, ಪಶು ಆರೋಗ್ಯ ತಪಾಸಣಾ ಶಿಬಿರಗಳು : 15, ಮೌಲ್ಯವರ್ಧಿತ ಕಾರ್ಯಕ್ರಮಗಳು : 15, ಪದ್ಧತಿ ಪ್ರಾತ್ಯಕ್ಷಿಕೆಗಳು :150, ತರಬೇತಿ ಕಾರ್ಯಕ್ರಮಗಳು : 45, ತಪಾಸಣಾ ಭೇಟಿಗಳು : 250, ಸಾಮೂಹಿಕ ಸಸ್ಯ ನೆಡುವಿಕೆ : 15, ವಸ್ತುಪ್ರದರ್ಶನ: 15, ಕ್ಷೇತ್ರ ಭೇಟಿ : 30 ಮತ್ತು ಸ್ವಚ್ಛತಾ ಆಂದೋಲನಾ ಕಾರ್ಯಕ್ರಮ : 15.

No. of Extension Activities conducted : No. of soil samples collected & analysed : 900, Animal Health Camps : 15, Value addition programmes: 15, Method demonstrations: 150, Training programmes: 45, Diagnostic visits: 250, Mass tree planting: 15, Exhibitions: 15, Field visits: 30 and Swachhata Andolana Programme: 15.

ಅ) ಕೃಷಿ ಕಾಲೇಜು, ಮಂಡ್ಯ

ಮಂಡ್ಯಾದ ಕೃಷಿ ಮಹಾವಿದ್ಯಾಲಯವು 04.06.2018 ರಿಂದ 19.10.2018.ರವರೆಗೆ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವನ್ನು ಹಾಗೂ ಪ್ರಾಯೋಗಿಕ ಗ್ರಾಮ ವಾಸ್ತವ್ಯವನ್ನು 19.07.2018.ರಿಂದ 19.10.2018 ರವರೆಗೆ ಅಂತಿಮ ವರ್ಷದ ಬಿ.ಎಸ್ಸಿ. (ಕೃಷಿ) ವಿದ್ಯಾರ್ಥಿಗಳಿಗೆ ನಡೆಸಿಕೊಟ್ಟಿದೆ. ವಿದ್ಯಾರ್ಥಿಗಳನ್ನು 2 ತಾಲ್ಲೂಕಿನ 3 ರೈತ ಸಂಪರ್ಕ ಕೇಂದ್ರಗಳಿಗೆ ವಹಿಸಿಕೊಡಲಾಗಿತ್ತು. ಈ ವಿವರಗಳನ್ನು ಮುಂದೆ ನೀಡಲಾಗಿದೆ:

b) College of Agriculture, Mandya

The College of Agriculture, Mandya conducted RAWE programme from 04.07.2018 to 19.10.2018 and village stay practical from 19.07.2018 to 19.10.2018 to B.Sc. (Agri.) students. The students were attached to three Raitha Samparka Kendras of two taluks *viz.*, Mandya & Srirangapatna. Specifics are given below.

ಕೋಷ್ಟಕ 9 : ಕೃಷಿ ಮಹಾವಿದ್ಯಾಲಯ, ಮಂಡ್ಯ ದಿಂದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿದ ರೈತ ಸಂಪರ್ಕ ಕೇಂದ್ರ ಹಾಗೂ ಹಳ್ಳಿಗಳ ವಿವರ

Table 9 : Details of RSKs and Villages Selected for RAWEP by CoA, Mandya

#	ಹಳ್ಳಿ/Village	ರೈತ ಸಂಪರ್ಕ ಕೇಂದ್ರ/RSK
1	ಸಂತೆಕಸಲಗೆರೆ Santhekasalagere	ಕೊತತಿ ಆರ್.ಎಸ್.ಕೆ, ಮಂಡ್ಯ ತಾಲ್ಲೂಕು Kothathi, Mandya Taluk ,
2	ಉರಮಾರಕಸಲಗೆರೆ Uramarakasalagere	ಕೊತತಿ ಆರ್.ಎಸ್.ಕೆ, ಮಂಡ್ಯ ತಾಲ್ಲೂಕು Kothathi, Mandya Taluk
3	ಅಲಗೂಡು Alagudu	ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು Arakere RSK, Srirangapatna Taluk
4	ಜಕ್ಕನಹಳ್ಳಿ Jakkanahalli	ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು Arakere RSK, Srirangapatna Taluk
5	ಟ.ಎಂ. ಹೊಸೂರು T.M. Hosuru	ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು K. Shettyhally RSK, Srirangapatna Taluk

ಕೋಷ್ಟಕ 10 : ಕೃಷಿ ಮಹಾವಿದ್ಯಾಲಯ, ಮಂಡ್ಯ RAWEP ವಿದ್ಯಾರ್ಥಿಗಳ ವಿವರ ಹಾಗೂ ಅನುಷ್ಟಾನಗೊಳಿಸಿದ ವಿಸ್ತರಣಾ ಚಟುವಟಿಕೆಗಳು

Table 10 : Details of students of College of Agriculture, Mandya who have undergone RAWEP and extension activities conducted

ಕ್ರಮ ಸಂಖ್ಯೆ/ Sl. No.	ಕೋರ್ಸ್/ Course	ವಿದ್ಯಾರ್ಥಿಗಳ ಸಂಖ್ಯೆ/ No. of Students			ಹಳ್ಳಿಗಳ ಸಂಖ್ಯೆ/ No. of Villages
		ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	
1	ಬಿ.ಎಸ್ಸಿ. (ಕೃಷಿ)/B.Sc. (Agri.)	54	29	83	05

ಕೈಗೊಂಡ ವಿಸ್ತರಣಾ ಚಟುವಟಿಕೆಗಳು : ಮಣ್ಣಿನ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ : 500, ಪಶು ಆರೋಗ್ಯ ತಪಾಸಣಾ ಶಿಬಿರಗಳು : 05, ಮೌಲ್ಯವರ್ಧಿತ ಕಾರ್ಯಕ್ರಮಗಳು : 05, ಪದ್ಧತಿ ಪ್ರಾತ್ಯಕ್ಷಿಕೆಗಳು : 59, ತರಬೇತಿ ಕಾರ್ಯಕ್ರಮಗಳು : 71, ತಪಾಸಣಾ ಭೇಟಿಗಳು : 200, ಸಾಮೂಹಿಕ ಸಸ್ಯ ನೆಡುವಿಕೆ : 05, ವಸ್ತುಪ್ರದರ್ಶನ : 01, ಕ್ಷೇತ್ರ ಭೇಟಿ : 2488, ಸ್ವಚ್ಛತಾ ಆಂದೋಲನಾ ಕಾರ್ಯಕ್ರಮ : 05, ಆರೋಗ್ಯ ಶಿಬಿರ/ರಕ್ತದಾನ : 05, ಶೈಕ್ಷಣಿಕ ಪ್ರವಾಸ : 04, ಕ್ಷೇತ್ರೋತ್ಸವ : 05, ಆಕಾಶವಾಣಿ ಕಾರ್ಯಕ್ರಮ : 1 ಮತ್ತು ಹಾಲು ಉತ್ಪಾದನಾ ಶಿಬಿರಗಳು : 5.

No. of Extension Activities conducted : No. of soil samples collected & analysed :500, Animal Health Camps :05, Value addition programmes: 05, Method demonstrations: 59, Training programmes:71, Diagnostic visits: 200, Mass tree planting: 05, Exhibitions: 01, Field visits: 2488, Swachhata Andolana Programme: 05, Health Campaign / Blood donation: 05 , Exposure Visits: 04, Field days: 05, AIR:01, Dairy Campaigns: 05.

ಇ) ರೇಷ್ಮೆ ಕೃಷಿ ಕಾಲೇಜು, ಚಿಂತಾಮಣಿ

ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯವು 04.06.2018 ರಿಂದ 11.11.2018 ರವರೆಗೆ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವನ್ನು ಹಾಗೂ ಪ್ರಾಯೋಗಿಕ ಗ್ರಾಮ ವಾಸ್ತವ್ಯವನ್ನು 25.06.2018 ರಿಂದ 23.09.2018 ರವರೆಗೆ ನಡೆಸಿಕೊಟ್ಟಿದೆ. ವಿದ್ಯಾರ್ಥಿಗಳನ್ನು ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ರೈತ ಸಂಪರ್ಕ ಕೇಂದ್ರಗಳಿಗೆ ವಹಿಸಿಕೊಡಲಾಗಿತ್ತು. ಈ ವಿವರಗಳನ್ನು ಮುಂದೆ ನೀಡಲಾಗಿದೆ:

c) College of Sericulture, Chintamani

The College of Sericulture, Chintamani conducted RAWE programme from 04.06.2018 to 11.11.2018 and village stay practicles from 25.06.2018 to 23.09.2018. The students were attached to four Raitha Samparka Kendras of Chikkaballapua districts. Details are presented below.

ಕೋಷ್ಟಕ 11 : ರೇಷ್ಮೆ ಮಹಾವಿದ್ಯಾಲಯ, ಚಿಂತಾಮಣಿ ಯಿಂದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿದ ರೈತ ಸಂಪರ್ಕ ಕೇಂದ್ರ ಹಾಗೂ ಹಳ್ಳಿಗಳ ವಿವರ

Table 11 : Details of RSKs and Villages Selected for RAWEP by CoS, Chintamani

#	ಹಳ್ಳಿ/Village	ರೈತ ಸಂಪರ್ಕ ಕೇಂದ್ರ/RSK
1	ಮುದ್ದಲಹಳ್ಳಿ Muddalahalli	ಮುರುಗುಮಲ್ಲ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Murgamalla RSK, Chintamani Taluk
2	ರಾಚಪುರ Rachapura	ಚಿಂತಾಮಣಿ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Chintamani RSK, Chintamani Taluk
3	ಗುಡಿಮಾರನಹಳ್ಳಿ Gudimarnahalli	ಮುರುಗುಮಲ್ಲ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Murgamalla RSK, Chintamani Taluk
4	ನೆಲಮಾಚನನಹಳ್ಳಿ Nelamachanahalli	ಅಂಬಾಜಿದುರ್ಗ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Ambajidurga RSK, Chintamani Taluk
5	ಬೊಮ್ಮೆಕಲ್ಲು Bommekallu	ಅಂಬಾಜಿದುರ್ಗ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Ambajidurga RSK, Chintamani Taluk
6	ಅಕ್ಕಿಮಂಗಲ Akkimangala	ಕೈವಾರ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Kaivara RSK, Chintamani Taluk
7	ಜಂಗಮಸೀಗೆಹಳ್ಳಿ Jangamasigehalli	ಕೈವಾರ ಆರ್.ಎಸ್.ಕೆ, ಚಿಂತಾಮಣಿ ತಾಲ್ಲೂಕು Kaivara RSK, Chintamani Taluk
8	ಚನ್ನಕೇಶವಪುರ Channakeshavapura	ಚಿಂತಾಮಣಿ ಆರ್.ಎಸ್.ಕೆ Chintamani RSK

ಕೋಷ್ಟಕ 12 : ರೇಷ್ಮೆ ಮಹಾವಿದ್ಯಾಲಯ, ಚಿಂತಾಮಣಿ RAWEP ವಿದ್ಯಾರ್ಥಿಗಳ ವಿವರ ಹಾಗೂ ಅನುಷ್ಟಾನಗೊಳಿಸಿದ ವಿಸ್ತರಣಾ ಚಟುವಟಿಕೆಗಳು

Table 12 : Details of students of CoS, Chintamani who have undergone RAWEP and extension activities conducted

ಕ್ರಮ ಸಂಖ್ಯೆ/ Sl. No.	ಕೋರ್ಸ್/ Course	ವಿದ್ಯಾರ್ಥಿಗಳ ಸಂಖ್ಯೆ/No. of Students			ಹಳ್ಳಿಗಳ ಸಂಖ್ಯೆ/ No. of Villages
		ವಿದ್ಯಾರ್ಥಿಗಳು/ Boys	ವಿದ್ಯಾರ್ಥಿನಿಯರು/ Girls	ಒಟ್ಟು/ Total	
1	ಬಿ.ಎಸ್ಸಿ. (ಕೃಷಿ)/B.Sc. (Agri.)	45	29	74	08
2	ಬಿ.ಎಸ್ಸಿ. (ರೇಷ್ಮೆ ಕೃಷಿ)/B.Sc. (Seri)	14	08	22	

ಕೈಗೊಂಡ ವಿಸ್ತರಣಾ ಚಟುವಟಿಕೆಗಳು : ಮಣ್ಣಿನ ಮಾದರಿ ಸಂಗ್ರಹಣೆ ಮತ್ತು ವಿಶ್ಲೇಷಣೆ : 179, ಪಶು ಆರೋಗ್ಯ ತಪಾಸಣಾ ಶಿಬಿರಗಳು : 415, ಮೌಲ್ಯವರ್ಧಿತ ಕಾರ್ಯಕ್ರಮಗಳು : 05, ಪದ್ಧತಿ ಪ್ರಾತ್ಯಕ್ಷಿಕೆಗಳು : 74, ತರಬೇತಿ ಕಾರ್ಯಕ್ರಮಗಳು : 08, ತಪಾಸಣಾ ಭೇಟಿಗಳು : 05, ಸಾಮೂಹಿಕ ಸಸ್ಯ ನೆಡುವಿಕೆ : 1650, ವಸ್ತುಪ್ರದರ್ಶನ : 05, ಕ್ಷೇತ್ರ ಭೇಟಿ : 421, ಸ್ವಚ್ಛತಾ ಆಂದೋಲನಾ ಕಾರ್ಯಕ್ರಮ : 10, ಆರೋಗ್ಯ ಶಿಬಿರ/ರಕ್ತದಾನ : 01, ಸಾಮಾನ್ಯ ಸಭೆ : 8, ಪ್ರಾತ್ಯಕ್ಷಿಕ ಫಲಿತಾಂಶಗಳು : 30, ಮಣ್ಣು ಆರೋಗ್ಯ ಶಿಬಿರಗಳು : 08, ಬೀಜೋಪಚಾರ ಪ್ರಾತ್ಯಕ್ಷಿಕೆ : 08, ನೀರು ಮಾದರಿ ಪರೀಕ್ಷೆ : 15, ನೈಸರ್ಗಿಕ ತೈಲದ ಬಗ್ಗೆ ಜಾಗೃತಿ ಕಾರ್ಯಕ್ರಮಗಳು : 08, ರೇಷ್ಮೆ ತರಬೇತಿ ಕಾರ್ಯಕ್ರಮ : 06, ಗೊಬ್ಬರದ ಬಗ್ಗೆ ಜಾಗೃತಿ ಕಾರ್ಯಕ್ರಮಗಳು : 08, ಸಮಗ್ರ ರೋಗ ಮತ್ತು ಕೀಟ ನಿರ್ವಹಣೆ : 8, ಸಮಗ್ರ ಕೃಷಿ ಪದ್ಧತಿ : 8, ಸಾವಯವ ಕೃಷಿ ಕ್ಷೇತ್ರಕ್ಕೆ ಭೇಟಿ : 4, ವನಮಹೋತ್ಸವ : 8, ಸ್ಥಳೀಯ ತಂತ್ರಜ್ಞಾನಗಳು : 6 ಮತ್ತು ಆಹಾರ ಹಾಗೂ ಪೋಷಣೆ : 3.

No. of Extension Activities conducted : No. of soil samples collected & analysed : 179, Animal Health Camps : 415, Value addition programmes: 05, Method demonstrations: 74, Training programmes: 08 , Diagnostic visits: , 05, Mass tree planting: 1650, Exhibitions: 05, Field visits: 421, Swachhata Andolana Programme: 10, Health Campaign / Blood donation: 01, General Meetings: 08, Result Demonstrations: 30, Soil health campaign: 08, Seed treatment demo: 08, No. of Water samples tested: 15, Awareness programme on Bio-Fuel: 08, Sericulture Training Programme: 06, Awareness programme on Fertilizer adulteration: 08, Integrated pest and disease management: 08, Integrated farming system: 08 , Exposure visits organized to organic farming : 04, Vanamohastava under Hasiru Karnataka awareness programme: 08, Indigenous technological knowledge (ITKs): 06 and Food & nutrition programmes: 03.

ಈ) ಕೃಷಿ ಕಾಲೇಜು, ಕಾರೆಕೆರೆ, ಹಾಸನ

ಹಾಸನದ ಕೃಷಿ ಮಹಾವಿದ್ಯಾಲಯವು 23/06/2018 ರಿಂದ 10/11/2018 ರವರೆಗೆ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮವನ್ನು ಹಾಗೂ ಪ್ರಾಯೋಗಿಕ ಗ್ರಾಮ ವಾಸ್ತವ್ಯವನ್ನು 23/06/2018 ರಿಂದ 20/09/2018 ರವರೆಗೆ ನಡೆಸಿಕೊಟ್ಟಿದೆ. ವಿದ್ಯಾರ್ಥಿಗಳನ್ನು ಹಾಸನ ಜಿಲ್ಲೆಯ 06 ರೈತ ಸಂಪರ್ಕ ಕೇಂದ್ರಗಳಿಗೆ ಪಹಿಸಿಕೊಡಲಾಗಿತ್ತು. ಈ ವಿವರಗಳನ್ನು ಮುಂದೆ ನೀಡಲಾಗಿದೆ:

d) College of Agriculture, Karekere, Hassan

Agricultural College of Hassan conducted RAWE programme from 04/06/2018 to 10/11/2018 and village stay practices from 23/06/2018 to 20/09/2018. The students were attached to six Raitha Samparka Kendras of Hassan district. Details are presented below.

ಕೋಷ್ಟಕ 13 : ಕೃಷಿ ಮಹಾವಿದ್ಯಾಲಯ, ಹಾಸನ ದಿಂದ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿದ ರೈತ ಸಂಪರ್ಕ ಕೇಂದ್ರ ಹಾಗೂ ಹಳ್ಳಿಗಳ ವಿವರ

Table 13 : Details of RSKs and Villages Selected for RAWEP by CoA, Hassan

#	ಹಳ್ಳಿ/Village	ರೈತ ಸಂಪರ್ಕ ಕೇಂದ್ರ/RSK
1	ಹಾಲೇನಳ್ಳಿ Halenahalli	ಹಳೇಕೋಟೆ ಹಾಸನ ತಾಲ್ಲೂಕು Halekote, HassanTaluk
2	ಹುಳುವಾರೆ Huluvare	ಸಾಲಗಾಮೆ ತಾಲ್ಲೂಕು ಹಾಸನ ತಾಲ್ಲೂಕು Salagame, HassanTaluk
2	Chithra Y D	Agricultural Extension	1. UAS Gold Medal for General Merit 2. Dr. R. Dwarakinath Gold Medal 3. Smt. Hanumamma& Sri Dasegowda Gold Medal 4. Prof. K.M. Jayaramaiah Gold Medal 5. Dr. K.A. Jalihal Gold Medal (Certificate Only)
3	Vijaykumar Gangaraddi	Agricultural Microbiology	1. UAS Gold Medal for General Merit 2. Sri. K. Subbaiah Memorial Gold Medal
4	Honnappa H M	Agronomy	1. UAS Gold Medal for General Merit 2. Dr. H.R. Arakeri Gold Medal
5	Rameshraddy	Crop Physiology	UAS Gold Medal for General Merit
6	Megha M Katte	Food Science and Nutrition	UAS Gold Medal for General Merit
7	Anilkumar C	Genetics and Plant Breeding	1. UAS Gold Medal for General Merit 2. Dr. K Muraleedharan Nayar Memorial Gold Medal (Certificate Only) 3. Dr. G. Shivashankar Memorial Gold Medal (Certificate Only)
8	Ritasree Sarma	Plant Biotechnology	UAS Gold Medal for General Merit
9	Sahana N Banakar	Plant Pathology	UAS Gold Medal for General Merit
10	Shruthi K	Seed Science & Technology	UAS Gold Medal for General Merit
11	Vishaka G V	Sericulture	UAS Gold Medal for General Merit
12	Hamsa N	Soil Sci. & Agril. Chemistry	1. UAS Gold Medal for General Merit 2. Dr. A.M. Krishnappa Memorial Gold Medal
13	Raghavendra Reddy, M	Soil Sci. & Agril. Chemistry	1. UAS Gold Medal for General Merit 2. UAS Soil Test Crop Response (STCR) Gold Medal
14	Gurudevi V Navali	Plant Pathology	Late Dr. K. Ramakrishnan (Ex-Dean), UAS Memorial Gold Medal(Certificate Only)

ಕ್ರ.ಸಂ.	ವಿದ್ಯಾರ್ಥಿ ಹೆಸರು	ವಿಷಯ	ಚಿನ್ನದ ಪದಕ/ಪ್ರಶಸ್ತಿ ವಿವರಗಳು
II.	**ಎಂ.ಎಸ್ಸಿ.(ಕೃಷಿ) ಪದವಿ**		
1	ಶೋಭ ಕೆ ಎ	ಕೃಷಿ ಅರ್ಥಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ. ಎನ್.ಪಿ. ಪಾಟೀಲ್ ಚಿನ್ನದ ಪದಕ 3. ಶ್ರೀಮತಿ ನಂಜಮ್ಮ ಮತ್ತು ಶ್ರೀ ರೇವಣ್ಣ ಮೆಮೊರಿಯಲ್ ಚಿನ್ನದ ಪದಕ 4. ಪ್ರೊ. ಎಚ್.ಎಸ್. ಕೃಷ್ಣಸ್ವಾಮಿ ಮೆಮೊರಿಯಲ್ ಚಿನ್ನದ ಪದಕ 5. ಸಿಂಡಿಕೇಟ್ ಬ್ಯಾಂಕ್ ಮಣಿಪಾಲ್ ಚಿನ್ನದ ಪದಕ 6. ಡಾ. ಬಿಸಲಯ್ಯ ದತ್ತಿ ಚಿನ್ನದ ಪದಕ 7. ಶ್ರೀಶೈಲ ನಿಡುಮಾಮಿಡಿ ಮಟದ ಗೌರಮ್ಮ ಗಂಗಾಧರಯ್ಯ ಚಿನ್ನದ ಪದಕ
2	ನಿಧಿಶ್ ಟಿ ಡಿ	ಕೃಷಿ ಸೂಕ್ಷ್ಮಜೀವಿಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ. ಎಂ. ಪುಟ್ಟರುದ್ರಯ್ಯ ಎಂಡೋಮೆಂಟ್ ಚಿನ್ನದ ಪದಕ 3. ಡಾ. ವಿ.ಪಿ. ರಾವ್ ಮೆಮೋರಿಯಲ್ ಬಹುಮಾನ ಚಿನ್ನದ (ಪದಕ ಪ್ರಮಾಣ ಪತ್ರ)
3	ಡಿ ವಿ ಕುಸುಮಲತಾ	ಕೃಷಿ ವಿಸ್ತರಣೆ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಎಲ್. ಎಜಿಸ್. ಸಂಸ್ಥಾಪಕ ಕರ್ನಾಟಕ ಚಿನ್ನದ ಪದಕ 3. ಶ್ರೀಮತಿ. ಕೃಷ್ಣಮ್ಮ ಸಿದ್ದಪ್ಪ ಚಿನ್ನದ ಪದಕ ಮತ್ತು ಚಿನ್ನದ ಪದಕ (ಪದಕ ಪ್ರಮಾಣ ಪತ್ರ)
4	ಅರ್ಚನಾ ವೈ ಸಿ	ಕೃಷಿ ಮಾರಾಟ ಮತ್ತು ಸಹಕಾರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಎಂ. ವಿ. ರಾಜೇಶ್‌ಕೃಷ್ಣನ್ ಚಿನ್ನದ ಪದಕ
5	ನೀಕ್ಷಿತಾ ಶೆಟ್ಟಿ	ಕೃಷಿ ಸೂಕ್ಷ್ಮಜೀವಿಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ. ಬಿ.ಪಿ. ಪಾಟೀಲ್ಸ್ ಬಹುಮಾನ ಚಿನ್ನದ ಪದಕ (ಪದಕ ಪ್ರಮಾಣ ಪತ್ರ) 3. ಡಾ. ಜಿ. ರಂಗಸ್ವಾಮಿ ಚಿನ್ನದ ಪದಕ (ಪದಕ ಪ್ರಮಾಣ ಪತ್ರ)
6	ಪ್ರಮಿತ್ ಪಂಡಿತ್	ಕೃಷಿ ಸಂಖ್ಯಾಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಪ್ರೊ. ಈ ಗುರುಮೂರ್ತಿ ಸ್ಮಾರಕ ಚಿನ್ನದ ಪದಕ 3. ಶ್ರೀ ಗೊಡಬನಹಳ್ಳಿ ತುಪ್ಪಮ್ಮ ಬಸಪ್ಪ ಮಲ್ಲಿಕಾರ್ಜುನ ಚಿನ್ನದ ಪದಕ 4. ಶ್ರೀ ನಿಜಲಿಂಗಪ್ಪ 77ನೇ ಹುಟ್ಟು ಹಬ್ಬದ ಸ್ಮರಣಾರ್ಥ ಚಿನ್ನದ ಪದಕ ಪ್ರಮಾಣ ಪತ್ರ
7	ಕೊಮ್ಮಿರೆಡ್ಡಿ ಪೂಜಿತ	ಬೇಸಾಯ ಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ. ಕೆ. ಸೋಮಶೇಖರ ಚಿನ್ನದ ಪದಕ 3. ಶ್ರೀಮತಿ ಅನಿತಾ ಕುಮಾರಸ್ವಾಮಿ ಚಿನ್ನದ ಪದಕ 4. ಡಾ॥ ಕೆ . ಕೃಷ್ಣಮೂರ್ತಿ ಚಿನ್ನದ ಪದಕ (ಪದಕ ಪ್ರಮಾಣ ಪತ್ರ)
8	ವಿನಯ ರಾಮ ಹೆಗಡೆ	ಜೇನು ಕೃಷಿ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಬೆಂಗಳೂರು ಬಿಕೀಪರ್ಸ್ ಅಸೋಶಿಯೇಶನ್ (ಬಿಬಿಎ) ಚಿನ್ನದ ಪದಕ
9	ಸುಪ್ರಿಯಾ ಸಂಕ್ರಾಂತಿ ಡಿ ಎಸ್	ಬೆಳೆ ಶರೀರ ಕ್ರಿಯಾಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ॥ ಕೆ ಎಸ್ ಕೃಷ್ಣ ಶಾಸ್ತ್ರಿ ಸ್ಮಾರಕ ಚಿನ್ನದ ಪದಕ
10	ಫಸೀಹಾ	ಪರಿಸರ ವಿಜ್ಞಾನ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಭಾರತೀಯ ಸಮಾಜ ಪರಿಸರ ಅಧ್ಯಯನ ಚಿನ್ನದ ಪದಕ
11	ಐಶ್ವರ್ಯ ಬಹುಗುಣ	ಆಹಾರ ವಿಜ್ಞಾನ ಮತ್ತು ಪೌಷ್ಟಿಕತೆ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ॥ ಶ್ರೀಮತಿ ಲೀಲಾ ಫಡ್ನಿಸ್ ಸ್ಮಾರಕ ಚಿನ್ನದ ಪದಕ

Sl.No.	Name of the Student	Subject	Details of Medals / Awards
II.	**M.Sc. (Agri.) / M.Tech. (Agri. Engg.)**		
1	Shobha K A	Agricultural Economics	1. UAS Gold Medal for General Merit 2. Dr. N.P. Patil Gold Medal 3. Smt. Nanjamma And Sri. Revanna Memorial Gold Medal 4. Prof. H.S. Krishnaswamy Memorial Gold Medal 5. Syndicate Bank Manipal Gold Medal 6. Dr. Bisalaiah Endowment Gold Medal 7. Sreeshaila Nidumamidi Matada Gowramma Gangadharaiah Gold Medal
2	Nidheesh T D	Agricultural Entomology	1. UAS Gold Medal for General Merit 2. Dr. M. Puttarudraiah Endowment Gold Medal 3. Dr. V.P. Rao Memorial Prize Gold Medal (Certificate Only)
3	D V Kusumalatha	Agricultural Extension	1. UAS Gold Medal for General Merit 2. L.Ags Foundation, Karnataka Gold Medal 3. Smt. K. Krishnamma Siddappa Gold Medal (Certificate Only)
4	Archana Y C	Agricultural Marketing & Co-operation	1. UAS Gold Medal for General Merit 2. Mr. M.V. Rajashekharan Gold Medal
5	Neekshitha Shetty	Agricultural Microbiology	1. UAS Gold Medal for General Merit 2. Dr. B.P. Pal's Prize Gold Medal (Certificate only) 3. Dr. G. Rangaswamy Gold Medal (Certificate only)
6	Pramit Pandit	Agricultural Statistics	1. UAS Gold Medal for General Merit 2. Prof. G. Gurumurthy Memorial Gold Medal 3. Sri. Godabanahal Thuppamma Basappa Mallikarjuna Gold Medal 4. Sri Nijalingappa's 77th Birthday Commemoration Gold Medal (Certificate Only)
7	Kommireddy Poojitha	Agronomy	1. UAS Gold Medal for General Merit 2. Dr. K. Somasekhara Gold Medal 3. Smt. Anitha Kumaraswamy Gold Medal 4. Dr. K. Krishnamurthy Gold Medal (Certificate only)
8	Vinay Rama Hegde	Apiculture	1. UAS Gold Medal for General Merit 2. Bangalore Beekeepers Association (BBA) Gold Medal
9	Supriya Sankranthi D S	Crop Physiology	1. UAS Gold Medal for General Merit 2. Dr. K.S. Krishna Sastry Memorial Gold Medal
10	Fasiha	Environmental Science	1. UAS Gold Medal for General Merit 2. Indian Society for Environmental Studies Gold Medal
11	Aishwarya Bahuguna	Food Science & Nutrition	1. UAS Gold Medal for General Merit 2. Dr. (Mrs.) Leela Phadnis Memorial Gold Medal

ಕ್ರ.ಸಂ.	ವಿದ್ಯಾರ್ಥಿ ಹೆಸರು	ವಿಷಯ	ಚಿನ್ನದ ಪದಕ/ಪ್ರಶಸ್ತಿ ವಿವರಗಳು
12	ಭವಾನಿ ಬಿ	ಅನುವಂಶೀಯ ಮತ್ತು ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಶ್ರೀ. ಆರ್. ಎಂ. ರಾಧಾಕೃಷ್ಣ ಮೆಮೊರಿಯಲ್ ಚಿನ್ನದ ಪದಕ 3. ಲೇಟ್. ಶ್ರೀ. ಚಿಕ್ಕಮಾದಯ್ಯ ಮತ್ತು ಶ್ರೀಮತಿ. ಬಸಮ್ಮ, ಲಕ್ಷ್ಮೀಪುರ, ರಾಮನಗರಂ ತಾ॥ ಮೆಮೊರಿಯಲ್ ಚಿನ್ನದ ಪದಕ 4. ಡಾ. ಜಿ. ಶಿವಶಂಕರ್ ಮೆಮೊರಿಯಲ್ ಚಿನ್ನದ ಪದಕ ಪ್ರಶಸ್ತಿ
13	ಮೇಘನಾ ಟಿ ಎನ್	ತೋಟಗಾರಿಕೆ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಜಿಂದಾಲ್ ಅಲ್ಯೂಮಿನಿಯಂ ಲಿಮಿಟೆಡ್ ಚಿನ್ನದ ಪದಕ
14	ಉಪಾಸನಾ ಮೋಹಪಾತ್ರ	ಸಸ್ಯ ಜೈವಿಕ ತಂತ್ರಜ್ಞಾನ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಶ್ರೀಮತಿ ಶಕುಂತಲಾ ಮತ್ತು ಪ್ರೊ. ವೆಂಕಸುಬ್ಬಯ್ಯ ಚಿನ್ನದ ಪದಕ 3. ಶ್ರೀಮತಿ ಅನುಸೂಯ ಜಿ. ಶೆಟ್ಟಿ ಮಲ್ಟಿಪ್ಲೆಕ್ಸ್ ಗ್ರೂಪ್ ಆಪ್ ಕಂಪನೀಸ್ ಬೆಂಗಳೂರು ಚಿನ್ನದ ಪದಕ
15	ಬಸವರಾಜ ವೀರಪ್ಪ ಟಕ್ಕಳಕಿ	ಸಸ್ಯ ರೋಗಶಾಸ್ತ್ರ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಲೇಟ್ ಡಾ॥ ವಿ ಎಸ್ ಶೇಷಾದ್ರಿ ಚಿನ್ನದ ಪದಕ
16	ಪೃತ್ವಿಶ್ರೀ ಸಿ	ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ
17	ಸಹನಾ ಕೆ ಪಿ	ರೇಷ್ಮೆ ಕೃಷಿ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಸ್ವಾನ್ ಸಿಲ್ಕ್ ಚಿನ್ನದ ಪದಕ 3. ತಳಗವಾರ ಕೆಂಪಯ್ಯ ಸಾಕಮ್ಮ ನಾರಾಯಣಸ್ವಾಮಿ ಚಿನ್ನದ ಪದಕ
18	ಸುಮ ಎಮ್ ಎಮ್	ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ	ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ
19	ಮಾನಸ ಎಂ	ಎಂ.ಟೆಕ್. (ಕೃಷಿ ಇಂಜಿನಿಯರಿಂಗ್) ಆಹಾರ ಸಂಸ್ಕರಣೆ ಹಾಗೂ ತಾಂತ್ರಿಕತೆ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಡಾ. ಆರ್. ರಾಮಯ್ಯ ಚಿನ್ನದ ಪದಕ 3. ಸಿಮಾರೋಬ ಜೋಶಿಮಠ್ ಚಿನ್ನದ ಪದಕ
20	ಅಜಯ್‌ಕುಮಾರ್ ಎಚ್ ಪಿ	ಎಂ.ಟೆಕ್. (ಕೃಷಿ ಇಂಜಿನಿಯರಿಂಗ್) ಮಣ್ಣು ಮತ್ತು ನೀರು ತಾಂತ್ರಿಕತೆ	1. ಕೃವಿವಿಯ ಸಾಮಾನ್ಯ ಶ್ರೇಣಿ ಚಿನ್ನದ ಪದಕ 2. ಜಿಂದಾಲ್ ಅಲ್ಯೂಮಿನಿಯಂ ಲಿಮಿಟೆಡ್ ಚಿನ್ನದ ಪದಕ
21	ಶಿವಾನಂದ ಗೌಡ್ರ	ಬೇಸಾಯಶಾಸ್ತ್ರ	ಪಿಪಿಐಸಿ (ಪೊಟೇಷ್ ಮತ್ತು ಫಾಸ್ಫೇಟ್ ಇನ್‌ಸ್ಟಿಟ್ಯೂಟ್ ಆಫ್ ಕೆನಡಾ) ಚಿನ್ನದ ಪದಕ
22	ಚೈತ್ರ ಎಂ	ಬೇಸಾಯಶಾಸ್ತ್ರ	ಪ್ರೊ. ಜಿ ಕೆ ವಿರೇಶ್ ಚಿನ್ನದ ಪದಕ
23	ರಮೇಶ್ ಮಳಕಾರಿ ಪಡಸಾಲಗಿ	ಬೇಸಾಯಶಾಸ್ತ್ರ	ಡಾ॥ ಜಿ ಪಿ ಶೆಟ್ಟಿ ಮಲ್ಟಿಪ್ಲೆಕ್ಸ್ ಗ್ರೂಪ್ ಆಪ್ ಕಂಪನೀಸ್ ಬೆಂಗಳೂರು ಚಿನ್ನದ ಪದಕ
24	ಅಭಿಲಾಷ ಕೆ ಆರ್	ಆಹಾರ ಸಂಸ್ಕರಣೆ ಹಾಗೂ ತಾಂತ್ರಿಕತೆ	1. ಶ್ರೀಮತಿ. ಅಲುಮೇಲಮ್ಮ ಮತ್ತು ವಿ ನಂಜಯ್ಯ ಚಿನ್ನದ ಪದಕ 2. ಡಾ॥ ಅಂಬೇಡ್ಕರ್ಸ್ ಅವಾರ್ಡ್ ಬೈ ಆಗ್ರೋಇವೋ ಇಂಡಿಯಾ ಲಿಮಿಟೆಡ್ ಚಿನ್ನದ ಪದಕ (ಪ್ರಮಾಣ ಪತ್ರ ಮಾತ್ರ)
25	ಜೆಮಿ ಜೋಸೆಫ್ಹ್	ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ	ಕೃವಿವಿ ಮಣ್ಣಿನ ಪರೀಕ್ಷಾ ಬೆಳೆ ಪ್ರತಿಕ್ರಿಯೆ(STCR) ಚಿನ್ನದ ಪದಕ
26.	ಪೂಜಾ ಬಿ. ಆರ್.	ಕೃಷಿ ಅರ್ಥಶಾಸ್ತ್ರ	ಡಾ. ಬಿಸಲಯ್ಯ ದತ್ತಿ ಚಿನ್ನದ ಪದಕ
ಸ್ನಾತಕೋತ್ತರ ಪದವಿಗೆ ಆವರಣದ ಚಿನ್ನದ ಪದಕ			
27	ಗೀತಾ ಬಿ.ಆರ್.	ಕೃಷಿ ಕೀಟಶಾಸ್ತ್ರ	ಆವರಣದ ಚಿನ್ನದ ಪದಕ (ಮಂಡ್ಯ)
28	ರಾಘವೇಂದ್ರ ಟಿ. ಆರ್.	ಬೇಸಾಯಶಾಸ್ತ್ರ	ಆವರಣದ ಚಿನ್ನದ ಪದಕ (ಮಂಡ್ಯ)
29	ಜೆಮಿ ಜೋಸೆಫ್ಹ್	ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನಶಾಸ್ತ್ರ	ಆವರಣದ ಚಿನ್ನದ ಪದಕ (ಮಂಡ್ಯ)
30	ಆಯಿಷಾ ತಬಸ್ಸುಮ	ಸಸ್ಯ ರೋಗಶಾಸ್ತ್ರ	ಆವರಣದ ಚಿನ್ನದ ಪದಕ (ಮಂಡ್ಯ)

Sl.No.	Name of the Student	Subject	Details of Medals / Awards
12	Bhavani B	Genetics and Plant Breeding	1. UAS Gold Medal for General Merit 2. Mr. R.M. Radhakrishna Memorial Gold Medal 3. Late Sri Chikkamadaiah And Smt. Basamma, Lakshmipura, Ramanagaram Taluk Memorial Gold Medal 4. Dr. G. Shivashankar Memorial Gold Medal (Certificate Only)
13	Meghana T N	Horticulture	1. UAS Gold Medal for General Merit 2. Jindal Aluminium Limited Gold Medal
14	Upasana Mohapatra	Plant Biotechnology	1. UAS Gold Medal for General Merit 2. Smt. Shakuntala and Prof. Venkatasubbaiah Gold Medal 3. Smt. Anasuya G. Shetty, Multiplex Group of Companies, Bangalore Gold Medal
15	Basavaraj Veerappa Takkalaki	Plant Pathology	1. UAS Gold Medal for General Merit 2. Late Dr. V.S. Seshadri Gold Medal
16	Pruthvishree C	Seed Science & Technology	UAS Gold Medal for General Merit
17	Sahana K P	Sericulture	1. UAS Gold Medal for General Merit 2. M/s Swan Silk Limited Gold Medal 3. Talagavara Kempaiah Sakamma Narayanaswamy Gold Medal
18	Suma M M	Soil Sci. and Agril. Chemistry	UAS Gold Medal for General Merit
19	Manasa M	M. Tech. (Agri. Engg.) Processing and Food Engg.	1. UAS Gold Medal for General Merit 2. Dr. R Ramaiah Gold Medal 3. Simarouba Joshimath Gold Medal
20	Ajaykumar H P	M. Tech. (Agri. Engg.) Soil and Water Engineering	1. UAS Gold Medal for General Merit 2. Jindal Aluminium Limited Gold Medal
21	Shivanand Goudra	Agronomy	P.P.I.C. (Potesh & Phosphate Institute of Canada) Gold Medal
22	Chaithra M	Agronomy	Prof. G.K. Veeresh Gold Medal
23	Ramesh Malakari Padasalagi	Agronomy	Dr. G.P. Shetty, Multiplex Group of Companies, Bangalore Gold Medal
24	Abhilasha K R	M. Tech (Agri. Engg.) in Processing and Food Engg.	1. Smt. Alumelamma And V. Nanjaiah Gold Medal 2. Dr. Ambedkar's Award By Agroevo India Ltd. Gold Medal (Certificate Only)
25	Jemi Joseph	Soil Sci. and Agril. Chemistry	UAS Soil Test Crop Response(STCR) Gold Medal
26	Pooja	Agricultural Economics	Dr. Bisalaiah Endowment Gold Medal.

Campus Gold Medal Awardees for Master's Degrees Programmes

27	Geetha B R	Agricultural Entomology	Campus Gold Medal (Mandya)
28	Raghavendra T R	Agronomy	Campus Gold Medal (Mandya)
29	Jemi Joseph	Soil Sci. and Agril. Chemistry	Campus Gold Medal (Mandya)
30	Ayesha Tabassum	Plant Pathology	Campus Gold Medal (Mandya)

ಕ್ರ.ಸಂ.	ವಿದ್ಯಾರ್ಥಿ ಹೆಸರು	ವಿಷಯ	ಚಿನ್ನದ ಪದಕ/ಪ್ರಶಸ್ತಿ ವಿವರಗಳು
ಬಿ. ಸ್ನಾತಕ ಪದವಿ ಕಾರ್ಯಕ್ರಮ			
1	ಸುಮ ಕೆ	ಬಿ.ಎಸ್ಸಿ.(ಕೃಷಿ), ಚಿಂತಾಮಣಿ	1. ಕೃಷಿ ವಿಶ್ವವಿದ್ಯಾನಿಲಯದ ಚಿನ್ನದ ಪದಕ 2. ಶ್ರೀಮತಿ. ಅಲುಮೇಲಮ್ಮ ವಿ. ನಂಜಯ್ಯ ರವರ ಚಿನ್ನದ ಪದಕ 3. ಎಲ್.ಎಜಿಸ್. ಪ್ರತಿಷ್ಠಾನ, ಕರ್ನಾಟಕ ರವರ ಚಿನ್ನದ ಪದಕ 4. ರಜತ ಮೈತ್ರಿ– ಕ್ಲಾಸ್ ಆಫ್ 1980–84 ಯುಎಎಸ್,ಬಿ ರವರ ಚಿನ್ನದ ಪದಕ 5. ಬ್ರಿಗೇಡಿಯರ್ ಅನಿಲ್ ಅಡ್ಲಖ ಚಿನ್ನದ ಪದಕ 6. ಸ್ವಾತಂತ್ರ್ಯ ಹೋರಾಟಗಾರ ಕೊತ್ತನೂರು ಮುನಿಯಪ್ಪ ಪಾಪಣ್ಣ ಸ್ಮರಣಾರ್ಥ ಚಿನ್ನದ ಪದಕ 7. ಶ್ರೀಮತಿ. ಲಕ್ಷಮಮ್ಮ ಹೆಚ್.ಜಿ. ಹನುಮಯ್ಯ ಶೆಟ್ಟಿ ಚಿನ್ನದ ಪದಕ 8. ಶ್ರೀಮತಿ.ಸಾವಿತ್ರಮ್ಮ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರ 9. ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರವರ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರ 10. 1974–78 ನೇ ಸಾಲಿನ ಕೃಷಿ–ತೋಟಗಾರಿಕೆ, ನೋಸ್ಟಾಲ್ಜಿಯ ರವರ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರ 11. ಬಿ.ಕೆ. ಗರುಡಾಚಾರ್ ರವರ ಶತಮಾನೋತ್ಸವ ಜ್ಞಾಪಕಾರ್ಥ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರ 12. ಶ್ರೀ. ಆರ್. ಗುಂಡುರಾವ್ ರವರ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರ
2	ಸೌಮ್ಯ ಎಂ ಎಸ್	ಬಿ.ಎಸ್ಸಿ.(ಕೃಷಿ), ಬೆಂಗಳೂರು	1. ಆವರಣದ ಚಿನ್ನದ ಪದಕ, (ಕೃಷಿ ಕಾಲೇಜು, ಜಿಕೆವಿಕೆ) 2. ಬೆಳ್ಳೂರು ತಿಮ್ಮಪ್ಪ ಮತ್ತು ತಿಮ್ಮಮ್ಮ ರವರ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರ ಮಾತ್ರ
3	ಭಾಗ್ಯಶ್ರೀ ಕೆ ಎಚ್	ಬಿ.ಎಸ್ಸಿ.(ಕೃಷಿ), ಹಾಸನ	1. ಆವರಣದ ಚಿನ್ನದ ಪದಕ, (ಕೃಷಿ ಕಾಲೇಜು, ಹಾಸನ) 2. ಬೆಸಗರಹಳ್ಳಿ ಅಪ್ಪಾಜಿಗೌಡ ರವರ ಸ್ಮರಣಾರ್ಥ ಚಿನ್ನದ ಪದಕ 3. ಬಿಕ್ಕಣ್ಣಹೊಸಹಳ್ಳಿ ರಾಮರೆಡ್ಡಿಯವರ ಸ್ಮರಣಾರ್ಥ ಚಿನ್ನದ ಪದಕ 4. ಲೇಟ್ ಡಾ. ಕಿರಣ್ ಆರ್. ಪಟೇಲ್‌ರವರ ಸ್ಮರಣಾರ್ಥ ಚಿನ್ನದ ಪದಕ 5. ಶ್ರೀಮತಿ ಕೃಷ್ಣಮ್ಮ ಪುಟ್ಟೇಗೌಡರವರ ಚಿನ್ನದ ಪದಕ
4	ಗೌಡ ಟಿ ಡಿ	ಬಿ.ಎಸ್ಸಿ.(ಕೃಷಿ), ಮಂಡ್ಯ	1. ಆವರಣದ ಚಿನ್ನದ ಪದಕ, (ಕೃಷಿ ಕಾಲೇಜು, ಮಂಡ್ಯ) 2. ಶ್ರೀ ರಾಗಿ ಲಕ್ಷ್ಮಣಯ್ಯ ರವರ ಚಿನ್ನದ ಪದಕ 3. ಲೇಟ್ ನಂಜಮ್ಮ ಮತ್ತು ತಿಮ್ಮೇಗೌಡ ಅಲಿಯಾಸ್ ಮೋಟೇಗೌಡ ಕೊಪ್ಪ, ಮದ್ದೂರು ಸ್ಮರಣಾರ್ಥ ಚಿನ್ನದ ಪದಕ 4. ಡಾ. ಲೆಸ್ಲಿ ಸಿ. ಕೋಲ್‌ಮನ್ ಚಿನ್ನದ ಪದಕ 5. ಲೇಟ್ ಜಿ.ಎಸ್. ಬಸವರಾಜ್ ಸ್ಮರಣಾರ್ಥ ಚಿನ್ನದ ಪದಕ 6. ಶ್ರೀಮತಿ. ಹೊನ್ನಮ್ಮ, ನಿಂಗೇಗೌಡ, ಚಿಕ್ಕದೇವಯ್ಯ ಕುಟುಂಬದವರ ಚಿನ್ನದ ಪದಕ
5	ಮೀನಾಕ್ಷಿ ಜೆ.	ಬಿ.ಎಸ್ಸಿ.(ಕೃಷಿ), ಚಿಂತಾಮಣಿ	1. ಕೃಷಿ ವಿಶ್ವವಿದ್ಯಾನಿಲಯದ ಕ್ರೀಡಾಪಟು ಚಿನ್ನದ ಪದಕ 2. ಲೇಟ್ ಶ್ರೀ. ಬಿ.ಎನ್. ಗಣಪತಿ ಸ್ಮರಣಾರ್ಥ ಉತ್ತಮ ಕ್ರೀಡಾಪಟು ಮತ್ತು ವಿದ್ಯಾರ್ಥಿ ಚಿನ್ನದ ಪದಕ
6	ರಘು ಎಸ್ ಆರ್	ಬಿ.ಎಸ್ಸಿ.(ಕೃಷಿ), ಚಿಂತಾಮಣಿ	1. ಪ್ರೊ. ಬಿ. ವೆಂಕೋಬರಾವ್‌ರವರ ಚಿನ್ನದ ಪದಕ 2. ಲೇಟ್ ಡಾ: ಆರ್. ನಾರಾಯಣ್‌ರವರ ಚಿನ್ನದ ಪದಕ
7	ವಿನಯ್ ಕುಮಾರ್ ಎಂ	ಬಿ.ಎಸ್ಸಿ.(ಕೃಷಿ), ಬೆಂಗಳೂರು	ಎಲ್.ಎಜಿಸ್. ಪ್ರತಿಷ್ಠಾನ, ಕರ್ನಾಟಕ ರವರ ಚಿನ್ನದ ಪದಕ
8	ದರ್ಶಿನಿ ಎಂ ಎಸ್	ಬಿ.ಎಸ್ಸಿ.(ಕೃಷಿ), ಮಂಡ್ಯ	ಬೆಸಗರಹಳ್ಳಿ ಅಪ್ಪಾಜಿಗೌಡ ಸ್ಮರಣಾರ್ಥ ಚಿನ್ನದ ಪದಕ
9	ಕುಶಾನ್ ಕುಶಾಲಪ್ಪ ಹೆಚ್ ಎಲ್	ಬಿ.ಎಸ್ಸಿ.(ಕೃಷಿ), ಬೆಂಗಳೂರು	ಲೇಟ್ ಹೊಂಬಾಳಮ್ಮ ಚನ್ನೇಗೌಡ ಮತ್ತು ಕೆ.ಮಂಚೇಗೌಡ ಸ್ಮರಣಾರ್ಥ ಚಿನ್ನದ ಪದಕ

Sl.No.	Name of the Student	Subject	Details of Medals / Awards
B. Undergraduate Programme			
1.	Suma K	B.Sc. (Agri.), Chintamani	1. University Gold Medal 2. Smt. Alumelamma V. Nanjaiah Gold Medal 3. L. Ag's Foundation, Karnataka Gold Medal 4. Rajatha Maithri – Class of 1980-84 UAS (B) Gold Medal 5. Brigadier Anil Adlakha Gold Medal 6. Freedom Fighter Kothanur Muniyappa Papanna Memorial Gold Medal 7. Smt.Laxmma H.G. Hanumaiah Setty Gold Medal 8. Smt. Savithramma Gold Medal 9. Bharataratna Dr. B.R. Ambedkar Gold Medal 10.1974-78 Agri./ Horti. Nostalgia Gold Medal 11.B.K. Garudachar Centenary Commemoration Gold Medal 12. Sri. R. Gundu Rao Gold Medal
2.	Sommya M S	B.Sc. (Agri.), Bangalore	1. Campus Gold Medal, College of Agriculture, Bangalore 2. Bellur Thimmappa and Thimmamma Gold Medal (Certificate only)
3.	Bhagyashree K H	B.Sc. (Agri.), Hassan	1. Campus Gold Medal, College of Agriculture, Hassan 2. Besagarahalli Appajigowda Memorial Gold Medal 3. Bikkanna Hosahalli Rama Reddy Memorial Gold Medal 4. Late Dr. Kiran, R. Patel Memorial Gold Medal 5. Smt. Krishnamma Puttegowda Gold Medal
4.	Gowda T D	B.Sc. (Agri.), Mandya	1. Campus Gold Medal, College of Agriculture, Mandya 2. Sri. Ragi Lakshmanaiah Gold Medal 3. Late Nanjamma and Thimmegowda alias Mote gowda Koppa Maddur Memorial Gold Medal 4. Dr. Leslie C. Coleman Memorial Gold Medal 5. Late. G.S. Basavaraj Memorial Gold Medal 6. Smt. Honnamma Ningegowda, Chikkadevaiah Family Gold Medal
5.	Meenakshi J	B.Sc. (Agri.), Chintamani	1. Award of UAS Gold Medal for Best Sportmen Women of the year 2. Best Sportsman-cum-Scholar Award in Memoryof late BalachandaNanaiah Ganapathy Ex-student of UAS, Bangalore
6.	Raghu S R	B.Sc. (Agri.), Chintamani	1. Prof. B. Venkoba Rao Gold Medal 2. Late Dr. R. Narayan Gold Medal
7.	Vinay Kumar M	B.Sc. (Agri.), Bangalore	L. Ag's Foundation, Karnataka Gold Medal
8.	Darshini M S	B.Sc. (Agri.), Mandya	Besagarahalli Appajigowda Memorial Gold Medal
9.	Kushan Kushalappa H L	B.Sc. (Agri.), Bangalore	Late Hombalamma Chennegowda and K.Manchegowda Memorial Gold medal

ಕ್ರ.ಸಂ.	ವಿದ್ಯಾರ್ಥಿ ಹೆಸರು	ವಿಷಯ	ಚಿನ್ನದ ಪದಕ/ಪ್ರಶಸ್ತಿ ವಿವರಗಳು
10	ಶ್ವೇತಶ್ರೀ ಬಿ	ಬಿ.ಎಸ್ಸಿ.(ಕೃಷಿ), ಮಂಡ್ಯ	ಹೆಚ್.ಎಂ.ಸುರೇಶ್ ಸ್ಮರಣಾರ್ಥ ಚಿನ್ನದ ಪದಕ
11	ಸಂಹಿತ ಎಲ್	ಬಿ.ಎಸ್ಸಿ.(ಕೃಷಿ), ಬೆಂಗಳೂರು	1. ಕೃಷಿ ವಿಶ್ವವಿದ್ಯಾನಿಲಯದ ನೌಕರರ ಸಂಘದ ಚಿನ್ನದ ಪದಕ ಪ್ರಶಸ್ತಿ (ಪ್ರಮಾಣ ಪತ್ರ ಮಾತ್ರ) 2. ಮೋಹನ್ ಹೆಗ್ಡೆ ಯವರ ಸ್ಮರಣಾರ್ಥ ಚಿನ್ನದ ಪದಕ ಪ್ರಶಸ್ತಿ (ಪ್ರಮಾಣ ಪತ್ರ ಮಾತ್ರ)
12	ದಿವ್ಯ ವಿ	ಬಿ.ಎಸ್ಸಿ.(ಕೃಷಿ), ಚಿಂತಾಮಣಿ	ನಟ ಸಾರ್ವಬೌಮ ರಾಜಕುಮಾರ್ ಸನ್ಮಾನ ಸಮಿತಿ ಚಿನ್ನದ ಪದಕ ಪ್ರಶಸ್ತಿ (ಪ್ರಮಾಣ ಪತ್ರ ಮಾತ್ರ)
13	ರಂಜಿತ ವೈ ಎಲ್	ಬಿ.ಎಸ್ಸಿ.(ಕೃಷಿ ಮಾರಾಟ ಮತ್ತು ಸಹಕಾರ ವಿಜ್ಞಾನ), ಬೆಂಗಳೂರು	1. ಕೃಷಿ ವಿಶ್ವವಿದ್ಯಾನಿಲಯದ ಚಿನ್ನದ ಪದಕ 2. ಡಾ. ಎ.ಎನ್. ಕೃಷ್ಣಮೂರ್ತಿ ಸ್ಮರಣಾರ್ಥ ಚಿನ್ನದ ಪದಕ 3. ರಜತ ಮೈತ್ರಿ– ಕ್ಲಾಸ್ ಆಫ್ 1980–84 ಯುಎಎಸ್,ಬಿ ರವರ ಚಿನ್ನದ ಪದಕ 4. ಡಾ. ಪಿ.ಜಿ.ಚಂಗಪ್ಪ ಅವರ ತಂದೆ ಲೇಟ್ ಶ್ರೀ.ಪಿ.ಎ.ಗಣಪತಿ ಸ್ಮಾರಣಾರ್ಥ ದತ್ತಿ ಚಿನ್ನದ ಪದಕ 5. ಬ್ರಿಗೇಡಿಯರ್ ಅನಿಲ್ ಅಡ್ಲಖ ಚಿನ್ನದ ಪದಕ ಶ್ರೀಮತಿ. ಹೇಮಲತ ಪಾಟೀಲ ಚಿನ್ನದ ಪದಕ
14	ಜಗದೀಶ್ ಎಂ ಎಸ್	ಬಿ.ಎಸ್ಸಿ.(ಕೃಷಿ ಮಾರಾಟ ಮತ್ತು ಸಹಕಾರ ವಿಜ್ಞಾನ), ಬೆಂಗಳೂರು.	ಲೇಟ್ ಡಾ. ಸ್ನೇಹ ಮಲ್ಲಿ ರೆಡ್ಡಿ ಸ್ಮರಣಾರ್ಥ ಚಿನ್ನದ ಪದಕ
15	ಮಹೇಶಕುಮಾರ	ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) ಬೆಂಗಳೂರು	1. ಕೃಷಿ ವಿಶ್ವವಿದ್ಯಾನಿಲಯದ ಚಿನ್ನದ ಪದಕ 2. ಸರ್. ಎಂ. ವಿಶ್ವೇಶ್ವರಯ್ಯ ಚಿನ್ನದ ಪದಕ 3. ಡಾ. ಎಸ್. ಜವರೇಗೌಡ ಚಿನ್ನದ ಪದಕ
16	ರೇಷ್ಮ ರಾಯ್	ಬಿ.ಎಸ್ಸಿ.(ಕೃಷಿ ಜೈವಿಕ ತಂತ್ರಜ್ಞಾನ) ಹಾಸನ	1. ಕೃಷಿ ವಿಶ್ವವಿದ್ಯಾನಿಲಯದ ಚಿನ್ನದ ಪದಕ 2. ಜಿಂದಾಲ್ ಅಲ್ಯುಮಿನಿಯಮ್ ಲಿಮಿಟೆಡ್ ಚಿನ್ನದ ಪದಕ
17	ಅನುಶ್ರೀ ಜಿ ವಿ	ಬಿ.ಟೆಕ್.(ಆಹಾರ ತಂತ್ರಜ್ಞಾನ) ಹಾಸನ	1. ಕೃಷಿ ವಿಶ್ವವಿದ್ಯಾನಿಲಯದ ಚಿನ್ನದ ಪದಕ 2. ಅಲ್ಯುಮಿನಿ ಅಸೋಸಿಯೆಷನ್, ಯುಎಎಸ್, ಬೆಂಗಳೂರು ಚಿನ್ನದ ಪದಕ
18	ಬಿ ಮಂಜುನಾಥ	ಬಿ.ಎಸ್ಸಿ.(ರೇಷ್ಮೆ ಕೃಷಿ) ಚಿಂತಾಮಣಿ	ಕೃಷಿ ವಿಶ್ವವಿದ್ಯಾನಿಲಯದ ಚಿನ್ನದ ಪದಕ



ಮಹಾತ್ಮ ಗಾಂಧಿ ಸಸ್ಯ ಉದ್ಯಾನವನ, ಜಿ.ಕೆ.ವಿ.ಕೆ., ಬೆಂಗಳೂರು

Sl.No.	Name of the Student	Subject	Details of Medals / Awards
10.	Swethashree B	B.Sc. (Agri.), Mandya	H.M. Suresh Memorial Gold Medal
11.	Samhitha L	B.Sc. (Agri.), Bangalore	1. Mohan Hegde Momorial Gold Medal Certificate only 2. UAS Employee's Association Gold Medal Certificate only.
12.	Divya V	B.Sc. (Agri.), Chintamani	Natasarvabhouma Rajkumar Sanmana Samithi Gold Medal certificate only
13.	Ranjitha Y L	B.Sc. (Agricultural Marketing and Co-operation), Bangalore	1. University Gold Medal 2. Dr. A.N. Krishnamurthy Memorial Gold Medal 3. Rajatha Maithri – Class of 1980-84 UAS (B) Gold Medal 4. Dr. P.G. Chengappa Endowment Gold Medal in Memory of his Father Sri. P.A. Ganapathy 5. Brigadier Anil Adlakha Gold Medal 6. Smt. Hemalata Patil Gold Medal
14.	Jagedeesh M S	B.Sc.(Agricultural Marketing and Co-operation), Bangalore	Late Dr. Sneha Malli Reddy Memorial Gold Medal
15.	Maheshakumara	B. Tech. (Agril. Engineering), Bangalore	1. University Gold Medal 2. Sir M. Visvesvaraya Gold Medal 3. Dr. S. Javare Gowda Gold Medal
16.	Reshma Roy	B.Sc. (Agril. Biotechnology), Hassan	1. University Gold Medal 2. Jindal Aluminium Ltd. Gold Medal
17.	Anushree G V	B.Tech. (Food Science & Technology), Hassan	1. University Gold Medal 2. Alumini Association, UAS(B) Gold Medal
18.	B Manjunatha	B.Sc.(Seri.), Chintamani	University Gold Medal



Mahatma Gandhi Botanical Garden, GKVK, Bengaluru

3. ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ
Agricultural Research and Development

ಜನಸಂಖ್ಯೆ ಹೆಚ್ಚಿದಂತೆಲ್ಲಾ ಕಾಲಕ್ರಮೇಣ ಹಸಿವಿನಿಂದ ಕೂಡಿದ ಜನರ ಸಂಖ್ಯೆಯು ಹೆಚ್ಚುತ್ತಿದೆ. ಅದರ ಜೊತೆಗೆ ಭೂಮಿಯು ಹಾಳಾಗುತ್ತಿರುವುದರಿಂದ ತಲವಾರು ಆಹಾರ ಉತ್ಪಾದನೆ ಮತ್ತು ಆಹಾರ ಕೊಳ್ಳುವ ಶಕ್ತಿ ವಿಶೇಷವಾಗಿ ಗ್ರಾಮೀಣ ಜನರಲ್ಲಿ ಕಾಣಿಸಿಕೊಳ್ಳುತ್ತಿದೆ. ವಿಶ್ವವಿದ್ಯಾನಿಲಯವು ರೈತರ ಆಹಾರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಹಾಗೂ ಅವರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದರ ಜೊತೆಗೆ ಸಾಮಾಜಿಕ ಕಳಂಕವನ್ನು ತೊಲಗಿಸಲು ಶ್ರಮಿಸುತ್ತಿದೆ. ಮಳೆ ನೀರಿನ ಕೊಯ್ಲು ಹಾಗೂ ನಿರ್ವಹಣೆ, ಮಣ್ಣಿನ ತೇವಾಂಶದ ಸಂರಕ್ಷಣೆ ಮತ್ತು ಪೂರಕ ಹಾಗೂ ಸಣ್ಣ ಪ್ರಮಾಣದ ನೀರಾವರಿ ಪದ್ಧತಿಗಳನ್ನು ಅಳವಡಿಸುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿರುವ ಸಣ್ಣ ರೈತ ಹಾಗೂ ರೈತ ಕೂಲಿಗಳ ಜೀವನೋಪಾಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ಹೊಂದಿರುತ್ತದೆ. ಉಪಮೇಲ್ಮೈ ಹಾಗೂ ಒಳಮೇಲ್ಮೈ ಹನಿ ನೀರಾವರಿಯಂತಹ ತಾಂತ್ರಿಕತೆಗಳು ಹಾಗೂ ಇಂಗದೆ ಹರಿದು ಹೋಗುವ ನೀರನ್ನು ತಡೆಗಟ್ಟುವ ಮುಖಾಂತರ ಸ್ಥಳೀಯ ನೀರು ನಿರ್ವಹಣೆಯ ಹೊಸ ಯುಗಕ್ಕೆ ವಿಶ್ವವಿದ್ಯಾನಿಲಯವು ಕರೆ ನೀಡಿದೆ. ಭೂಮಿ ಮತ್ತು ಮಣ್ಣಿನ ಸಂಪನ್ಮೂಲಗಳ ಸಮಗ್ರ ಹಾಗೂ ಸಮರ್ಥನೀಯ ನಿರ್ವಹಣೆಯ ಮೂಲಕ ವಿಶ್ವವಿದ್ಯಾನಿಲಯವು ಗ್ರಾಮೀಣ ಅಭೀವೃದ್ಧಿಯ ಒಂದು ಸಂಭಾವ್ಯ ಪರಿಹಾರವನ್ನು ನೀಡುತ್ತದೆ. ಗ್ರಾಮೀಣ ಜೀವನೋಪಾಯ ಸುಧಾರಣೆ ಪರಿಣಾಮಕಾರಿಯಾಗಿ ಒಮ್ಮುಖವಾಗಿಸುವ ಕ್ರಮದಲ್ಲಿ, ಸಮಗ್ರ ಸಂಯೋಜಿತ ವ್ಯವಸ್ಥೆಗಳ ವಿಧಾನವನ್ನು ಹಿಂದಿನ ಅನುಭವಗಳು, ಅಸ್ತಿತ್ವದಲ್ಲಿರುವ ಅವಕಾಶಗಳು ಮತ್ತು ಕೌಶಲ್ಯಗಳ ಗಮನ ಸೆಳೆಯುವ ಮೂಲಕ ರೈತರ ಪಾಲುದಾರಿಕೆಯಿಂದ ವಿಶ್ವವಿದ್ಯಾನಿಲಯವು ಬದಲಾವಣೆಗೆ ಕರೆ ನೀಡಿದೆ.

3.1 ಕೃಷಿ ಸಂಶೋಧನಾ ಕೇಂದ್ರಗಳು ಮತ್ತು ಹವಾಮಾನ ವಲಯಗಳು

ಸ್ಥಳ ನಿರ್ದಿಷ್ಟ ಹಾಗೂ ರೈತ ಕೇಂದ್ರಿತ ಸಂಶೋಧನಾ ಪ್ರಾಯೋಜನೆಗಳನ್ನು ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ರೂಪಿಸಿದ್ದಾರೆ ಹಾಗೂ ಅವುಗಳ ಕುರಿತಂತೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ದಕ್ಷಿಣ ರಾಜ್ಯದ 10 ಜಿಲ್ಲೆಗಳಲ್ಲಿನ 13 ಕೃಷಿ ಸಂಶೋಧನಾ ಕೇಂದ್ರಗಳಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಅವುಗಳ ವಿವರಗಳು ಈ ಮುಂದಿನಂತಿವೆ:

ವಲಯ – 4

ಕೃಷಿ ಸಂಶೋಧನಾ ಕೇಂದ್ರ, ಅರಸೀಕೆರೆ
ಕೃಷಿ ಸಂಶೋಧನಾ ಕೇಂದ್ರ, ತಿಪಟೂರು
ಕೃಷಿ ಸಂಶೋಧನಾ ಕೇಂದ್ರ, ಪಾವಗಡ

The magnitude of hungry people is growing larger with passage of time and with increase in human population. Parallely, there is land degradation affecting per capita food production coupled with poor purchasing power among the farming community. The University is striving to achieve increasing the purchasing power of farmers, to repose self confidence in them and also to overcome the social enigma. Effective management of rainwater and soil moisture using supplemental and small-scale irrigation holds the key to help the large number of farmers. University has called for a new era of water investments for upgrading rainfed agriculture that would go beyond managing soil and water resources through better management practices at field level. Rural development through sustainable management of land and water resources gives a plausible solution for alleviating rural poverty, food and nutritional security and livelihoods of the rural poor. In an effective convergence mode for improving the rural livelihoods in the target districts, a holistic integrated farming system approach is adopted by the University by drawing attention of the past experiences, existing opportunities and skills, and supported partnerships for improving the socio-economic status of the farmers.

3.1 Agricultural Research Stations and Climatic Zones

Location specific and farmer centric Research Programmes have been formulated by the Scientists working in 13 Agricultural Research Stations located in 10 Southern Districts of the State under the jurisdiction of UAS (B). The details are outlined below:

Zone – 4

Agricultural Research Station, Arasikere
Agricultural Research Station, Tiptur
Agricultural Research Station, Pavagada

ವಲಯ – 5

ವಲಯ ಕೃಷಿ ಸಂಶೋಧನಾ ಕೇಂದ್ರ, ಜಿ.ಕೆ.ವಿ.ಕೆ.
ಪ್ರಮುಖ ಸಂಶೋಧನಾ ಕೇಂದ್ರ, ಹೆಬ್ಬಾಳ
ಕೃಷಿ ಸಂಶೋಧನಾ ಕೇಂದ್ರ, ಚಿಂತಾಮಣಿ
ಕೃಷಿ ಸಂಶೋಧನಾ ಕೇಂದ್ರ, ಬಲಜಿಗಪಡೆ
ಕೃಷಿ ಸಂಶೋಧನಾ ಕೇಂದ್ರ, ನೆಲಮಾಕನಹಳ್ಳಿ

ವಲಯ – 6

ವಲಯ ಕೃಷಿ ಸಂಶೋಧನಾ ಕೇಂದ್ರ, ಮಂಡ್ಯ
ಕೃಷಿ ಸಂಶೋಧನಾ ಕೇಂದ್ರ, ನಾಗೇನಹಳ್ಳಿ
ಕೃಷಿ ಸಂಶೋಧನಾ ಕೇಂದ್ರ, ಮಡೇನೂರು
ಕೃಷಿ ಸಂಶೋಧನಾ ಕೇಂದ್ರ, ಕುಣಿಗಲ್

ವಲಯ – 7

ಕೃಷಿ ಸಂಶೋಧನಾ ಕೇಂದ್ರ, ಗುಂಜೇವು

Zone – 5

Zonal Agricultural Research Station, GKVK
Main Research Station, Hebbal
Agricultural Research Station, Chintamani
Agricultural Research Station, Balajigapade
Agricultural Research Station, Nelamakanahalli

Zone – 6

Zonal Agricultural Research Station, Mandya
Agricultural Research Station, Nagenahalli
Agricultural Research Station, Madenur
Agricultural Research Station, Kunigal

Zone – 7

Agricultural Research Station, Gunjevu

3.2 ಕಾರ್ಯಾಚರಣೆಯಲ್ಲಿರುವ ಪ್ರಾಯೋಜನೆಗಳು (31–03–2019 ರಂತೆ)

ಪ್ರಸ್ತುತ ಒಟ್ಟು 309 ಸಂಶೋಧನಾ ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದು ಅವುಗಳಲ್ಲಿ 32 ಭಾರತೀಯ ಕೃಷಿ ಅನುಸಂಧಾನ ಪರಿಷತ್ ಸಹಯೋಜಿತ ಸಂಶೋಧನಾ

3.2 Projects in Operation (As on 31-03-2019)

In total, 309 research projects are in operation, of which 32 are ICAR Coordinated Research Projects; 11 ICAR Adhoc projects; 22 RKVY projects; 66

ಕೋಷ್ಟಕ 42 : 2018–19ನೇ ಸಾಲಿನಲ್ಲಿ ಅನುದಾನ ಹೊಂದಿದ ಸಂಶೋಧನಾ ಪ್ರಾಯೋಜನೆಗಳು
Table 42 : Abstract of projects sanctioned during 2018-19

ಕ್ರ.ಸಂ./ Sl. No	ವಿವರಗಳು / Particulars	ಪ್ರಾಯೋಜನೆಗಳ ಸಂಖ್ಯೆ / Project No.	ಮೊತ್ತ ಲಕ್ಷ (ರೂ.ಗಳಲ್ಲಿ) / Amount (lakhs)
1	ಅ.ಭಾ.ಸು. ಹರಳು ಪ್ರಾಯೋಜನೆ, All India Coordinated Research Project	1	–
2	ಐ.ಸಿ.ಎ.ಆರ್. ತಾತ್ಪೂರ್ತಿಕ (ಂಜುಠಛಿ) ಪ್ರಾಯೋಜನೆಗಳು ICAR-Adhoc	2	86.90
3	ಗೌರವಾನ್ವಿತ ವಿಜ್ಞಾನಿಗಳ ಪ್ರಾಯೋಜನೆಗಳು Emeritus scientist	4	96.00
4	ರಾ.ಕೃ.ವಿ.ಯೋ. ಪ್ರಾಯೋಜನೆಗಳು RKVY Projects	2	194.00
5	ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ ಡಿ.ಬಿ.ಟಿ) Government of India (DST / DBT)	17	599.33
6	ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು Government of Karnataka	12	1237.67
7	ಇತರೆ ಅನುದಾನ ಸಂಸ್ಥೆಗಳು Other Funding Agencies	6	127.30
8	ಕೃ.ವಿ.ವಿ. ಅನುದಾನಿತ : ತಳಿ/ತಾಂತ್ರಿಕತೆ ಅಭಿವೃದ್ಧಿ ಮತ್ತು ಮೌಲ್ಯವರ್ಧನೆ UAS Sponsored: Varietal Development	22	57.10
9	ಕೃ.ವಿ.ವಿ. ಅನುದಾನಿತ : ಹವಾಮಾನ ಸಹಿಷ್ಣು ಕೃಷಿ UAS Sponsored: Climate Smart Agriculture	6	26.60
10	ಕೃ.ವಿ.ವಿ. ಅನುದಾನಿತ : ರೈತ ಕೇಂದ್ರಿತ ಪ್ರಾಯೋಜನೆಗಳು UAS Sponsored: Farmer centric	9	13.70
	Total	**81**	**2438.40**

ಪ್ರಾಯೋಜನೆಗಳು, 11 ಭಾರತೀಯ ಕೃಷಿ ಅನುಸಂಧಾನ ಪರಿಷತ್ ತಾತ್ಪೂರ್ತಿಕ ಪ್ರಾಯೋಜನೆಗಳು, 22 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆಗಳು, 66 ಭಾರತ ಸರ್ಕಾರದ ಪ್ರಾಯೋಜನೆಗಳು (ಡಿ.ಎಸ್.ಟಿ./ಡಿ.ಬಿ.ಟಿ.), 31 ಕರ್ನಾಟಕ ಸರ್ಕಾರದ ಪ್ರಾಯೋಜನೆಗಳು; 41 ಇತರ ಏಜೆನ್ಸಿಗಳ ಅನುದಾನದ ಪ್ರಾಯೋಜನೆಗಳು ಹಾಗೂ 100 ಸಂಶೋಧನಾ ಪ್ರಾಯೋಜನೆಗಳು (ತಳಿ ಅಭಿವೃದ್ಧಿ–69, ಬೇಡಿಕೆ ಆಧಾರಿತ–9 ಮತ್ತು ಹವಾಮಾನ ಚತುರ ಕೃಷಿ–22) ರಾಜ್ಯದ ಹಾಗೂ ನಿರ್ದಿಷ್ಟವಾಗಿ ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ವಿಶ್ವವಿದ್ಯಾನಿಲಯ ಪ್ರಾಯೋಜಿತವಾಗಿವೆ. 2018–19ರ ಸಾಲಿನಲ್ಲಿ 2 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಪ್ರಾಯೋಜನೆ ಒಳಗೊಂಡಂತೆ 81 ಹೊಸ ಪ್ರಾಯೋಜನೆಗಳು ಮಂಜೂರಾಗಿದ್ದು ಇದರ ಒಟ್ಟು ಮೊತ್ತ ರೂ.2438.4 ಲಕ್ಷಗಳು. ಈ ಪ್ರಾಯೋಜನೆಗಳ ಸಾರಲೇಖವು 2018–19 ಅನುಮೋದನೆಗೊಂಡು ಕೆಳಗಿನ ಕೋಷ್ಟಕದಲ್ಲಿ ಹಾಗೂ ವಿವರಗಳನ್ನು ಅನುಬಂಧ 2.1 ರಲ್ಲಿ ನೀಡಲಾಗಿದೆ.

3.3 ರುಜು ಹಾಕಲಾದ ಒಪ್ಪಂದಗಳು

ಪರಸ್ಪರ ಆಸಕ್ತಿಯಿಂದ ಸಹಯೋಜಿತ ಸಂಶೋಧನಾ/ ವಾಣಿಜ್ಯೀಕರಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿವಿಧ ಸಂಸ್ಥೆಗಳೊಂದಿಗೆ ಒಟ್ಟು 4 ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ

3.4 ಪರೀಕ್ಷಿಸಿದ ಹೊಸ ರಾಸಾಯನಿಕಗಳು/ತಳಿಗಳು/ ಅಣುಗಳು

ವಿಶ್ವವಿದ್ಯಾನಿಲಯವು 334 ಹೊಸ ತಳಿಗಳು/ ಸಾಲುಗಳು/ ರಾಸಾಯನಿಕಗಳು/ ಅಣುಗಳನ್ನು ಪೀಡೆ/ ರೋಗ/ ಕಳೆ ಯಂತ್ರಣಕ್ಕಾಗಿ/ ಮಣ್ಣು ವಿಶ್ಲೇಷಣೆಗಾಗಿ ಹಾಗೂ ಕೃಷಿ ಉಪಕರಣಗಳನ್ನು ಪರೀಕ್ಷಿಸಿದ್ದು ಅವುಗಳಿಂದ ಒಟ್ಟು ರೂ. 436 ಲಕ್ಷ ಆದಾಯವನ್ನು ಗಳಿಸಿದೆ.

3.5 ಹೊಸ ಸಂಶೋಧನೆಗೆ ಹಕ್ಕು ಪತ್ರ

ಡಾ. ನಾರಾಯಣ ಸ್ವಾಮಿ ರವರು ರೂಪಿಸಿದ ನಾಟಾ–ಡಿ–ಕೊಕೊ ತಯಾರಿಸುವ ವಿಧಾನಕ್ಕೆ 29ನೇ ನವಂಬರ್, 2018 ರಂದು ಹಕ್ಕುಪತ್ರವನ್ನು (ಸಂಖ್ಯೆ: 303710) ಮಂಜೂರು ಮಾಡಲಾಗಿದೆ

3.6 ಪ್ರಮುಖ ಸಂಶೋಧನೆಗಳು

3.6.1 ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯಲ್ಲಿ ಮಣ್ಣು ಪರೀಕ್ಷೆ ಮತ್ತು ಇಳುವರಿ ಗುರಿ ಆಧಾರದ ಮೇಲೆ ಆನ್ಲೈನ್ ಮುಖಾಂತರ ರಸಗೊಬ್ಬರಗಳ ಶಿಫಾರಸ್ಸಿನ ಫಲಿತಾಂಶ

ಇದೇ ಪ್ರಥಮ ಬಾರಿಗೆ ಭಾರತದಲ್ಲಿ ಎಸ್.ಐ.ಟಿ., ತುಮಕೂರು ಸಹಯೋಗದಲ್ಲಿ, ಮಣ್ಣು ಪರೀಕ್ಷೆ ಬೆಳೆ ಸ್ಪಂದನೆ (ಎಸ್.ಟಿ.ಸಿ.ಆರ್.) ಆಧಾರದಲ್ಲಿ ವಿವಿಧ ಬೆಳೆಗಳಿಗೆ ರಸಗೊಬ್ಬರಗಳನ್ನು ಶಿಫಾರಸ್ಸು ಮಾಡಲು ಅಕ್ಷಾಂಶ ರೇಖಾಂಶಗಳನ್ನೊಳಗೂಡಿಸಿ ಅಂತರ್ಜಾಲ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಂತ್ರಾಂಶವನ್ನು 18.11.2018ರಂದು ಬೆಂಗಳೂರು ಕೃ.ವಿ.ವಿ.ಯ ಕೃಷಿ ಮೇಳದಲ್ಲಿ ಸನ್ಮಾನ್ಯ ಶ್ರೀ. ಹೆಚ್.ಡಿ. ಕುಮಾರಸ್ವಾಮಿ, ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರು ಬಿಡುಗಡೆ ಮಾಡಿದರು. ಈ ತಂತ್ರಾಂಶ ಬಳಸಿ ಪಡೆದ 118 ಅಕ್ಷಾಂಶ – ರೇಖಾಂಶ ಅವಲಂಬಿತ ಮಣ್ಣಿನ ಮಾದರಿಗಳ ಮಣ್ಣಿನ

Government of India Projects (DST/DBT); 31 Government of Karnataka Projects; 41 projects funded by other agencies and 100 research projects (Var. Dev.= 69 Demand driven-9 & Climate Smart Agriculture-22) sponsored by the University to tackle the problems of the farmers in the State in general. A total of 81 new research projects have been sanctioned to the University during 2018-19 by various funding agencies with a total outlay of Rs. 2438.4 lakhs, including 2 RKVY projects. The abstract of projects sanctioned during 2018-19 is presented in the below Table and the details are provided in Annexure to 2.1.

3.3 MoUs Signed

A total of 4 MoUs / MoAs / MTA were signed with different institutions for conducting collaborative research of mutual interest.

3.4 New Chemicals/ Varieties/ Molecules Tested

The University has undertaken the testing of 334 new varieties /lines/ chemicals/molecules for control of pests /diseases / weeds / soil analysis and agricultural equipment and generated revenue of Rs. **436** lakhs.

3.5 Patent for Invention

A patent (No. 303710) has been granted to Dr. B. Narayanaswamy, Professor, Department of Agricultural Microbiology for his invention entitled "A process for manufacturing Nata-de-Coco" on 29th November, 2018.

3.6 Break-through Research

3.6.1 Online fertilizer recommendation through STCR approach for Tumkur district of Karnataka

Web based on-line fertilizer recommendation through STCR approach for Tumkur District", which is first of its kind in India was released by Hon'ble Chief Minister of Karnataka, Sri. H.D. Kumaraswamy on 18.11.2018 during UAS-B Krishimela. Evaluation of Web based online software is developed for Tumkur district by comparing soil analytical data of actual sample with that of soil data from software. This

ಫಲವತ್ತತೆಯನ್ನು, ಸ್ವತಃ ಮಣ್ಣು ಪರೀಕ್ಷೆ ಮಾಡಿದಾಗ ಬಂದ ಫಲವತ್ತತೆಗೆ ಹೋಲಿಕೆ ಮಾಡಿದಾಗ ಉತ್ತಮ ಹೋಲಿಕೆ ಕಂಡು ಬಂದಿದೆ. ಅದೇ ರೀತಿ ಬೆಳೆಗಳ ಹೋಲಿಕೆ ಪ್ರಯೋಗದಲ್ಲಿ ಸಹ ಅಕ್ಷಾಂಶ–ರೇಖಾಂಶದ ಫಲವತ್ತತೆ ಆಧಾರಿತ ಮತ್ತು ಎಸ್.ಟಿ.ಸಿ.ಆರ್. ಇಳುವರಿ ಗುರಿ ಆಧಾರಿತ ಉಪಚಾರದಲ್ಲಿ ಶಿಫಾರಸ್ಸು ಮಾಡಿದ ಪ್ರಮಾಣದ ರಸಗೊಬ್ಬರ ಹಾಕಿದ ಉಪಚಾರಕ್ಕಿಂತ ಉತ್ತಮ ಇಳುವರಿ ಕಂಡು ಬಂದಿದೆ.

3.6.2 ಏಷ್ಯಾ ಖಂಡದಲ್ಲಿ ಪ್ರಪ್ರಥಮ ಬಾರಿಗೆ ಕರ್ನಾಟಕದ ಮುಸುಕಿನ ಜೋಳ ಮತ್ತು ಜೋಳ ಬೆಳೆಯುವ ಪ್ರದೇಶಗಳಲ್ಲಿ, ಲದ್ದಿ ಹುಳುವಿನ (ಸ್ಪೋಡೋಪ್ಟರಾ ಫ್ರೂಜಿಪರ್ಡ ಮತ್ತು ಲೆಪಿಡೋಪ್ಟೆರಾ ನಾಕ್ಟುಯಿಡೆ) ಹಾವಳಿಯನ್ನು ವರದಿ ಮಾಡಲಾಗಿದೆ

ಅಮೇರಿಕ ಖಂಡದಲ್ಲಿ ಲದ್ದಿ ಹುಳುವನ್ನು (*ಸ್ಪೋಡೋಪ್ಟರಾ ಫ್ರೂಜಿಪರ್ಡ* ಮತ್ತು *ಲೆಪಿಡೋಪ್ಟೆರಾ ನಾಕ್ಟುಯಿಡೆ*) ಆಕ್ರಮಣಾಕಾರಿ ಕೀಟವೆಂದು ಈಗಾಗಲೆ ಗುರುತಿಸಲಾಗಿದ್ದು, ಮೇ ಮತ್ತು ಜೂನ್, 2018 ರಲ್ಲಿ ಭಾರತದಲ್ಲಿ ಮೊದಲನೆ ಬಾರಿ ಬೆಂಗಳೂರು (ಗ್ರಾ) ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮೆಕ್ಕೆಜೋಳ ಬೆಳೆಯುವ ಪ್ರದೇಶದಲ್ಲಿ ಗುರುತಿಸಲಾಗಿದೆ. ಸಮಗ್ರ ನಿರ್ವಹಣೆಯ ತಾಂತ್ರಿಕ ಮಾಹಿತಿಯನ್ನು ನೀಡಲಾಗಿದೆ. ಈ ಕೀಟದ ಬಾಧೆಯು ಮೆಕ್ಕೆಜೋಳದಲ್ಲಿ ಪ್ರತಿಶತ 12 ರಿಂದ 48ರಷ್ಟು ತೀವ್ರತೆಯಲ್ಲಿ ಗೌರಿಬಿದನೂರು, ಚಿಕ್ಕಬಳ್ಳಾಪುರ ಮತ್ತು ದೊಡ್ಡಬಳ್ಳಾಪುರದಲ್ಲಿ ಕಾಣಿಸಿಕೊಂಡಿದೆ. ಮೊಟ್ಟೆಯಿಂದ ಹೊರಬಂದ ಮರಿ ಹುಳುಗಳು ಎಲೆಯನ್ನು ಕೆರೆದುತಿನ್ನುವುದರಿಂದ ರಂಧ್ರಗಳು ಉಂಟಾಗುತ್ತದೆ. ಬಿಳಿಯ ಮಚ್ಚೆಗಳನ್ನು ಎಲೆಯ ಮೇಲೆ ಕಾಣಬಹುದು. ಕಾಂಡದ ಮಧ್ಯದ ಬೆಳೆಯುವ ಸುಳಿಯನ್ನು ತಿನ್ನುವುದಲ್ಲದೆ ಬೆಳೆದ ಹುಳುಗಳು ಬೆಳೆಯ ಎಲೆಗಳನ್ನು ತಿನ್ನುವುದರಿಂದ ಗಿಡದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ ಮತ್ತು ಎಲೆಗಳು ಹರಿದರೀತಿಯಲ್ಲಿ ಕಾಣಿಸುತ್ತವೆ. ಕರ್ನಾಟಕದಲ್ಲಿ ಮುಸುಕಿನ ಜೋಳ, ಜೋಳ ಮತ್ತು ರಾಗಿ ಬೆಳೆಗಳಲ್ಲೂ ಇದರ ಹಾವಳಿಯನ್ನು ಗುರುತಿಸಲಾಗಿದೆ. ಪಾಪ್‌ಕಾರ್ನ್ ಮತ್ತು ಸ್ವೀಟ್ ಕಾರ್ನ್ ಅದ್ಯತೆಯ ಬೆಳೆಗಳಾಗಿವೆ. ತನ್ನ ಜೀವನಚಕ್ರವನ್ನು 36 ರಿಂದ 42 ದಿನಗಳಲ್ಲಿ ಪೂರ್ಣಗೊಳಿಸುತ್ತವೆ. ಈ ಕೀಟವು ಇತರೆ ದೇಶಗಳಲ್ಲಿ 100ಕ್ಕೂ ಹೆಚ್ಚು ಬೆಳೆಗಳ ಮೇಲೆ ಕಂಡು ಬಂದಿರುವುದರಿಂದ ಆತಂಕಕಾರಿ ಕೀಟವಾಗಿದೆ.

ಹತೋಟಿ ಕ್ರಮಗಳು (ಸಾಂದರ್ಭಿಕ ಶಿಫಾರಸ್ಸು) : ಗುಂಪಾಗಿಟ್ಟಿರುವ ಮೊಟ್ಟೆಗಳನ್ನು ಕೈಯಿಂದ ಸಂಗ್ರಹಿಸಿ ನಾಶಪಡಿಸಬೇಕು. ಹಾವಳಿಯು ಕಡಿಮೆ ಇದ್ದಲ್ಲಿ ಅಥವಾ ಮರಿಹುಳು ಕಂಡ ತಕ್ಷಣ ಶೇ. 5ರ ಅಜಾಡಿರಾಕ್ಟಿನ್ (ಬೇವಿನ ಮೂಲದ ಕೀಟನಾಶಕ) 0.5 ಮಿ.ಲಿ ಒಂದು ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಅಥವಾ ನ್ಯುಮುರಿಯಾ ರಿಲೇ ಕೀಟ ರೋಗ ಪೀಡಿತ ಶಿಲೀಂಧ್ರವನ್ನು 2 ಗ್ರಾಂ ಪ್ರತಿ ಲೀಟರ್ ನೀರಿಗೆ ಮಿಶ್ರಣಮಾಡಿ ಸಿಂಪಡಿಸಬೇಕು. ಬಾಧೆಯು ತೀವ್ರವಾಗಿದ್ದಲ್ಲಿ ಇಮಾಮೆಕ್ಟಿನ್ ಬೆಂಜೋಯೇಟ್ 5% ಎಸ್.ಜಿ. @ 0.4 ಗ್ರಾಂ ಅಥವಾ ಸ್ಪೈನೋಸಾಡ್45 ಎಸ್.ಸಿ. 0.3 ಮಿ.ಲಿ. ಅಥವಾ ಥೈಯೊಡಿಕಾರ್ಬ್ 2 ಗ್ರಾಂ. ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ಸಿಂಪಡಿಸುವುದು. ಅಥವಾ ಬೆಳೆದ ಹುಳುಗಳನ್ನು ಹತೋಟಿಯಲ್ಲಿಡಲು ವಿಷ ಪಾಷಣದ ಬಳಕೆ: 10 ಕೆ.ಜಿ. ಗೋದಿ, ತೌಡು ಅಥವಾ ಅಕ್ಕಿ ತೌಡು (ಬೂಸ), 1 ಕೆ.ಜಿ. ಬೆಲ್ಲಕ್ಕೆ ಬೇಕಾಗುವಷ್ಟು ತಕ್ಕಮಟ್ಟಿಗೆ ನೀರನ್ನು ಬೆರೆಸಿಟ್ಟು ಮಾರನೇ ದಿನ 100 ಗ್ರಾಂ. ಥೈಯೋಡಿಕಾರ್ಬ್ (ಪ್ರತಿ ಕೆ.ಗ್ರಾಂ. ಭತ್ತದ ತೌಡಿಗೆ 10 ಗ್ರಾಂ. ನಂತೆ) ಕೀಟನಾಶಕ ಮಿಶ್ರಣಮಾಡಿ ಬೆಳೆಯ ಸುಳಿಯಲ್ಲಿ ಉದುರಿಸುವುದು.

method has given very good accuracy with respect to all the soil parameters studied (pH, EC, NPK). Similarly, crop evaluation study on paddy, ragi and hybrid maize have given higher yield as per the fertilizer recommendations through online STCR approach compared to RDF.

3.6.2 First report of Fall Army Worm (FAW), *Spodoptera frugiperda* (J E Smith) (Lepidoptera, Noctuidae) on Maize crop, a New Invasive Pest in Karnataka, India

The occurrence of the fall armyworm, *Spodoptera frugiperda* (J.E. Smith) (Lepidoptera: Noctuidae) in India, which is a devastating pest in American continent on several crops was reported on Maize in Bengaluru Rural and Chikkaballapur districts during May and June, 2018. Severe damage (12-48 %) by *Spodoptera frugiperda* was recorded in several villages of Gouribidanur, Chikkaballapura and Doddaballapura taluks. Maize plants damaged by the early instar larvae showed characteristic pin holes symptoms on the leaves. Grown up larvae were confined to the deep whorls and fed extensively on inner whorl. Such plants appeared to have been torn. In Karnataka incidence was also noticed on Sorghum and finger millet. The preferred host plants include Popcorn and Sweet corn. The FAW completes its life cycle in 36-42 days. The caterpillars feed on leaves, stems and reproductive parts of more than 100 plant species hence it is alarming in Karnataka state.

Management Strategies: (Adhoc recommendation) Collection and destruction of egg masses. When incidence is low or at early instar stage, spray azadirachtin 5 % (neem based insecticide) @ 0.5 ml per liter of water or spraying with fungal pathogen, *Nomurea rileyi* @ 2 grams per liter of water. When incidence is high, spray with emamectin benzoate 5 SG @ 0.4 grams per liter water. Sweet corn /pop corn growers may use spinosad 45 SC @ 0.3 ml per liter of water or apply poison bait (for one acre - 10 kg rice bran mixed with 2 kg of jaggery mixed with required quantity of water to make a dough consistency, allow it to ferment overnight and mix with insecticide next day) and thiodicarb 75 WP @ 100 grams in whorls.

3.7. ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದ ಹೊಸ ತಂತ್ರಜ್ಞಾನಗಳು

3.7.1 ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿಗಳು/ಸಂಕರಣ ತಳಿಗಳು : 7 (ಹೊಸದು–5, ಅನುಮೋದನೆ–2)

ಒಟ್ಟು ಏಳು ತಳಿಗಳು/ಸಂಕರಣ ತಳಿಗಳನ್ನು 2018–19 ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಲಾಗಿದೆ. ಅವುಗಳ ವಿವರಗಳನ್ನು ಮುಂದೆ ನೀಡಲಾಗಿದೆ :

3.7 New Technologies Developed and Released

3.7.1 Varieties/Hybrids recommended for release: 7 (5 new + 2 endorsement)

In total seven varieties / hybrids have been recommended for release during 2018-19. The details of the same are given.

ಕೋಷ್ಟಕ 43 : 2018–19 ನೇ ಸಾಲಿನಲ್ಲಿ ಬಿಡುಗಡೆಗೆ ಶಿಫಾರಸ್ಸು ಮಾಡಿದ ತಳಿ/ಸಂಕರಣ ತಳಿಗಳ ವಿವರ
Table 43 : Varieties / hybrids recommended for release during 2018-19

ಬೆಳೆಗಳು / Crops	ಸಂಖ್ಯೆ/No.	ತಳಿ/Variety/ ಸಂಕರಣ/Hybrid	ಶಿಫಾರಸ್ಸು ಮಾಡಿ ವಲಯ/ Zone Recommended
Cereals/ಏಕದಳ – Paddy/ಭತ್ತ	1	ಗಂಗಾವತಿ ಸೋನಾ (ಐ.ಇ.ಟಿ–20594) Ganagvathi Sona (IET-20594)	ವಲಯ–6 Zone 6
Pulses/ದ್ವಿದಳ – Cowpea/ಅಲಸಂದೆ – Black gram/ಉದ್ದು	2	PGCP-6 /ಪಿ.ಜಿ.ಸಿ.ಪಿ.–6 LBG-791/ಎಲ್.ಬಿ.ಜಿ.–791	ವಲಯ 5 ಮತ್ತು 6 Zone 5 and 6
Oilseeds/ದ್ವಿದಳ – Sunflower/ಸೂರ್ಯಕಾಂತಿ	1	ಕೆ.ಬಿ.ಎಸ್.ಹೆಚ್.–78 KBSH 78	ವಲಯ–6 Zone 6
Commercial /ವಾಣಿಜ್ಯ – Sugarcane/ಕಬ್ಬು	2	ಸಿ.ಓ.ವಿ.ಸಿ.–16061, ಸಿ.ಓ.ವಿ.ಸಿ.–16062 COVC-16061, COVC-16062	ವಲಯ–6 Zone 6
Horticulture/ತೋಟಗಾರಿಕೆ – Jack Fruit/ಹಲಸು	1	ಲಾಲ್‌ಬಾಗ್ ಮಧುರ Lalbagh Madhura	ವಲಯ 5 Zone 5
ಒಟ್ಟು/Total	7		

ಅ) **ಭತ್ತ– ಗಂಗಾವತಿ ಸೋನಾ (ಐ.ಇ.ಟಿ–20594)**: ಮಧ್ಯಮಾವಧಿಯ (130–135 ದಿನಗಳು) ತಳಿಯಾಗಿದ್ದು, ಸುಮಾರು 90–100 ಸೆಂ.ಮೀ. ಎತ್ತರ ಬೆಳೆಯುತ್ತದೆ. ಈ ತಳಿಯು ಮಧ್ಯಮ ವರ್ಗಕ್ಕೆ ಸೇರಿದ್ದು, ಗಿರಣಿಯ ಗುಣಧರ್ಮ ಹಾಗೂ ಅನ್ನದ ಗುಣಮಟ್ಟ ಉತ್ತಮವಾಗಿರುತ್ತದೆ. ಉತ್ತಮ ನಿರ್ವಹಣೆಯಲ್ಲಿ ಹೆಕ್ಟೇರಿಗೆ 6.5–7.0 ಟನ್ ಧಾನ್ಯ ಹಾಗೂ 8.0–8.5 ಟನ್ ಹುಲ್ಲಿನ ಇಳುವರಿಯನ್ನು ಪಡೆಯಬಹುದು. ಕರ್ನಾಟಕದ ಕೃಷಿ ವಲಯ–3 ರಲ್ಲಿ ಈಗಾಗಲೆ ಅಧಿಕೃತವಾಗಿ ಬಿಡುಗಡೆಯಾಗಿದ್ದು, ಈಗ ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಆ) **ಅಲಸಂದೆ– ಪಿ.ಜಿ.ಸಿ.ಪಿ–6** : ಈ ತಳಿಯು ಅಲ್ಪಾವಧಿ ತಳಿಯಾಗಿದ್ದು, 70–75 ದಿನಗಳಲ್ಲಿ ಕಟಾವಿಗೆ ಬರುತ್ತದೆ ಮತ್ತು ಅಧಿಕ ಬೀಜದ ಇಳುವರಿ (700–800 ಕಿ.ಗ್ರಾಂ/ಹೆ) ಕೊಡುತ್ತದೆ. ಈ ತಳಿಯು ಪೂರ್ವ ಮುಂಗಾರು ಹಾಗು ತಡ ಮುಂಗಾರು ಬೇಗನೆ ಹಾಗೂ ಅಂತರ ಬೆಳೆಯಾಗಿ ಬಿತ್ತನೆ ಮಾಡಲು ಸೂಕ್ತವಾದ ತಳಿಯಾಗಿದೆ. ಈ ತಳಿಯ ಬೀಜಗಳು ತಿಳಿ ಕಂದು ಬಣ್ಣದಿಂದ ಕೂಡಿರುತ್ತವೆ. ಈ ತಳಿಯು ಅಂತರ ಬೆಳೆಯಾಗಿ ಬೆಳೆಯಲು ಉತ್ತಮ ಗುಣಗಳನ್ನು ಹೊಂದಿದೆ. ವಲಯ–5 ಮತ್ತು ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

a) **Paddy - Ganagvathi Sona (IET-20594):** It is medium duration variety that matures in 130-135 days. This variety belongs to moderate plant type with better threshing quality and cooking quality. Under better management practices, variety yields 6.5-7.0 ton/ha of grain and 8.0-8.5 ton/ha of straw. It was released and endorsed in zone -3 and now it is recommended for zone-6.

b) **Cowpea: PGCP-6:** It is a short duration variety that matures in 70 to 75 days yielding 700 to 800kgs/ha. It is suitable for early kharif, late kharif, summer and intercropping systems. The seeds are light brown in colour and recommended for zone 5 and 6 of Karnataka.

ಇ) **ಉದ್ದು– ಎಲ್.ಬಿ.ಜಿ–791:** ಈ ತಳಿಯು 75–80 ದಿನಗಳಲ್ಲಿ ಕಟಾವಿಗೆ ಬರುವ ಅಲ್ಪಾವಧಿ ತಳಿಯಾಗಿದ್ದು, ಒಂದೇ ಬೀಡಿಗೆ ಕಟಾವು ಮಾಡಬಹುದು. ಹೆಚ್ಚು ಬೀಜದ ಇಳುವರಿ (10–12 ಕ್ವಿ/ಹೆ) ಕೊಡುತ್ತದೆ ಹಾಗೂ ಹಳದಿ ಎಲೆ ರೋಗಕ್ಕೆ ನಿರೋಧಕತೆ ಹೊಂದಿರುತ್ತದೆ. ಹಸಿರು ಕಾಯಿಗಳ ಹೊರ ಮೈಯಲ್ಲಿ ಕಡಿಮೆ ರೋಮಗಳಿರುತ್ತವೆ. ಈ ತಳಿಯನ್ನು ವಲಯ–5 ಮತ್ತು ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಈ) **ಸಂಕರಣ ಸೂರ್ಯಕಾಂತಿ– ಕೆ.ಬಿ.ಎಸ್.ಹೆಚ್–78 :** ಈ ತಳಿಯು ಹೆಚ್ಚು ಬೀಜ ಮತ್ತು ಎಣ್ಣೆ ಇಳುವರಿ ಕೊಡುವ ಅಲ್ಪಾವಧಿ (85 ದಿನಗಳು) ಸಂಕರಣ ತಳಿಯಾಗಿದ್ದು, 10–15 ದಿನಗಳ ಮುಂಚಿತವಾಗಿ ಕೊಯ್ಲಿಗೆ ಬರುತ್ತದೆ. ಇದರ ಸರಾಸರಿ ಬೀಜದ ಸುರಕ್ಷಿತ ನೀರಾವರಿಯಡಿಯಲ್ಲಿ 17–23 ಕಿ.ಗ್ರಾಂ. ಹಾಗೂ ಮಳೆಯಾಶ್ರಿತ ಪ್ರದೇಶದಡಿಯಲ್ಲಿ 10–12 ಕಿ.ಗ್ರಾಂ. ಇಳುವರಿಯನ್ನು ನೀಡುತ್ತದೆ. ಎಣ್ಣೆ ಪ್ರಮಾಣವು 39 ರಿಂದ 41 ಆಗಿರುತ್ತದೆ. ಈ ತಳಿಯು ಸದೃಡಕಾಂಡ ಮತ್ತು ಮಧ್ಯಮ ಎತ್ತರ ಹೊಂದಿದ್ದು, ನೆಟ್ಟಗಿನ ಉತ್ತಮ ಸಸ್ಯ ವಿಧವಾಗಿದೆಹ್ರೀ ತಳಿಯನ್ನು ಕರ್ನಾಟಕದ ವಲಯ–5 ರಲ್ಲಿ ಈಗಾಗಲೇ ಅಧಿಕೃತವಾಗಿ ಶಿಫಾರಸ್ಸು ಮಾಡಲಾಗಿದ್ದು, ಈಗ ವಲಯ–4, 6 ಮತ್ತು 7ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಉ) **ಕಬ್ಬು– ಸಿ.ಓ.ವಿ.ಸಿ–16061:** ಈ ತಳಿಯು ಅಲ್ಪಾವಧಿ ತಳಿಯಾಗಿದ್ದು, 10 ತಿಂಗಳಿಗೆ ಕಟಾವಿಗೆ ಬರುತ್ತದೆ ಮತ್ತು ಹೆಚ್ಚಿನ ಇಳುವರಿ (160–165 ಟನ್/ಹೆ) ಕೊಡುತ್ತದೆ. ಜನವರಿ–ಫೆಬ್ರವರಿ ತಿಂಗಳ ನಾಟಿಗೆ ಸೂಕ್ತವಾದ ತಳಿಯಾಗಿದೆ. ಈ ತಳಿಯು ಉತ್ತಮ ತೆಂಡೆಯೊಡೆಯುವ ಸಾಮರ್ಥ್ಯವನ್ನು ಹೊಂದಿದ್ದು 5 ಅಡಿ ಅಂತರ ಬೇಸಾಯ ಹಾಗೂ ಕೂಳೆ ಬೆಳೆಗೂ ಸೂಕ್ತವಾದ ತಳಿಯಾಗಿದೆ. ನೀರಿನ ಕೊರತೆ ತಡೆದುಕೊಳ್ಳುವ ಗುಣವನ್ನು ಹೊಂದಿರುತ್ತದೆ. ಬೆಲ್ಲ ತಯಾರಿಕೆಗೆ ಯೋಗ್ಯವಾದ ತಳಿಯಾಗಿದೆ. ಈ ತಳಿಯನ್ನು ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಊ) **ಕಬ್ಬು– ಸಿ.ಓ.ವಿ.ಸಿ–16062:** ಈ ತಳಿಯು ಮಧ್ಯಮಾವಧಿ ತಳಿಯಾಗಿದ್ದು, ಜುಲೈ ನಿಂದ ನವೆಂಬರ್ ವರೆಗೆ ನಾಟಿ ಮಾಡಲು ಸೂಕ್ತವಾದ ತಳಿಯಾಗಿದ್ದು, ಹೆಚ್ಚಿನ ಇಳುವರಿ (165–170 ಟನ್/ಹೆ) ಕೊಡುತ್ತದೆ. ಈ ತಳಿಯು ಉತ್ತಮ ತೆಂಡೆಯೊಡೆಯುವ ಸಾಮರ್ಥ್ಯವನ್ನು ಹೊಂದಿದ್ದು, 5 ಅಡಿ ಅಂತರ ಬೇಸಾಯ ಹಾಗೂ ಕೂಳೆ ಬೆಳೆಗೂ ಸೂಕ್ತವಾಗಿದ್ದು, ಬರ ಸಹಿಷ್ಣುತೆ ಗುಣ ಮತ್ತು ಬೆಲ್ಲ ತಯಾರಿಕೆಗೆ ಯೋಗ್ಯವಾಗಿದೆ. ಈ ತಳಿಯನ್ನು ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

ಋ) **ಹಲಸು–ಲಾಲ್‌ಬಾಗ್ ಮಧುರ:** ಸುಮಾರು 10–15 ವರ್ಷದ ಮರವು 80–100 ಕಾಯಿಗಳನ್ನು ಬಿಡುತ್ತದೆ ಮತ್ತು ಸರಾಸರಿ ಪ್ರತಿ ಮರಕ್ಕೆ 640–800 ಕಿ.ಗ್ರಾಂ. ವರೆಗೆ ಇಳುವರಿಯನ್ನು ಕೊಡುತ್ತದೆ. ಇದರ ಹಣ್ಣಿನ ತೂಕವು 8–10 ಕಿ.ಗ್ರಾಂ (ಸರಾಸರಿ 7.70 ಕಿ.ಗ್ರಾಂ) ನಷ್ಟಿದ್ದು, ಒಂದು ತೊಳೆಯ ತೂಕವು 68–120 ಗ್ರಾಂ ಇರುತ್ತದೆ. ತೊಳೆಗಳು ಹಳದಿ ಬಣ್ಣ ಹೊಂದಿದ್ದು, ತೊಳೆಗಳ ಸಕ್ಕರೆ ಅಂಶವು 29 ರಿಂದ 30 ಬ್ರಿಕ್ಸ್‌ನಷ್ಟಿದೆ. ಹಣ್ಣಿನ ತೊಳೆಗಳ ಮಾರಾಟಕ್ಕೆ ಮತ್ತು ಹಣ್ಣಿನ ಮೌಲ್ಯವರ್ಧಿತ

c) **Blackgram: LBG -791:** This is a short duration variety that matures uniformly in 75 to 85 days and can be harvested at one stroke. It is resistant to Yellow mosaic virus disease. It is recommended for zone 5 and zone 6

d) **Hybrid Sunflower: KBSH-78:** It is an early duration hybrid maturing in 85 days. It has an average seed yield of 17-23 q/ha under protective irrigation and 10-12 q/ha under rainfed conditions. The oil percentage ranges from 39 to 41. The variety has medium height and sturdy stem with good plant type. The hybrid is recommended for cultivation in Zone-5 and now it is endorsed for Zone-4, Zone- 6 and Zone -7 of Karnataka.

e) **Sugarcane COVC -16061:** COVC 16061 is an early maturing variety. It comes to harvest in 10 months and it gives more yield (140-150 tons /ha). It is suitable for planting even during Jan-Feb months. It has got high tillering ability so suitable for planting in wider row spacing (5 ft) and possesses good ratooning ability. It withstands moisture stress situations. It is good for Jaggery making and recommended for cultivation in Zone-6 of Karnataka.

f) **Sugarcane COVC – 16062:** It is mid late maturity variety suitable for planting during July to November months. It is high tonnage variety (165-170 t/ha) and due to its high tillering ability recommended for planting in wider row spacing (5 ft). It has got good ratooning ability & withstands moisture stress conditions. It is good for jaggery making and recommended for cultivation in Zone-6 of Karnataka.

g) **Jack Fruit –Lalbaugh Madhura:** Trees aged about 10 to 15 years yields around 80 to 100 fruits per tree per year. The average yield per tree will be around 640 to 800 kgs. The fruit weight ranges from 8 to 10 kgs (Average - 7.70kgs). The individual flakes weigh 68 to 120 g. Flakes are yellow with thick pulp and TSS (Total Soluble Solids) of 29 to 30^0 brix. The fruit is suitable for table purpose (sale of fresh flakes)

ಉತ್ಪನ್ನಗಳಾದ ಸ್ಕ್ವಾಷ್, ಜಾಮ್ ಹಾಗೂ ತಿರುಳಿನ ಉಪಯೋಗಕ್ಕೆ ಅತ್ಯುತ್ತಮ ತಳಿಯಾಗಿದೆ. ಈ ತಳಿಯನ್ನು ವಲಯ–5ಕ್ಕೆ ಶಿಫಾರಸ್ಸು ಮಾಡಲಾಗಿದೆ.

and for preparation of value added products such as squash, jam and pulp. This variety is recommended for Zone 5.

3.7.2 ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೆ ಶಿಫಾರಸ್ಸು ಮಾಡಲಾದ ನೂತನ ತಾಂತ್ರಿಕತೆಗಳು

3.7.2.1 ಬೆಳೆ ಅಭಿವೃದ್ಧಿ (2)

ಕೃಷಿ ಜೈವಿಕ ತಂತ್ರಜ್ಞಾನ (1)

ಹಲಸಿನಲ್ಲಿ ಕಣ್ಣುಕಸಿ ಪದ್ಧತಿ– ಹಲಸಿನ ಸಸ್ಯಾಭಿವೃದ್ಧಿ ವಿಧಾನದ ತಂತ್ರಜ್ಞಾನ: ಹಲಸಿನಲ್ಲಿ ಮೇಣದ ಅಂಶ ಇರುವುದರಿಂದ, ಮೃದುಕಾಂಡ ಕಸಿಯಲ್ಲಿ ಯಶಸ್ಸು ಬಹಳ ಕಡಿಮೆಯಿರುತ್ತದೆ. ಆದ್ದರಿಂದ ಕಣ್ಣುಕಸಿ ಮಾಡುವ ವಿಧಾನವನ್ನು ಅಳವಡಿಸಿ ಶೇಕಡ 60 ರಿಂದ 75 ರಷ್ಟು ಯಶಸ್ಸು ಪಡೆಯಲು ಸಾಧ್ಯವಾಗಿದೆ. ಎರಡರಿಂದ ಎಂಟು ತಿಂಗಳ ವಯಸ್ಸಿನ ಸಸ್ಯದ ಬೇರು ಉತ್ತಮ ಫಲಿತಾಂಶವನ್ನು ಕೊಡುತ್ತದೆ. ಕಸಿಕಡ್ಡಿಯು ಪೆನ್ಸಿಲ್ ಗಾತ್ರವನ್ನು ಹೊಂದಿರಬೇಕು, ಆರು ತಿಂಗಳು ಬಲಿತಿರಬೇಕು ಹಾಗು ಹಸಿರು ಬಣ್ಣ ಹೊಂದಿರಬೇಕು. ಕಸಿ ಮಾಡಲು ಸೂಕ್ತ ಸಮಯ ಫೆಬ್ರವರಿಯಿಂದ ಸೆಪ್ಟೆಂಬರ್ ತಿಂಗಳು.

3.7.2 New Technologies Developed for Inclusion in Package of Practices

3.7.2.1 Crop Improvement

Plant Biotechnology (1)

Patch budding technique in Jackfruit: Latex of Jackfruit poses problems in soft wood grafting hence has low success rate. Patch budding is practically adoptable technique with 60 to 70 per cent success. The root stocks of 2 to 8 months old with a pencil thickness stem gives better success. The scions which are 6 months old and green are suitable for budding. The best season for higher success is February to September.

ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ (1)

ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ಸಸ್ಯಜನ್ಯ ಬೀಜೋಪಚಾರದ ಮೂಲಕ ಶೇಖರಣಾ ಬೀಜಗಳ ನಿರ್ವಹಣೆ ಹಾಗು ಶೇಖರಣೆಯಲ್ಲಿ ಅಲಸಂದೆ ಬೀಜದ ಗುಣಮಟ್ಟದ ಮೇಲಾಗುವ ಪರಿಣಾಮ: ಅಲಸಂದೆಯ ಬೀಜವನ್ನು ಬಜೆ ಎಣ್ಣೆಯಿಂದ ಪ್ರತಿ ಕಿ.ಗ್ರಾಂ. ಬೀಜಕ್ಕೆ 10 ಮಿ.ಲೀ. ನಂತೆ ಲೇಪಿಸಿ ಬೀಜೋಪಚಾರ ಮಾಡಿ ಗೋಣಿಚೀಲದಲ್ಲಿ ಸಂಗ್ರಹಿಸುವುದರಿಂದ ಸಂಗ್ರಹಣ ಕೀಟದಿಂದಾಗುವ ಹಾನಿಯು, ಅನುಮತಿಯ ಪರಿಮಿತಿಗಿಂತ ಒಳಗಿದ್ದು, ಬೀಜದ ಗುಣಮಟ್ಟವನ್ನು 12 ತಿಂಗಳ ಕಾಲ ಬೀಜ ಪ್ರಮಾಣಿತ ಪರಿಮಿತಿಗಿಂತ ಹೆಚ್ಚಿರುತ್ತದೆ. ಈ ಬೀಜೋಪಚಾರವು ಕೀಟನಾಶಕ ಬೀಜೋಪಚಾರದಷ್ಟೇ ಬೀಜಗುಣಮಟ್ಟವನ್ನು 12 ತಿಂಗಳವರೆಗೆ ಕಾಪಾಡುವುದರಿಂದ ಇದನ್ನು ಪರ್ಯಾಯ ಬೀಜೋಪಚಾರ ಮತ್ತು ಸಾವಯವ ಬೀಜೋಪಚಾರವಾಗಿ ಅಲಸಂದೆಯಲ್ಲಿ ಬಳಸಬಹುದು.

Seed Science and technology (1)

Management of storage insect through botanicals and their influence on seed quality of cowpea during storage: Cowpea seeds treated with of *Acorus calamus* formulation @10ml/kg of seeds and stored in gunny bag can prevent the storage insect pest of cowpea up to 12 months of storage and seed quality parameters were above minimum seed certification standards. This botanical seed treatment performs similar to that of insecticidal seed treatment so the present technology is an alternative to organic seed treatment.

3.7.2.2 ಬೆಳೆ ಉತ್ಪಾದನೆ (8)

3.7.2.2 Crop production (8)

ಬೇಸಾಯ ಶಾಸ್ತ್ರ (6)

Agronomy (6)

ಅ) **ಹತ್ತಿ ಬೆಳೆಯಲ್ಲಿ ಅಂತರ ಬೇಸಾಯ ಹಾಗೂ ಕಳೆ ನಿರ್ವಹಣೆ:** ಬಿತ್ತನೆಯಾದ ದಿವಸ ಅಥವಾ ಬಿತ್ತನೆಯಾದ 48 ಘಂಟೆಯೊಳಗೆ ಎಕರೆಗೆ 100 ಗ್ರಾಂ. ಡೈಯುರಾನ್ ಶೇ.80 ಅಥವಾ 800 ಮಿ.ಲೀ. ಫ್ಲೂಕ್ಲೋರಾಲಿನ್ 45 ಇ.ಸಿ. ಅಥವಾ 1.3 ಲೀ. ಪೆಂಡಿಮೆಥಾಲಿನ್ ಶೇ.30 ಇ. ಸಿ. ಅಥವಾ 800 ಮಿ.ಲೀ ಬ್ಲೂಟಾಕ್ಲೋರ್ ಶೇ. 50 ಇ.ಸಿ. ಸುಮಾರು 300 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡುವುದು ಅಥವಾ 400 ಮಿ.ಲೀ. ಕ್ವಿಜಲೋಫಾಪ್–ಪಿ–ಈಥೈಲ್ ಶೇ. 5 ಇ.ಸಿ ಅನ್ನು 250 ಮಿ.ಲೀ ಪೈರಿಥೈಯೋಬ್ಯಾಕ್ ಸೋಡಿಯಂ ಶೇ. 10 ಇ.ಸಿ ಕಳೆನಾಶಕಗಳನ್ನು 300 ಲೀಟರ್ ನೀರಿನಲ್ಲಿ ಬೆರೆಸಿ ಕಳೆಗಳಲ್ಲಿ 2–4 ಎಲೆಗಳು ಕಂಡು ಬಂದಾಗ ಅಥವಾ ಬಿತ್ತನೆ ಮಾಡಿದ 20 ದಿವಸಗಳಲ್ಲಿ ಸಿಂಪರಣೆ ಮಾಡುವುದು, ಸಿಂಪರಣೆ

a) **Weed Management in Cotton:** Spraying of tank mix which includes quizalofop-P-ethyl (5 EC) 50 g a.i.+ pyrithiobac sodium 10 EC @62.5 g a.i./ha at 2-4 leaf stage + one hand weeding was found effective in controlling weeds besides increasing yield and fiber content (7.14% , 101 kg) of the cotton crop.

ಸಮಯದಲ್ಲಿ ಮಣ್ಣು ಹುಡಿಯಾಗಿದ್ದು, ಸಾಕಷ್ಟು ತೇವಾಂಶವಿರಬೇಕು. ಈ ಪದ್ಧತಿಯನ್ನು ಅಳವಡಿಸುವುದರಿಂದ 101 ಕೆ.ಜಿಯಷ್ಟು (ಶೇ. 7.14) ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

ಆ) **ಶೇಂಗಾದಲ್ಲಿ ಹನಿ ರಸಾವರಿ:** ಶಿಫಾರಸ್ಸಿನಂತೆ ಶೇ. 100ರ ಸಾರಜನಕ ಮತ್ತು ಪೊಟ್ಯಾಷ್ ಗೊಬ್ಬರಗಳನ್ನು, ಬಿತ್ತನೆಯಿಂದ 75 ದಿನಗಳವರೆಗೆ 15 ದಿನಗಳಿಗೊಮ್ಮೆ 6 ಸಮ ಕಂತುಗಳಲ್ಲಿ ಹನಿ ನೀರಾವರಿ ಮುಖಾಂತರ ನೀಡುವುದರಿಂದ ಪೋಷಕಾಂಶಗಳ ಸಮರ್ಥ ಬಳಕೆ ಹೆಚ್ಚಿಸುವುದರ ಜೊತೆಗೆ ಶೇ. 15 ರಿಂದ 20ರಷ್ಟು ಹೆಚ್ಚಿನ ಕಾಳಿನ ಇಳುವರಿ ಪಡೆಯಬಹುದು.

b) **Drip Fertigation in Groundnut:** Application of 100 per cent recommended dose of Nitrogen and Potassium through drip irrigation in six equal splits at fortnightly intervals starting from sowing to 75 days after sowing increases nutrient use efficiency apart from enhancing pod yield to the tune of 15 to 20 per cent.

ಇ) **ಶೇಂಗಾ ಬೆಳೆಯಲ್ಲಿ ಕಳೆ ನಿರ್ವಹಣೆ :** ಶೇಂಗಾ ಬೆಳೆಯಲ್ಲಿ ಉದಯೋತ್ತರ ಕಳೆನಾಶಕವಾದ ಸೊಡಿಯಂ ಅಸಿಫ್ಲೂರ್‌ಫೆನ್ 16.5 % + ಕ್ಲಾಡಿನಾಫಾಪ್–ಪ್ರೊಪರ್ಗಿಲ್ 8 % ಇ.ಸಿ. 206.25 + 100 ಗ್ರಾಂ. ಕ್ರಿಯಾಶೀಲ ವಸ್ತು / ಹೆಕ್ಟೇರ್ (a.i./ ha) ಅನ್ನು ಬಿತ್ತನೆಯಾದ 20–25 ನೇ ದಿವಸ ಸಿಂಪರಣೆ ಮಾಡುವುದರಿಂದ ಅಧಿಕ ಇಳುವರಿ (1548 ಕಿ.ಗ್ರಾಂ/ಹೆ), ಲಾಭ: ವೆಚ್ಚದ ಅನುಪಾತ (2.59) ಮತ್ತು ಕಡಿಮೆ ಕಳೆ ಸೂಚ್ಯಂಕ (ಶೇ.3.4) ದೊರಕಿದೆ ಹಾಗೂ ಉದಯೋತ್ತರ ಕಳೆನಾಶಕವನ್ನು ಬಳಸುವುದರಿಂದ ಕೂಲಿಯಾಳುಗಳ ಕೊರತೆಯ ಸನ್ನಿವೇಶದಲ್ಲಿ ಕೈ ಕಳೆ ತೆಗೆಯುವುದರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬಹುದು.

c) **Weed Management in Groundnut:** Application of 300 ml of quizalopop-p-ethyl 5 EC OR 625 ml of Sodium acifluorofen @16.5 % + Cladinofop-proparyl 8% EC (206.25 + 100g a.i./ ha) at 2-4 leaf stage (15-20 DAS) in 200 litres of water resulted in higher yield (1548Kgs/ ha), B:C ratio (2.59) and lower weed index (3.4%).

ಈ) **ಉದ್ದಿನ ಬೆಳೆಯಲ್ಲಿ ಕಳೆಗಳ ನಿರ್ವಹಣೆ :** ಉದ್ದು ಬೆಳೆಯಲ್ಲಿ ಉದಯೋತ್ತರ ಕಳೆನಾಶಕವಾದ ಸೋಡಿಯಂ ಅಸಿಫ್ಲೂರ್‌ಫೆನ್ 16.5 % + ಕ್ಲಾಡಿನಾಫಾಪ್–ಪ್ರೊಪರ್ಗಿಲ್ 8 % ಇ.ಸಿ. 206.25 + 100 ಗ್ರಾಂ. ಕ್ರಿಯಾಶೀಲ ವಸ್ತು / ಹೆಕ್ಟೇರ್ (a.i./ ha) ಅನ್ನು ಬಿತ್ತನೆಯಾದ 20–25 ನೇ ದಿವಸ ಸಿಂಪರಣೆ ಮಾಡುವುದರಿಂದ ಅಧಿಕ ಇಳವರಿ (1412 ಕಿ.ಗ್ರಾಂ/ಹೆ), ಲಾಭ: ವೆಚ್ಚದ ಅನುಪಾತ (2.80) ಮತ್ತು ಕಡಿಮೆ ಕಳೆ ಸೂಚ್ಯಂಕ (ಶೇ 8.6) ದೊರಕಿದೆ ಹಾಗೂ ಉದಯೋತ್ತರ ಕಳೆನಾಶಕವನ್ನು ಬಳಸುವುದರಿಂದ ಕೂಲಿಯಾಳುಗಳ ಕೊರತೆಯ ಸನ್ನಿವೇಶದಲ್ಲಿ ಕೈ ಕಳೆ ತೆಗೆಯುವುದರ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳಬಹುದು.

d) **Weed Management in Blackgram:** Application of Sodium Acifluorfen 16.5 % + Clodinafop-Propargyl 8 % EC (206.25 + 100 g a.i./ha) as a post emergent herbicide at 20-25 DAS (2-3 leaf stage of weed) was found to be effective in managing the weeds in blackgram with lower index (8.6%), higher yield (1412 kg/ ha) and B:C ratio (2.80).

ಉ) **ಅಲಸಂದೆ ಬೆಳೆಯಲ್ಲಿ ಕಳೆ ನಿರ್ವಹಣೆ :** ಬಿತ್ತನೆ ಮಾಡಿದ ಸುಮಾರು 20 ರಿಂದ 25 ದಿನಗಳೊಳಗೆ ಅಂದರೆ ಕಳೆಗಳು ಮೊಳಕೆ ಹೊಡೆದು 3 ರಿಂದ 4 ಎಲೆಗಳು ಕಾಣಿಸುವ ಸಂದರ್ಭದಲ್ಲಿ ಪ್ರತಿ ಎಕರೆಗೆ ಇಮಾಝಿತಾಪೈರ್ ಶೇ. 35 + ಇಮಾಝಮಾಕ್ಸ್ ಶೇ. 35 ಡಬ್ಯೂ.ಜಿ. 23 ಗ್ರಾಂ ಅನ್ನು 200 ಲೀಟರ್ ನೀರಿನಲ್ಲಿ ಬೆರೆಸಿ ಕಳೆಗಳ ಮೇಲೆ ಸಿಂಪಡಿಸುವುದರಿಂದ 970–980 ಕಿ.ಗ್ರಾಂ/ಹೆ ರಷ್ಟು ಅಧಿಕ ಇಳುವರಿ ಕೊಡುತ್ತದೆ ಹಾಗು ಕಳೆ ತೆಗೆಯುವ ವೆಚ್ಚದಲ್ಲಿ ಉದಯೋತ್ತರ ಕಳೆ ನಾಶಕಗಳನ್ನು ಬಳಸಿದಾಗ ಗಣನೀಯವಾಗಿ (ರೂ. 2788/ ಹೆ) ಉಳಿತಾಯವಾಗುತ್ತದೆ.

e) **Weed Management in Cowpea:** Post-emergence application of imazethapyr + imazamox @ 40 g a.i./ha was found effective in controlling weeds, improving seed yield (970-980 kg/ha) and profitability (save labour cost : Rs.2,788/ha) of the rainfed cowpea under labour scarce situations.

ಊ) **ಗ್ರೇನ್ ಅಮರಾಂತ್‌ಬೀಜದ ದಂಟಿನ ಬೆಳೆಯನ್ನು ಸುಧಾರಿತ ಬೇಸಾಯ ಕ್ರಮಗಳ ಪುಸ್ತಕದಲ್ಲಿ ಸೇರ್ಪಡಿಸುವುದು:** ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಆಧುನಿಕ ಬೇಸಾಯ ಪದ್ಧತಿಗಳ ಪೂರಕ ಕೈಪಿಡಿಯಲ್ಲಿ ಗೇನ್ ಅಮರಾಂತ್‌ಕ್ಕಾಗಿ ಕೃಷಿ ತಂತುಗಳನ್ನು ಕುರಿತು ಅಧ್ಯಯನವನ್ನು ಸೇರಿಸಲಾಗಿದೆ.

f) Grain Amaranth Chapter for PoP: Inclusion of a chapter "Agro-techniques for Grain Amaranth" in the supplementary book of POP (Pooraka kaipidi).

ಮಣ್ಣು ಮತ್ತು ಕೃಷಿ ರಸಾಯನ ಶಾಸ್ತ್ರ (2)

Soil Science & Agril. Chemistry (2)

ಅ) *ಭತ್ತದ ಬೆಳವಣಿಗೆ ಮತ್ತು ಹೆಚ್ಚಿನ ಇಳುವರಿಗಾಗಿ ಡಯಾಟೋಮೇಶಿಯಸ್ ಆರ್ಥ್ ಹಾಗೂ ಭತ್ತದ ಹೊಟ್ಟಿನ ಇದ್ದಿಲು / ಬೂದಿಯ ಬಳಕೆ:* ಸುಧಾರಿತ ಬೇಸಾಯ ಪದ್ಧತಿಗಳ ಶಿಫಾರಸ್ಸಿನ ಜೊತೆಗೆ 300 ಕಿ.ಗ್ರಾಂ. ನಷ್ಟು ಡಿ.ಇ ಹೆ–1 ಅನ್ನು ಸಿಲಿಕಾನ್ ಪೋಷಣೆಯಾಗಿ ನೀಡಿದಾಗ ಗರಿಷ್ಟ (10190 ಕಿ.ಗ್ರಾಂ/ಹೆ) ಒಣಹುಲ್ಲಿನ ಮತ್ತು ಧಾನ್ಯದ (6057 ಕಿ.ಗ್ರಾಂ/ಹೆ) ಇಳುವರಿಯನ್ನು ಪಡೆಯಬಹುದು. ಇದರ ಬಳಕೆಯಿಂದ ಹಾಗೂ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದು.

a) *Use of diatomaceous earth and rice hull ash for sustainable development of rice:* Along with the recommended dose of fertilizer as per package of practices, application of 300 kgs da/ha as silicon source enhance the fertility of the soil and increases the yield (10190 kgs /ha straw and 6057/ha grain yield).

ಆ) **ಸಂಕರಣ ಮೆಕ್ಕೆಜೋಳದ ಬೆಳೆಯಲ್ಲಿ ಪೊಟ್ಯಾಷ್‌ಗೆ ಪರ್ಯಾಯವಾಗಿ ಬಯೋ–ಕೆ ಬಳಕೆ :** ಶಿಫಾರಸ್ಸು ಮಾಡಿದ ಪ್ರಮಾಣದ (16 ಕಿ.ಗ್ರಾಂ/ಎಕರೆಗೆ) ಪೊಟಾಷ್ ಪೋಷಕಾಂಶವನ್ನು 140 ಕಿ.ಗ್ರಾಂ. ಬಯೊ–ಕೆ ಗೊಬ್ಬರದ ಮೂಲಕ ಹಾಕುವುದರಿಂದ ಹೆಚ್ಚಿನ ಮುಸುಕಿನ ಜೋಳದ ಧಾನ್ಯದ (ಶೇ. 14.3) ಇಳುವರಿಯನ್ನು ಹಾಗು ಸೆಪ್ಪೆ (ಶೇ.17.1) ಇಳುವರಿಯನ್ನು ಪಡೆಯಬಹುದು.

b) **Use of Bio-K as an alternative to potassic fertilizers in hybrid maize:** Application of recommended potassium (16kgs/ac) in the form of Bio K @140kgs/ac increases maize yield by 14.3 percent and straw yield by 17.1 per cent.

3.7.2.3 ಬೆಳೆ ಸಂರಕ್ಷಣೆ (7)

3.7.2.3 Crop Protection (7)

ಕೀಟಶಾಸ್ತ್ರ (4)

Entomology (4)

ಅ) **ಮೆಣಸಿನಕಾಯಿ ಬೆಳೆಯಲ್ಲಿ ರಾಸಾಯನಿಕ ಕೀಟನಾಶಕ ಬಳಸಿ ಥ್ರಿಪ್ಸ್ ಹತೋಟಿ:** ಸೈನೋಸೈಡ್ 45 ಎಸ್.ಸಿ (0.3 ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅನ್ನು 10–14 ದಿವಸಗಳ ಅಂತರದಲ್ಲಿ ಬಳಸಿ ಸಸಿ ಮಡಿಯಲ್ಲಿ/ ಬೆಳೆಯ ಮೇಲೆ ಸಿಂಪರಣೆ ಮಾಡಬೇಕು. ಈ ರೀತಿಯ ನಿಯಂತ್ರಣದಿಂದ ಥ್ರಿಪ್ಸ್ ಬಾಧೆಯಿಂದ ಉಂಟಾಗುವ ಮೆಣಸಿನಕಾಯಿ ಬೆಳೆಯ ನಷ್ಟವನ್ನು (ಶೇ. 80) ತಡೆಯಬಹುದು ಮತ್ತು ಥ್ರಿಪ್ಸ್‌ನ ನಿಯಂತ್ರಣದಿಂದ ಸರಾಸರಿ ಲಾಭ–ವೆಚ್ಚದ ಅನುಪಾತವು 15:1 ರ ಪ್ರಮಾಣದಲ್ಲಿ ಹೆಚ್ಚಿಸಬಹುದು

a) **Chemical control of thrips *Scirtothrips dorsalis* infesting chilli crop:** Application of Spinosad 45SC (0.3 ml/lit. of water) at 10 to 14 days interval resulted in more than 80% reduction in the population of thrips and accounted for favourable B:C ratio of 15:1.

ಆ) **ಎಲೆಕೋಸಿನಲ್ಲಿ ವಜ್ರದ ಬೆನ್ನಿನ ಪತಂಗದ ಸಮರ್ಥ ನಿರ್ವಹಣೆ:** ಎಲೆಕೋಸಿನಲ್ಲಿ ವಜ್ರಬೆನ್ನಿನ ಹುಳುವಿನ ನಿರ್ವಹಣೆಗಾಗಿ ಸೂಚಿತ ಸಮಗ್ರ ಕೀಟ ನಿರ್ವಹಣೆ ಪದ್ಧತಿಯನ್ನು ಬಳಸಬಹುದು

b) **Management of Diamond back moth in Cabbage:** Following IPM package can be used for efficient management of DBM in cabbage

ಇ) **ಬದನೆ ಬೆಳೆಯಲ್ಲಿ ಕಾಂಡ ಮತು ಕಾಯಿ ಕೊರೆಯುವ ಹುಳುವಿನ ನಿರ್ವಹಣೆ:** ಬದನೆ ಬೆಳೆಯಲ್ಲಿ ಪ್ರಾರಂಭಿಕ ಹಂತದಲ್ಲಿ (ಸಸ್ಯಕ ಹಂತ) ಹುಳುವಿನ ಹಾವಳಿ ಟೊಂಗೆಯ ಬಾಗದಲ್ಲಿ ಕಂಡಾಗ ಹುಳುವಿನ ಹತೋಟಿಗಾಗಿ ಒಂದು ಲೀಟರ್ ನೀರಿಗೆ 0.3 ಮಿ.ಲಿ ಕ್ಲೋರಂಟ್ರಾನಿಲಿಪ್ರೋಲ್ 18.5 SC ಕೀಟನಾಶಕಬೆರೆಸಿ ಸಿಂಪಡಿಸುವುದು. ಪ್ರತಿ ಎಕರೆಗೆ 60–75 ಮಿ.ಲೀ. ಕೀಟನಾಶಕವು ಬೇಕಾಗುತ್ತದೆ. ಹುಳುವಿನ ಬಾಧೆ ಕಾಯಿ ಹಂತದಲ್ಲಿ ಕಂಡಾಗ ಇಮಾಮೆಕ್ಟಿನ್ ಬೆಂಜೋಯೆಟ್ 5 SG ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ 0.4 ಗ್ರಾಂ ಬೆರೆಸಿ ಸಿಂಪಡಿಸುವುದು.

c) **Management of shoot and fruit borer in brinjal:** During vegetative stage (Incidence is observed on wilted shoots), spraying chlorantraniliprole 18.5SC@0.3ml/l (60-75ml/acre) and at fruit setting stage, spraying benzoate 5 – 0.4gm/l (80-100gm/acre) effectively controlled the borer to an extent of 95% and

ಎಲೆಕೋಸಿನ ಬೆಳೆಯಲ್ಲಿ ವಜ್ರಬೆನ್ನಿನಹುಳು ಹಾಗೂ ಇತರ ಪತಂಗಗಳ ನಿರ್ವಹಣೆಗಾಗಿ ಕೀಟನಾಶಕ ಬಳಕೆ ವೇಳಾ ಪಟ್ಟಿ
Schedule of insecticide application for the management of DBM and other lepidopteran pests in Cabbage

ಸಿಂಪರಿಸುವ ಸಮಯ/ Time of Application	ರಾಸಾಯನಿಕ/ಉತ್ಪನ್ನ Chemical/product	ಪ್ರಮಾಣ/ Dosage
ನಾಟಿ ಮಾಡುವ ಸಮಯ	ಸಾಸಿವೆ	25 ಸಾಲು ಎಲೆಕೋಸಿನ ನಂತರ 2 ಸಾಲು ಸಾಸಿವೆ
Transplanting time	Mustard	2 rows after 25 rows of cabbage
ನಾಟಿ ಮಾಡಿದ 7 ದಿನಗಳು ನಂತರ	ವೊಟಾ–ಟಿ ಬಲೆಗಳು(ಡಿ.ಬಿ.ಎಂ ಬಲೆಗಳು)	5 Nos./acre
7 Days after Transplanting	WOTA-T traps (DBM traps)	5 Nos./acre
ನಾಟಿ ಮಾಡಿದ 15 ದಿನಗಳು ನಂತರ	ನೀಮ್ ಸೋಪು	(10 gm/L)
15 Days after Transplanting	Neem Soap	(10 gm/L)
ನಾಟಿ ಮಾಡಿದ 18 ದಿನಗಳು ನಂತರ	ಸ್ಪಿನೊಸಾಡ್ 2.5 SC	1.25 ml/L
18 Days after Transplanting	Spinosad 2.5SC	1.25 ml/L
ನಾಟಿ ಮಾಡಿದ 21 ದಿನಗಳು ನಂತರ	ಎಮೆಮೆಕ್ಟಿನ್ ಬೆಂಜೋಯೇಟ್ 5 SG	0.5 g/L
21 Days after Transplanting	Emamectin benzoate 5 SG	0.5 g/L
ನಾಟಿ ಮಾಡಿದ 35 ದಿನಗಳು ನಂತರ	ಬಿ.ಟಿ. (ಡೈಪಲ್) ಸಿಂಪರಣೆ	(1 g/L)
35 Days after Transplanting	Spray of Bt (Dipel)	(1 g/L)
ನಾಟಿ ಮಾಡಿದ 50 ದಿನಗಳು ನಂತರ	ಕ್ಲೋರ್ಫನಾಪಿರ್ 10 SC	1.5 ml/L
50 Days after Transplanting	Chlorfenapyr 10 SC	1.5 ml/L
ನಾಟಿ ಮಾಡಿದ 65 ದಿನಗಳು ನಂತರ	ಸ್ಪಿನೊಸಾಡ್ 2.5 SC	1.25 ml/L
65 Days after Transplanting	Spinosad 2.5 SC	1.25 ml/L
ನಾಟಿ ಮಾಡಿದ 80 ದಿನಗಳು ನಂತರ	ಎಮೆಮೆಕ್ಟಿನ್ ಬೆಂಜೋಯೇಟ್ 5 SG	0.5 g/L
80 Days after Transplanting	Emamectin benzoate 5 SG	3.5 g/L

ಪ್ರತಿ ಎಕರೆಗೆ 80–100 ಗ್ರಾಂ ಕೀಟನಾಶಕವು ಬೇಕಾಗುತ್ತದೆ. ಪ್ರಸ್ತುತ ಶಿಫಾರಸ್ಸು ಮಾಡಿರುವ ಕೀಟನಾಶಕ ಪರಿಣಾಮಕಾರಿಯಾಗಿ ಇರುವುದಿಲ್ಲ. ಕೀಟದ ನಿರ್ವಹಣೆಗೆ ಹಲವು ಬಾರಿ ಸಿಂಪಡಣೆಯ ಅವಶ್ಯಕತೆ ಇರುವುದರಿಂದ ಪರಿಣಾಮಕಾರಿ ಹಾಗೂ ಸುರಕ್ಷಿತ ಕೀಟನಾಶಕಗಳ ಬಳಕೆ ಅವಶ್ಯವಾದದ್ದು (label claim).

increases yield by 59% when compared to presently recommended Malathion 50 EC.

ಈ) **ಟೊಮ್ಯಾಟೊ ಬೆಳೆಯಲ್ಲಿ ಎಲೆ ಸುರಂಗದ ಕೀಟ (ನಾಗಮುದ್ರೆ ಕೀಟ) ನಿರ್ವಹಣೆ:** ಟೊಮ್ಯಾಟೊ ಬೆಳೆಯಲ್ಲಿ ಎಲೆ ಸುರಂಗದ ಕೀಟ ಹುಳುವಿನ ಹತೋಟಿಗಾಗಿ ಸೈಯಾಂಟ್ರಾನಿಲಿಪ್ರೊಲ್ 10.26 OD ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ 1.8 ಮಿ.ಲೀ. ನಂತೆ ಬೆರೆಸಿ ಕೀಟ ಬಾಧೆ ಕಂಡಾಗ ಸಿಂಪಡಿಸುವುದು. ಪ್ರತಿ ಎಕರೆಗೆ 360 ಮಿ.ಲೀ. ಕೀಟನಾಶಕವು ಬೇಕಾಗುತ್ತದೆ. ಪ್ರಸ್ತುತ ಶಿಫಾರಸ್ಸಿನಲ್ಲಿರುವ ಟ್ರಯಜೋಫಾಸ್ 40 EC ಕೀಟನಾಶಕ ನಿಷೇಧಿಸಲಾಗಿದೆ (Banned) ಹಾಗೂ ಮತ್ತೊಂದು ಕೀಟನಾಶಕ ಇಮಿಡಾಕ್ಲೋಪ್ರಿಡ್ 17.8 SL ಪರಿಣಾಮಕಾರಿಯಾಗಿರುವುದಿಲ್ಲ ಮತ್ತು ಈ ಕೀಟನಾಶಕವು ಲೇಬಲ್ (label claim) ಹೊಂದಿರುವುದಿಲ್ಲ. ಹೊಸದಾಗಿ ಶಿಫಾರಸ್ಸು ಮಾಡುತ್ತಿರುವ ಕೀಟನಾಶಕ ಸೈಯಾಂಟ್ರಾನಿಲಿಪ್ರೊಲ್ 10.26 OD ಯು ಕಡಿಮೆ ಹಾನಿಕಾರಕ ಕೀಟನಾಶಕವಾಗಿದ್ದು, ಕೀಟದ ಮೇಲೆ ಹೆಚ್ಚು ಪರಿಣಾಮಕಾರಿಯಾಗಿದೆ.

d) Management of Serpentine leaf miner in tomato: When the incidence of miner is noticed, spraying of 1.8ml Cyantraniliprole 10.26 OD per liter of water (360 ml/acre) effectively reduced the pest incidence by 95 per cent and increased the yield by 6 per cent when compared to present recommendation of Imidacloprid-17.8SL and triazophos 40 EC (these chemicals do not possess label claim)

ಸಸ್ಯ ರೋಗ (3)

d) The incidence of wild boar at Kanakapura, Magadi and Chamarajanagara: Maximum damage per cent was recorded in banana (49.65), ground nut (40.33) and sweet potato (35.28). In ground nut crop, the best economic measures were fencing with barbed wire and placement of HDEP nylon net in the border for wild boar management. The yield of 1156.37 kg/ha and 1086 kg/h was recorded, respectively with the following above treatments. Among the additives

ಹೆಚ್ಚಿನ ಇಳುವರಿಯು (1156.37 ಕಿ.ಗ್ರಾಂ/ಹೆ ಮತ್ತು 1086 ಕಿ.ಗ್ರಾಂ/ಹೆ ಅನುಕ್ರಮವಾಗಿ) ದಾಖಲಾಗಿದೆ. ವಿವಿಧ ನಿರ್ವಹಣೆ ಆಕರ್ಷಕ ವಸ್ತುಗಳಲ್ಲಿ ಹಲಸಿನ ಹಣ್ಣು (ಶೇ. 1.5, ಶೇ. 2), ಒಣಮೀನು (ಶೇ 1.5, ಶೇ. 2) ಮತ್ತು ಮೊಟ್ಟೆ (ಶೇ.2) ಹೆಚ್ಚಿನ ಮಟ್ಟದಲ್ಲಿ ಇಲಿಗಳನ್ನು ಆಕರ್ಷಿಸಿ ವಿಷಕಾರಿ ಆಹಾರ ಸೇವನೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದವು. ಮಾನವ ಪ್ರಾಣಿ ಸಂಘರ್ಷದ ಸಮೀಕ್ಷೆಯನ್ನು ಸಾವನದುರ್ಗ ಅರಣ್ಯ ಪ್ರದೇಶಗಳಲ್ಲಿ ನಡೆಸಲಾಗಿತ್ತು. ಸಮಿಕ್ಷೆಯ ಪ್ರಕಾರ ಕಾಡುಹಂದಿ, ನವಿಲು, ಇಲಿ, ಮೊಲ, ಕರಡಿಗಳ ಹಾವಳಿಯು ರಾತ್ರಿಯ ವೇಳೆಯಲ್ಲಿ ಕಂಡುಬಂದಿದ್ದು, ಆನೆ ಮತ್ತು ಮಂಗಗಳ ಹಾವಳಿಯು ರಾತ್ರಿ ಮತ್ತು ಹಗಲಿನಲ್ಲಿ ದಾಖಲಾಗಿದೆ. ಬೆಳೆಗಳನ್ನು ತಿನ್ನುವುದು, ಕೀಳುವುದು ಮತ್ತು ಎಳೆದಾಡಿ ಹಾನಿಮಾಡುತ್ತಿದ್ದವು. ಸರಾಸರಿಯಾಗಿ 760 ಬೆಳೆಗಳ ದಾಳಿಯು ದಾಖಲಾಗಿದೆ. ವನ್ಯಪ್ರಾಣಿಗಳ ದಾಳಿಯಿಂದ ಗರಿಷ್ಟ ಪ್ರಮಾಣದ ಹಾನಿಯು ಬಾಳೆಯಲ್ಲಿ (ಶೇ. 48.5) ದಾಖಲಾಗಿದೆ, ಅನಂತರ ರಾಗಿ (ಶೇ. 47.2), ನೆಲಗಡಲೆ (ಶೇ.45.8), ಸಿಹಿಗೆಣಸು (ಶೇ.31.8), ತರಕಾರಿ (ಶೇ. 28.5), ಪರಂಗಿ (ಶೇ.2.06), ಹಲಸಂದೆ (ಶೇ. 10.5), ಹುರುಳಿ (ಶೇ.9.98) ಹಾಗೂ ಅವರೆ (ಶೇ. 4.5) ಬೆಳೆಗಳಲ್ಲಿ ದಾಖಲಿಸಲಾಗಿದೆ. ಹಸು, ಮೇಕೆ, ಕುರಿ, ಕೋಳಿ, ಎಮ್ಮೆ ಮುಂತಾದ ಜಾನುವಾರುಗಳನ್ನು ಚಿರತೆ, ಕಾಡುನಾಯಿ, ನರಿ ಮತ್ತು ಮುಂಗುಸಿಯು ಪರಭಕ್ಷಿಸುತ್ತಿದ್ದವು ಮತ್ತು ತಿಂಗಳಿಗೆ ಸರಾಸರಿ 23 ಪ್ರಕರಣಗಳು ವರದಿಯಾಗಿವೆ.

jack fruit (1.5, 2%), fish meal (1.5, 2%), and egg yolk (2%) were effective in enhancing the bait consumption. The survey on Human-Animal conflict in Savanadurga area revealed that wild boar, peacock, rodents, hare, sloth bear and monkeys were the critical pests and the crop raiding activity was nocturnal. Monkey and elephant showed diurnal activity. The mode of damage was by trampling, digging and direct feeding of the crops with an average of 760 reported cases per year. The maximum damage was recorded in Banana (48.5 %) followed by Ragi (47.2%), ground nut (45.8%), sweet potato (31.87%), vegetables (28.5%), papaya (20.6%), cowpea (10.5%), horse gram (9.98%) and field bean (4.5%) by wild animals. Predators like cheetah, wild dog, jackal and mongoose predated the animals' *viz*. cow, goat, sheep and hen with an average of 23 reported cases per month.

ಮಣ್ಣು ಸಂಧಿಪದಿ ಪೀಡೆಗಳು

ಅ) ಪ್ರಥಮ ಬಾರಿಗೆ ಬಯಲುಸೀಮೆಯ ಕೆಲವು ಅಡಿಕೆ ತೋಟಗಳಲ್ಲಿ ಕಬ್ಬಿನ ಬೇರುಹುಳು, ಹೊಲೊಟ್ರೈಕಿಯ ಸೆರ್ರಟ ಬಾಧೆ ಕಂಡುಬಂದಿದೆ. ಮಂಡ್ಯ ಮತ್ತು ಚಿಕ್ಕಬಳ್ಳಾಪುರದ ಕೆಲವು ಹಿಪ್ಪುನೇರಳೆ ತೋಟಗಳಲ್ಲಿ ಕಂಡುಬಂದ ಕಬ್ಬಿನ ಬೇರುಹುಳು, ಹೊಲೊಟ್ರೈಕಿಯ ಸೆರ್ರಟ ಬಾಧೆಯನ್ನು ರಾತ್ರಿ ವೇಳೆ ದುಂಬಿಗಳನ್ನು ಹಿಡಿಯುವ ವಿಧಾನದಿಂದ ರೈತರು ಮತ್ತು ರೇಷ್ಮೆಕೃಷಿ ಅಧಿಕಾರಿಗಳ ಸಹಯೋಗದಿಂದ ಯಶಸ್ವಿಯಾಗಿ ನಿಯಂತ್ರಿಸ ಲಾಗೆದೆ. ಸುಮಾರು 1,000 ರೈತರು/ಅಧಿಕಾರಿಗಳಿಗೆ ಕಬ್ಬಿನ ಬೇರುಹುಳು, ಹೊಲೊಟ್ರೈಕಿಯ ಸೆರ್ರಟ ದುಂಬಿಗಳನ್ನು ರಾತ್ರಿ ವೇಳೆ ಹಿಡಿಯುವ ತರಬೇತಿಯನ್ನು ನೀಡಲಾಯಿತು.

ಆ) ಕರ್ನಾಟಕದ ಮಲೆನಾಡು ಮತ್ತು ಕರಾವಳಿ ಪ್ರದೇಶಗಳಲ್ಲಿ ಲ್ಯೂಕೊಫೋಲಿಸ್ ಪ್ರಭೇದದ ಬೇರುಹುಳುಗಳು ಅಡಿಕೆ ಬೆಳೆಗೆ ವ್ಯಾಪಕವಾಗಿ ಹರಡಿ ಮಾರಕವಾಗಿ ಪರಿಣಮಿಸಿದೆಂದು ಸಮೀಕ್ಷೆಯಿಂದ ಹಾಗೂ ಲ್ಯೂಕೊಫೋಲಿಸ್ ಪ್ರಭೇದದ ಸಂಕೀರ್ಣವನ್ನು ಅನಿಶ್ಚಿತ ಅಧ್ಯಯನದಿಂದ ಪರಿಹರಿಸಲಾಯಿತು. ಬಿಳಿಗೊಣ್ಣೆಹುಳು ಪೀಡಿತ ಅಡಿಕೆ ತೋಟಗಳಲ್ಲಿ ಸಮಗ್ರ ನಿರ್ವಹಣಾ ತಂತ್ರವಾದ ಮೂರನೇ ಹಂತದ ಮರಿಹುಳುಗಳನ್ನು ಅಗೆದು ತೆಗೆದು ಹಾಕಿದ ಆ ತೋಟಗಳಲ್ಲಿ ಹುಳುಗಳ ಸಂಖ್ಯೆ ಗಮನಾರ್ಹವಾಗಿ ಇಳಿಕೆ ಕಂಡುಬಂದಿದೆ. ಈ ವಿಧಾನವನ್ನು ಎಲ್ಲಾ ಪದ್ಧತಿಗಳಿಗಿಂತ ಉಚಿತವಾದದೆಂದು ಅನೇಕ ಅಡಿಕೆ ತೋಟಗಾರರಿಗೆ ಮನನ ಮಾಡಲಾಯಿತು.

ಇ) ಮಂಡ್ಯ ಮೂಲದ ಕಬ್ಬಿನ ಬೆಳೆಗಳಲ್ಲಿ ಕಬ್ಬಿನ ಬೇರುಹುಳುವಿಗೆ ಮಾರಕವಾಗಿರುವ 29 ಪೀನಿಬ್ಯಾಸಿಲ್ಲಸ್ ದುಂದಾಣುಗಳ

Soil Arthropod Pests

a) Incidence of sugarcane white grub, *H. serrata* was reported for the first time causing damage to arecanut in plains. Adult beetles of *H. serrata* infested the mulberry plants in Mandya and Chikkaballapur. The problem was successfully resolved by educating the farmers and line department officials by collecting beetles during dusk. Approximately 1,000 farmers/line department officers were trained on mass collection of *H. serrata* beetles during dusk.

b) Survey indicated that *Leucopholis* spp. was widely distributed in arecanut gardens of Western Ghats and Coastal areas in Karnataka. The *Leucopholis* species complex using molecular studies was resolved. Remarkable reduction of larval population was observed in white grub affected arecanut fields subjected to comprehensive management strategy. Many farmers were convinced that digging and removing the III instar larvae is the best of all the options.

c) 29 isolates of *Paenibacillus* strains pathogenic to sugarcane white grubs were collected from

ಮಾದರಿಗಳನ್ನು ಗುರುತಿಸಿ ಸಂಗ್ರಹಿಸಲಾಯಿತು. ಜಿ.ಕೆ.ವಿ.ಕೆ.ಯಲ್ಲಿ ದೀಪದ ಬೆಳಕಿನ ಸಹಾಯದಿಂದ ಬಿಳಿ ಗೊಣ್ಣೆಹುಳುಗಳ 14 ಸ್ಕ್ಯಾರಾಬ್ ದುಂಬಿಗಳ ಪ್ರಭೇದಗಳನ್ನು ಸಂಗ್ರಹಿಸಲಾಯಿತು. ಜಿ.ಕೆ.ವಿ.ಕೆ.ಯದ್ರಾಕ್ಷಿ ತೋಟಗಳಲ್ಲಿ ಮಣ್ಣು ಸಂಧಿಪದಿ ಪೀಡೆಗಳ ವೈವಿಧ್ಯತೆಯನ್ನು ವಿಶ್ಲೇಷಿಸಿ ಅಂದಾಜು ಮಾಡಲಾಯಿತು. ದಕ್ಷಿಣ ಭಾರತದದಿಂದ ಅನೊಮಲ ಕೀಟ ವರ್ಗಕ್ಕೆ ಸೇರಿದ 30 ಪ್ರಭೇದಗಳನ್ನು ಗುರುತಿಸಲಾಯಿತು.

sugarcane fields in Mandya. Fourteen species of white grubs were collected in light trap collections at GKVK. Estimated the meso-faunal composition from Grape garden in GKVK campus. The order Collembola comprised four families and 30 species of the genus *Anomala* Samouelle (Scarabaeidae: Rutelinae) were recorded from south India.

3.8.3.2 ಸಸ್ಯ ರೋಗ ಶಾಸ್ತ್ರ

ಬೆಳೆಗಳು

ಅ) *ಸೂರ್ಯಕಾಂತಿ:* ಚಾಮರಾಜನಗರದ ಜಿಲ್ಲೆಯಲ್ಲಿ ರೈತರ ಜಮೀನುಗಳಲ್ಲಿ ನಡೆಸಿದ ಸೂರ್ಯಕಾಂತಿ ಬೆಳೆಯಗೆ ಬರುವ ರೋಗಗಳ ಸಮೀಕ್ಷೆಯ ಪ್ರಕಾರ, ಬೆಳೆಯು ಹೂ ಬಿಡುವ ಮುನ್ನ ನೆಕ್ರೋಸಿಸ್ ನಂಜಾಣುವಿನ ರೋಗ ಮತ್ತು ಆಟ್ರನೇರಿಯಾ ರೋಗದ ಬಾಧೆಯು ಶೇ. 10–15ರಷ್ಟು ದಾಖಲಿಸಲಾಗಿದೆ. ಸೂರ್ಯಕಾಂತಿ ಬೆಳೆಗೆ ಬರುವ ರೋಗಗಳ ವಿರುದ್ಧ ತಳಿಗಳ ಪ್ರತಿಕ್ರಿಯೆ ನೋಡಲು ನಡೆಸಿದ 16 ಆರಂಭಿಕ ವೈವಿಧ್ಯಮಯ ಪ್ರಯೋಗಗಳ (ಐ.ಹೆಚ್.ಟಿ. 1053–1068), 9 ಮುನ್ನಡೆ ವೈವಿಧ್ಯಮಯ ಪ್ರಯೋಗಗಳ (ಎ.ಹೆಚ್.ಟಿ. 1–9) ಹಾಗೂ 15 ಆರಂಭಿಕ / ಮುನ್ನಡೆ ವೈವಿಧ್ಯಮಯ ಪ್ರಯೋಗಗಳ (ಐ.ಎ.ಹೆಚ್.ಟಿ. 1–15) ಅಧ್ಯಯನದಲ್ಲಿ ಯಾವ ತಳಿಯು ಸೂರ್ಯಕಾಂತಿ ಬೆಳೆಯ ಮೂರು ರೋಗಗಳಿಗೆ (ನೆಕ್ರೋಸಿಸ್ ನಂಜಾಣು, ಬೂದಿ ಮತ್ತು ಆಟ್ರನೇರಿಯಾ ಚುಕ್ಕೆ ರೋಗ) ಪೂರಕವಾದ ನಿರೋಧಕತೆಯನ್ನು ತೋರಲಿಲ್ಲ. ಸೂರ್ಯಕಾಂತಿ ಬೆಳೆಯ ನೆಕ್ರೋಸಿಸ್ ನಂಜಾಣು ವಾಹಕ ವಿರುದ್ಧ ಹೊಸ ಪೀಡೆನಾಶಕ ಅಣುಗಳ ಪರೀಕ್ಷೆಯಲ್ಲಿ ಶೇ. 27.18–30.25 ರಷ್ಟು ನಂಜಾಣು ರೋಗವನ್ನು ದಾಖಲಿಸಲಾಯಿತು. ಈ ಪರೀಕ್ಷೆಯಲ್ಲಿ ಉತ್ತಮವಾದ ಬೀಜದ ಇಳುವರಿಯನ್ನು ಇಮಿಡಾಕ್ಲೋಪ್ರಿಡ್ 600 ಎಫ್.ಎಸ್. (5 ಮಿಲೀ/ಕೆಜಿ ಬೀಜಕ್ಕೆ) ಬೀಜೋಪಚಾರ ಜೊತೆಗೆ ಫಿಪ್ರೊನಿಲ್ 5 ಎಸ್.ಸಿ. (1 ಮಿಲೀ/ಲೀ. ನೀರಿಗೆ) ಸಿಂಪರಣೆ (ಬಿತ್ತನೆ ಮಾಡಿದ 30, 45 ಮತ್ತು 60 ದಿನಗಳಲ್ಲಿ) ಮಾಡಲಾದ ತಾಕಿನಲ್ಲಿ ನಮೂದಿಸಲಾಗಿದೆ. ಸ್ಯಾಲಿಸಿಲಿಕ್ ಆಮ್ಲದಿಂದ (0.1 ಗ್ರಾಂ/ಕೆಜಿ ಬೀಜಕ್ಕೆ) ಬೀಜೋಪಚಾರ ಮಾಡಿ ಜೊತೆಗೆ ಸ್ಯಲಿಸಿಲಿಕ್ ಆಮ್ಲದ (0.1 ಗ್ರಾಂ/ಲೀ. ನೀರಿಗೆ) ಸಿಂಪರಣೆ ಮಾಡಿದಾಗ, ಸೂರ್ಯಕಾಂತಿ ಬೆಳೆಯಲ್ಲಿ ಬೂದಿ (ಶೇ.22) ಮತ್ತು ಆಟ್ರನೇರಿಯಾ ಚುಕ್ಕೆ (ಶೇ. 23.3) ರೋಗಗಳು ಕಡಿಮೆ ಪ್ರಮಾಣದಲ್ಲಿ ದಾಖಲಿಸಿದೆ. ಎಸ್.ಎ.ಎ.ಎಫ್. 75 ಡಬ್ಲೂ.ಪಿ. (2 ಗ್ರಾಂ/ಕೆಜಿ ಬೀಜಕ್ಕೆ) ಬೀಜೋಪಚಾರ ಮಾಡಿ ನಂತರ ಎನ್.ಎ.ಟಿ.ಐ.ವಿ.ಓ. 75 ಡಬ್ಲೂ.ಜಿ. ಅಥವಾ ಟಿ.ಎ.ಎಸ್.ಪಿ.ಎ. 500 ಇಸಿ (0.25 ಗ್ರಾಂ/ಲೀ. ನೀರಿಗೆ) ಸಿಂಪರಣೆ ಮಾಡಿದಾಗ, ಸೂರ್ಯಕಾಂತಿಯ ಬೆಳೆಯಲ್ಲಿ ಆಟ್ರನೇರಿಯಾ ಚುಕ್ಕೆ (ಶೇ. 16.6) ರೋಗವು ಕಡಿಮೆ ಪ್ರಮಾಣದಲ್ಲಿ ದಾಖಲಿಸಿದೆ. ಸುಡೋಮೊನಾಸ್ ಫ್ಲೂರಸೆನ್ಸ್ (10 ಗ್ರಾಂ/ಕೆಜಿ ಬೀಜಕ್ಕೆ) ಬೀಜೋಪಚಾರ ಮತ್ತು 0.25 ಗ್ರಾಂ/ಲೀ. ನೀರಿಗೆ ಬೆರೆಸಿ ಬಿತ್ತನೆಯಾದ 45 ಮತ್ತು 60 ದಿನಗಳ ನಂತರ ಸಿಂಪರಣೆ ಮಾಡಿದಾಗ, ಸೂರ್ಯಕಾಂತಿಯ ಬೆಳೆಯಲ್ಲಿ ಆಟ್ರನೇರಿಯಾ ಚುಕ್ಕೆ (ಶೇ. 15) ರೋಗವು ಕಡಿಮೆ ಪ್ರಮಾಣದಲ್ಲಿ ದಾಖಲಿಸಿದೆ.

3.8.3.2 Pathology

Crops

a) *Sunflower :* Survey in farmer's fields of Chamarajanagara district during vegetative stage of the crop revealed the incidence of necrosis virus disease and Alternaria leaf spot varied from 10 to 15 per cent. Screening of 16 entries of IHT (IHT 1053 to IHT 1068), 9 entries of AHT (AHT 1 to AHT 9) and 15 IAHT entries (IAHT 1 to IAHT 15) expressed susceptibility to all three diseases (Necrosis virus, Alternaria leaf spot and powdery mildew). Evaluation of new molecules against viral diseases of sunflower revealed incidence of necrosis virus disease in the treatments from 27.18 to 30.25 per cent and seed yield was highest in seed treatment with Imidacloprid 600 FS (5ml/kg of seeds) and followed by foliar spray with fipronil 5 SC (1ml/L of water) at 30, 45 and 60 days after sowing. Seed treatment with salicylic acid @ 100 ppm + foliar spray of salicylic acid @ 100 ppm revealed lowest alternaria disease (23.3%), lowest powdery mildew disease (22%) and highest seed yield (2421 kg/ha). Seed treatment with SAAF 75 WP @ 2 g/kg seed followed by two foliar sprays with NATIVO 75 WG @ 0.25 g/l or TASPA 500EC @ 0.25ml/l recorded lowest severity of alternaria leaf spot (16.6%). Seed treatment with *Pseudomonas fluorescens* (10 g/kg seed) along with two foliar sprays (5 g/litre of water) at 45 and 60 days after sowing recorded the lowest alternaria disease severity (15%).

ಆ) *ಶೇಂಗಾ :* ಪ್ರತಿ ಕಿ.ಗ್ರಾಂ ಬೀಜಕ್ಕೆ 1.5 ಮಿ.ಲೀ ಟೆಬುಕೊನಜೋಲ್ ನಿಂದ ಬೀಜೋಪಚಾರ + ಟೆಬುಕೊನಜೋಲ್ ಶೇ. 58 + ಟ್ರೈಫ್ಲೋಕ್ಸಿಸ್ಟ್ರೋಬಿನ್ ಶೇ. 25 ಡಬ್ಲ್ಯೂಜಿ. 1.32 ಗ್ರಾಂ/ಲೀ ನೀರಿಗೆ ಬೆರೆಸಿ ಬಿತ್ತನೆಯಾದ 40 ಮತ್ತು 65 ದಿನಗಳಲ್ಲಿ ಸಿಂಪರಣೆಮಾಡಿರುವುದರಿಂದ ಎಲೆಚುಕ್ಕೆ ರೋಗದ ತೀವ್ರತೆ ನಿಯಂತ್ರಿಸುತ್ತದೆ, ಮುಂಚಿತವಾಗಿ ಮತ್ತು ತಡವಾಗಿ ಬರುವ ಎಲೆಚುಕ್ಕೆ ರೋಗ ಮತ್ತು ತುಕ್ಕು ರೋಗದ ತೀವ್ರತೆಯು ಕೇವಲ ಶೇ. 7, 9 ಮತ್ತು 0 ಇದ್ದು ಮತ್ತು ತಾಂತ್ರಿಕತೆ ಇಲ್ಲದ ನಿಯಂತ್ರಣ ತಾಕಿನಲ್ಲಿ ಶೇ 19, 25 ಮತ್ತು 3 ದಾಖಲಾಗಿರುತ್ತದೆ. ಅಲ್ಲದೆ ಇಳುವರಿಯು 12.00 ಕ್ವಿ/ಹೇ. ದಾಖಲಾಗಿದೆ. ಶೇಂಗಾ ಬೆಳೆಯಲ್ಲಿನ ಪ್ರಮುಖ ರೋಗ ಮತ್ತು ಕೀಟ ನಿರ್ವಹಣೆಯ ಸಮಗ್ರ ಪದ್ಧತಿಗಳ ಮೌಲ್ಯಮಾಪನ: ಪ್ರತಿ ಕೆ.ಜಿ. ಬೀಜಕ್ಕೆ 1.5 ಮಿ.ಲೀ ಟೆಬುಕೊನಜೋಲ್ 2 ಡಿ.ಎಸ್ ನಿಂದ ಬೀಜೋಪಚಾರ + ಬದು ಬೆಳೆಯಾಗಿ 3 ರಿಂದ 4 ಸಾಲು ಸಜ್ಜೆ + ಬಿತ್ತನೆಯಾದ 50 ಮತ್ತು 70 ದಿನಗಳಲಿ ಅವಶ್ಯಕತೆ ಇದ್ದಲ್ಲಿ ಥೈಯೋಡಿಕಾರ್ಬ್ 75 ಡಬ್ಲ್ಯೂಪಿ + ಬಿತ್ತನೆಯಾದ 50 ಮತ್ತು 70 ದಿನಗಳಲ್ಲಿ ಅವಶ್ಯಕತೆ ಇದ್ದಲ್ಲಿ ಹೆಕ್ಸಕೋನಾಜೋಲ್ 5 ಇ.ಸಿ. ಯನ್ನು 1ಮಿ.ಲೀ / ಲೀಟರ್ ನೀರಿಗೆ ಬೆರೆಸಿ ಸಿಂಪರಣೆ ಮಾಡುವುದರಿಂದ ಮಣ್ಣಿನಿಂದ ಪ್ರಸಾರವಾಗುವ ರೋಗಗಳ ಮೇಲೆ ಪರಿಣಾಮ ಬೀರಿ, ರೋಗದ ತೀವ್ರತೆ ತಪ್ಪಿಸುವಲ್ಲಿ ಪ್ರಯೋಜನಿಯವಾಗಿರುತ್ತದೆ. ಪ್ರತಿ ಕೆ.ಜಿ ಬೀಜಕ್ಕೆ ಟ್ರೈಕೋಡರ್ಮ 4 ಗ್ರಾಂ ಬೀಜೋಪಚಾರ + ಅವಶ್ಯಕತೆ ಇದ್ದಲ್ಲಿ ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್ @ 0.3 ಮಿ.ಲೀ / ಲೀಟರ್ ನೀರಿಗೆ + ಅವಶ್ಯಕತೆ ಅನುಗುಣವಾಗಿ ಎಲೆ ಭಕ್ಷಕ ಕೀಟಗಳಿಗೆ ನೊವಲೂರಾನ್ 10 ಇ.ಸಿ. @ 1ಮಿ.ಲೀ/ ಲೀಟರ್ ನೀರಿಗೆ + ಅವಶ್ಯಕತೆ ಇದ್ದಲ್ಲಿ ಟೆಬುಕೊನಜೋಲ್ 25.9 ಇ.ಸಿ. @ 1.5 ಮಿ.ಲೀ./ಲೀ. ನೀರಿಗೆ ಬೆರೆಸಿ ಸಿಂಪರಣೆ ಮಾಡುವ ತಾಕಿನಲ್ಲಿ ಮುಂಚಿತವಾಗಿ ಹಾಗೂ ತಡವಾಗಿಬರುವ ಎಲೆ ಚುಕ್ಕೆ ರೋಗವನ್ನು (ಶೇ. 7 ಮತ್ತು 9) ತಡೆಯುವುದರಲ್ಲಿ ಶ್ರೇಷ್ಠವಾಗಿರುತ್ತದೆ

ಇ) *ವಿಳೆದೆಲೆಯಲ್ಲಿ ದುಂಡಾಣು ರೋಗದ ತೀವ್ರತೆಯ ನಿರ್ವಹಣೆ:* ಕಾಪರ್ ಆಕ್ಸಿಕ್ಲೋರೈಡ್ (ಸಿಒಸಿ: ಶೇ. 0.3) ಮಣ್ಣಿಗೆ ಬೆರೆಸುವುದು + ಪ್ರತಿಜೀವಾಣು ಮಿಶ್ರಣ (ಸ್ಟ್ರೇಪ್ಟೊಸೈಕ್ಲಿನ್ ಸಲ್ಫೇಟ್ + ಟೆಟ್ರಾ ಸೈಕ್ಲಿನ್ ಹೈಟ್ರೋಕ್ಲೋರೈಡ್ 0.5ಗ್ರಾಂ ಮತ್ತು ಕಾಪರ್ ಆಕ್ಸಿಕ್ಲೋರೈಡ್ (ಸಿಒಸಿ) 3ಗ್ರಾಂ ಪ್ರತಿ ಲೀಟರ್ ನೀರಿಗೆ) ವನ್ನು ಸಿಂಪರಣೆ ಮಾಡಿದಾಗ ಶೇಕಡವಾರು ರೋಗದ ತೀವ್ರತೆಯನ್ನು (ಎಲೆ: ಶೇ. 75.86 ಮತ್ತು ರೆಂಬೆ: 70.58) ತಡೆಯುವುದರಲ್ಲಿ ಉತ್ತಮ ಪರಿಣಾಮಕಾರಿ ಫಲಿತಾಂಶವಾಗಿ ಕಂಡುಬಂದಿದೆ.

b) *Groundnut :* Seed treatment with tebuconazole @ 1.5 g/kg seed + spray Tebuconazole 50% + Trifloxystobin 25% WG @ 1.32g/L twice at 40 and 65 DAS performed well in reducing intensity of early, late leaf spot and rust diseases (7, 9 and 0 percent respectively) against control plots (19, 25 and 3 percent respectively). It also enhanced pod yield (12.9 q/ ha) as against to the control plot (8.45 q/ha). Evaluation of different IPM Modules for the management of major insect pests and diseases in groundnut: Seed treatment with Tebuconazole @ 1.5g/kg seed+border crop with bajra (3 or 4 rows) + need based spray of Thiodicarb 75 WP @ 1 g/L for defoliator 50-70 DAS+ need based spray of Hexaconazole 5 EC @ 1 ml/L 50-70 DAS was found effective in reducing soil borne diseases. Seed treatment with *Trichoderma* @ 4 g/kg seed + need based spray of Imidacloprid 17.8 SL @ 0.3 ml/L + need based spray of Novaluron 10 EC @ 1 ml/L for defoliator 50-70 DAS + need based spray of Tebucanazole 25.9 EC @ 1.5 ml/L 50-70 DAS was superior in reducing early leaf spot and late leaf spot with the PDI of 7 & 9 respectively.

c) *Betel vine:* Soil application (COC 0.3%) + foliar spray of antibiotics (Streptocycline sulphate + Tetra cycline hydrochloride 0.5g/L and COC 3g/ L) were effective in reducing the PDI on leaves and twigs with reduced disease (Bacterial blight) incidence of 75.86 & 70.58 on leaves and twigs respectively.

ಜಂತುಹುಳು

ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬೇರು ಗಂಟು ಜಂತುಹುಳುವಿನ ಹೊಸ ಪ್ರಭೇದವು (*ಮೆಲೈಡೊಗೈನೆ ಎಂಟಿರೊಲೊಬಿ*) ಸೀಬೆಕಾಯಿ ಬೆಳೆಯಲ್ಲಿ ಕಂಡು ಬಂದಿದ್ದು ದೇಶದಲ್ಲಿ ಪ್ರಥಮ ಬಾರಿಗೆ ವರದಿಯಾಗಿದೆ. ನಂತರದಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿಯೂ ವರದಿಯಾಗಿದೆ. *ಹಿರ್ಷಿಮಾನಿಎಲ್ಲಾ ಒರೈಜೆ* ಬೇರು ಜಂತು ಹುಳುವು ಮೊದಲ ಬಾರಿಗೆ ಭತ್ತದ ಬೆಳೆಯಲ್ಲಿ ಅಧಿಕ ಸಂಖ್ಯೆಯಲ್ಲಿ (228/200 ಸಿಸಿ ಮಣ್ಣಿನಲ್ಲಿ) ಮಂಡ್ಯ ಜಿಲ್ಲೆಯಲ್ಲಿ ಕಂಡು ಬಂದಿದೆ. *ಒರೈಜಾ ಗ್ಲಾಬರೀಮಾ* (ಸಾಲು 06, 33 ಮತ್ತು 44) ಜೋಳ, ಸಜ್ಜೆ, ಈರುಳ್ಳಿ ಮತ್ತು ಲೆಪ್ಟೊಕ್ಲೊವ ಚೈನೆನ್ಸಿಸ್ ಬೆಳೆಗಳು,

Nematodes

A new species of root knot nematode, *Meloidogyne enterolobii* was reported from Karnataka on guava for the first time from Chikkaballapur district. Later, it was also observed in Kolar and Tumkur districts. High populations of *Hirschmaniella oryzae* (228 / 200 cc soil) was recorded for the first time on rice at Mandya district. *Oryza glabberima* (lines 06, 33 & 44), Sorghum, bajra, onion, brinjal and *Leptochloa*

ಮೆ. ಗ್ರಾಮಿನಿಕೊಲಾ ಜಂತುಹುಳುವಿಗೆ ಅತಿಥೇಯ ಸಸ್ಯಗಳಾಗಿ ಹಾಗೂ ಟೊಮೊಟೊ ಮತ್ತು ಡಾಕ್ಟಿಲೊಕ್ಟೀನಿಯಮ್ ಇಜಿಪ್ಷಮ್ ಸಸ್ಯಗಳು ಅತಿಥೇಯ ಸಸ್ಯಗಳಲ್ಲವೆಂದು ತಿಳಿದು ಬಂದಿದೆ. ಮಣ್ಣಿನಲ್ಲಿ ಎಲೆಕೋಸಿನ ಎಲೆಗಳಿಂದ (50 ಟನ್ ಪ್ರತಿ ಹೆಕ್ಟೇರ್‌ಗೆ) ಜೈವಿಕ ಧೂಮ ಪ್ರಯೋಗ ಮಾಡಿ ಮುಂದುವರೆದು *ಪಿ. ಲಿಲಾಸಿನಸ್* 5 ಎಂ.ಎಲ್. ಪ್ರತಿ ಕಿ.ಗ್ರಾಂ ಬೀಜಕ್ಕೆ ಬೀಜೋಪಚಾರ ಮಾಡಿದಾಗ ಬೆಂಡೆ ಬೆಳೆಯಲ್ಲಿ ಮಣ್ಣು ಮತ್ತು ಬೇರಿನಲ್ಲಿರುವ *ಮೆ. ಇನ್ಕಾಗ್ನೆಟಾ* ಜಂತು ಹುಳುವಿನ ಸಂಖ್ಯೆಯು ಕಡಿಮೆಯಾಗಿರುವುದು ಕಂಡು ಬಂದಿದೆ. ಹೆಸರುಕಾಳು ತಳಿಯಾದ ಕೆ.ಎಂ.ಎನ್–18–27 *ಮೆ. ಇನ್ಕಾಗ್ನೆಟಾ* ಪ್ರಭೇದ–1 ಕ್ಕೆ ನಿರೋಧಕತೆಯನ್ನು ಹೊಂದಿರುವುದು ಪ್ರಾರಂಭಿಕ ಶೋಧನೆಯಿಂದ ತಿಳಿದು ಬಂದಿದೆ. ಹಸಿರು ಮನೆಯಲ್ಲಿ ಎಲ್ಲಾ ತಳಿಗಳನ್ನು ಶೋಧಿಸಿದಾಗ, ತಳಿಗಳಾದ ಶೋ (ಟೊಮೊಟೊ), ನಂ.1 (ಚೆರಿ ಟೊಮೊಟೊ), ಜಪಾನಿಸ್ ಗ್ರೀನ್ ಲಾಂಗ್ (ಸೌತೆಕಾಯಿ) ಮತ್ತು ಪುಸ ಔಷಧಿ (ಹಾಗಲಕಾಯಿ) ಬೇರು ಗಂಟು ಜಂತು ಹುಳುವಿಗೆ ಸುಲಭವಾಗಿ ತುತ್ತಾಗಿರುವುದು ಕಂಡು ಬಂದಿದೆ. ಹಸಿರು ಮನೆಯಲ್ಲಿ ದಪ್ಪ ಮೆಣಸಿನಕಾಯಿ ಬೆಳೆಗೆ ಕೋಳಿ ಗೊಬ್ಬರ (66.75 ಪ್ರತಿ 200 ಸಿ.ಸಿ. ಮಣ್ಣಿನಲ್ಲಿ) ಅಥವಾ ಬೇವಿನ ಹಿಂಡಿ (55.75 ಪ್ರತೀ 200 ಸಿ.ಸಿ. ಮಣ್ಣಿನಲ್ಲಿ) ಹಾಕುವುದರಿಂದ ಜಂತು ಹುಳುವಿನ ನಿರ್ವಹಣೆಯಲ್ಲಿ ಪರಿಣಾಮಕಾರಿ ಫಲಿತಾಂಶವನ್ನು ದಾಖಲಿಸಲಾಗಿದೆ. ಜೈವಿಕ ಜಂತುನಾಶಕ *ಪಿ. ಕ್ಲಮೈಡೊಸ್ಪೊರಿಯಾ* 20 ಗ್ರಾಂ ಪ್ರತಿ ಗಿಡಕ್ಕೆ ಉಪಚರಿಸಿದಾಗ ಜಂತು ಹುಳು ನಿರ್ವಹಣೆಯಲ್ಲಿ ಪರಿಣಾಮಕಾರಿಯಾಗಿ ಕಂಡು ಬಂದಿದೆ. *ಸುಡೊಮೊನಾಸ್ ಫ್ಲೋರಸೆನ್ಸ್* (20 ಗ್ರಾಂ ಪ್ರತಿ ಗಿಡಕ್ಕೆ) ಉಪಚರಣೆ ಕೂಡ ಪರಿಣಾಮಕಾರಿಯೆಂದು ಕಂಡು ಬಂದಿದೆ. ಇಳುವರಿಯಲ್ಲಿಯೂ ಸಹ ಇದೆ ಅನುಪಾತವು ಕಂಡು ಬಂದಿದೆ, ಹಾಗೂ *ಪಿ. ಕ್ಲಮೈಡೊಸ್ಪೊರಿಯಾ* ಮತ್ತು *ಸು. ಫ್ಲೋರಸೆನ್ಸ್* ಇವುಗಳು ದೀರ್ಘಾವದಿಗಳವರೆಗೆ ಉಳಿದು ಕೊಂಡಿದ್ದು, ಕೊಯ್ಲಿನ ಸಂಧರ್ಭದಲ್ಲಿ ಮಣ್ಣಿನಿಂದ ಪಡೆಯಬಹುದಾಗಿದೆ. ಬೇವಿನ ಹಿಂಡಿ 200 ಗ್ರಾಂ ಪ್ರತಿ ಗಿಡಕ್ಕೆ ಜೂನ್ ತಿಂಗಳಿನಲ್ಲಿ ಮತ್ತು *ಸು. ಫ್ಲೋರಸೆನ್ಸ್* 15 ಗ್ರಾಂ ಪ್ರತಿ ಗಿಡಕ್ಕೆ ಜೂನ್ ಮತ್ತು ನವೆಂಬರ್ ತಿಂಗಳಿನಲ್ಲಿ ಹಾಕಿದಾಗ ಕಾಳು ಮೆಣಸು ಬಳ್ಳಿಗಳಲ್ಲಿ ಕೊರೆಯುವ ಜಂತು ಹುಳುಗಳ ಸಂಖ್ಯೆಯು ಕಡಿಮೆಯಾಗಿದ್ದು, ಪರಿಣಾಮಕಾರಿಯಾದ ನಿಯಂತ್ರಣವು ಕಂಡು ಬಂದಿದೆ.

3.8.4 ಜೈವಿಕ ಇಂಧನ

ಕೃಷಿ ವಿಶ್ವವಿದ್ಯಾನಿಲಯವು ಕರ್ನಾಟಕ ರಾಜ್ಯ ಜೈವಿಕ ಇಂಧನ ಮಂಡಳಿಯ ಸಹಯೋಗದೊಂದಿಗೆ ರಾಷ್ಟದಲ್ಲಿ ಪ್ರಥಮ ಬಾರಿಗೆ ಜೈವಿಕ ಇಂಧನ ಗುಣಮಟ್ಟ ಖಾತ್ರಿ ಪ್ರಯೋಗಾಲಯವನ್ನು ಜಿಕೆವಿಕೆ ಆವರಣದಲ್ಲಿ ಸ್ಥಾಪಿಸಲಾಗಿದೆ. ಈ ಕಾರ್ಯಕ್ರಮದ ಒಟ್ಟು ಮೊತ್ತ ರೂ.3.85 ಕೋಟಿ. ಈ ಪ್ರಯೋಗಾಲಯವನ್ನು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ. ಹೆಚ್.ಡಿ ಕುಮಾರಸ್ವಾಮಿಯವರು 18ನೇ ನವಂಬರ್, 2018 ರಂದು ಉದ್ಘಾಟನೆ ಮಾಡಿದರು.

3.8.5 ಕೃಷಿ ಇಂಜಿನಿಯರಿಂಗ್, ಕೊಯ್ಲೋತ್ತರ ತಂತ್ರಜ್ಞಾನ ಮತ್ತು ಮೌಲ್ಯವರ್ಧನೆ

ಅ) *ಅಧಿಕ ಸಾಮರ್ಥ್ಯದ ಹುಣಸೆಹಣ್ಣಿನ ಸಿಪ್ಪೆ ತೆಗೆಯುವ ಯಂತ್ರದ ಅಭಿವೃದ್ಧಿ:* ಅಧಿಕ ಸಾಮರ್ಥ್ಯದ ಹುಣಸೆಹಣ್ಣಿನ ಸಿಪ್ಪೆ ತೆಗೆಯುವ ಯಂತ್ರವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಲಾಗಿದೆ. ಗಂಟೆಗೆ

chinensis were found to be hosts for *M. graminicola,* while tomato and *Dactyloctenium aegyptium* were non hosts. Soil biofumigation with cabbage leaves @ 50 t/ha followed by seed treatment with *P. lilacinum* @ 5 ml/kg effectively minimized the soil and root population of *M.incognita* infesting okra. In the preliminary screening, green gram germplasm KMN 18-27 was found resistant to *M. incognita* race-1. All varieties screened for their reaction to *M. incognita* under polyhouse condition were found susceptible, *viz.*, Shoe (Tomato), No. 1 (Cherry tomato), Japanese green long (Cucumber) and Pusa Aushadhi (Bitter gourd). Application of poultry manure (66.75 / 200 CC) was found to be effective and on par with neem cake (55.75/200 CC) in managing the root-knot nematode under polyhouse conditions. Application of *P. chlamydosporia* @ 20g/ plant followed by *P. fluorescens* @ 20g/ plant was found effective in managing the nematode population application and enhanced the yield parameters. *P. chlamydosporia* & *P. fluorescens* survived for long and was recovered from the soil at harvest. Application of Neem Cake @200g/plant during June and *P. fluroscens* @ 15g/plant during June & November is effective in managing the nematode population in black pepper vines.

3.8.4 Bio-fuel Programme

With the support of Bio-fuel Board, UAS-B has established advanced centre on Bio-fuels and quality assurance laboratory at GKVK campus, Bangalore. The total outlay of the programme is 3.85 crores. It is first of its kind in the country to test the quality of Bio-fuels. The laboratory was inaugurated by Honourable Chief Minister of Karnataka Sri. H.D. Kumaraswamy on 18-11-2018.

3.8.5 Agricultural Engineering, Post-Harvest Technology and Value Addition

a) *Design Modification/ Development of improved high capacity Tamarind Fruit Dehuller*: A High Capacity Tamarind Dehuller

ಸುಮಾರು 1000 ಕಿ.ಗ್ರಾಂ., ಸಿಪ್ಪೆ ತೆಗೆಯುವ ಸಾಮರ್ಥ್ಯವುಳ್ಳ ಈ ಯಂತ್ರದ ಕಾರ್ಯಕ್ಷಮತೆ ಶೇ. 90 ಕ್ಕಿಂತ ಅಧಿಕವಾಗಿದೆ. 5 ಹೆಚ್.ಪಿ ವಿದ್ಯುತ್ ಮೋಟಾರ್‌ನಿಂದ ಕಾರ್ಯನಿರ್ವಹಿಸುವ ಈ ಯಂತ್ರದ ಅಂದಾಜು ಬೆಲೆ 1,00,000/– ವಾಗಿದ್ದು, ಕೃಷಿ ವಿಶ್ವವಿದ್ಯಾನಿಲಯದಿಂದ ವಾಣಿಜ್ಯೀಕರಣಕ್ಕೆ ಅಂಗೀಕೃತ ಗೊಂಡಿದೆ.

(1000 kg/h) with >90% dehulling efficiency was successfully developed for removing hulls from harvested dry tamarind pods. It is operated by 5 hp motor and the cost of the machine is Rs 1.00 lakh. The machine has been approved by the Technology Commercialization Committee of UAS (B) for commercialization.

ಆ) *ಹುಣಸೆಹಣ್ಣಿನ ಬೀಜ ಬಿಡಿಸುವ ಯಂತ್ರದ ಅಭಿವೃದ್ಧಿ:* ಗಂಟೆಗೆ ಸುಮಾರು 100 ಕಿ.ಗ್ರಾಂ., ಸಾಮರ್ಥ್ಯವಿರುವ ಹುಣಸೆ ಹಣ್ಣಿನ ಬೀಜ ಬಿಡಿಸುವ ಯಂತ್ರದ ಮೂಲವಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರಸ್ತುತ ಈ ಯಂತ್ರವು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇದರ ಕಾರ್ಯಕ್ಷಮತೆ ಹಾಗು ಕಾರ್ಯ ನಿರ್ವಹಣೆಯನ್ನು ಉತ್ತಮಗೊಳಿಸಲು ವಿವಿಧ ಪ್ರಾಯೋಗಿಕ ಪರೀಕ್ಷೆಗಳಿಗೆ ಒಳಪಡಿಸಿ ಮೌಲ್ಯಮಾಪನ ಮಾಡಲಾಗುತ್ತಿದೆ

b) *Development of Tamarind Fruit Deseeder Suitable for Commercial Pulp Production:* A promising prototype Tamarind Deseeder of capacity 100 kg/h has been developed. The prototype is working well and rigorous testing of the machine to improve its performance is underway.

ಇ) *ಹೊಂಗೆ ಬೀಜ ಬಿಡಿಸುವ ಯಂತ್ರದ ಅಭಿವೃದ್ಧಿ:* ಜೈವಿಕ ಇಂಧನದ ಉತ್ಪಾದನೆಗೆ ಸಹಕಾರಿಯಾಗಲು ಗಂಟೆಗೆ ಸುಮಾರು 250 ಕಿ.ಗ್ರಾಂ., ಸಾಮರ್ಥ್ಯವಿರುವ ಹೊಂಗೆ ಬೀಜ ಬಿಡಿಸುವ ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಶೇ. 90 ಕ್ಕಿಂತ ಅಧಿಕ ಕಾರ್ಯಕ್ಷಮತೆಯುಳ್ಳ ಈ ಯಂತ್ರವು 3 ಹೆಚ್.ಪಿ. (ಸಿಂಗಲ್ ಫೇಸ್) ವಿದ್ಯುತ್ ಮೋಟಾರ್‌ನಿಂದ ಕಾರ್ಯನಿರ್ವಹಿಸುತ್ತದೆ. ಕೃಷಿ ವಿಶ್ವವಿದ್ಯಾನಿಲಯವು ಈ ಯಂತ್ರದ ವಾಣಿಜ್ಯೀಕರಣಕ್ಕೆ ಅಂಗೀಕೃರಿಸಿದ್ದು, ಇದರ ಅಂದಾಜು ಬೆಲೆ 70,000/– ರಷ್ಟಿದೆ

c) *Development of Pongamia Decorticator:* A Pongamia Decorticator of 250 kg/h capacity with a dehulling efficiency of over 90% and operated by 3 hp electric motor has been developed. It is approved by TCC (Technology Commercialization Committee) for commercialization at the cost of Rs 70,000.

ಈ) *ಸಿರಿಧಾನ್ಯದ ಅಕ್ಕಿ ಮತ್ತು ಅದರ ಉತ್ಪನ್ನಗಳಲ್ಲಿ ಕೀಟ ಬಾಧೆ ಹಾಗು ಕಮಟುವಿಕೆ ನಿಯಂತ್ರಣಕ್ಕೆ ಕ್ರಿಯಾಶೀಲ ಪ್ಯಾಕೇಜಿಂಗ್ ವ್ಯವಸ್ಥೆಯ ಅಭಿವೃದ್ಧಿ:* ಸಿರಿಧಾನ್ಯದ ಅಕ್ಕಿಯನ್ನು ಸುದೀರ್ಘ ಕಾಲದವರೆಗೆ ಶೇಖರಿಸಿಡಲು ಕ್ರಿಯಾಶೀಲ ಪ್ಯಾಕೇಜಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕಾರ್ಯಯೋಜನೆಯನ್ನು ನಿರ್ವಹಿಸಲಾಯಿತು. ಸ್ವಿಸ್ ಪ್ಯಾಕ್ (Swiss Pack) ಅಥವಾ ಇಕೋ–ಟ್ಯಾಕ್ಟ್ (Ecotact) ಪಾಲಿ ಚೀಲಗಳಲ್ಲಿ 100 ಅಥವಾ 200 cc ಆಮ್ಲಜನಕ ಹೀರುವ ಸಾಮಾಗ್ರಿಯನ್ನು (Oxygen Absorber) ಅಳವಡಿಸುವ ಕ್ರಿಯಾಶೀಲ ಪ್ಯಾಕೇಜಿಂಗ್ ವ್ಯವಸ್ಥೆಯಿಂದ ನವಣೆ ಅಕ್ಕಿಯನ್ನು 3 ತಿಂಗಳವರೆಗೆ ಕೆಡದಂತೆ ಶೇಖರಿಸಿಡಬಹುದಾಗಿದೆ. ಇಂತಹ ವ್ಯವಸ್ಥೆಯ ಚೀಲಗಳಲ್ಲಿ ನವಣೆ ಅಕ್ಕಿಯನ್ನು ಶೇಖರಿಸಿದಾಗ, ಟ್ರೈಬೋಲಿಯಂ ಕಾಸ್ಟೆನಂ (Tribolium castaneum) ಎಂಬ ಕೀಟ ಭಾದೆಯನ್ನು ತೃಪ್ತಿಕರವಾಗಿ ನಿಯಂತ್ರಿಸಬಹುದು. ಅಲ್ಲದೆ ಶೇಖರಿಸಿದ ಧಾನ್ಯಗಳ ಸಂವೇದನಾಶೀಲ ಗುಣಮಟ್ಟವು ಉತ್ತಮವಾಗಿದ್ದು, 3 ತಿಂಗಳುಗಳ ಶೇಖರಣಾ ಅವಧಿಯ ನಂತರವೂ ನವಣೆ ಅಕ್ಕಿಯಲ್ಲಿ ಯಾವುದೇ ರೀತಿಯ ಗಮನಾರ್ಹ ಕಮಟು ವಾಸನೆಯು ಬೆಳವಣಿಗೆ ಕಂಡುಬಂದಿರುವುದಿಲ್ಲ.

d) *Developing Active Packaging System for Small Millet Rice and Its Products to Prevent Insect Infestation and Development of Rancidity:* An Active Package system to store milled foxtail millet rice grain has been developed. The milled foxtail milled rice stored in thermally sealed, commercially available new generation multi-layered grain storage poly pouches (Swiss Pac & Ecotact) along with 100 or 200 cc oxygen absorbers was found to satisfactorily control the common insect infestation by *Tribolium castaneum* for over three months. The sensory quality of stored grains was good and there was no appreciable development of rancidity in the stored millet rice grain even after three months of storage.

ಉ) *ಆಹಾರ ಉದ್ಯಮೆಗಳಿಗಾಗಿ ಎಣ್ಣೆಬೀಜಗಳ ಹಿಂಡಿಯಲ್ಲಿನ ಪೌಷ್ಟಿಕ ಹಾಗು ಕ್ರಿಯಾತ್ಮಕ ಪ್ರೋಟೀನ್‌ಬಳಕೆಯ ಅನ್ವೇಷಣೆ:* ಕ್ಷಾರ ಪದ್ಧತಿಯಲ್ಲಿ 1N NaOH ಬಳಸಿ ಎಣ್ಣೆರಹಿತ ಕುಸುಬೆ ಬೀಜದ ಹಿಂಡಿಯಿಂದ ಪ್ರೋಟೀನ್‌ನನ್ನು ಹೊರತೆಗೆಯಲಾಯಿತು.

e) *Exploiting Oilseed Cakes as Sources of Nutritional and Functional Proteins for Food Industry Use:* Protein isolate was extracted (alkali method) from defatted safflower meal

ಸಂಖ್ಯಾಶಾಸ್ತ್ರದ RSM ತಂತ್ರವನ್ನು ಬಳಸಿ ಪ್ರೋಟೀನ್ ಹೊರತೆಗೆಯುವ ವಿವಿಧ ಸಂಯೋಜನೆಗಳಲ್ಲಿ ಉತ್ತಮ ಸಂಯೋಜನೆಯನ್ನು ಸರಳೀಕರಿಸಲಾಯಿತು. ಈ ಸಂಯೋಜನೆಯಲ್ಲಿ ಪ್ರತ್ಯೇಕಿಸಿದ ಪ್ರೋಟೀನ್ ಐಸೊಲೆಟ್‌ನ ಇಳುವರಿ ಶೇ. 40.5 ರಷ್ಟಾಗಿದ್ದು, ಇದರಲ್ಲಿ ಶೇ. 81 ರಷ್ಟು ಪ್ರೋಟೀನ್ ಅಂಶ ಕಂಡುಬಂದಿದೆ.

(after oil extraction) using 1N NaOH. Using RSM technique, the protein extraction variables were optimized. At this optimum extraction condition, the protein isolate yield was 40.5% and the protein content of the isolate was 81.0%.

ಊ) *ಕೊರಲೆ ಧಾನ್ಯದ ಹೊಟ್ಟು ತೆಗೆಯುವ ಯಂತ್ರದ ಅಭಿವೃದ್ಧಿ:* ಸಿರಿಧಾನ್ಯಗಳಿಗೆ ಹೊಟ್ಟು ತೆಗೆಯುವ ಸೂಕ್ತವಾದ ಯಂತ್ರದ ಮಾದರಿಯನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಲಾಗಿದೆ. 5 ಹೆಚ್.ಪಿ. ವಿದ್ಯುತ್ ಮೋಟಾರ್ ಚಾಲಿತ ಈ ಯಂತ್ರವು ಗಂಟೆಗೆ ಸುಮಾರು 100 ಕಿ.ಗ್ರಾಂ., ಹೊಟ್ಟು ತೆಗೆಯುವ ಸಾಮರ್ಥ್ಯ ಹೊಂದಿದೆ. ಈ ಯಂತ್ರದಲ್ಲಿ ಕೊರಲೆ ಹಾಗು ಹಾರಕ ಧಾನ್ಯದ ಹೊಟ್ಟು ತೆಗೆಯುವ ಕಾರ್ಯದಕ್ಷತೆ ಕ್ರಮವಾಗಿ ಶೇ. 75 ಹಾಗು 95 (2 ಬಾರಿ ಹಾಕಿದಾಗ) ರಷ್ಟು ಕಂಡುಬಂದಿದೆ. ಪ್ರಸ್ತುತ ಈ ಯಂತ್ರವು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಇದರ ಕಾರ್ಯಕ್ಷಮತೆ ಹಾಗು ಕಾರ್ಯ ನಿರ್ವಹಣೆಯನ್ನು ಉತ್ತಮಗೊಳಿಸಲು ವಿವಿಧ ಪ್ರಾಯೋಗಿಕ ಪರೀಕ್ಷೆಗಳಿಗೆ ಒಳಪಡಿಸಿ ಮೌಲ್ಯಮಾಪನ ಮಾಡಲಾಗುತ್ತಿದೆ

f) *Development of a Dehuller for Browntop Millet (Urochloa ramose):* A Prototype Small Millets Dehuller suitable for dehulling all millets has been successfully developed. The machine is operated by a 5 hp electrical motor and the capacity of the machine, at present, is roughly 100 kg/h. A dehulling efficiency of about 75% (2 passes) for browntop millet and >95% for kodo millet was achieved and machine is being improved further for better performance.

ಋ) *ಸೀಮರೂಬ ಗ್ಲುಕಾ ಎಲೆಗಳಿಂದ ಆರೋಗ್ಯಕರ ಪಾನೀಯದ ಅಭಿವೃದ್ಧಿ:* ಸೀಮರೂಬ ಗ್ಲುಕಾ ಎಲೆಗಳಿಂದ ಆರೋಗ್ಯಕರ ಪಾನೀಯವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಾಯಿತು. ಸೀಮರೂಬ ಎಲೆಯ ಕಷಾಯ ತಯಾರಿಸುವ ವಿವಿಧ ಸಂಯೋಜನೆಗಳಲ್ಲಿ ಮಧ್ಯಮ ಗಾತ್ರದ ಎಲೆ ಕಣಗಳನ್ನು (ಬಿ.ಎಸ್.4 ಜಾಲರಿಯಲ್ಲಿ ಪಡೆದ) 80°C ತಾಪಮಾನದ ನೀರಿನಲ್ಲಿ 30 ನಿಮಿಷದವರೆಗೆ ನೆನೆಸಿ ಕಷಾಯ ತಯಾರಿಸುವ ಸಂಯೋಜನೆಯು ಉತ್ತಮವಾಗಿ ಕಂಡುಬಂದಿದೆ. ಈ ಸಂಯೋಜನೆಯಲ್ಲಿ ತಯಾರಿಸಿದ ಸೀಮರೂಬ ಎಲೆಯ ಕಷಾಯದಲ್ಲಿ 86.04 ಮಿ.ಗ್ರಾಂ. GAE / 100 ಮಿ.ಲೀ. ಫಿನಾಲ್ಸ್, 504.33 ಮಿ.ಗ್ರಾಂ. ಕ್ವೆರ್ಸೆಟಿನ್/ 100 ಮಿ.ಲೀ ಫ್ಲೇವನಾಯ್ಡ್ಸ್ ಹಾಗು 41.87 ಮಿ.ಗ್ರಾಂ AEAC/ 100 ಮಿ.ಲೀ. ಉತ್ಕರ್ಷಣಾ ನಿರೋಧಕ ಸಾಮರ್ಥ್ಯ (Anti-oxidant Capacity) ಕಂಡುಬಂದಿದೆ. ಕಷಾಯವನ್ನು ನಿರ್ವಾತದಲ್ಲಿ ಸಾಂದ್ರತೆಗೊಳಿಸಿದ ನಂತರ ಸ್ಪೇ ಡ್ರೈಯರ್ ಬಳಸಿ ಸರಳೀಕರಿಸಿ (210°C ಒಳ ಗಾಳಿಯ ಉಷ್ಣಾಂಶ ಮತ್ತು ನಿಮಿಷಕ್ಕೆ 50 ಮಿ.ಲೀ. ಫೀಡ್ ಫ್ಲೋ ರೇಟ್), ಒಣಗಿಸಿ ಸೀಮರೂಬ ಎಲೆಯ ಕಷಾಯದ ಪುಡಿಯನ್ನು ಅಭಿವೃದ್ಧಿ ಪಡಿಸಲಾಯಿತು. ಪ್ರಸ್ತುತ ಮೂರು ವಿಭಿನ್ನ ಪ್ಯಾಕೇಜಿಂಗ್ ಸಾಮಗ್ರಿಗಳಲ್ಲಿ (LDPE, MMPE ಮತ್ತು PET) ಪ್ಯಾಕ್ ಮಾಡಲಾದ ಈ ಸೀಮರೂಬ ಕಷಾಯದ ಪುಡಿಯ ಶೇಖರಣಾ ಅಧ್ಯಯನವು ಪ್ರಗತಿಯಲ್ಲಿದೆ.

g) *Development of Health Beverage from Simarouba gluca leaves:* Simarouba glauca leaf decoction with a high amount of phytochemicals (total phenols – 86.04 mg GAE/ 100 ml); total flavonoids – 504.33 mg Quercetin/ 100 ml; antioxidant capacity – 41.87 mg AEAC/ 100 ml) could be prepared at optimized hot water extraction conditions of 80°C extraction temperature for 30 minutes duration using medium sized leaf particles (BS 4 mesh). The decoction is further vacuum concentrated and then spray dried at optimized conditions (at 210°C inlet air temperature & 50 ml/min feed flow rate) to obtain a Simarouba leaf decoction health drink powder. Storage studies of simarouba herbal powder packed in three different packaging materials (LDPE, MMPE and PET) is under progress.

ಎ) *ನವಣೆ ಧಾನ್ಯದ ಪರಜೀವಕ (ಪ್ರೋಬಯೋಟಿಕ್) ಪೇಯ ಅಭಿವೃದ್ಧಿ:* ಈ ಯೋಜನೆಯಡಿ ನವಣೆ ಧಾನ್ಯದ ಪ್ರೋಬಯೋಟಿಕ್ ಪಾನೀಯ ತಯಾರಿಸುವ ವಿಧಾನವನ್ನು ಮಾನ್ಯೀಕರಿಸಲಾಯಿತು. ನವಣೆ ಧಾನ್ಯದ ಪ್ರೋಬಯೋಟಿಕ್ ಪಾನೀಯವನ್ನು ತಯಾರಿಸಲು ಶೇ. 10 ರಷ್ಟು ಸಬ್‌ಸ್ಟ್ರೇಟ್ ಕಾನ್ಸನ್‌ಟ್ರೇಷನ್ (Substrate concentration), ಶೇ. 15 ರಷ್ಟು ಸಕ್ಕರೆಯ ಮಟ್ಟ ಮತ್ತು ಶೇ. 7.5 ರಷ್ಟು

h) *Development of Probiotic Drink / Beverage from Foxtail Millet (Setaria italica):* Process protocol is being standardized for the preparation of probiotic beverage from foxtail millet which could be one of the best suitable non-dairy based probiotic beverages. For the preparation of

ಪ್ರೋಬಯೋಟಿಕ್ ಲ್ಯಾಕ್ಟಿಕ್ ಆಮ್ಲ ಬ್ಯಾಕ್ಟೀರಿಯಾ ಇನಾಕ್ಯುಲಮ್ (Lactic acid bacteria inoculum) ಮಟ್ಟವು ಉತ್ತಮವೆಂದು ಕಂಡುಬಂದಿದೆ. ಹೀಗೆ ತಯಾರಿಸಿದ ಪ್ರೋಬಯೋಟಿಕ್ ಪಾನೀಯವು ಡೈರಿ ಆಧಾರಿತ ಪ್ರೋಬಯೋಟಿಕ್ ಪಾನೀಯಗಳಿಗಿಂತಲೂ ಉತ್ತಮವೆಂದು ಸಾಬೀತಾಗಿದೆ.

ಏ) ಸೂರ್ಯ ರಶ್ಮಿಯನ್ನು ಆಧಾರಿಸಿ ಹಣ್ಣು ಮತ್ತು ತರಕಾರಿಗಳನ್ನು ಒಣಗಿಸುವ ಯಂತ್ರವನ್ನು ಅಭಿವೃದ್ಧಪಡಿಸಲಾಗುತ್ತಿದೆ, ಇದರ ಕಾರ್ಯಕ್ಷಮತೆಯ ಮೌಲ್ಯಮಾಪನ ಪ್ರಗತಿಯಲ್ಲಿದೆ. ಕೊಯ್ಲಿನೋತ್ತರ ಯಂತ್ರಗಳನ್ನು (ಮಾವಿನ ಕಾಯಿ ಕೀಳುವ ಸಾಧನ, ಕಾಲು ಚಾಲಿತ ತೆಂಗಿನಕಾಯಿ ಸಿಪ್ಪೆ ಸುಲಿಯುವ ಸಾಧನ, ಸಪೋಟ ಕೀಳುವ ಸಾಧನ, ಅಡಿಕೆ ಸಿಪ್ಪೆ ಸುಲಿಯುವ ಸಾಧನ) ತಯಾರಿಸಿ ಮಾರಿರುವುದರಿಂದ ರೂ. 1.69 ಲಕ್ಷಗಳನ್ನು ಗಳಿಸಲಾಗಿದೆ.

3.8.6 ಒಳನಾಡು ಮೀನುಗಾರಿಕೆ

ರಾಜ್ಯದ ಪ್ರಥಮ ಮತ್ತು ಏಕೈಕ ನೈಲ್ ತಿಲಾಪಿಯ (ತಳೀಯವಾಗಿ ಸುಧಾರಿಸಿ ಬೆಳೆಸಿದ ತಿಲಾಪಿಯ–GIFT/ಟೈಗರ್ ಜಿಲೇಬಿ) ಮೀನುಮರಿಗಳ ಉತ್ಪಾದನಾ ಮತ್ತು ಮಾರಾಟ ಕೇಂದ್ರವನ್ನು ಒಳನಾಡು ಮೀನುಗಾರಿಕೆ ಘಟಕ, ಮುಖ್ಯ ಸಂಶೋಧನಾ ಕೇಂದ್ರ, ಹೆಬ್ಬಾಳ, ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರವು ಈ ಪ್ರದೇಶದ ಜಲಕೃಷಿ ಮತ್ತು ಅಕ್ವಾಫೋನಿಕ್ಸ್‌ಗಳಿಗೆ ಗಿಫ್ಟ್ ತಿಲಾಪಿಯಾ ಮೀನು ಮರಿಗಳನ್ನು ಪೂರೈಸುತ್ತಿದೆ. ಮೀನು ಮತ್ತು ಮೀನಿನ ಮರಿಗಳ ಮಾರಾಟದಿಂದ ಗಳಿಸಿದ ಮೊತ್ತ 2.29 ಲಕ್ಷಗಳು. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ (ಹೈದರಾಬಾದ್) ಅನುದಾನದಿಂದ ಸ್ಥಾಪಿಸಲಾಗಿರುವ ಪ್ರಾತ್ಯೆಕ್ಷಿಕೆ ಘಟಕವನ್ನು ಬಳಸಿಕೊಂಡು, ಸಿಹಿನೀರು ಮುತ್ತು ಉತ್ಪಾದನೆ ಬಗ್ಗೆ ರಾಷ್ಟ್ರೀಯ ಕುಶಲ 4 ತರಬೇತಿಯ ಕಾರ್ಯಕ್ರಮಗಳನ್ನು ಒಂಬತ್ತು ರಾಜ್ಯಗಳ 52 ಅಭ್ಯರ್ಥಿಗಳಿಗೆ ನೀಡಲಾಗಿದೆ. ವಿಶ್ವವಿದ್ಯಾನಿಲಯವು ಈ ತರಬೇತಿಯನ್ನು ನೀಡಬಹುದಾದ ರಾಜ್ಯದ ಏಕೈಕ ಸರ್ಕಾರಿ ಸಂಸ್ಥೆಯಾಗಿದೆ.

3.8.7 ಗೃಹ ವಿಜ್ಞಾನ (ಆಹಾರ ಮತ್ತು ಪೋಷಣೆ)

ಸ್ಥಳೀಯವಾಗಿ ಲಭ್ಯವಿರುವ ಆಹಾರಗಳನ್ನು ಉಪಯೋಗಿಸಿ "ಅಧಿಕ ನಾರುಯುಕ್ತ (29.50 ಗ್ರಾಂ) ಆಹಾರ ಮಿಶ್ರಣ" ವನ್ನು ಸಿದ್ದಪಡಿಸಲಾಗಿದೆ. ಈ ಮಿಶ್ರಣದಿಂದ ಸಾಂಪ್ರದಾಯಿಕ ತಿನಿಸುಗಳಾದ ರೊಟ್ಟಿ, ದೋಸೆ ಮತ್ತು ಮುದ್ದೆ ತಯಾರಿಸಿಬಹುದಾಗಿದೆ. ಇದರ ಸೇವನೆಯಿಂದ ದೇಹದ ತೂಕದಲ್ಲಿ ಇಳಿಕೆ ಕಂಡುಬಂದಿದೆ. ಅಲ್ಲದೆ ರಕ್ತದಲ್ಲಿನ ಕೊಲೆಸ್ಟಿರಾಲ್ ಮತ್ತು ಸಕ್ಕರೆ ಅಂಶವು ಸಹ ಗಣನೀಯವಾಗಿ ಇಳಿಕೆಯಾಗಿರುವುದು ತಿಳಿದುಬಂದಿದೆ

3.8.8 ಕೃಷಿ ಅರ್ಥಶಾಸ್ತ್ರ

ಕರ್ನಾಟಕ ರಾಜ್ಯದ 92 ತೋಟಗಾರಿಕಾ ಬೆಳೆಗಳ ವೆಚ್ಚ ಮತ್ತು ಆದಾಯ ಲೆಕ್ಕಾಚಾರವನ್ನು 7 ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. ಬೆಂಬಲ ಬೆಲೆ ನಿರ್ಧರಿಸಲು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಲು ಹಾಗೂ ಬೆಳೆ ನಷ್ಟ ಅಥವಾ ನೈಸರ್ಗಿಕ ವಿಕೋಪ ಸಂಭವಿಸಿದಾಗ ರೈತರನ್ನು ಬೆಂಬಲಿಸಲು ಸೂಕ್ತವಾದ ನೀತಿಗಳನ್ನು ಹೊರಡಿಸಲು ರಾಜ್ಯ ಸರ್ಕಾರವು ಈ ಸಂಪುಟಗಳನ್ನು ಉಪಯೋಗಿಸುತ್ತದೆ.

probiotic beverage from foxtail millet, a substrate concentration of 10 %, sugar level of 15% and probiotic lactic acid bacteria inoculum level of 7.5 % were found to be optimum.

i) *Solar-cum-Biomass Energy Dryer* : This is being developed for drying fruits and vegetables. Mass-Multiplication and sale of PHET gadgets (Manual Arecanut Dehusker, Coconut Dehusker, Mango Harvester, Sapota Harvester) to farmers and others generated a revenue of Rs. 1.69 lakhs.

3.8.6 Inland Fisheries Unit

The State's maiden hatchery of Genetically Improved Farmed Tilapia (GIFT) is established at the Inland Fisheries Unit, Main Research Station, Hebbal, Bengaluru, catering to the needs of aquaculture and aquaponics in the region. As of now, it is the only hatchery for GIFT all-male seed production in the State. Sale of fish and fish seeds earned Rs. 2.29 lakhs. National Hands-on training on 'Freshwater Pearl Culture' (4 Programmes) were conducted, utilizing the NFDB-sponsored Demonstration Unit, benefitting 52 candidates from nine States. As of now, is the only SAU in the State, offering hands-on training on freshwater pearl culture.

3.8.7 Food and Nutrition

High fibre food mix was developed using low cost locally available foods, which is rich in dietary fibre (29.50g) and can be used for preparing traditional foods that are consumed daily. The consumption of this food mix reduces the body weight, lipid profile and fasting blood sugar level.

3.8.8 Agricultural Economics

The final report on comprehensive scientific estimation of cost of cultivation for 92 horticultural crops is published in seven volumes. This report is being used to evolve appropriate policies to support farmers in the event of crop loss or natural disaster, besides price support through different developmental programmes/ schemes of State Government.

3.8.9 ಬೀಜ ಉತ್ಪಾದನೆ

ರಾಷ್ಟ್ರೀಯ ಬೀಜ ಪ್ರಾಯೋಜನೆ, ಕೃ.ವಿ.ವಿ., ಬೆಂಗಳೂರು ವತಿಯಿಂದ 2018–19ನೇ ಸಾಲಿನಲ್ಲಿ 1915.72 ಹೆಕ್ಟೇರ್ ಪ್ರದೇಶದಲ್ಲಿ ಭತ್ತ, ರಾಗಿ, ಮುಸುಕಿನ ಜೋಳ, ತೊಗರಿ, ಅಲಸಂದೆ, ಕಡಲೆ, ಹುರಳಿ, ಅವರೆ, ಸೋಯಾಅವರೆ, ಸೂರ್ಯಕಾಂತಿ, ಶೇಂಗಾ ಮುಂತಾದ ಬೆಳೆಗಳಲ್ಲಿ ಉತ್ಪಾದನೆಯ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. 2018ರ ಮುಂಗಾರು ಹಂಗಾಮಿನಲ್ಲಿ 871.79 ಹೆಕ್ಟೇರ್ ಪ್ರದೇಶದಲ್ಲಿ ಗುಣಮಟ್ಟದ ಬೀಜೋತ್ಪಾದನಾ ಕಾರ್ಯಕ್ರಮವನ್ನು ಆಯೋಜಿಸಿದ್ದು ಹಿಂಗಾರು ಹಾಗು ಬೇಸಿಗೆಯ ಅವಧಿಯಲ್ಲಿ ಬೀಜೋತ್ಪಾದನಾ ಕಾರ್ಯಕ್ರಮವನ್ನು ಸುಮಾರು 232.60 ಹೆಕ್ಟೇರ್ ಪ್ರದೇಶದಲ್ಲಿ ಆಯೋಜಿಸಲಾಗಿದೆ. ತಳಿವರ್ಧಕ ಬೀಜ ಹಾಗೂ ಗುಣಮಟ್ಟದ ಬೀಜೋತ್ಪಾದನೆಯ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಸುಮಾರು 76.75 ಟನ್ ತೂಕದಷ್ಟು ಕಬ್ಬಿನ ಪೌಂಡೇಶನ್ ಸೆಟ್‌ಗಳನ್ನು ಉತ್ಪಾದಿಸಿ ರೈತರಿಗೆ ಕೃಷಿ ಇಲಾಖೆ ಮತ್ತು ಕಬ್ಬಿನ ಕಾರ್ಖಾನೆಗಳ ಮೂಲಕ ಒದಗಿಸಲಾಯಿತು. ಇದರಿಂದ ರೂ. 2.64 ಲಕ್ಷಗಳ ಆದಾಯವನ್ನು ಗಳಿಸಲಾಯಿತು. ತೋಟಗಾರಿಕಾ ವಿಭಾಗದಲ್ಲಿ ರೂ. 46.18 ಲಕ್ಷಗಳ ಮೌಲ್ಯದಷ್ಟು ತೋಟಗಾರಿಕೆ ಬೆಳೆಗಳ ಬೀಜ ಮತ್ತು ಸಸಿಗಳನ್ನು ಬೆಳೆದು ಮಾರಲಾಗಿದೆ. ವಿಶ್ವವಿದ್ಯಾನಿಲಯದ ಸಂಶೋಧನಾ ಕೇಂದ್ರಗಳಲ್ಲಿ ರೂ.2.89 ಕೋಟಿಗಳ ಮೌಲ್ಯದಷ್ಟು ಬೀಜ ಮತ್ತು ಸಸಿಗಳನ್ನು ಬೆಳೆದು ಮಾರಲಾಗಿದೆ.

3.8.9 Seed Production

National Seed Project (NSP), UAS, Bengaluru had organized seed production in an area of 1915.72 ha during 2018-19 in different crops like Paddy, Ragi, Maize, Redgram, Cowpea, Bengalgram, Horsegram, Fieldbean, Soybean, Sunflower, Groundnut etc. The quality seed production programme was organized in an area of 871.79 ha during *Kharif* 2018 and in an area around 232.60 ha during rabi/summer. The details of breeder seeds and quality seeds produced during 2018-19 is depicted in the following table.

About 76.75 tonnes of sugarcane setts were supplied to farmers through department of Agriculture and sugar mills wherein the receipts generated was Rs. 2.64 lakhs. Sale of Horticultural crops seeds & planting materials generated an income of Rs.46.18 lakhs. Seed and Planting materials and other agricultural inputs supplied through research stations of the university generated an income of Rs. 2.89 Crores.

ಕೋಷ್ಟಕ 45 : ತಳಿವರ್ಧಕ ಬೀಜ ಹಾಗೂ ಗುಣಮಟ್ಟದ ಬೀಜೋತ್ಪಾದನೆಯ ವಿವರಗಳು (ಕ್ವಿಂ ಗಳಲ್ಲಿ)
Table 45 : Breeder Seeds and Quality Seeds Produced (in quintals)

ಕ್ರ.ಸಂ./ Sl.No	ಬೆಳೆಗಳು/ Crop	ತಳಿವರ್ಧಕ ಬೀಜ (ಕ್ವಿಂ)/ Breeder Seeds (q)	ಗುಣಮಟ್ಟದ ಬೀಜ (ಕ್ವಿಂ)/ Quality Seeds (q)	ಒಟ್ಟು ಕ್ವಿಂ)/ Total (q)
1.	ಏಕದಳ/Cereals	173.61	13986.92	14160.53
2.	ದ್ವಿದಳ/Pulses	113.04	1299.17	1412.21
3.	ಎಣ್ಣೆಕಾಳು/Oilseeds	529.08	1183.16	1712.24
	ಒಟ್ಟು/Total	15.73	815.73	16469.25

3.8.10 ಪರಿಶಿಷ್ಟ ಪಂಗಡ ಬುಡಕಟ್ಟು ರೈತರಿಗಾಗಿ ಆಯೋಜಿಸಿದ ಕಾರ್ಯಕ್ರಮಗಳು

ಅ) ಸಮಗ್ರ ಕೃಷಿ ಪದ್ಧತಿಗಳ ಅಖಿಲ ಭಾರತ ಸುಸಂಘಟಿತ ಸಂಶೋಧನಾ ಪ್ರಾಯೋಜನೆ ಹಾಗೂ ಚಾಮರಾಜನಗರದ ಕೃಷಿ ವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ ಸೊಳ್ಳೆಪುರ ಸಿ ಹಾಡಿ ಮತ್ತು ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟಗಳಲ್ಲಿ ಸೊಲಿಗ ಬುಡಕಟ್ಟುಗಳ ಅಭಿವೃದ್ಧಿಗಾಗಿ ಕೃಷಿ ಪದ್ಧತಿಯ ಸಾ–ಕ್ಷೇತ್ರ ಕಾರ್ಯಕ್ರಮವನ್ನು ಆಯೋಜಿಸಲು ಸಮಗ್ರ ಕೃಷಿ ಪದ್ಧತಿ ಯೋಜನೆಯಲ್ಲಿ ಅಳವಡಿಸಿ ಕಾರ್ಯರೂಪಕ್ಕೆ ತರಲು 5 ಗುಚ್ಛ ಗ್ರಾಮಗಳನ್ನು ದತ್ತು ಸ್ವೀಕರಿಸಲಾಗಿದೆ. ಅದು ಕೆ. ದೇವರಹಳ್ಳಿ (50 ಕುಟುಂಬಗಳು), ಶನಿವಾರಮುಂಟಿ (26 ಕುಟುಂಬಗಳು), ಕುಂಟಗುಡಿ ಕಾಲೋನಿ (41 ಕುಟುಂಬಗಳು) ಸೊಳ್ಳೆಪುರ ಸಿ ಹಾಡಿ (73 ಕುಟುಂಬಗಳು) ಮತ್ತು ಮೇಲುಕಾಮನಹಳ್ಳಿ (85 ಕುಟುಂಬಗಳು).

3.8.10 Programmes for tribal farmers

a) AICRP on IFS has adopted five cluster villages for conducting On-farm Programme in Farming System Perspective for Soliga tribals of BR Hills at Yelandur taluk, Chamarajanagar district and Sollepura C Hadi, Mysore district in co-ordination with KVK. 50 families of K.Devarahalli, 26 families of Shanivaar Munti, 41 families of Kuntagudi colony, 73 families of Sollepura C Hadi and 85 families of Melukamanahally are adopted by AICRP on IFS

ಆ) ಭತ್ತ ಕುರಿತ ಅಖಿಲ ಭಾರತ ಸುಸಂಘಟಿತ ಭತ್ತದ ಪ್ರಾಯೋಜನೆಯ ವತಿಯಿಂದ ಚಾಮರಾಜನಗರ ಜಿಲ್ಲೆಯ ಹೆಗ್ಗಡದೇವನಕೋಟೆ ಮತ್ತು ಯಳದೂರು ತಾಲ್ಲೂಕಿನ ಎರಡು ಬುಡಕಟ್ಟು ಗ್ರಾಮಗಳಲ್ಲಿ 100 ಕುಟುಂಬಗಳಿಗೆ ರೂ. 5.20 ಲಕ್ಷ ಮೌಲ್ಯದ ಕೃಷಿ ಪರಿಕರಗಳನ್ನು ವಿತರಿಸಲಾಯಿತು ಮತ್ತು ಕ್ಷೇತ್ರ ಭೇಟಿ ಹಾಗೂ ತರಬೇತಿಗಳನ್ನು ಸಹ ಆಯೋಜಿಸಲಾಗಿತ್ತು.

b) Training programmes and frequent field visits were carried out. Rs.5.20 lakh worth agri-input materials have been distributed to 100 families of two tribal villages viz., Heggadadevan Kote and Yelandur taluks of Chamarajanagara District by AICRP on Rice

ಇ) ಅರಣ್ಯ ಕೃಷಿ ಕುರಿತ ಅಖಿಲ ಭಾರತ ಸಂಯೋಜಿತ ಸಂಶೋಧನಾ ಪ್ರಾಯೋಜನೆ ವತಿಯಿಂದ ಚಾಮರಾಜನಗರ ತಾಲ್ಲೂಕಿನ ಬೂದಿಪಡಗ ಗ್ರಾಮದ 200 ಬುಡಕಟ್ಟು ರೈತರಿಗೆ ಹಾಗೂ ಹುಣಸೂರು ತಾಲ್ಲೂಕಿನ ಶೆಟ್ಟಿಹಳ್ಳಿ ಗ್ರಾಮದ 126 ಬುಡಕಟ್ಟು ರೈತ ಕುಟುಂಬಗಳಿಗೆ ಸುಧಾರಿತ 200 ಸೀಬೆ, 526 ಕಸಿ ಮಾವು, 800 ನಿಂಬೆ, 5260 ಹೆಬ್ಬೇವು, 1260 ಸಿಲ್ವರ್, 126 ಬೇಲ, 126 ಸೀತಾಫಲ, 126 ಹಲಸು, 270 ಕುಡುಗೋಲು ಮತ್ತು 126 ಗುದ್ದಲಿಗಳನ್ನು ನೀಡಿ ಸಕಾಲದಲ್ಲಿ ಸಮತೋಲಿತ ಪೋಷಕಾಂಶಗಳ ನಿರ್ವಹಣೆ ಮತ್ತು ಕೃಷಿ ಅರಣ್ಯ ಬೆಳೆಗಳ ಕುರಿತಾಗಿ ಹಾಗೂ ಆಧುನಿಕ ಬೇಸಾಯ ಪದ್ಧತಿಗಳ ಬಗ್ಗೆ ತರಬೇತಿಗಳನ್ನು ನೀಡಿದ್ದು ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಯಿತು.

c) Forestry and horticulture seedlings and agricultural implements like sickles and gudli's were distributed to 200 tribal farmers of Bhudipadaga village of Chamarajanagar taluk and 126 farmers of Hunsur taluk, Shettahalli village by AICRP on Agroforestry

ಈ) ಅಖಿಲ ಭಾರತ ಸುಸಂಘಟಿತ ಕಶೇರುಕ ಪ್ರಾಣಿ ಪೀಡೆಗಳು ವಿಭಾಗವು ಮಾಗಡಿ ತಾಲ್ಲೂಕಿನ ಮಾಡಬಾಲ ಹೋಬಳಿಯ ಜೇನುಕಲ್ಲುಪಾಳ್ಯದ 40 ಇರುಳಿಗ ಬುಡಕಟ್ಟು ಜನಾಂಗದವರಿಗೆ 7 ಸಸ್ಯ ಸಂರಕ್ಷಣೆ ಪರಿಕರಣಗಳನ್ನು 25ನೇ ಮೇ, 2018 ವಿತರಿಸಲಾಯಿತು.

d) Set of five agricultural inputs were distributed to 40 Scheduled Tribe families belonging to Iruliga tribal group of Jenukalpalya, Madabal hobli, Magadi taluk on 25-5-2018 by AINP on Vertebrate pest Management.

ಉ) ಅಖಿಲ ಭಾರತ ಸುಸಂಘಟಿತ ಕಶೇರುಕ ಪ್ರಾಣಿ ಪೀಡೆಗಳು ವಿಭಾಗವು ಬೂದಿಪಡಗ (ರಂಗಸಂದ್ರ) ಚಾಮರಾಜನಗರ, ತಾ ಮತ್ತು ಜಿಲ್ಲೆಯ 40 ಸೋಲಿಗಾ ಗುಂಪಿನ ಬುಡಕಟ್ಟು ಜನಾಂಗದವರಿಗೆ 7 ಸಸ್ಯ ಸಂರಕ್ಷಣೆ ಪರಿಕರಣಗಳನ್ನು 10 ನೇ ನವಂಬರ್, 2018 ವಿತರಿಸಲಾಯಿತು.

e) Set of seven plant protection tools were distributed to 40 Scheduled Tribe families belonging to Soliga tribal group of Bhudipadaga of Chamarajanagara, taluk on 10th November 2018 by AINP on Vertebrate pest Management.

ಊ) ಚಾಮರಾಜನಗರ ತಾಲ್ಲೂಕಿನ ಬೂದಿಪಡಗ ಗ್ರಾಮದ ಬುಡಕಟ್ಟು ರೈತರಿಗೆ 20–22ನೇ ಫೆಬ್ರವರಿ 2019 ರವರೆಗೆ ಜೇನು ಕೃಷಿಯ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

f) Organized Beekeeping training programme for triabls of Budhipadga, Chamarajanagar from 20-22nd February, 2019

3.9 ಭಾರತೀಯ ಕೃಷಿ ಅನುಸಂಧಾನ ಪರಿಷತ್– ಉನ್ನತ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಕಾರ್ಯಕ್ರಮದ ಬೆಂಬಲದಡಿ ಹೊಂದಾಣಿಕೆ ಕೃಷಿಯಲ್ಲಿ ಮುಂದಿನ ತಲೆಮಾರಿನ ತಂತ್ರಜ್ಞಾನಗಳ ಕೇಂದ್ರ (ಎನ್.ಜಿ.ಟಿ.–ಎ.ಎ.)

3.9 Centre for Next Generation Technologies in Adaptive Agriculture (NGT_AA) supported under ICAR-CAAST program

3.9.1 ಹೊಂದಾಣಿಕೆ ಕೃಷಿಯಲ್ಲಿ ಮುಂದಿನ ತಲೆಮಾರಿನ ತಂತ್ರಜ್ಞಾನಗಳ ಕೇಂದ್ರದ ಒಟ್ಟಾರೆ ಚಟುವಟಿಕೆಗಳು

3.9.1 Overall activities under NGT_AA

ಭಾರತೀಯ ಕೃಷಿ ಅನುಸಂಧಾನ ಪರಿಷತ್– ರಾಷ್ಟ್ರೀಯ ಕೃಷಿ ಉನ್ನತ ಶಿಕ್ಷಣ ಪ್ರಾಯೋಜನೆ – ಉನ್ನತ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಕಾರ್ಯಕ್ರಮದಡಿಯಲ್ಲಿ ವಿಶ್ವಬ್ಯಾಂಕ್ ಸಹಯೋಗದೊಂದಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಉನ್ನತ ಕೃಷಿ ತಂತ್ರಜ್ಞಾನಗಳಲ್ಲಿ ಸಂಶೋಧನೆ ಮತ್ತು ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಚಟುವಟಿಕೆಗಳಲ್ಲಿ ನವೀನ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ವಿಶ್ವವಿದ್ಯಾನಿಲಯದ ಪ್ರಸ್ತುತ ಸಾಮರ್ಥ್ಯದ ಆಧಾರದ ಮೇಲೆ

UAS, Bangalore has initiated novel programs to strengthen research and human resource development activities in advanced agricultural technologies under ICAR-NAHEP-Centre for Advanced Agricultural Science and Technology (CAAST) program supported by the World Bank. Based on the existing strengths of the University, a program on Next Generation Technologies (NGT) in Adaptive

ಹೊಂದಾಣಿಕೆ ಕೃಷಿಯ ನಿರ್ದಿಷ್ಟ ಕ್ಷೇತ್ರಗಳಲ್ಲಿನ ಮುಂದಿನ ತಲೆಮಾರಿನ ತಂತ್ರಜ್ಞಾನಗಳ ಕುರಿತ ಕಾರ್ಯಕ್ರಮಗಳನ್ನು 2018–19ರಲ್ಲಿ ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮವು ನಾಲ್ಕು ವಿವಿಧ ಉದ್ದೇಶಗಳನ್ನು ಹೊಂದಿದೆ. ಪ್ರತಿಕೂಲ ಹವಾಮಾನದ ಪರಿಸ್ಥಿತಿಗಳಲ್ಲಿ ಒಣ ಭೂಮಿ ಅಭಿವೃದ್ಧಿಗಾಗಿ ನೀರಾವರಿ ನೀರು ಹರಿದುಹೋಗುವುದನ್ನು ಕಡಿಮೆಗೊಳಿಸಿದ ಬೇಸಾಯ, ಉನ್ನತ ಆನುವಂಶಿಕ ಪರಿಕರಗಳ ಬಳಕೆಯನ್ನೊಳಗೊಂಡಂತೆ ನಿಖರ ಬೆಳೆ ತಳಿ ಸಂವರ್ಧನೆ, ಸಸ್ಯ ಬೆಳವಣಿಗೆ ಹೆಚ್ಚಿಸಲು ಎಂಡೋಫೈಟ್ ಸಹಾಯದ ಬೀಜ ಮೊಳಕೆ ನಿಯಂತ್ರಣ ಮತ್ತು ಪರಿಣಾಮಕಾರಿ ನಿರ್ವಹಣೆಗೆ ಪೀಡೆ ಹಾಗೂ ರೋಗ ಹಾವಳಿಯ ಮುನ್ಸೂಚನೆ ನೀಡುವುದನ್ನು ಮೊದಲ ಉದ್ದೇಶ ಒಳಗೊಂಡಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಸ್ನಾತಕೋತ್ತರ ಕಾರ್ಯಕ್ರಮಗಳನ್ನೊಳಗೊಂಡಂತೆ ಕೌಶಲ್ಯ ಅಭಿವೃದ್ಧಿ, ತರಬೇತಿ ಮತ್ತು ಪ್ರಾತ್ಯಕ್ಷಿಕೆಗಳನ್ನು ಅನುಕ್ರಮವಾಗಿ ಉದ್ದೇಶ 2, 3 ಮತ್ತು 4ರಂತೆ ಒಳಗೊಂಡಿವೆ. ಉನ್ನತ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಕಾರ್ಯಕ್ರಮದಲ್ಲಿ ಹದಿಮೂರು ವಿವಿಧ ಇಲಾಖೆಗಳು ಸಂಶೋಧನೆ ಮತ್ತು ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿವೆ. ನಾಲ್ಕು ವಿವಿಧ ಕ್ಷೇತ್ರಗಳಲ್ಲಿ ನಡೆಸಿರುವ ಪ್ರಗತಿಯನ್ನು ಈ ಮುಂದೆ ನೀಡಲಾಗಿದೆ.

3.9.2 ಸಂಶೋಧನಾ ಚಟುವಟಿಕೆಗಳು

ನೀರು ಹರಿದು ಹೋಗುವಿಕೆ ಕಡಿಮೆಗೊಳಿಸಿ ನಡೆಸುವ ಬೇಸಾಯ: ವಿವಿಧ ಬೆಳೆ ನಿರ್ವಹಣೆಗಳಲ್ಲಿ ನೀರು ಹರಿದುಹೋಗುವಿಕೆ ಮತ್ತು ಮಣ್ಣು ನಷ್ಟವಾಗುವಿಕೆ ಕುರಿತ ಅಧ್ಯಯನಗಳನ್ನು ಪ್ರಾರಂಭಿಸಲಾಗಿದೆ. ರಾಗಿ ಮತ್ತು ನೆಲಗಡಲೆ ಆಧಾರಿತ ಅಂತರಬೆಳೆ ವ್ಯವಸ್ಥೆಯಲ್ಲಿ ಪಾತಿಗಳಲ್ಲಿ ತೇವಾಂಶ ಸಂರಕ್ಷಣೆಯಲ್ಲಿ ಉಪಮೇಲ್ಮೈ ಮಣ್ಣಿನ ಪರಿಣಾಮವನ್ನು ಅಧ್ಯಯನ ಮಾಡಲಾಯಿತು. ಕರ್ನಾಟಕದ ವಿವಿಧ ಕೃಷಿ–ಹವಾಮಾನ ವಲಯಗಳಲ್ಲಿ ಅರೆಕಾ ಕ್ಯಾಚ್ಯೂ ಬಲಿಯುವಿಕೆಯ ವಿವಿಧ ಹಂತಗಳಲ್ಲಿ ಅರೆಕೋಲಿನ್ ಅಂಶದ ತುಲನಾತ್ಮಕ ಅಧ್ಯಯನವನ್ನು ಸಹ ಪ್ರಯತ್ನಿಸಲಾಗಿದೆ. ಹಾರಕ ಮೌಲ್ಯ ಆಧಾರಿತ ಮೌಲ್ಯವರ್ಧಿತ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ನಿಖರ ತಳಿ ಸಂವರ್ಧನೆ: ಭತ್ತ (ಕೆ.ಎಂ.ಪಿ.–149), ನೆಲಗಡಲೆ (ಟಿ.ಎಂ.ವಿ. 2), ಮೆಣಸಿನಕಾಯಿ (ತಿವಾರಿ), ಮೆಕ್ಕೆಜೋಳ (ಎನ್.ಎ.ಐ. 137) ಮತ್ತು ರಾಗಿ ಬೆಳೆಗಳಲ್ಲಿ ಅಣು ಗುರುತುಕಾರಕ ಸಹಾಯದ ತಳಿ ಸಂವರ್ಧನೆಯನ್ನು ಕೈಗೊಳ್ಳಲಾಗುತ್ತಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಪ್ರಮುಖ ರೋಗಗಳಿಗಾಗಿ ನಿರೋಧಕತೆಯನ್ನು ಹೆಚ್ಚಿಸುವುದಾಗಿದೆ.

ಎಂಡೋಫೈಟ್ ವರ್ಧಿತ ಬೀಜ ಮೊಳಕೆ ನಿಯಂತ್ರಣ: ಒತ್ತಡ ಪರಿಸರ ಸಂದರ್ಭಗಳಲ್ಲಿ ಬೆಳೆಗಳ ಬೆಳವಣಿಗೆ ಹಾಗೂ ಉತ್ಪಾದಕತೆಯನ್ನು ಸುಧಾರಿಸಲು ಎಂಡೋಫೈಟಿಕ್ ಶಿಲೀಂಧ್ರಗಳ ಬಳಕೆಯ ಸಾಧ್ಯತೆಗಳನ್ನು ಪ್ರಯತ್ನಿಸಲಾಗುತ್ತಿದೆ. ಅಜೈವಿಕ ಮತ್ತು ಜೈವಿಕ ಒತ್ತಡದ ಸಂದರ್ಭಗಳಲ್ಲಿ ಸಸ್ಯಗಳಿಗೆ ಸಹಿಷ್ಣುತೆ ಒದಗಿಸಿ ಸಸ್ಯ ಬೆಳವಣಿಗೆಯ ವರ್ಧನೆಯಲ್ಲಿ ಎಂಡೋಫೈಟಿಕ್ ಶಿಲೀಂಧ್ರಗಳ ನೇರ ಪಾತ್ರವಿರುವುದು ವರದಿಯಾಗಿದೆ. ಬೆಳವಣಿಗೆ ಮತ್ತು ಒತ್ತಡ ಸಹಿಷ್ಣುತೆಗೆ ಕೊಡುಗೆ ನೀಡಬಲ್ಲ ಎಂಡೋಫೈಟಿಕ್ ಶಿಲೀಂಧ್ರಗಳ ಅನ್ವೇಷಣೆಗಾಗಿ ಎಂಡೋಫೈಟ್ ಸಂಗ್ರಹವನ್ನು ಪರಿಶೀಲಿಸಲಾಗುತ್ತಿದೆ ಹಾಗೂ ಈಗ ಇರುವ ಸಂಗ್ರಹವನ್ನು ಸಮೃದ್ಧಿಗೊಳಿಸಲಾಗುತ್ತಿದೆ. ಕಠಿಣ ಪರಿಸರ ಪರಿಸ್ಥಿತಿಗಳಿಗೆ ಹೊಂದಿಕೊಂಡಿರುವ ಸಸ್ಯಗಳಿಂದ 300ಕ್ಕೂ ಹೆಚ್ಚು ಎಂಡೋಫೈಟಿಕ್

Agriculture (AA) in specific areas has been started during the year 2018-19. In this program there are four different objectives. The first objective includes research activities related to reduced runoff farming for inclusive development of dry lands under climatic distress, precision crop breeding including use of advanced genomic tools, endophyte enabled seed priming to modulate plant growth and forecasting pest and disease outbreaks for effective management. Objectives 2, 3 and 4 involve skill development, training and demonstrations including strengthening ongoing PG programmes of the UAS-B. Thirteen different departments are associated with the research and skill development activities of the CAAST program. Progress made in four different areas is given below.

3.9.2 Research activities

Reduced runoff farming: Studies on runoff and soil loss under different crop management have been initiated. Impact of subsoiler on *in-situ* moisture conservation in finger millet and groundnut based intercropping system was studied. Comparative study of arecoline content in *Areca catechu* at various stages of maturity in different agro-climatic zones of Karnataka was also attempted. *Kodo millet*-based value added products are being developed.

Precession breeding: Molecular maker assisted breeding is being advanced in crops like Rice (KMP-149), Groundnut (TMV, 2), Chilli (Tiwari), Maize (NAI 137) and finger millet. The main focus of the program is towards improving resistance for major diseases.

Endophyte enabled seed priming: Attempts are being made to explore the options for using endophytic fungi (EF) in ameliorating crop growth and productivity of crops under stressful environments. The direct role of EF in boosting plant growth and imparting tolerance to plants against abiotic and biotic stresses has been reported. To prospect endophytic fungi contributing for growth and stress tolerance endophyte library is being screened and the existing library is being enriched. Over 300 endophytic fungi have been isolated from plants

ಶಿಲೀಂಧ್ರಗಳನ್ನು ಪ್ರತ್ಯೇಕಿಸಿ ಸಂಗ್ರಹಿಸಲಾಗಿದೆ. ಟೊಮ್ಯಾಟೊ, ಮೆಣಸಿನಕಾಯಿ ಮತ್ತು ಭತ್ತದ ಬೆಳೆಗಳಲ್ಲಿ ಕೆಲವು ಶಿಲೀಂಧ್ರಗಳು ಲವಣತೆ ಮತ್ತು ಪಾಲಿಎಥಿಲೀನ್ ಗ್ಲೈಕಾಲ್ ಪ್ರಚೋದಿತ ಒತ್ತಡ ಸಹಿಷ್ಣುತೆ ನೀಡುತ್ತಿರುವುದು ಕಂಡುಬಂದಿದೆ. ಈ ಫಲಿತಾಂಶಗಳ ಕುರುಹುಗಳಿಂದಾಗಿ, ಲವಣ ಸೂಕ್ಷ್ಮತೆ ಹೊಂದಿರುವ ಭತ್ತದ ಆನುವಂಶಿಕ ರೂಪಗಳಲ್ಲಿ ಎಂಡೋಫೈಟ್ ಪ್ರಚೋದಿತ ಲವಣ ಸಹಿಷ್ಣುತೆಯ ಅಣು ಹಂತದ ಪ್ರಕ್ರಿಯೆ ಅಧ್ಯಯನಗಳನ್ನು ಪ್ರಾರಂಭಿಸಲಾಗಿದೆ.

ಪರಿಣಾಮಕಾರಿ ನಿರ್ವಹಣೆಗಾಗಿ ಪೀಡೆ ಮತ್ತು ರೋಗಗಳ ಹಾವಳಿ ಮುನ್ಸೂಚನೆಗೆ ಮುಂದಿನ ತಲೆಮಾರಿನ ತಂತ್ರಜ್ಞಾನ: ಪೀಡೆ ಮತ್ತು ರೋಗಗಳ ಹಾವಳಿ ಮತ್ತು ಹರಡುವಿಕೆಯ ಮೇಲೆ ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳ ಪರಿಣಾಮದ ಪರಿಶೋಧನೆಗೆ ಭತ್ತದ ಬೆಂಕಿರೋಗ, ದ್ರಾಕ್ಷಿಯ ತುಪ್ಪಳು ರೋಗ ಹಾಗೂ ತೊಗರಿಯ ಹೆಲಿಕೊವೆರ್ಪ ಹುಳುವಿನ ಹಾವಳಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳ ಪರಿವೀಕ್ಷಣೆಗಾಗಿ ಒಂದು ಮುನ್ಸೂಚನೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. 2018–19ರ ಮುಂಗಾರಿನ ಭತ್ತ ಮತ್ತು ತೊಗರಿ ಬೆಳೆಗಳಲ್ಲಿ ಪೀಡೆ ಮತ್ತು ರೋಗಗಳ ಹಾವಳಿಯ ತತ್‌ಕ್ಷಣ ದತ್ತಾಂಶ ಸಂಗ್ರಹಣೆಗಾಗಿ ಮಂಡ್ಯ ಮತ್ತು ಜಿ.ಕೆ.ವಿ.ಕೆ.ಯಲ್ಲಿ ಕ್ಷೇತ್ರ ಪ್ರಯೋಗಗಳನ್ನು ಕೈಗೊಳ್ಳಲಾಯಿತು. 2011ರಿಂದ 2016ರವರೆಗಿನ ಪೀಡೆ ಮತ್ತು ರೋಗ ದತ್ತಾಂಶವನ್ನು ಭತ್ತ ಹಾಗೂ ತೊಗರಿ ಬೆಳೆಗಳಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್–ರಾಷ್ಟ್ರೀಯ ಹವಾಮಾನ ಸ್ಥಿತಿಸ್ಥಾಪಕತ್ವ ಕೃಷಿ ಉಪಕ್ರಮಗಳ ಪೀಡೆ ಮುನ್ಸೂಚನೆ ಮಾದರಿಗಳನ್ನು ಬಳಸಿ ಪ್ರಸ್ತುತವಿರುವ ಮಾದರಿಗಳ ಕಾಲಾನುಕ್ರಮ ಪರಿಷ್ಕರಣೆಗೆ ಸಂಗ್ರಹಿಸಲಾಯಿತು.

3.9.3 ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳು

ಮುಂದಿನ ತಲೆಮಾರಿನ ತಂತ್ರಜ್ಞಾನಗಳ ಕೇಂದ್ರವು (ಎನ್.ಜಿ.ಟಿ.ಎ.ಎ.) ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನಗಳ ನಾಲ್ಕು ವಿವಿಧ ಆಯ್ದ ಕ್ಷೇತ್ರಗಳಲ್ಲಿ ಮತ್ತು ಹಲವಾರು ಮಾನವ ಸಂಪನ್ಮೂಲ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸಂಶೋಧನೆಯನ್ನು 2018–19ರಲ್ಲಿ ಪ್ರಾರಂಭಿಸಿದೆ. ಅವುಗಳ ಕೆಲವು ಪ್ರಮುಖ ಕಾರ್ಯಕ್ರಮಗಳನ್ನು ಈ ಮುಂದೆ ನೀಡಲಾಗಿದೆ.

ಕಾರ್ಯಾಗಾರಗಳು: ಎಂಡೋಫೈಟ್ ಸಸ್ಯ ಅಂತರಪ್ರತಿಕ್ರಿಯೆ ಹಾಗೂ ಪೀಡೆ ಮತ್ತು ರೋಗಗಳ ಮುನ್ಸೂಚನೆ ಕುರಿತ ಮೂರು ಕಾರ್ಯಾಗಾರಗಳನ್ನು ಆಯೋಜಿಸಲಾಗಿತ್ತು. ಒಟ್ಟಾರೆ 204 ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಮತ್ತು ಖಾಸಗಿ ಉದ್ಯಮಗಳ ವಿಜ್ಞಾನಿಗಳು ಇವುಗಳಲ್ಲಿ ಭಾಗವಹಿಸಿ ಈ ವಿಷಯಗಳ ಕುರಿತು ಅರಿವು ಪಡೆದುಕೊಂಡರು.

ಪರಿಚಯಾತ್ಮಕ ಭೇಟಿಗಳು: 35 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಲ್ಪಾವಧಿ ಪರಿಚಯಾತ್ಮಕ ಭೇಟಿಗಳನ್ನು ಕೇಂದ್ರ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ ಮತ್ತು ಸೈನ್ಯ ಆಹಾರ ಸಂಶೋಧನಾ ಪ್ರಯೋಗಾಲಯ, ನೆಸ್ಲೆ, ಬ್ರಿಟಾನಿಯಾ ಮತ್ತು ನೋವೋಜೈಮ್ಸ್ ನಂತಹ ಉದ್ಯಮ ಮಟ್ಟದ ಆಹಾರ ಸಂಸ್ಕರಣೆ ಸಂಸ್ಥೆಗಳಿಗೆ ಆಯೋಜಿಸಲಾಗಿತ್ತು. ಒಟ್ಟು 95 ವಿದ್ಯಾರ್ಥಿಗಳು ವಲಯ ಕೃಷಿ ಸಂಶೋಧನಾ ಕೇಂದ್ರ, ಮಂಡ್ಯ, ಈಸ್ಟ್–ವೆಸ್ಟ್ ಬೀಜ ಕಂಪೆನಿ ಮತ್ತು ಮಾನ್ಸಾಂಟೊ ಇಂಡಿಯಾ ಲಿ., ಕಳ್ಳಿನಾಯಕನಹಳ್ಳಿ ಇವುಗಳಿಗೆ ಪರಿಚಯಾತ್ಮಕ ಭೇಟಿ ನೀಡಿದರು. ಈ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳು ವಾಣಿಜ್ಯ ಮಟ್ಟದಲ್ಲಿ ವಿವಿಧ ಬೆಳೆಗಳಲ್ಲಿ ನಿರ್ಬೀಜೀಕರಣ ತಂತ್ರಗಳನ್ನು ಕಲಿತುಕೊಂಡರು.

adapted to harsh environmental conditions. Some of the fungi have been shown to be imparting salinity and PEG-induced desiccation stress tolerance in tomato, chilli and rice. Based on the leads, the molecular mechanism associated with endophyte-induced salt tolerance in salt sensitive paddy genotype has been initiated.

NGT for forecasting pest and disease outbreaks for effective management: To investigate the influence of changing weather conditions on occurrence, and spread of pests and diseases a forecasting system is being developed to monitor the effect of climate change on blast disease in rice, downy mildew in grape and helicoverpa in pigeon pea. The field experiment was taken at Mandya and GKVK for gathering real time data of pest and diseases on rice and pigeonpea during *kharif* 2018-19. Pests and disease data from 2011 to 2016 were collected on rice and pigeonpea for validating existing models by using ICAR-NICRA pest predict models (Android mobile AAPs).

3.9.3 HRD Activities

The NGT-AA program has initiated several HRD activities in four different chosen areas of agricultural science and technology during the year 2018-19. The major events are given below.

Workshops: Three workshops on endophytes plant interaction and forecasting of pest and diseases were organised. In total, 204 students, faculty and scientist from private industries participated and gained knowledge on these topics.

***Exposure visit*:** Short exposure visit for 35 post graduate students was organised to Industrial level food processing-CFTRI and DFRL, Nestle, Britannia and Novozymes. A total of 95 students participated in exposure visits to Zonal Agricultural Research Station, Mandya, East-West Seed Company and internship at Monsanto India limited, Kallinayakanahalli. In these programs students learnt emasculation techniques in different crops at commercial level.

ತರಬೇತಿ ಕೋರ್ಸ್‌ಗಳು: ಸ್ನಾತಕೋತ್ತರ ವಿದ್ಯಾರ್ಥಿಗಳು (56) ಬೆಂಗಳೂರಿನ ಬನ್ನೇರಘಟ್ಟ ರಸ್ತೆಯಲ್ಲಿನ ಮಾಧವಿ ಫಾರ್ಮ್ಸ್‌ನಲ್ಲಿನ ಅಕ್ವಾಪೋನಿಕ್ ಮತ್ತು ಪರ್ಫ್ಯೂಮರಿ ಇಂಡಸ್ಟ್ರಿಗೆ ಭೇಟಿ ನೀಡಿ ಅಲ್ಲಿ ಮಳೆನೀರ ಕೊಯ್ಲು ಹಾಗೂ ಬೆಳೆ ಉತ್ಪಾದನೆಯಲ್ಲಿ ಅದರ ಪರಿಣಾಮಕಾರಿ ಬಳಕೆ (ಜಲಕೃಷಿ) ಕುರಿತು ತರಬೇತಿ ಪಡೆದರು. ಹೊಂದಾಣಿಕೆ ಕೃಷಿಯ ಮುಂದಿನ ತಲೆಮಾರಿನ ತಂತ್ರಜ್ಞಾನ ಕೇಂದ್ರವು ಅನುಕ್ರಮವಾಗಿ 215 ಮತ್ತು 209 ಪುರುಷರು ಮತ್ತು ಸ್ತ್ರೀಯರಿಗೆ ತರಬೇತಿ ನೀಡಿದ್ದು ಅದರಲ್ಲಿ ಶೇ.79ರಷ್ಟು ವಿದ್ಯಾರ್ಥಿಗಳು ಹಾಗೂ ಶೇ. 18ರಷ್ಟು ಬೋಧಕ ಸಿಬ್ಬಂದಿ ಮತ್ತು ಉದ್ಯಮ ಸಿಬ್ಬಂದಿಯಾಗಿದ್ದಾರೆ. ಈ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರು 20 ವಿವಿಧ ಸಂಸ್ಥೆ/ವಿಶ್ವವಿದ್ಯಾನಿಲಯಗಳನ್ನು ಪ್ರತಿನಿಧಿಸಿದ್ದರು.

***Training courses*:** Post graduate (56) students were trained and exposed to rainwater harvesting and its effective utilisation in crop production (Aquaponics) under protected cultivation to aquaponic and Perfumery industry at Madhavi Farms, Bannerghatta Road, Bengaluru. The Centre for NGT-AA has trained 215 and 209 male and female candidates respectively of which 79 per cent were students, 18 per cent young faulty and industry personnel. Participants from 20 different institutions/universities were benefited by this skill development program.



ಕೃಷಿ ಮಹಾವಿದ್ಯಾಲಯ, ಹಾಸನ
College of Agriculture, Hassan



ಕೃಷಿ ಮಹಾವಿದ್ಯಾಲಯ, ಮಂಡ್ಯ
College of Agriculture, Mandya

4. ಕೃಷಿ ವಿಸ್ತರಣಾ ಶಿಕ್ಷಣ ಮತ್ತು ಸೇವೆಗಳು
Agricultural Extension Education & Services

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಮೂರು ಪ್ರಮುಖ ಕಾರ್ಯಗಳನ್ನು ನಿರ್ವಹಿಸುತ್ತದೆ; ಅವುಗಳೆಂದರೆ ಬೋಧನೆ, ಸಂಶೋಧನೆ ಹಾಗೂ ವಿಸ್ತರಣೆ. ವಿಸ್ತರಣಾ ನಿರ್ದೇಶನಾಲಯವು ದಕ್ಷಿಣ ಕರ್ನಾಟಕದ ಬೆಂಗಳೂರು ಗ್ರಾಮೀಣ ಮತ್ತು ಬೆಂಗಳೂರು ನಗರ, ರಾಮನಗರ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ತುಮಕೂರು, ಚಾಮರಾಜನಗರ ಹಾಗೂ ಮೈಸೂರು ಈ ಹತ್ತು ಜಿಲ್ಲೆಗಳಲ್ಲಿ ವಿಸ್ತರಣಾ ಸೇವೆಯನ್ನು ಕೈಗೊಳ್ಳುವ ಜವಾಬ್ದಾರಿಯನ್ನು ಹೊಂದಿದೆ.

4.1 ಅಧ್ಯಾದೇಶಗಳು

ಅ) ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳು ಕೃಷಿಯ ಉತ್ಕೃಷ್ಟ ಅಭಿವೃದ್ಧಿಗಾಗಿ ತಂತ್ರಜ್ಞಾನಗಳ ಪರಿಶೀಲನೆ ಮತ್ತು ಪರಿಷ್ಕರಣೆಯ ಮೂಲಕ ರೈತರು ಹಾಗೂ ಇತರರು, ತಂತ್ರಜ್ಞಾನಗಳ ಅಳವಡಿಕೆಯನ್ನು, ಸುಲಲಿತಗೊಳಿಸುವುದನ್ನು, ಖಾತರಿಗೊಳಿಸುವುದಾಗಿದೆ. ಇದು ವಿಭಿನ್ನ ಫಲಾನುಭವಿಗಳ ಪ್ರಯೋಜನಕ್ಕಾಗಿ ತರಬೇತಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು. ವಿಸ್ತರಣಾ ನಿರ್ದೇಶನಾಲಯವು ವಿಶ್ವವಿದ್ಯಾನಿಲಯದ ವಿವಿಧ ಘಟಕಗಳು ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಂಬಂಧಿತ ಇಲಾಖೆಗಳ ಸಹಯೋಜನೆಯೊಂದಿಗೆ ಕಾರ್ಯನಿರ್ವಹಿಸುವುದು.

ಆ) ವಿಶ್ವವಿದ್ಯಾನಿಲಯವು ರಾಜ್ಯದಲ್ಲಿ ಕೃಷಿ ವಿಸ್ತರಣೆಯ ಮಾದರಿಗಳನ್ನು ಅಭಿವೃದ್ಧಿಪಡಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತದೆ.

4.2 ಉದ್ದೇಶಗಳು

ವಿಶ್ವವಿದ್ಯಾನಿಲಯದ ವಿಸ್ತರಣಾ ಸೇವೆಯು ಮೂರು ಹಂತದ ಉದ್ದೇಶಗಳನ್ನು ಹೊಂದಿದೆ.

ಅ) ರೈತರಿಗೆ ನವೀನ, ವಿಶ್ವಾಸನೀಯ, ಲಾಭದಾಯಕ, ಸಾಮಾಜಿಕವಾಗಿ ಸ್ವೀಕಾರಾರ್ಹ, ಪರಿಸರ ಸುಸ್ಥಿರ ಹಾಗೂ ಸಕಾಲಿಕ ಮಾಹಿತಿಯನ್ನು ಒದಗಿಸುವುದು.

ಆ) ಸಂಶೋಧನಾ ವ್ಯವಸ್ಥೆಗೆ ರೈತರು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಹಿಮ್ಮಾಹಿತಿಯನ್ನು ಒದಗಿಸುವುದು ಹಾಗೂ ತನ್ಮೂಲಕ ತಂತ್ರಜ್ಞಾನಗಳ ಅನುಸರಣೆಯಲ್ಲಿನ ಸಮಸ್ಯೆಗಳನ್ನು ಪರಿಶೀಲಿಸುವುದು ಮತ್ತು ಅವಶ್ಯಕವಿದ್ದಲ್ಲಿ ಅವುಗಳನ್ನು ಬದಲಿಸಲು ಅನುವು ಮಾಡಿಕೊಡುವುದು.

ಇ) ವಿಸ್ತರಣಾ ಕಾರ್ಯದ ಗುಣಮಟ್ಟ ಮತ್ತು ಪರಿಣಾಮವನ್ನು ಸುಧಾರಿಸುವಂತೆ ಮಾರ್ಗೋಪಾಯಗಳನ್ನು ಕಂಡು ಕೊಳ್ಳುವುದು.

4.3 ಕಾರ್ಯಚಟುವಟಿಕೆಗಳು

ಮೇಲೆ ಪ್ರಸ್ತಾಪಿಸಿದ ಉದ್ದೇಶಗಳನ್ನು ನೆರವೇರಿಸಲು ವಿಸ್ತರಣಾ ನಿರ್ದೇಶನಾಲಯವು ಈ ಮುಂದಿನ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದು.

The University of Agricultural Sciences, Bangalore is performing three prime activities *viz.,* teaching, research and extension. The Directorate of Extension is vested with the responsibility to carry out the extension services in 10 districts of Southern Karnataka *viz.,* Bengaluru Rural, Bengaluru Urban, Ramanagara, Mandya, Kolar, Chikkaballapur, Hassan, Tumakuru, Chamarajanagar and Mysuru.

4.1 Mandates

a) The extension education programmes shall ensure technology assessment and refinement and facilitate adoption of technologies by farmers and others for accelerated agricultural growth. It shall conduct demonstrations and training programmes for the benefit of various stake holders. Director of Extension shall Co-ordinate with various units of the University and other appropriate agencies of the centre and the state

b) The University shall be responsible for developing models of Agricultural Extension in the state

4.2 Objectives

The University Extension Service has three fold objectives:

a) To provide new, dependable, profitable, socially acceptable, ecologically sustainable and timely information to the farmers

b) To provide feedback on adoption of new technologies by the farmers to research system in order to examine the problems in adoption and modify/re-orient the technologies, if any

c) To device ways and means for improving the quality and effectiveness of extension work

4.3 Functions

In order to accomplish the above stated objectives, the Directorate of Extension is carrying out the following functions:

ಅ) ಕ್ಷೇತ್ರ ವಿಸ್ತರಣಾ ಕಾರ್ಯಕರ್ತರು ಮತ್ತು ರೈತರಿಗೆ ಕೃಷಿ ಮಾಹಿತಿಯನ್ನು ಪೂರೈಸುವ ಅದ್ಯಮೂಲವಾಗಿ ನಿರ್ವಹಿಸುವುದು.

ಆ) ಕ್ಷೇತ್ರ ವಿಸ್ತರಣಾ ಕಾರ್ಯಕರ್ತರು ಹಾಗೂ ರೈತ ಸಮುದಾಯ ಗಳಿಗೆ ಅಗತ್ಯ ಸಲಹಾ ಸೇವೆಯನ್ನು ಒದಗಿಸುವುದು.

ಇ) ಹೊಸ ಸಂಶೋಧನಾ ಫಲಿತಾಂಶಗಳನ್ನು ಆಧರಿಸಿ ಕ್ಷೇತ್ರ ಪ್ರಯೋಗ ಹಾಗೂ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳುವುದು.

ಇ) ವಿಸ್ತರಣಾ ಸಿಬ್ಬಂದಿ ಮತ್ತು ರೈತರಿಗೆ ಹೊಸ ಕೃಷಿ ತಾಂತ್ರಿಕತೆಯ ಕುರಿತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.

ಉ) ಸಂಶೋಧನೆಗೆ ಪ್ರೇರಣೆಯನ್ನು ನೀಡುವುದರೊಂದಿಗೆ ಬೋಧನಾ ಕಾರ್ಯದಲ್ಲಿ ಪಾಲ್ಗೊಳ್ಳುವುದು.

4.4 ವಿಸ್ತರಣಾ ನಿರ್ದೇಶನಾಲಯದ ಘಟಕಗಳು : ವಿಸ್ತರಣಾ ನಿರ್ದೇಶನಾಲಯದಡಿಯಲ್ಲಿ 11 ವಿಭಾಗಗಳು ಕಾರ್ಯ ನಿರ್ವಹಿಸುತ್ತಿವೆ.

ಅ) ಸಿಬ್ಬಂ]ದಿ ತರಬೇತಿ ಘಟಕ

ಆ) ರಾಜ್ಯ ಕೃಷಿ ವಿಸ್ತರಣಾ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ

ಇ) ಬೇಕರಿ ತರಬೇತಿ ಘಟಕ

ಈ) ರೈತ ತರಬೇತಿ ಸಂಸ್ಥೆ

ಉ) ಕೃಷಿ ಮಾಹಿತಿ ಘಟಕ

ಊ) ದೂರ ಶಿಕ್ಷಣ ಘಟಕ

ಋ) ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ

ಎ) ಕೃಷಿ ವಿಜ್ಞಾನ ವಸ್ತುಸಂಗ್ರಹಾಲಯ

ಏ) ವಿಸ್ತರಣಾ ಶಿಕ್ಷಣ ಘಟಕ; ಹಾಗೂ

ಐ) ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ

ಒ) ಕೃಷಿ ವಿಜ್ಞಾನ ಕೇಂದ್ರ (7)

4.4.1 ಸಿಬ್ಬಂದಿ ತರಬೇತಿ ಘಟಕ

ಹೆಬ್ಬಾಳ ಆವರಣದಲ್ಲಿರುವ ಸಿಬ್ಬಂದಿ ತರಬೇತಿ ಘಟಕವು; ಸರಕಾರಿ, ಅರೆಸರಕಾರಿ ಹಾಗೂ ಖಾಸಗಿ ಸಂಸ್ಥೆಗಳ ವಿವಿಧ ಸಿಬ್ಬಂದಿಗಳಿಗೆ ಸಾಂಸ್ಥಿಕ ಹಾಗೂ ಕ್ಷೇತ್ರಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ವಿಶ್ವವಿದ್ಯಾನಿಲಯ ಮತ್ತು ಪ್ರಾಯೋಜಿಸುವ ಸಂಸ್ಥೆಗಳ ನಡುವೆ ಸಹಕರಿಸುವುದು, ತರಬೇತಿ ಕಾರ್ಯಕ್ರಮಗಳ ಪರಿಣಾಮದ ಮೇಲುಸ್ತುವಾರಿ ಹಾಗೂ ಅವುಗಳ ಮರುವಿನ್ಯಾಸಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಈ ಆಧ್ಯಾದೇಶಗಳನ್ನು ಗಮನದಲ್ಲಿರಿಸಿಕೊಂಡು, ಸಿಬ್ಬಂದಿ ತರಬೇತಿ ಘಟಕವು, 25 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ 815 ವಿಸ್ತರಣಾ ಕಾರ್ಯಕರ್ತರಿಗೆ ತರಬೇತಿ ನೀಡಿದೆ. ಇದರ ವಿವರಗಳನ್ನು ಅನುಬಂಧ 3.1ರಲ್ಲಿ ನೀಡಲಾಗಿದೆ.

a) Serving as the primary source of agricultural information to the field extension functionaries and farmers

b) Rendering advisory services to field extension functionaries and farming community

c) Conducting farm trials on new research findings and organise front line demonstrations

d) Organizing training programmes to extension professionals and farmers on latest farm technologies

e) To stimulate research and impart teaching

4.4 Units of Directorate of Extension : Following 11 units are functioning under the Directorate of Extension

a) Staff Training Unit (STU)
b) State Agricultural Extension Management and Extension Training Institute (SAMETI)
c) Bakery Training Unit (BTU)
d) Farmers Training Institute (FTI)
e) Farm Information Unit (FIU)
f) Distance Education Unit (DEU)
g) Agricultural Technology Information Centre (ATIC)
h) Agricultural Sciences Museum (ASM)
i) Extension Education Units (EEUs) (2)
j) National Agriculture Extension Project (NAEP)
k) Krishi Vigyan Kendras (7)

4.4.1 Staff Training Unit (STU)

The Staff Training Unit located at Hebbal campus has the mandate of organizing Institutional and field oriented training for various personnels of government, quasi-government and private organizations, Co-ordinates between sponsoring agencies & the University and monitor the effectiveness of the training programmes. Keeping these mandates in view, the STU has organized 25 training programmes and trained 815 extension functionaries. The details are provided in Annexure 3.1.

4.4.2 ರಾಜ್ಯ ಕೃಷಿ ವಿಸ್ತರಣಾ ನಿರ್ವಹಣೆ ಹಾಗೂ ವಿಸ್ತರಣಾ ತರಬೇತಿ ಸಂಸ್ಥೆ (ಸಮೇತಿ)

ಪರಿಕರ ವಿತರಕರಿಗಾಗಿ ಕೃಷಿ ವಿಸ್ತರಣಾ ಸೇವೆಗಳಲ್ಲಿ, 32 ನೋಡಲ್ ತರಬೇತಿ ಕೇಂದ್ರಗಳಲ್ಲಿ ಪ್ರತಿ ತಂಡದಲ್ಲಿ 40–45 ಜನರಂತೆ 50 ತಂಡಗಳಲ್ಲಿ 1303 ಜನ ಪರಿಕರ ವಿತರಕರಿಗಾಗಿ ಡಿಪ್ಲೋಮಾ ಕಾರ್ಯಕ್ರಮವನ್ನು ಆರಂಭಿಸಲಾಗಿತ್ತು. ಇದರ ವಿವರಗಳನ್ನು ಅನುಬಂಧ 3.2ರಲ್ಲಿ ನೀಡಲಾಗಿದೆ.

ತರಬೇತಿಯಲ್ಲಿ ಅಳವಡಿಸಿಕೊಂಡ ನವೀನ ವಿಚಾರಗಳು :

- ಪಾಲ್ಗೊಳ್ಳುವ ವಿಧಾನವನ್ನು ಅನುಸರಿಸುವುದು.
- ಕೌಶಲ್ಯ ಬೋಧನೆಗೆ ಹೆಚ್ಚು ಒತ್ತು ನೀಡವುದು.
- ಅನ್‌ಲೈನ್ ನೋಂದಣಿ, ನಿರಂತರ ಸುಧಾರಣೆಗಾಗಿ ತರಬೇತಿದಾರರಿಂದ ಪೂರ್ವೋತ್ತರ ಮೌಲ್ಯಮಾಪನ ಹಾಗೂ ಹಿಮ್ಮಾಹಿತಿಗಳನ್ನು ಬಳಸಿಕೊಳ್ಳಲಾಗಿತ್ತು.
- ಶೈಕ್ಷಣಿಕ ಪ್ರವಾಸಗಳು
- ಮಳಿಗೆಯಲ್ಲಿ ಪುಸ್ತಕದ ನಿರ್ವಹಣೆ ಸಮಸ್ಯೆ–ಪರಿಹಾರ
- ಪೋಷಕಾಂಶಗಳ ಕೊರತೆ, ಕೀಟ ಮತ್ತು ರೋಗಗಳ ಲಕ್ಷಣ ಹಾಗೂ ಜೀವನಚಕ್ರ ಗುರುತಿಸುವಿಕೆ ಹಾಗೂ ಅವುಗಳ ನಿರ್ವಹಣೆಯ ಪುಸ್ತಕದ ನಿರ್ವಹಣೆ
- ಕಾರ್ಯಕ್ಷೇತ್ರದಲ್ಲಿ ವ್ಯಕ್ತಿಯ ಪಾತ್ರ ನಿರ್ವಹಣಾ ತಂತ್ರ
- ಬೆಳೆ ಉತ್ಪಾದನೆ ಪ್ರಾಯೋಗಿಕ ತರಗತಿಗಳು
- ಪ್ರತಿ ತರಗತಿಯ ನಂತರ ವಿಷಯವನ್ನು ಪುನರಾವ ಲೋಕಿಸುವುದು ಮತ್ತು ಆಯ್ದ ಪ್ರಶ್ನೆಗಳಿಗೆ ಉತ್ತರಿಸುವುದು

4.4.3 ಬೇಕರಿ ತರಬೇತಿ ಘಟಕ

ಬೇಕರಿ ತರಬೇತಿ ಘಟಕದ ಪ್ರಾಥಮಿಕ ಉದ್ದೇಶಗಳಾದ ಉತ್ತಮ ಗುಣಮಟ್ಟದ ಬೇಕರಿ ಹಾಗೂ ಬೇಕರಿ ಉತ್ಪನ್ನಗಳ ತಯಾರಿಕಾ ಜ್ಞಾನವನ್ನು ಒದಗಿಸುವುದು, ವೃತ್ತಿ ನಿರ್ವಹಣಾ ಕೌಶಲ್ಯಗಳನ್ನು ತಿಳಿಸುವುದು ಹಾಗೂ ಬೇಕರಿ ಉದ್ಯಮ ಕ್ಷೇತ್ರದಲ್ಲಿ ತಾಂತ್ರಿಕ ಸಿಬ್ಬಂದಿಗಳನ್ನು ಉತ್ತೇಜಿಸುವುದಾಗಿದೆ. ಘಟಕದ ಉತ್ಪಾದನೆಗಳನ್ನು ವಿಶ್ವವಿದ್ಯಾನಿಲಯದ ಮಾರಾಟ ಮಳಿಗೆಯಲ್ಲಿ ಮಾರಾಟ ಮಾಡುವುದು. ಪ್ರಸ್ತುತ ಉದ್ದೇಶಗಳೊಂದಿಗೆ ಘಟಕವು ಆಯೋಜಿಸಿದ ತರಬೇತಿ ಕಾರ್ಯಕ್ರಮಗಳು ಮತ್ತು ಇತರ ಚಟುವಟಿಕೆಗಳ ವಿವರಗಳನ್ನು ಅನುಬಂಧ 3.3ರಲ್ಲಿ ನೀಡಲಾಗಿದೆ.

2018–19ನೇ ಸಾಲಿನಲ್ಲಿ ಘಟಕವು 96 ಜನ ಅಭ್ಯರ್ಥಿಗಳಿಗೆ ಬೇಕರಿ ತಂತ್ರಜ್ಞಾನದಲ್ಲಿ 14 ವಾರಗಳ ಸರ್ಟಿಫಿಕೆಟ್ ಕೋರ್ಸಿನ 3 ಕಾರ್ಯಕ್ರಮಗಳನ್ನು, 163 ಜನ ತರಬೇತಿದಾರರಿಗೆ 4 ವಾರಗಳ 12 ಬೇಕಿಂಗ್ ಕೋರ್ಸ್‌ಗಳನ್ನು ಆಯೋಜಿಸಿತ್ತು. ಇದರೊಂದಿಗೆ, ಘಟಕವು, ಪಾಲ್ಗೊಂಡ 383 ತರಬೇತಿದಾರರಿಗೆ ವಿವಿಧ ಅಲ್ಪಾವಧಿಯ 27 ಒಳಾವರಣ ಕೋರ್ಸ್‌ಗಳನ್ನು ಮತ್ತು ಪಾಲ್ಗೊಂಡ 105 ಅಭ್ಯರ್ಥಿಗಳಿಗೆ 3 ಹೊರಾವರಣ ತರಬೇತಿಗಳನ್ನು ಆಯೋಜಿಸಿತ್ತು. ಅಲ್ಲದೆ, ಬೇಕರಿ ತರಬೇತಿ ಘಟಕವು, ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದಡಿಯಲ್ಲಿ ಬೇಕರಿ ತರಬೇತಿ ಹಾಗೂ ರಾಗಿ ಮೌಲ್ಯವರ್ಧನೆ ಕುರಿತ ಒಂದು ದಿನದ ಕಾಲಾವಧಿಯ 14 ಹೊರಾವರಣ ತರಬೇತಿ ಕಾರ್ಯಕ್ರಮಗಳನ್ನು ಪಾಲ್ಗೊಂಡ 615 ಭಾಗಿದಾರರಿಗೆ ಆಯೋಜಿಸಿದೆ.

4.4.2 State Agricultural Management Extension and Training Institute (SAMETI)

DAESI programme was started in 32 nodal training centers for 50 batches covering 1303 input dealers at 40-45 per batch. The details are provided in Annexure 3.2.

Innovative ideas adopted in training programmes are as follows :

- Participatory approach
- Emphasis on skill teaching
- Online registration, pre-post evaluation and feedback from the participants were used for continuous improvement
- Exposure vistis
- Writing problem-solution register in their shop for input dealers
- Writing record of sketches of nutrient deficiency, pest and disease incidence sympotoms, their life cycle and their management practices
- Role play technique
- Practical class on Crop production
- Review of class immediately after each session and answering for selected questions

4.4.3 Bakery Training Unit (BTU)

The objectives of BTU are to impart knowledge on quality baking and bakery; to impart professional management skills and to promote technical personnel in the field of bakery industry. The products of the unit are sold in the university outlets. The details of the training programmes conducted and other activities are provided in Annexure 3.3.

The unit has organized 03 programmes of 14 weeks commercial baking technology for 96 participants and 12 baking courses of 4 weeks duration for 163 participants during 2018-19. Besides, the unit conducted 29 on-campus short courses of different duration involving 383 trainees and 03 off-campus training programmes in which 105 members participated. Further, BTU organized 14 off-campus training programmes on bakery training and value added products of ragi under RAWE of one day duration involving 615 participants.

ಅಲ್ಲದೆ, ಘಟಕದ ವತಿಯಿಂದ 2536 ತರಬೇತಿದಾರರ ಪ್ರಯೋಜನಕ್ಕಾಗಿ ಮನೆಯಲ್ಲಿ ತಯಾರಿಸುವ, ರಾಗಿ ಮೌಲ್ಯವರ್ಧನೆ, ಸಿರಿಧಾನ್ಯ, ಹಾಲು ಹಾಗೂ ಹಾಲಿನ ಉತ್ಪನ್ನಗಳು, ಮಸಾಲೆಪುಡಿ, ಮೊಟ್ಟೆರಹಿತ ಬೇಕರಿ ಉತ್ಪನ್ನಗಳು ಮತ್ತು ಹುಣಸೆಹಣ್ಣು, ಹಣ್ಣು ಹಾಗೂ ತರಕಾರಿಗಳ ಉತ್ಪನ್ನಗಳು, ಬೇಕರಿ ಉತ್ಪನ್ನಗಳು, ಪೌಷ್ಟಿಕಾಂಶಗಳ ಮಹತ್ವ ಮುಂತಾದವುಗಳ ಕುರಿತು ಬೇಕರಿ ಹಾಗೂ ಮೌಲ್ಯವರ್ಧನೆ ಉತ್ಪಾದನೆಯಲ್ಲಿ 8 ವಿಧಾನ/ಕೌಶಲ ಪ್ರಾತ್ಯಕ್ಷಿಕೆಯ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

4.4.4 ರೈತ ತರಬೇತಿ ಸಂಸ್ಥೆ

ರೈತ ತರಬೇತಿ ಸಂಸ್ಥೆಯ ಮುಖ್ಯ ಆಧ್ಯಾದೇಶವು ಪ್ರಾಯೋಜನಾ ಸಂಸ್ಥೆಗಳು ರೈತ/ರೈತಮಹಿಳೆ/ಸ್ವಸಹಾಯ ಗುಂಪು ಮತ್ತು ಇತರ ಸಂಸ್ಥೆಗಳಿಗೆ ತರಬೇತಿ ನೀಡಲು ಕೋರಿದಾಗ ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳ ಕುರಿತು ತರಬೇತಿಗಳನ್ನು ರೂಪಿಸಿಕೊಂಡು ಆಯೋಜಿಸುವುದು. ರೈತ ತರಬೇತಿ ಸಂಸ್ಥೆಯು, ರೈತ/ರೈತ ಮಹಿಳೆ/ಯುವ ರೈತರಿಗಾಗಿ ಪ್ರಾಯೋಜಿತ ವಿವಿಧ ಇಲಾಖೆ ಹಾಗೂ ಸಂಸ್ಥೆಗಳು; ಅವುಗಳೆಂದರೆ ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಕರ್ನಾಟಕ ಸರಕಾರದ ಅಧೀನದ ಸಾಮಾನ್ಯ ವಿಸ್ತರಣಾ ಸೇವೆ, ಕಾವೇರಿ ತಪ್ಪಲಿನ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಮೈಸೂರು, ಐ.ಟಿ., ಬಿ.ಟಿ. ಮತ್ತು ಎಸ್. ಹಾಗೂ ಟಿ. ಇಲಾಖೆಗಳು ಕರ್ನಾಟಕ ಸರಕಾರದಡಿಯಲ್ಲಿ ಚೇತನ, ಸುಜಲ, ಎ.ಟಿ.ಎಮ್.ಎ., ಕೃ.ವಿ.ವಿ.ಬೆಂಗಳೂರು ಹಾಗೂ ಜವಾರಿ ಆಗ್ರೋ ಕೆಮಿಕಲ್ಸ್ ಪ್ರೈ.ಲಿ. ಇವುಗಳ ಪ್ರಾಯೋಜನೆಯಲ್ಲಿ 25 ತೆರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿತ್ತು ಮತ್ತು 615 ಜನ/ರೈತ ಮಹಿಳೆ/ಯುವ ರೈತರಿಗೆ ತರಬೇತಿ ನೀಡಲಾಯಿತು. ವಿವರಗಳನ್ನು ಅನುಬಂಧ: 3.4ರಲ್ಲಿ ನೀಡಲಾಗಿದೆ.

ತರಬೇತಿಯ ಪರಿಣಾಮ : ಅಭ್ಯರ್ಥಿಗಳ ಜ್ಞಾನ ಸಂಪಾದನೆಯು ಸರಾಸರಿ ಶೇ. 17.86 ರಷ್ಟು ಮತ್ತು ತರಬೇತಿ ನಿರ್ವಹಣೆಯ ಸಾಮರ್ಥ್ಯ ಸೂಚ್ಯಂಕವು ಸರಾಸರಿ ಶೇ. 92.08 ಹಾಗೂ ವಿಷಯ ಸಾಮರ್ಥ್ಯದ ಸೂಚ್ಯಂಕವು ಶೇ. 93.44 ರಷ್ಟಾಗಿತ್ತು. ವಿವರಗಳನ್ನು ಅನುಬಂಧ: 3.5.ರಲ್ಲಿ ನೀಡಲಾಗಿದೆ.

ಕ್ಷೇತ್ರ ಭೇಟಿ

ತರಬೇತಿದಾರರ ಲಾಭಕ್ಕಾಗಿ ಸಾಮಾನ್ಯ ವಿಸ್ತರಣಾ ಸೇವೆ ಮತ್ತು ಕಾವೇರಿ ತಪ್ಪಲಿನ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಸಂಸ್ಥೆಗಳು ರೈತರ ಲಾಭಕ್ಕಾಗಿ ಪ್ರತಿ ತರಬೇತಿ ಕಾರ್ಯಕ್ರಮದ ಸಂದರ್ಭದಲ್ಲಿ ಒಂದರಿಂದ ಎರಡು ಕ್ಷೇತ್ರ ಭೇಟಿಯನ್ನು ವ್ಯವಸ್ಥೆ ಮಾಡಲಾಗಿತ್ತು. ಪ್ರಗತಿಪರ ರೈತರ ಜಮೀನು, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಂಶೋಧನಾ ಕೇಂದ್ರಗಳು, ವಿಶ್ವವಿದ್ಯಾನಿಲಯಗಳ ಸಂಶೋಧನಾ ಕೇಂದ್ರ ಇತ್ಯಾದಿಗಳಿಗೆ ತರಬೇತಿಯ ಭಾಗವಾಗಿ ಒಂದರಿಂದ ಎರಡು ಕ್ಷೇತ್ರ ಭೇಟಿಯನ್ನು ಕೈಗೊಳ್ಳಲಾಗಿತ್ತು. ಚೇತನ, ಸುಜಲ, ಎ.ಟಿ.ಎಮ್.ಎ. ಹಾಗೂ ಜುವಾರಿ ಅಗ್ರೋ ಕೆಮಿಕಲ್ಸ್ ಪ್ರೈ.ಲಿ. ಕಾರ್ಯಕ್ರಮಗಳಲ್ಲಿ ಪ್ರಗತಿಪರ ರೈತರ ಜಮೀನಿಗಳಿಗೆ ಮತ್ತು ಕೃಷಿ ಸಂಬಂಧಿತ ಸಂಸ್ಥೆಗಳು ವಿವಿಧ ಪರಿಚಯ ಭೇಟಿ ಹಾಗೂ ಪದ್ಧತಿ ಪ್ರಾತ್ಯಕ್ಷಿಕೆ/ವಿವಿಧ ಆಯಾಮಗಳಲ್ಲಿ ಕೌಶಲ್ಯ ತರಬೇತಿಗಳನ್ನು ಆಯೋಜಿಸಲಾಗಿತ್ತು. ಅವುಗಳೆಂದರೆ; ಮಣ್ಣು ಪರೀಕ್ಷೆಗೆ ಮಣ್ಣು ಮಾದರಿಗಳ ಸಂಗ್ರಹ, ಮಣ್ಣಿನ ಪರೀಕ್ಷೆ ಕಸಿಮಾಡುವುದು/ಕಸಿವಿಧಾನ/ಹಸಿರುಗೊಬ್ಬರ, ಮಿಶ್ರಗೊಬ್ಬರದ ಕುಳಿ ತಯಾರಿಕೆ, ಗೊಬ್ಬರ ತಯಾರಿಕೆಯಿಂದ ತ್ಯಾಜ್ಯ ನಿರ್ವಹಣೆ, ಮೌಲ್ಯ ವರ್ಧನೆ ಮತ್ತು ಆಹಾರ ಸಂಸ್ಕರಣೆ, ಸಸ್ಯ

Further, the unit organized 81 method/ skill demonstrations of bakery and value added products in training programmes on home baking, value added ragi, millets, milk and milk products, spice powders, eggless baked products, processing of fruits and vegetables, bakery products, nutritional importance and etc., for the benefit of 2536 trainees.

4.4.4 Farmers' Training Institute (FTI)

The mandate of the Farmers' Training Institute is to organize sponsored training programmes as and when required for imparting training to farmers' / farm women / members of self help groups as well as to plan and organize trainings on agriculture and allied aspects. The FTI has organized 25 training programmes for the farmers' / farm women / youth sponsored by various departments and organizations *viz.,* Karnataka State Department of Agriculture (KSDA), GoK under General Extension Service (GES), Command Area Development Authority (CADA), Cauvery Basin, Mysuru, Department of IT, BT & S & T, GoK under CHETANA, SUJALA, ATMA,UAS(B) and Zuari Agro Chemicals Pvt. Ltd. and trained 615 farmers / farm women / youth. The details are provided in Annexure 3.4.

Training Impact : The average knowledge gained by the participants was 17.86 per cent and average Training Management Efficiency Index (TMEI) was 92.08 per cent and Subject Matter Efficiency Index (SMEI) was 93.44 per cent. The details are provided in Annexure 3.5.

Field Visits

In each of GES & CADA training programmes, invariably one field visit was arranged for the benefit of trainees. About one –two field visits were made as a part of training programme to the progressive farmers field, research centre of State and Central, University, etc. In CHETANA, SUJALA, ATMA and Zuari Agro Chemicals Pvt. Ltd., sponsored programmes various exposure visits to Progressive farmers' fields and agriculture related institutions were arranged. Method demonstrations / Skill training on various aspects such as collection of soil samples for soil testing, grafting/layering / mulching, preparation of compost pit, waste management by mannuring, value addition & food processing, plant production techniques and Sericulture techniques were

ಉತ್ಪಾದನಾ ತಂತ್ರಗಳು ಹಾಗೂ ರೇಷ್ಮೆ ಕೃಷಿ ತಂತ್ರಗಳು ಶಿಕ್ಷಣ ಕೇಂದ್ರವಾಗಿ ದೂರು ಶಿಕ್ಷಣ ಘಟಕವು, ರೈತ ತರಬೇತಿ ಕೇಂದ್ರವು 73 ವಿದ್ಯಾರ್ಥಿಗಳಿಗೆ ಕೃಷಿಯಲ್ಲಿ ಒಂದು ವರ್ಷದ ಡಿಪ್ಲೋಮಾ ಶಿಕ್ಷಣ ತರಗತಿಗಳನ್ನು ಆಯೋಜಿಸಿತ್ತು ಮತ್ತು ಮೊದಲ ಸೆಮಿಸ್ಟರಿನ 73 ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲಾಗಿತ್ತು.

ನೂಡಲ್ ತರಬೇತಿ ಕೇಂದ್ರವಾಗಿ, ಕೃಷಿ ಪರಿಕರ ಮಾರಾಟ ಮತ್ತು ವಿಸ್ತರಣೆ ಸೇವೆಯಲ್ಲಿ ಡಿಪ್ಲೊಮಾ ಕಾರ್ಯಕ್ರಮವು 80 ಅಭ್ಯರ್ಥಿಗಳನ್ನು ಒಳಗೊಂಡಂತೆ ಎರಡು ತಂಡಗಳಿಗೆ ಕಾರ್ಯಕ್ರಮಗಳನ್ನು ಆಯೋಜಿಸಿತ್ತು.

4.4.5 ಕೃಷಿ ಮಾಹಿತಿ ಘಟಕ

ರೈತ ಮಾಹಿತಿ ಘಟಕದ ಆಧ್ಯಾದೇಶಗಳು; ಸಮೂಹ ಮಾಧ್ಯಮ ಗಳೊಂದಿಗೆ ಆಯೋಜನೆ ಮತ್ತು ಸುಧಾರಿತ ಬೇಸಾಯ ಪದ್ಧತಿ ಪ್ರಕಟಣೆ, ತಾಂತ್ರಿಕ ಸಾಹಿತ್ಯ ಪ್ರಕಟಣೆ, ಕೃಷಿಮೇಳ ಮತ್ತು ಪ್ರದರ್ಶನಗಳ ಆಯೋಜನೆ, ಕೃಷಿ ಮೇಳ ಮತ್ತು ಪ್ರದರ್ಶನಗಳಲ್ಲಿ ಭಾಗವಹಿಸುವಿಕೆ ಮತ್ತು ದೃಶ್ಯ ಶ್ರವಣ ಸಾಧನಗಳ ಅಭಿವೃದ್ಧಿಪಡಿಸುವುದಾಗಿದೆ. ಪ್ರಸ್ತುತ ವರ್ಷದಲ್ಲಿ ಘಟಕವು ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ.

ಅ) **ಪತ್ರಿಕಾ ಪ್ರಕಟಣೆ:** ಘಟಕವು ಸಮೂಹ ಮಾಧ್ಯಮದ ಮೂಲಕ 41 ಪತ್ರಿಕಾ ಪ್ರಕಟಣೆಗೆ ಮಾಹಿತಿಯನ್ನು ನೀಡಿದೆ. ಮಾಹಿತಿಯನ್ನು ಸ್ಥೂಲವಾಗಿ ಈ ರೀತಿ ವರ್ಗೀಕರಿಸಬಹುದು; ಸ್ನಾತಕ, ಸ್ನಾತಕೋತ್ತರ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪ್ರಕಟಣೆ ಮತ್ತು ಪ್ರವೇಶಾತಿ, ಘಟಿಕೋತ್ಸವ, ಸಂಸ್ಥಾಪನಾ ದಿನ, ಕೃಷಿಮೇಳ, ವಿಚಾರ ಸಂಕಿರಣ/ಕಾರ್ಯಗಾರ/ಸಮಾವೇಶ, ಆಚರಣೆಗಳು, ಪ್ರಶಸ್ತಿ, ವಿಶ್ವವಿದ್ಯಾನಿಲಯದ ಸಾಧನೆ.

ಆ) **ಸಮೂಹ ಮಾಧ್ಯಮ ಭೇಟಿ ಮತ್ತು ಮಾಧ್ಯಮ ಪ್ರಸಾರ:** ಘಟಕವು 46 ಸಮೂಹ ಮಾಧ್ಯಮ ಭೇಟಿಗಳನ್ನು ವ್ಯವಸ್ಥೆ ಮಾಡಿತ್ತು. ಮುದ್ರಣ ಮತ್ತು ವಿದ್ಯುನ್ಮಾನ ಎರಡೂ ಮಾಧ್ಯಮಗಳನ್ನು ವಿಶ್ವವಿದ್ಯಾಲಯಕ್ಕೆ ಆಹ್ವಾನಿಸಲಾಗಿತ್ತು. ವಿವಿಧ ಮಾಧ್ಯಮಗಳ ಮೂಲಕ 423 ಕ್ಕೂ ಹೆಚ್ಚು ಚಟುವಟಿಕೆಗಳನ್ನು ಪ್ರಸಾರ ಮಾಡಲಾಗಿದೆ.

ಇ) **ಪತ್ರಿಕಾ ಗೋಷ್ಠಿ:** ಪ್ರಮುಖ ಕಾರ್ಯಕ್ರಮ/ ಚಟುವಟಿಕೆಗಳನ್ನು ಆಯೋಜಿಸುವಾಗ, ಅವುಗಳ ಗುರಿ ಉದ್ದೇಶಗಳನ್ನು ಸಮಾಜಕ್ಕೆ ತಿಳಿಸಲು ಮತ್ತು ವಿಶ್ವವಿದ್ಯಾನಿಲಯದ ಕುಲಪತಿಗಳು ಮತ್ತು ಅಧಿಕಾರಿಗಳು ವಿಶ್ವವಿದ್ಯಾಲಯದ ಸಾಧನೆ ವಿಶೇಷತೆಗಳನ್ನು ಹಂಚಿಕೊಳ್ಳಲು ಪತ್ರಿಕಾ ಗೋಷ್ಠಿಗಳನ್ನು ಕರೆಯುವುದು ಕೃಷಿ ವಿಶ್ವವಿದ್ಯಾನಿಲಯದ ಸಂಪ್ರದಾಯವಾಗಿದೆ. ಘಟಿಕೋತ್ಸವ ಮತ್ತು ಕೃಷಿ ಮೇಳ ಸಂದರ್ಭದಲ್ಲಿ ಕುಲಪತಿಗಳು, ವಿಸ್ತರಣಾ ನಿರ್ದೇಶಕರು, ಸಂಶೋಧನಾ ನಿರ್ದೇಶಕರು ಹಾಗೂ ಇತರ ಅಧಿಕಾರಿಗಳೊಂದಿಗೆ 02 ಪತ್ರಿಕಾ ಗೋಷ್ಠಿಗಳನ್ನು ಆಯೋಜಿಸಿದ್ದರು.

ಈ) **ಜನಪ್ರಿಯ/ಯಶೋಗಾಥೆಗಳು:** ಘಟಕವು ಪ್ರಸ್ತುತ ವರ್ಷ, ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಮತ್ತು ಪ್ರಶಸ್ತಿ ವಿಜೇತ ಮತ್ತು ಪ್ರಗತಿಪರ ರೈತ/ರೈತಮಹಿಳೆಯರ ಯಶೋಗಾಥೆಗಳ ಕುರಿತ 06 ಜನಪ್ರಿಯ ಲೇಖನಗಳನ್ನು ಪ್ರಮುಖ ವರ್ತಮಾನ ಪತ್ರಿಕೆ ಮತ್ತು ನಿಯತಕಾಲಿಕೆಗಳಲ್ಲಿ ಪ್ರಕಟಿಸಲಾಯಿತು.

conducted. As a study centre for Distance Education Unit, FTI had conducted contact classes of one year Diploma in Agriculture course for 73 students and conducted examination for 73 students during I semester.

As a nodal training centre, DEASI programme was conducted for two batches covering 80 participants.

4.4.5 Farm Information Unit (FIU)

The objectives of the Farm Information Unit (FIU) are; to co-ordinate with mass media, publication of package of practices, publication of technical literature, organizing / participating in exhibitions and krishimelas and developing audio – visual aids. The unit carried out the following activities during the year.

a) **Press releases**: The unit provided information to the mass media through 41 press releases. The information provided were broadly classified as U.G, P.G and Diploma courses notifications & admissions, convocation, foundation day, Krishimela, seminars / workshops / symposium, celebration of events, awards and achievements of the university.

b) **Press visits and media coverages**: The unit arranged 46 press visits. Both electronic and print media personnel were invited to the University. As many as 423 events were covered through different media.

c) **Press Conference**: It is a customary of the University to call for press conference prior to organizing important functions/activities to brief the press about the aims and objectives and also to share the achievements of the University as and when it is required by the Vice-Chancellor and Officers of the University. Two press conferences were addressed by the Vice-Chancellor, Director of Education, Director of Extension, Director of Research, Registrar, Dean (Students Welfare) and other Officers in view of Convocation and Krishimela.

d) **Popular / success stories**: During the year the unit involved in publication of 06 popular articles on the technologies of the University and success stories of the award winning and progressive farmers / farm women in leading news papers and magazines.

ಊ) **ದೂರದರ್ಶನ/ಆಕಾಶವಾಣಿ ಸಹಯೋಜಿತ ಕಾರ್ಯಕ್ರಮಗಳು:** ಘಟಕವು ವಿಶ್ವವಿದ್ಯಾನಿಲಯದ ತಂತ್ರಜ್ಞಾನ ಮತ್ತು ಚಟುವಟಿಕೆಗಳನ್ನು ಕುರಿತು ದೂರದರ್ಶನ (ಚಂದನ–ಕನ್ನಡ ವಾಹಿನಿ), ಆಕಾಶವಾಣಿಯಲ್ಲಿ (ಕೃಷಿರಂಗ) 114 ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಪ್ರಸಾರಭಾರತಿಯೊಂದಿಗೆ ಸಂಯೋಜನೆ ಮಾಡಿತು.

ಋ) **ವಿಶೇಷ ಲೇಖನಗಳು/ಕಾರ್ಯಕ್ರಮಗಳು:** ಘಟಕವು ಪ್ರಕಟಣೆಗಳು/ದೃಶ್ಯಮಾಧ್ಯಮಗಳೊಂದಿಗೆ ಪ್ರಸಾರ / 53 ವಿಶೇಷ ಲೇಖನಗಳು/ಕೃಷಿ ತಂತ್ರಜ್ಞಾನದ ಲಕ್ಷಣಗಳಿಗಾಗಿ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮಗಳನ್ನು ಸಂಯೋಜಿಸಿತು.

ಌ) **ವಸ್ತುಪ್ರದರ್ಶನ:** ಘಟಕವು ವಿಶ್ವವಿದ್ಯಾಲಯದ ತಂತ್ರಜ್ಞಾನವನ್ನು ಪ್ರದರ್ಶಿಸಲು ರಾಜ್ಯ ಮತ್ತು ರಾಷ್ಟ್ರಮಟ್ಟದ 08 ಪ್ರದರ್ಶನಗಳನ್ನು/ಕೃಷಿ ಮೇಳಗಳನ್ನು ಆಯೋಜಿಸಿ ಭಾಗವಹಿಸಿತ್ತು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಸಿದ್ದಪಡಿಸಿದ ಕೃಷಿ ಹಾಗೂ ಸಂಬಂಧಿತ ಚಟುವಟಿಕೆಗಳಿಗೆ ಸಂಬಂಧಿಸಿದ ತಂತ್ರಜ್ಞಾನಗಳು ಕುರಿತ 42 ಪ್ರದರ್ಶಕಗಳು, ಪರಿಣಾಮಕಾರಿಯಾಗಿ ಪ್ರದರ್ಶಿಸಲು, ಪ್ರದರ್ಶನದಲ್ಲಿ ಪ್ರದರ್ಶಿಸಲಾಗಿತ್ತು.

ೠ) **ಮಾಧ್ಯಮ ಸಂಯೋಜನಾ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳುವಿಕೆ:** ಘಟಕವು ಬೆಂಗಳೂರು ದೂರದರ್ಶನದಲ್ಲಿ ಏರ್ಪಡಿಸಿದ ರಾಜ್ಯ ಮಟ್ಟದ ಮಾಧ್ಯಮ ಆಯೋಜನಾ ಸಮಿತಿಯ 07 ಸಭೆಗಳಲ್ಲಿ ಭಾಗವಹಿಸಿತ್ತು.

4.4.6 ದೂರ ಶಿಕ್ಷಣ ಘಟಕ

2012ರಿಂದ ಜಿ.ಕೆ.ವಿ.ಕೆ.ಯಲ್ಲಿ ದೂರಶಿಕ್ಷಣ ಘಟಕವು ಕಾರ್ಯಮುಖಿಯಾಯಿತು. ತರುವಾಯ ವಿಸ್ತರಣಾ ನಿರ್ದೇಶನಾಲಯದಡಿ ವೀಲಿನಗೊಳಿಸಲಾಯಿತು. ಘಟವು ರೈತ ಹಾಗೂ ಯುವರೈತರ ಪ್ರಯೋಜನಕ್ಕಾಗಿ ಈ ಮುಂದಿನ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುತ್ತಿದೆ. l. ಕೃಷಿಯಲ್ಲಿ ಸ್ನಾತಕೋತ್ತರ ಡಿಪ್ಲೋಮಾ 2. ಕೃಷಿಯಲ್ಲಿ ಒಂದು ವರ್ಷದ ಡಿಪ್ಲೊಮಾ 3. ಸಮಗ್ರ ಕೃಷಿ ಪದ್ಧತಿ 4. ಸಾವಯವ ಕೃಷಿ 5. ಹಣ್ಣು ಮತ್ತು ತರಕಾರಿ ಬೆಳೆಗಳ ಕೊಯ್ಲೋತ್ತರ ನಿರ್ವಹಣೆ. ಇದರೊಂದಿಗೆ, ನೂಡಲ್ ಸೆಂಟರ್ ಫಾರ್ ಎಮ್.ಎ.ಎನ್.ಎ.ಜಿ.ಇ. (MANAGE) ಪ್ರಾಯೋಜಿತ ಕೃಷಿ ವಿಸ್ತರಣಾ ನಿರ್ವಹಣೆಯಲ್ಲಿ ಒಂದು ವರ್ಷದ ಸ್ನಾತಕೋತ್ತರ ಡಿಪ್ಲೊಮಾ. ವಿವರಗಳನ್ನು ಅನುಬಂಧ 3.6ರಲ್ಲಿ ನೀಡಲಾಗಿದೆ.

4.4.7 ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ

ಉದ್ದೇಶಗಳು

ಅ) ನಿರ್ಣಾಯಕ ಪರಿಕರಗಳಾದ ಬೀಜಗಳು, ಸಸಿಗಳು, ಜೈವಿಕಗೊಬ್ಬರ, ಜೈವಿಕ ಕೀಟನಾಶಕ, ಪೌಷ್ಟಿಕ ಮಿಶ್ರಣ ಉಪಕರಣಗಳು ಹಾಗೂ ಅಗತ್ಯವಿರುವವರಿಗೆ ವೆಚ್ಚಾಧಾರದ ಮೇರೆಗೆ ಸಮೂಹ ಮಾಧ್ಯಮ ಡಿ.ವಿ.ಡಿ.ಗಳೊಂದಿಗೆ ಪುಸ್ತಕಗಳು ಸುಧಾರಿತ ಬೇಸಾಯ ಪದ್ಧತಿ ಹಾಗೂ ಇತರ ಸಾಹಿತ್ಯವನ್ನು ವಿತರಿಸಲು ಏಕ ಗವಾಕ್ಷಿಯಡಿಯಲ್ಲಿ ವಿತರಣಾ ವ್ಯವಸ್ಥೆ ಕಲ್ಪಿಸಲಾಗಿದೆ.

e) **TV / Radio Co-ordinated programmes**: The unit co-ordinated with Prasarbrathi in telecasting / broad casting 114 programmes in Doordarshan (Chandana - channel) and Akashavani (Krishiranga) on University activities and technologies.

f) **Special Article / feature** : The Unit co-ordinated with electronic and print media for publication / telecasting 53 special articles / features on agricultural technologies.

g) **Exhibitions** : The Unit arranged / participated in 08 Krishimelas / exhibitions at regional, state and national level to showcase the technologies of the University. In order to exhibit the technologies effectively, 42 exhibits related to agriculture and allied activities on the important technologies released by UAS (B) were prepared and displayed in the exhibitions.

h) **Participation in Media Co-ordination committee meeting** : The Unit attended 07 state level media co-ordination committee meetings at Doordarshan, Bengaluru.

4.4.6 Distance Education Unit (DEU)

Distance Education Unit was started in the Directorate of Extension during 2012, after merging the distance education programmes functioning at GKVK. This unit is offering following Diploma and certificate programmes for the benefit of farmers and farm youth: (1) Post Graduate Diploma in Agriculture (PGDA) (2) One Year Diploma in Agriculture (3) Integrated Farming System (4) Organic Farming (5) Post-harvest Management of fruits and vegetables. In addition, Nodal Center for MANAGE sponsored one year Post Graduate Diploma in Agricultural Extension Management (PGDAEM). The details are provided in Annexure 3.6.

4.4.7 Agricultural Technology Information Centre (ATIC)

Objectives

a) To serve as a single window delivery system for supply of critical inputs like seeds, seedlings, biofertilizers, biopesticides, nutrient mixtures, equipment and others to the needy on cost basis along with multi-media DVDs, books, package of practices and other literature

ಆ) ರೈತರಿಗೆ ಬೆಳೆರೋಗ ತಪಾಸಣಾ ಹಾಗೂ ಸಲಹಾ ಸೇವೆಗಳನ್ನು ಒದಗಿಸುವುದು.

ಇ) ಇತರ ವಿಶ್ವವಿದ್ಯಾನಿಲಯಗಳು ಆಯೋಜಿಸಿದ್ದ ಕೃಷಿ ಪ್ರದರ್ಶನಗಳಲ್ಲಿ ವಿಶ್ವವಿದ್ಯಾನಿಲಯದ ತಂತ್ರಜ್ಞಾನಗಳ ಪ್ರದರ್ಶನ ಮತ್ತು ಕೃಷಿ ಸಾಹಿತ್ಯದ ಮಾರಾಟವನ್ನು ಕೈಗೊಳ್ಳುವುದು.

ಈ) ಎಲ್ಲಾ ಪಾಲುದಾರರಿಗೆ ಡಿಜಿಟಲ್ ಮಾಹಿತಿಯನ್ನು ಒದಗಿಸುವ ಸಲುವಾಗಿ ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಿದ ಕೃಷಿ–ತಂತ್ರಜ್ಞಾನ ಪೋರ್ಟ್ರಲ್ ನಿರ್ವಹಿಸುವುದು.

ಸಲಹಾ ಸೇವೆಗಳು

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರವು ಕ್ಷೇತ್ರ ಭೇಟಿ (11), ದೂರವಾಣಿ ಕರೆ (3824), ಸಮಾಲೋಚನೆ(1885)ಗಳು ಹಾಗೂ ವಾಟ್ಸ್ ಅಪ್ ಪ್ರಶ್ನೆಗಳಿಗೆ ಉತ್ತರ (77), ಕೇಂದ್ರಕ್ಕೆ ರೈತರ ಹಾಗೂ ವಿಸ್ತರಣಾ ಕಾರ್ಯಕರ್ತರ ಭೇಟಿ(7041) ಒಳಗೊಂಡಂತೆ 12838 ರೈತ ಸಲಹಾ ಸೇವೆಗಳನ್ನು ಒದಗಿಸಲಾಗಿದೆ.

ಕೃಷಿ ಸಾಹಿತ್ಯ, ಬೀಜ, ಸಸಿ ಇತ್ಯಾದಿ ಉತ್ಪನ್ನಗಳ ಮಾರಾಟ

ಕೇಂದ್ರವು, ಬೀಜ, ಸಸಿ, ಕೃಷಿ ಸಾಹಿತ್ಯ ಇತ್ಯಾದಿಗಳ ಮಾರಾಟದಿಂದ ರೂ. 81,98,939/– (ಎಂಬತ್ತೊಂದು ಲಕ್ಷದ ತೊಂಬತ್ತೇಂಟು ಸಾವಿರದ ಒಂಬೈನೂರ ಮೂವತ್ತೊಂಬತ್ತು) ರೂಪಾಯಿಗಳ ವಹಿವಾಟು ನಡೆಸಿದೆ. ಈ ಕೇಂದ್ರದ ಚಟುವಟಿಕೆ ಮತ್ತು ಮಾರಾಟ ವಿವರಗಳನ್ನು ಅನುಬಂಧ 3.7ರಲ್ಲಿ ನೀಡಲಾಗಿದೆ.

4.4.8 ಕೃಷಿ ವಿಜ್ಞಾನ ವಸ್ತು ಸಂಗ್ರಹಾಲಯ

ಜಿ.ಕೆ.ವಿ.ಕೆ. ಪ್ರವೇಶ ದ್ವಾರದಲ್ಲಿ ಸ್ಥಾಪಿಸಲಾದ ಕೃಷಿ ವಿಜ್ಞಾನ ವಸ್ತುಸಂಗ್ರಹಾಲಯದಲ್ಲಿ ಕೃಷಿ ಸಂಬಂಧಿತ ಇತಿಹಾಸ, ತಂತ್ರಜ್ಞಾನಗಳು, ನಾವಿನ್ಯತೆಗಳು ಇತ್ಯಾದಿ ಮಾಹಿತಿಯನ್ನು ಪ್ರದರ್ಶಿಸಲಾಗಿದೆ. ಪೋಸ್ಟರ್ಗಳು, ನಕ್ಷೆಗಳು, ಛಾಯಾಚಿತ್ರಗಳು, ಜೀವಂತ ಮಾದರಿಗಳು ಇತ್ಯಾದಿ ಮಾಹಿತಿಗಳನ್ನು ಚಿತ್ರಿಸಲು 800 ಚದುರ ಮೀಟರ್ಗಳ ಕಟ್ಟಡವನ್ನು ಬಳಸಲಾಗಿದೆ. ಕೃಷಿ ಅರಣ್ಯ, ಹವಾಮಾನ ಬದಲಾವಣೆ ಹಾಗೂ ಕೃಷಿ ಯಾಂತ್ರೀಕರಣಗಳ ಸಂಬಂಧಿತ ಪ್ರದರ್ಶನಗಳನ್ನು ಸೇರಿಸಿಕೊಳ್ಳಲಾಗಿದೆ. 2018–19ರಲ್ಲಿ 8 ಸಾವಿರಕ್ಕೂ ಹೆಚ್ಚು ಜನ ವಸ್ತುಸಂಗ್ರಹಾಲಯಕ್ಕೆ ಭೇಟಿನೀಡಿದ್ದಾರೆ.

4.4.9 ವಿಸ್ತರಣಾ ಶಿಕ್ಷಣ ಘಟಕ

ಹೆಬ್ಬಾಳ ಸಿಬ್ಬಂದಿ ತರಬೇತಿ ಘಟಕದಡಿ, ಮೈಸೂರು ತಾಲೂಕಿನ ನಾಗನಹಳ್ಳಿ ಮತ್ತು ಕೋಲಾರಗಳಲ್ಲಿ ವಿಸ್ತರಣಾ ಶೈಕ್ಷಣಿಕ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಸಂಶೋಧನಾ ಫಲಿತಾಂಶಗಳ ಕಾರ್ಯಕ್ಷಮತೆಯ ಮೌಲ್ಯಮಾಪನ, ರುಜುವಾತಾದ ಫಲಿತಾಂಶಗಳ ಪ್ರಾತ್ಯಕ್ಷಿಕೆ, ತರಬೇತಿ ಕಾರ್ಯಕ್ರಮಗಳ ಆಯೋಜನೆ ಹಾಗೂ ಇತರ ಅಭಿವೃದ್ಧಿ ಇಲಾಖೆಗಳ, ಪರಿಕರ ಏಜೆನ್ಸಿಗಳ ಮತ್ತು ಸರಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ವಿಸ್ತರಣಾ ಚಟುವಟಿಕೆಗಳ ಆಯೋಜನೆಯ ಆಧ್ಯಾದೇಶನ್ನಾಗಿಸಿಕೊಂಡಿದೆ. ಘಟಕವು ಪ್ರಸ್ತುತ ವರದಿಯ ವರ್ಷದಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿದೆ:

ಕ್ಷೇತ್ರ ಪ್ರಯೋಗಗಳು: ರೈತರ ಜಮೀನುಗಳಲ್ಲಿ ಸಂಶೋಧನೆಯ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಸಂಶೋಧನೆಯ ಅಂತಿಮ ಹಂತವಾಗಿ ಕ್ಷೇತ್ರ ಪ್ರಯೋಗಗಳನ್ನು ಕೈಗೊಳ್ಳಲಾಗಿತ್ತು. 22

b) To provide diagnostic and advisory services to farmers

c) Exhibit University technologies and participate in sale of literature in the agricultural exhibitions organised by other Institutions

d) Manage the agri-tech portal developed by the University in order to provide the digitized information to all the stakeholders

Advisory Services

The ATIC rendered 12838 farm advisories comprising of field visits (11), telephone calls (3824), consultations (1885), anwers for what's app quiers (77) and visits of farmers and extension workers (7041) to the centre.

Marketing of different products / plants / literatures

The ATIC realized an amount of Rs. 81,98,939/- (Rupees Eight one lakhs ninety eight thousand nine hundred and thirty nine only) through sale of products, plants, literature, seeds, etc., and the details are provided in Annexure 3.7.

4.4.8 Agricultural Sciences Museum (ASM)

Information about history, technologies, innovations etc., related to agriculture have been displayed at Agricultural Sciences Museum established at the entrance of GKVK Campus. Posters, charts, photographs, live specimens, etc. are used to depict the information in a 800 sq. mts. building. Exhibits related to farm forestry, climate change and farm mechanization are added. More than 8 thousand people visited the museum during the year 2018-19.

4.4.9 Extension Education Units (EEUs)

The Extension Education Unit (EEU), Naganahalli, Mysuru taluk and Kolar unit functioning in Staff Training Unit, Hebbal has the mandate to evaluate the performance of research findings, to demonstrate the proven research findings, to conduct training programmes and other extension educational activities with the collaboration of developmental departments, input agencies and NGO's. The following activities were performed during the year under report.

Farm trials: The farm trials were conducted to evaluate the performance of research findings on the farmers field as a tail end research. Eight farm trials

ರೈತರನ್ನೊಳಗೊಂಡಂತೆ 08 ಕ್ಷೇತ್ರ ಪ್ರಯೋಗಗಳನ್ನು ನಡೆಸಲಾಗಿತ್ತು. ವಿವರಗಳನ್ನು ಅನುಬಂಧ 3.8ರಲ್ಲಿ ನೀಡಲಾಗಿದೆ.

ಮುಖ್ಯಾಂಶಗಳು:

- ಕಬ್ಬಿನ ತಳಿ ಕೊ.ವಿ.ಸಿ.–16062 ಯನ್ನು ಹೋಲಿಕೆ ತಳಿ ಕೊ.–86032 ಗೆ ಹೋಲಿಸಿದಾಗ ಶೇ. 14.02 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಕಬ್ಬಿನ ತಳಿ ಕೊ.ವಿ.ಸಿ.–16061 ಯನ್ನು ಹೋಲಿಕೆ ತಳಿ ಸಿ.ಓ.ಕೊ.ಸಿ.–671 ಗೆ ಹೋಲಿಸಿದಾಗ ಶೇ. 8.42 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಮುಸುಕಿನ ಜೋಳದ ತಳಿ ಎಮ್.ಎ.ಹೆಚ್–14–138 ಯನ್ನು ಹೋಲಿಕೆ ತಳಿ ಎಮ್.ಎ.ಹೆಚ್–14–05 ಗೆ ಹೋಲಿಸಿದಾಗ ಶೇ. 6.63 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಸೂರ್ಯಕಾಂತಿ ತಳಿ ಕೆ.ಬಿ.ಎಸ್.ಹೆಚ್–78 ಯನ್ನು ಹೋಲಿಕೆ ತಳಿ ಕೆ.ಬಿ.ಎಸ್.ಹೆಚ್–53 ಗೆ ಹೋಲಿಸಿದಾಗ ಶೇ. 9.80 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಬಿ.ಟಿ. ಹತ್ತಿ ಬೆಳೆಯಲ್ಲಿ ಕಳೆ ನಿಯಂತ್ರಣ ಸಿಂಪರಣೆಯಿಂದ 15.50 ಕ್ವಿ/ಹೆ. ಉತ್ಪಾದನೆ ಕೈಕಳೆತೆಗೆಯುವ ಪದ್ಧತಿಯಿಂದ 16.38 ಕ್ವಿ/ಹೆ. ಉತ್ಪಾದನೆ ದಾಖಲಾಗಿರುತ್ತದೆ.
- ಹೆಸರು ಮತ್ತು ಉದ್ದಿನಲ್ಲಿ ಅಂತರ ಬೆಳೆಯಾಗಿ ಮುಸುಕಿನ ಜೋಳ (ಟಿ1 = ಮುಸುಕಿನ ಜೋಳ + ಉದ್ದು, ಟಿ2 = ಮುಸುಕಿನ ಜೋಳ + ಹೆಸರು, ಟಿ3 = ಮುಸುಕಿನ ಜೋಳ) ಪ್ರಯೋಗವು ಶೇ. 5.34 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ನೀರಾವರಿ ಪ್ರದೇಶದ ರಾಗಿ ಬೆಳೆಯಲ್ಲಿ ಕಳೆ ನಿಯಂತ್ರಣವನ್ನು ಪ್ರಯೋಗಿಸಿದಾಗ 30.85 ಕ್ವಿ/ಹೆ. ಉತ್ಪಾದನೆ ಹಾಗೂ ಕೈಕಳೆತೆಗೆಯುವ ಪದ್ಧತಿಯಿಂದ 30.24 ಕ್ವಿ/ಹೆ. ಉತ್ಪಾದನೆ ದಾಖಲಾಗಿರುತ್ತದೆ ಮತ್ತು ಪರೀಕ್ಷಾ ತಳಿಗೆ ಹೋಲಿಸಿದಾಗ ಶೇ. 2.02 ಇಳುವರಿ ಹೆಚ್ಚಿದೆ.

ಪ್ರಾತ್ಯಕ್ಷಿಕೆಗಳು: ವಿಸ್ತರಣಾ ಶಿಕ್ಷಣ ಘಟಕವು 119 ಜನ ರೈತರನ್ನು ಒಳಗೊಂಡಂತೆ 33.15 ಹೆ. ಕ್ಷೇತ್ರದಲ್ಲಿ 39 ಸ್ಥಳಗಳಲ್ಲಿ 21 ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಿತು. ಈ ಪ್ರಾತ್ಯಕ್ಷಿಕೆಗಳನ್ನು ರಾಗಿ (ಕೆ.ಎಂ.ಆರ್.–340, 204, 301, 630), ಎಸ್.ಆರ್.ಐ. ಪದ್ಧತಿಯಲ್ಲಿ ಭತ್ತದ ಬೇಸಾಯ, ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ, ತೊಗರಿ ತಳಿ ಪರಿಚಯ (ಬಿ.ಆರ್.ಜಿ–5), ಅಲಸಂದೆ ತಳಿ ಪರಿಚಯ ಎ.ವಿ–06, ಎ.ವಿ–05, ಕೆ.ಬಿ.ಸಿ–02, ಬಾಳೆಯಲ್ಲಿ ಸಿಗಟೋಗ ಎಲೆಚುಕ್ಕೆ ನಿರ್ವಹಣೆ, ನವಣೆ ತಳಿ ಪರಿಚಯ ಹೆಚ್.ಎಂ.ಟಿ–100–1, ಕಬ್ಬಿನಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ, ಕಬ್ಬಿನಲ್ಲಿ ಗೊಣ್ಣೆಹುಳು ನಿರ್ವಹಣೆ, ಐ.ಐ.ಹೆಚ್.ಆರ್. ಪಾಲಾಕ್ ಅರ್ಕಾ ಅನುಪಮ ತಳಿ ಪರಿಚಯ, ಐ.ಐ.ಹೆಚ್.ಆರ್. ಟೊಮ್ಯಾಟೊ ಅರ್ಕಾ ಸಾಮ್ರಾಟ್ ತಳಿ ಪರಿಚಯ, ಐ.ಐ.ಹೆಚ್.ಆರ್. ಟೊಮ್ಯಾಟೊ ಅರ್ಕಾ ಶ್ವೇತ ತಳಿ ಪರಿಚಯ, ರೇಷ್ಮೆ ಹುಳು ತಳಿ ಪರಿಚಯ, ಆಹಾರ ಧ್ಯಾನ್ಯಗಳ ಶೇಖರಣೆ, ಪೌಷ್ಟಿಕ ಕೈತೋಟದ ನಿರ್ವಹಣೆ, ಅಣಬೆ ಬೇಸಾಯ ಇತ್ಯಾದಿಗಳನ್ನು

were conducted involving 22 farmers. The details are provided in Annexure 3.8.

Highlights

- Evaluation of CoVC-16062 (CoVc 09-61-07) a mid late maturing sugarcane clone resulted in 14.02 % increase in yield as compared to check CO-86032.
- Evaluation of CoVC-16061 (CoVc 10-43-06) a early maturing sugarcane clone resulted in 8.42 % increase in yield as compared to check CO-CoC-671
- New varietal trial of Maize hybrid MAH-14-138 resulted in 6.63 % increase in yield as compared to check Hybrid var. MAH-14-5.
- Sunflower hybrid trial of KBSH-78 resulted in 9.80 % increase in yield as compared to check KBSH-53
- Weedicide management in BT cotton by using Quizolophos-p-ethyl (5 EC) 50 gm a.i/ ha resulted 15.50 Q/ha. yield as compared to hand weeding 16.38 Q/ha.
- Maize intercrop with green gram and blackgram (T1 = Maize + Blackgram, T2 = Maize + Greengram, T3 = Maize check) resulted 5.34 % increase in yield as compared to check.
- Weedicide management in irrigated Ragi resulted 30.85 q/ha. yield as compared to hand weeding 30.24 q/ha. and percentage increase in yield over check 2.02 %.

Demonstrations: The Extension Education Units have conducted 21 demonstrations in 39 locations involving 119 farmers in an area of 33.15 ha. The demonstrations were conducted on Ragi (KMR-340, 204, 301, 630) , SRI Method of Paddy Cultivation, ICM in Paddy, Introduction to Cowpea AV-6, AV-5 KBC-2, Introduction to Redgram BRG-5 (Pure crop), Management of Sigatoka leaf spot in Banana (Elakki), Foxtail millet HMT-100-1, Micronutrient Management in sugarcane, Management of Rootgrub in sugarcane, Introduction of IIHR Palak, Arka Anupama, Introduction to Tomato variety Arka Samrat & Arka Swetha, Introduction of new silk worm breed, safe storage of food grains, eshablishement of nutritional

ಪರಿಚಯಿಸಲು ಕೈಗೊಳ್ಳಲಾಗಿತ್ತು. ವಿವರಗಳನ್ನು ಅನುಬಂಧ 3.9ರಲ್ಲಿ ನೀಡಲಾಗಿದೆ.

ಮುಖ್ಯಾಂಶಗಳು:

- ಭತ್ತದಲ್ಲಿ ಎಸ್.ಆರ್.ಐ. ಪದ್ಧತಿ ಪ್ರಾತ್ಯಕ್ಷಿಕೆಯು ಸಾಂಪ್ರದಾಯಿಕ ಪದ್ಧತಿಗೆ ಹೋಲಿಸಿದಾಗ ಶೇ. 18.36 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯು ಹೋಲಿಕೆ ಕ್ಷೇತ್ರಕ್ಕಿಂತ ಶೇ. 13.44 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಅಲಸಂದೆ ತಳಿಗಳಾದ ಎ.ವಿ–6, ಎ.ವಿ–5, ಕೆ.ಬಿ.ಸಿ–2 ತಳಿ ಗಳನ್ನು ಸ್ಥಳೀಯ ತಳಿಗಳಿಗೆ ಹೋಲಿಸಿದಾಗ ಶೇ. 6.7, ಶೇ. 17.7, ಶೇ. 12.8 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಬಿ.ಆರ್.ಜಿ–5 ತೊಗರಿ ತಳಿಯನ್ನು ಏಕಬೆಳೆಯಾಗಿ ಪರಿಚಯಿಸಿದ ಇಳಿವರಿಯನ್ನು ಸ್ಥಳೀಯ ತಳಿಗೆ ಹೋಲಿಸಿದಾಗ ಶೇ. 26.97ರಷ್ಟು ಹೆಚ್ಚಿದೆ.
- ರಾಗಿ ಕೆ.ಎಂ.ಆರ್–340, ಕೆ.ಎಂ.ಆರ್–204, ಕೆ.ಎಂ.ಆರ್–301 ಮತ್ತು ಕೆ.ಎಂ.ಆರ್–630 ತಳಿಗಳನ್ನು ಹೋಲಿಕೆ ತಳಿಗಳಿಗೆ ಹೋಲಿಸಿದಾಗ ಇಳುವರಿಯಲ್ಲಿ ಶೇ. 12.91, ಶೇ. 14.96, ಶೇ. 7.57 ಮತ್ತು ಶೇ. 21.64 ರಷ್ಟು ಹೆಚ್ಚಿದೆ.
- ಬಾಳೆಯಲ್ಲಿ ಸಿಗಟೋಗ ಎಲೆಚುಕ್ಕೆ ನಿರ್ವಹಣೆ ಪ್ರಾತ್ಯಕ್ಷಿಕೆಯು ಹೋಲಿಕೆ ಪ್ರಾತ್ಯಕ್ಷಿಕೆಗಿಂತ ಶೇ. 15.09 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ
- ನವಣೆ ತಳಿ ಪರಿಚಯ ಹೆಚ್.ಎಂ.ಟಿ–100–1 ಪ್ರಾತ್ಯಕ್ಷಿಕೆಯು ಹೆಚ್ಚಿನ ಜನಪ್ರಿಯತೆಯನ್ನು ಪಡೆಯುವಲ್ಲಿ ಯಶಸ್ವಿಯಾಗಿದೆ
- ಕಬ್ಬಿನಲ್ಲಿ ಲಘು ಪೋಷಕಾಂಶಗಳ ನಿರ್ವಹಣೆ ಹಾಗೂ ಕಬ್ಬಿನಲ್ಲಿ ಗೊಣ್ಣೆಹುಳು ನಿರ್ವಹಣೆ ಪ್ರಾತ್ಯಕ್ಷಿಕೆಗಳು ಹೋಲಿಕೆ ಪ್ರಾತ್ಯಕ್ಷಿಕೆಗಳಿಗಿಂತ ಹೋಲಿಸಿದಾಗ ಶೇ. 6.51 ಮತ್ತು ಶೇ. 3.32 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಐ.ಐ.ಹೆಚ್.ಆರ್. ಪಾಲಾಕ್ ಅರ್ಕಾ, ಅನುಪಮ ತಳಿಯು ಹೋಲಿಕೆ ತಳಿಗಿಂತ ಶೇ. 6.12 ರಷ್ಟು ಹೆಚ್ಚಿನ ಇಳುವರಿಯನ್ನು ದಾಖಲಿಸಿದೆ.
- ಹೊಸ ರೇಷ್ಮೆ ಹುಳು ತಳಿಯು (75.02 ಕೆಜಿ) ಹೋಲಿಕೆ ತಳಿಗಿಂತ (62 ಕೆಜಿ) ಹೆಚ್ಚಿನ ಇಳುವರಿ ಮತ್ತು ಆದಾಯವನ್ನು ದಾಖಲಿಸಿದೆ ಹಾಗೂ ಬಹುಕಟಾವು ಹಾಗೂ ಕೊಯ್ಲಿನಂತರ ಕಡಿಮೆ ಅವಧಿ ಉಳಿಯುವಿಕೆಯ ಸಮಸ್ಯೆ ಅರಿತುಕೊಂಡರು.
- ಅಣಬೆ ಬೇಸಾಯ ಪ್ರಾತ್ಯಕ್ಷಿಕೆಯಲ್ಲಿ ಪ್ರತಿ ಘಟಕದಿಂದ 8.6 ಕಿ.ಗ್ರಾಂ.ನಷ್ಟು ಉತ್ಪನ್ನವನ್ನು ಪಡೆದಿದ್ದು, ಪ್ರತಿನಿತ್ಯ ಸೇವನೆಯಿಂದ ಪೌಷ್ಟಿಕಾಂಶಗಳ ಮಟ್ಟದಲ್ಲಿ ಸುಧಾರಣೆ ಕಂಡುಬಂದಿರುತ್ತದೆ.

garden & Oyster mushroom cultivation. The details are provided in Annexure 3.9

Highlights

- In SRI method of paddy cultivation, the yield increased to 18.36 per cent as compared to conventional method.
- Demonstration on ICM in paddy resulted in 13.44 per cent increase in yield as compared to check plot.
- Introduction of cowpea variety AV-6, AV-5 & KBC-2 resulted 6.7 per cent, 17.7 per cent and 12.8 per cent increase in yield as compared to local variety respectively
- Introduction of Redgram- BRG-5 (Pure crop) resulted 26.97 per cent increase in yield as compared to local variety.
- Introduction of Ragi- KMR-630, KMR- 301, KMR-340, KMR-204 resulted 12.91 %, 14.96%, 7.57 % and 21.64 % increase in yield as compared to check variety.
- Demonstration on management of sigatoka leaf spot in Banana (Elakki) using COC resulted in 15.09 per cent increase in yield as compared to check plot
- Introduction of Foxtail millet HMT-100-1 demonstration popuralized the variety
- Micronutrient Management in sugarcane resulted in 6.51 % increase in yield as compared to check plot. Management of Rootgrub in sugarcane resulted in 3.32 % increase in yield as compared to check plot.
- Introduction of IIHR Palak, Arka Anupama resulted in 6.12 % increase in yield as compared to check plot and the farmers realized marketing problem for multicut and low shelf life after harvest.
- Introduction of new silk worm breed (CSR2 x CSR-4) resulted in high (75.02 kg) yield and income over check (62 kg).
- Introduction of Oyster mushroom cultivation increased nutritional status of the consumer due to regular consumption and per unit 8.6 kgs of fresh mushroom was produced.

ತರಬೇತಿ ಕಾರ್ಯಕ್ರಮಗಳು: ಘಟಕವು 330 ರೈತರ ಪ್ರಯೋಜನಕ್ಕಾಗಿ, ಭತ್ತದಲ್ಲಿ ಕೀಟ ಹಾಗೂ ರೋಗಗಳ ನಿರ್ವಹಣೆ ಹಾಗೂ ಅಣಬೆ ಕೃಷಿ ಕುರಿತು 05 ಒಳಾವರಣ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಅಲ್ಲದೆ 2348 ರೈತರ ಪ್ರಯೋಜನಕ್ಕಾಗಿ ಕೃಷಿ ಮತ್ತು ಹೈನುಗಾರಿಕಾ ಉತ್ಪನ್ನಗಳ ಮೌಲ್ಯವರ್ಧನೆ, ಹೈನುಗಾರಿಕೆ, ರಾಗಿ ಮತ್ತು ಅಲಸಂದೆ ಬೇಸಾಯ, ಕಿರುಧಾನ್ಯಗಳ ಬೇಸಾಯ, ಆಲೂಗಡ್ಡೆ ಬೇಸಾಯ ಹಾಗೂ ಬೇಕರಿ ಉತ್ಪನ್ನಗಳ ತಯಾರಿಸುವಿಕೆ ಕುರಿತು 30 ಹೊರಾವರಣ ತರಬೇತಿಗಳನ್ನು ಅಯೋಜಿಸಲಾಗಿತ್ತು. ವಿವರಗಳನ್ನು ಅನುಬಂಧ 3.10ರಲ್ಲಿ ನೀಡಲಾಗಿದೆ.

ಶೈಕ್ಷಣಿಕ ಚಟುವಟಿಕೆಗಳು: ವಿಸ್ತರಣಾ ಶಿಕ್ಷಣ ಘಟಕವು 849 ಸಮೂಹ ಚರ್ಚೆಸಭೆ, 65 ಪದ್ಧತಿ ಪ್ರಾತ್ಯಕ್ಷಿಕೆ, 683 ಕ್ಷೇತ್ರ ಭೇಟಿ, 02 ಕ್ಷೇತ್ರೋತ್ಸವಗಳನ್ನು ಆಯೋಜಿಸಲಾಗಿತ್ತು. ಕ್ರಮವಾಗಿ 3313, 1121, 2990, ಹಾಗೂ 138 ಜನರ ರೈತರು ಭಾಗಿಯಾಗಿದ್ದರು. ಅಲ್ಲದೆ, 02 ಜಾನುವಾರುಗಳ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗಿತ್ತು ಮತ್ತು 257 ಜಾನುವಾರುಗಳಿಗೆ ಚಿಕಿತ್ಸೆ ಮಾಡಲಾಯಿತು. ಕೋಲಾರದ ವಿಸ್ತರಣಾ ಶಿಕ್ಷಣ ಘಟಕವು 413 ಜನ ರೈತರ ಪ್ರಯೋಜನಕ್ಕಾಗಿ 04 ಮುಂಗಾರು ಮೇಳವನ್ನು ಆಯೋಜಿಸಿತು. ಮೈಸೂರು ವಿಸ್ತರಣಾ ಶಿಕ್ಷಣಾ ಘಟಕದ ವಿಜ್ಞಾನಿಗಳು 05 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳಲ್ಲಿ ಭಾಗವಹಿಸಿ, 182 ಕ್ಷೇತ್ರ ಸಮಸ್ಯೆಗಳನ್ನು ಗುರುತಿಸಿ, ರೈತರಿಗೆ 123 ಸಲಹಾ ಸೇವೆಗಳನ್ನು ಒದಗಿಸಿದ್ದಾರೆ.

4.4.10 ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆ

ರಾಷ್ಟ್ರೀಯ ಕೃಷಿ ವಿಸ್ತರಣಾ ಪ್ರಾಯೋಜನೆಯು ಕರ್ನಾಟಕ ರಾಜ್ಯ ಕೃಷಿ ಇಲಾಖೆ ಮತ್ತು ಇತರ ಸಂಬಂಧಿತ ಇಲಾಖೆಗಳ ವಿಸ್ತರಣಾ ಅಧಿಕಾರಿಗಳಿಗೆ ಜ್ಞಾನಮಟ್ಟ ಹೆಚ್ಚಿಸಲು ಮತ್ತು ಕೌಶಲ್ಯ ವರ್ಧಿಸಲು ತರಬೇತಿ ನೀಡಲು, ಸ್ಥಾಪಿಸಲಾಗಿದೆ ಕೇಂದ್ರದ ಉದ್ದೇಶದಂತೆ ಕೇಂದ್ರವು ಜಿಲ್ಲಾ ಮಟ್ಟದ ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ, ಜಿಲ್ಲಾ ಮಟ್ಟದ ಬೆಳೆ ರೋಗ ತಪಾಸಣೆ ಸಮೀಕ್ಷೆ, ಜಿಲ್ಲಾವಾರು ಬೆಳೆ ಮತ್ತು ಕೃಷಿ ಉದ್ಯಮಗಳ ಕುರಿತಾಗಿ ಸಾಹಿತ್ಯ ಸಿದ್ದಪಡಿಸುವಿಕೆ ಹಾಗೂ ಹಂಚಿಕೆ ಹಾಗೆ ರೈತ ಸಂವಾದ ಗೋಷ್ಟಿಗಳನ್ನು ಆಯೋಜಿಸುವುದು. ಬೆಂಗಳೂರು ಮತ್ತು ಮಂಡ್ಯಗಳಲ್ಲಿರುವ ಸಹ ವಿಸ್ತರಣಾ ನಿರ್ದೇಶಕರ ನೇತೃತ್ವದಲ್ಲಿ 2018–17ರಲ್ಲಿ ಈ ಮುಂದಿನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಅ) ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರ: 10 ಜಿಲ್ಲೆಗಳಲ್ಲಿ 33 ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಯಿತು. ಈ ದ್ವೈಮಾಸಿಕ ಕಾರ್ಯಾಗಾರದ ಸಂದರ್ಭಗಳಲ್ಲಿ ವಿಸ್ತರಣಾ ಕಾರ್ಯಕರ್ತರಿಂದ ತಾಲ್ಲೂಕುವಾರು ಹವಾಮಾನದತ್ತ ವಿಶ್ಲೇಷಣೆ, ಕೃಷಿಕ್ಷೇತ್ರ ಸಂಬಂಧಿತ ಸಮಸ್ಯೆಗಳನ್ನು ಅವಲೋಕಿಸಿ ಚರ್ಚಿಸಲಾಯಿತು ಮತ್ತು ಸೂಕ್ತ ಪರಿಹಾರಗಳನ್ನು ಸೂಚಿಸಲಾಯಿತು. ಅಲ್ಲದೆ ವಿಸ್ತರಣಾ ಕಾರ್ಯಕರ್ತರಿಗೆ 38 ಪಠ್ಯಕ್ರಮಗಳನ್ನು ಸಿದ್ದಪಡಿಸಲಾಯಿತು. ಅಗತ್ಯತೆಯನ್ನು ಆಧರಿಸಿ 41 ವಿಶೇಷ ಅತಿಥಿ ಉಪನ್ಯಾಸಗಳನ್ನು ಆಯೋಜಿಸಲಾಗಿತ್ತು. ಇದರ ಜೊತೆಗೆ 15 ಪದ್ಧತಿ ಪ್ರಾತ್ಯಕ್ಷಿಕೆ, 10 ಗುಂಪು ಚರ್ಚೆಗಳನ್ನು ಆಯೋಜಿಸಲಾಗಿತ್ತು. 25 ಸಲಹಾ ಸೇವೆಗಳನ್ನು ರೈತರಿಗೆ ನೀಡಲಾಗಿದ್ದು, 9 ವಿಶೇಷ ದಿನಾಚರಣೆ, 13 ವಿಶೇಷ ಕಾರ್ಯಕ್ರಮಗಳು ಮತ್ತು ವಿವಿಧ ಇಲಾಖೆಗಳಲ್ಲಿ ಆಯೋಜಿಸಲಾದ 93 ಸಭೆಗಳಲ್ಲಿ ಭಾಗವಹಿಸಲಾಯಿತು.

Training Programmes: The Units organized 05 on campus training programmes on management of pests and diseases in paddy and mushroom cultivation for the benefit of 330 farmers. Further, organized 30 off campus training programmes on Value Addition in Agriculture and Livestock Products, Ragi and Cowpea production technologies, Cultivation of minor millets and Potato, preparation of bakery products etc., for the benefit of 2348 farmers. The details are provided in Annexure 3.10.

Educational activities: The EEUs organized 849 group discussion meetings, 65 method demonstrations, 683 field visits and 02 field days involving 3313 farmers, 1121 farmers, 2990 farmers and 138 farmers, respectively. Further, 02 animal health camps were organised treating 257 animals. The EEU, Kolar organized 04 kharif campign for the benefit of 413 farmers. The scientists of EEU, Mysuru participated in 05 bimonthly technical workshops, identified 182 fields problems and provided 123 advisory services to the farmers.

4.4.10 National Agricultural Extension Project (NAEP)

National Agricultural Extension Project (NAEP) was established to provide training for increasing knowledge level and to develop skills of extension functionaries of the state department of agriculture and other line department. The objectives of this center are to organize district level bi-monthly technical workshops, district level pest and disease surveillance, developing and distribution of literature on crops and agri-enterprises of the district as well as to organize farmer's discussion forums. The Associate Directors of Extension (ADE) Bengaluru and Mandya carried out the following activities during 2018-19.

a) Bi-monthly Technical Workshop: 33 bi-monthly technical workshops were organized in 10 districts. Taluka wise weather data was analyzed, field problems observed by extension functionaries were discussed and suitable solutions were found out. Further 38 lesson plans were developed and advocated to the extension workers. Depending on the requirement, 41 special guest lecturers were arranged. In addition 15 method demonstrations, 10 group discussions were conducted. Twenty five advisory services were provided to the farmers and participated in nine important day celebrations, 13 important events and 93 meetings conducted in different departments.

ಆ) ಕೌಶಲ್ಯ ಪ್ರಾತ್ಯಕ್ಷಿಕೆ: ಹರಳು ಬೆಳೆಯಲ್ಲಿ ಸುಳಿ ಚಿವುಟುವಿಕೆ, ವಿಷ ಪಾಷಣ ಬಳಸಿ ಸೈನಿಕಹುಳು ಭಾದೆ ನಿಯಂತ್ರಣ, ದಾಳಿಂಬೆಯಲ್ಲಿ ಹನಿ ನೀರಾವರಿ ಅಳವಡಿಕೆ, ಮಾವಿನಲ್ಲಿ ಸುಧಾರಿತ ಸವರುವಿಕೆ ಮತ್ತು ಕೊಯ್ಲು, ಮಾವಿನ ಗಿಡಗಳ ಸುತ್ತ ಕಂದಕಗಳ ನಿರ್ಮಾಣ ಮತ್ತು ಎನ್.ಪಿ.ವಿ. ಸಿಂಪರಣಾ ದ್ರಾವಣ ತಯಾರಿಸುವಿಕೆ ಮತ್ತು ಅದರ ಸಿಂಪರಣೆ. ಭತ್ತದಲ್ಲಿ ಚಾಪೆ ಸಸಿಮಡಿ ತಯಾರಿಸುವಿಕೆ ಪ್ರಾತ್ಯಕ್ಷಿಕೆ, ರಾಗಿಯಲ್ಲಿ ಸತುವಿನ ಸಲ್ಫೇಟ್‌ನ ಬಳಕೆ, ಭತ್ತ, ರಾಗಿ ಮತ್ತು ದ್ವಿದಳ ಧಾನ್ಯಗಳ ಬೀಜೋಪಚಾರ, ಅಜೋಸ್ಪೈರುಲಂ ಮತ್ತು ರೈಜೋಬೀಯಂ ಅನ್ನು ತೊಗರಿ ಬೀಜೋಪಚಾರಕ್ಕಾಗಿ ಬಳಕೆ, ಕಬ್ಬಿನಲ್ಲಿ ರೋಗಗಳ ನಿಯಂತ್ರಣಾ ಕ್ರಮಗಳು, ಹುಳಿ ಮತ್ತು ಕ್ಷಾರ ಮಣ್ಣಿನ ಗುರುತಿಸುವಿಕೆ ಕುರಿತು ಕೌಶಲ್ಯ ಪ್ರಾತ್ಯಕ್ಷಿಕೆಗಳನ್ನು ಜಿಲ್ಲಾ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ.

b) Skill Demonstrations: Nipping in castor, preparation and use of poison bite to control army worm, laying of drip irrigations pipe lines in pomegranate, improved method of mango pruning, mango harvest, formation of trenches and application of fertilizers in mango, preparation of spray solutions with NPV and spraying, seed treatment in paddy, ragi and pulses, tray nursery in paddy, seed hardening and zinc sulphate treatment in ragi using Azospirullum. Seed treatment in paddy, ragi and pulses and FYM treatment rhizobium in redgram, sugarcane disease diagnosis, method of identifying saline and alkali soil and other important technologies which needs skill improvement was undertaken in jurisdictional districts.

ಇ) **ತಪಾಸಣಾ ಕ್ಷೇತ್ರ ಭೇಟಿ:** ಒಟ್ಟು 19 ತಪಾಸಣಾ ಕ್ಷೇತ್ರ ಭೇಟಿಗಳನ್ನು ಕೈಗೊಂಡಿದ್ದು, 12 ಭೇಟಿಗಳನ್ನು ರಾಗಿಯಲ್ಲಿ ಕಲಬೆರಕೆಯನ್ನು ಖಚಿತಪಡಿಸಿಕೊಳ್ಳಲು, 7 ಭೇಟಿಗಳನ್ನು ಸೈನಿಕಹುಳು ಭಾದೆಗೆ ನಿಯಂತ್ರಣಾ ಕ್ರಮಗಳನ್ನು ಶಿಫಾರಸ್ಸು ಮಾಡಲು ಬೆಂಗಳೂರು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

c) Diagnostic Field Visits: Arranged 12 Diagnostic Field Visits to ascertain admixtures in Ragi crop, 07 visits to diagnose and to recommend control measures to the army worm infested areas. Totally, 19 Diagnostic Field Visits were arranged in Bangalore district.

ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ 07 ತಪಾಸಣಾ ಕ್ಷೇತ್ರ ಭೇಟಿಗಳನ್ನು ಹಮ್ಮಿಕೊಳ್ಳಲಾಗಿದ್ದು, ಕ್ಷೇತ್ರ ಭೇಟಿ ಸಮಯದಲ್ಲಿ ಸಮಸ್ಯಾತ್ಮಕ ಭತ್ತದ ಕ್ಷೇತ್ರಗಳು, ಭತ್ತದಲ್ಲಿ ಕುತ್ತಿಗೆ ರೋಗ, ಉದುಬತ್ತ ರೋಗ, ಕಬ್ಬಿನಲ್ಲಿ ಎಲೆ ತುಕ್ಕು ರೋಗ, ಹೆಸರು ಮತ್ತು ಉದ್ದಿನಲ್ಲಿ ಹಳದಿ ನಂಜು ರೋಗಗಳ ಸಮಸ್ಯೆಗಳನ್ನು ಗುರುತಿಸಲಾಯಿತು.

The problems identified during 07 diagnostic field visits at Mandya district were problematic paddy fields, paddy fieds affected by neckblast, udubatta disease, sugarcane leaf rust and yellow mosoic virus in green and black gram fields.

ಉ) ದ್ವೈಮಾಸಿಕ ತಾಂತ್ರಿಕ ಕಾರ್ಯಾಗಾರದ ಸಂದರ್ಭದಲ್ಲಿ ವರದಿಯಾದ ಸಮಸ್ಯೆಗಳು : ಮುಸಕಿನ ಜೋಳದಲ್ಲಿ ಕಾಯಿಕೊರಕ, ತೊಗರಿಯಲ್ಲಿ ಸೊರಗು ಮತ್ತು ಬಂಜೆ ರೋಗ, ರಾಗಿಯಲ್ಲಿ ಗೊಣ್ಣೆಹುಳು, ಕಳೆ ನಿಯಂತ್ರಣ, ಕಲಬೆರಕೆ, ಇಳುಕು ಮತ್ತು ಕುತ್ತಿಗೆ ರೋಗ, ಗುಲಾಬಿಯಲ್ಲಿ ಕಾಂಡಕೊರಕ, ಮುಸುಕಿನ ಜೋಳದಲ್ಲಿ ಬೇರುಕೊಳೆ, ಗೊಣ್ಣೆಹುಳುವಿನ ಭಾದೆ ಮತ್ತು ಮೊಳಕೆಯ ಸಮಸ್ಯೆ, ತಿಂಗಳ ಹುರುಳಿಯಲ್ಲಿ ಮೊಗ್ಗು ಕೊಳೆಯುವಿಕೆ ಮತ್ತು ಹಳದಿ ನಂಜುರೋಗ, ಭತ್ತದಲ್ಲಿ ಬೆಂಕಿ ಮತ್ತು ಕಾಂಡಕೊರಕ, ಪರಂಗಿಯಲ್ಲಿ ಹಳದಿ ನಂಜುರೋಗ, ನೆಲಗಡಲೆಯಲ್ಲಿ ಎಲೆಚುಕ್ಕೆ ರೋಗ, ಮೊಗ್ಗು ಕೊಳೆಯುವಿಕೆ, ಕತ್ತು ಕೊಳೆಯುವಿಕೆ ಮತ್ತು ಕಂಬಳಿಹುಳುವಿನ ಸಮಸ್ಯೆ, ಮಣ್ಣು ಮತ್ತು ನೀರು ಸಂರಕ್ಷಣಾ ತಂತ್ರಜ್ಞಾನಗಳು, ಮೇವಿನ ಸುರಕ್ಷತೆ, ಆಲೂಗಡ್ಡೆಯಲ್ಲಿ ಎಲೆ ಅಂಗಮಾರಿ ರೋಗ, ಟಮೊಟೋದಲ್ಲಿ ಎಲೆ ಮುದುಡುವ ರೋಗ ಮತ್ತು ಪಾಪ್ ಕಾರ್ನ್‌ನಲ್ಲಿ ಸೊರಗು ರೋಗ.

d) Field problems reported in the Bi-monthly workshop: Stem borer in maize, wilt and sterility mosaic in red gram, root grub menace in ragi, neck blast and sheath blight in ragi, pink stem borer in ragi, weed problem in ragi, foot rot disease in maize, root grub problem in maize, germination problem in maize, bud necrosis, yellow leaf mosaic diseases in beans, blast in paddy nursery, stem borer in paddy, yellow mosaic virus disease in pappaya, tikka disease in ground nut, bud necrosis in ground nut, color rot in ground, nut Red hairy caterpillar in ground nut, soil and water conservation technologies, admixtures in ragi, fodder scarcity, leaf blight in potato, fusarium wilt in tomato and wilt in popcorn were the major problems reported.

ಊ) ಕ್ಷೇತ್ರ ಪ್ರಯೋಗ ಮತ್ತು ಪ್ರಾತ್ಯಕ್ಷಿಕೆ ತಾಕುಗಳಿಗೆ ಭೇಟಿ ಆಯೋಜನೆ ಮತ್ತು ಮೇಲ್ವಿಚಾರಣೆ: ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಲ್ಲಿ 38 ಕ್ಷೇತ್ರ ಪ್ರಯೋಗ ತಾಕುಗಳನ್ನು ಹೊಂದಿದೆ ಮತ್ತು ಕ್ಷೇತ್ರ ಪ್ರಯೋಗಗಳ ತಾಕಿಗೆ 62 ಭೇಟಿಯನ್ನು ಕೈಗೊಂಡಿದ್ದು, ಈ ಸಂದರ್ಭದಲ್ಲಿ ಪ್ರಯೋಗಗಳ ಕಾರ್ಯ ನಿರ್ವಹಣೆಯನ್ನು ವಿಕ್ಷೀಸಿ ಕ್ಷೇತ್ರ ಕಾರ್ಯಕರ್ತರುಗಳಿಗೆ ಮಾರ್ಗದರ್ಶನ ನೀಡಲಾಯಿತು. ಕ್ಷೇತ್ರ ಪ್ರಯೋಗಗಳ ವಿವರ ಈ ಕೆಳಕಂಡಂತಿದೆ.

e) Visit and Supervision of Farm Trials and Demonstration: 38 farm trail plots spread over in the jurisdictional districts and 62 visits to the demonstration plots were carried out to observe the performance of the technologies and provide guidance to the field functionaries.

ಮುಸುಕಿನ ಜೋಳದ ತಳಿಯ ಕ್ಷೇತ್ರ ಪ್ರಯೋಗ : ಎಮ್.ಎ.ಹೆಚ್–14–138 ಹೋಲಿಕೆ ತಳಿ ಹೇಮಾ ಮತ್ತು ಬೈಯೋ–96–81, ಅವರೆ ತಳಿ ಹೆಚ್.ಎ–5 ಹೋಲಿಕೆ ತಳಿ ಹೆಚ್.ಎ–4, ಮುಸುಕಿನ ಜೋಳ : ಎಂ.ಎ.ಹೆಚ್–14–138 ಹೋಲಿಕೆ ತಳಿ ಹೇಮಾ ಹಾಗೂ ಬೈಯೋ–9681, ಮೇವಿನ ಓಟ್ಸ್ ತಳಿ ಆರ್.ಒ.–11–1 ಹೋಲಿಕೆ ತಳಿ ಒ.ಎಸ್–6, ಮುಸುಕಿನ ಜೋಳ : ಎಂ.ಎ.ಹೆಚ್–14–138 ಹೋಲಿಕೆ ತಳಿ ಹೇಮಾ ಹಾಗೂ ಬೈಯೋ–9681, ಮೇವಿನ ಓಟ್ಸ್ ತಳಿ ಆರ್.ಒ.–11–1 ಹೋಲಿಕೆ ತಳಿ ಒ.ಎಸ್–6, ಕ್ಷೇತ್ರ ಅವರೆ : ಎಚ್.ಎ–5 ಹೋಲಿಕೆ ತಳಿ ಎಚ್.ಎ–4 ತಳಿಗಳು. ಭತ್ತದಲ್ಲಿ ಡಯಟೋಮಸ್ ಅರ್ಥ್‌ನ ಬಳಕೆ, ರಾಗಿಯಲ್ಲಿ ಉದಯಪೂರ್ವಕ ಕಳೆನಾಶಕಗಳ ಬಳಕೆ, ನಾಟಿ ಮಾಡಿದ ರಾಗಿಯಲ್ಲಿ ಉದಯಪೂರ್ವ ಕಳೆನಾಶಕದ ಬಳಕೆ, ಮುಸುಕಿನ ಜೋಳದ ವಿವಿಧ ತಳಿಗಳ ಪ್ರಯೋಗ, ಮುಸುಕಿನ ಜೋಳದಲ್ಲಿ ಅಂತರ ಬೆಳೆ ಪದ್ಧತಿ, ಹೆಸರು ಕಾಳಿನ ವಿವಿಧ ತಳಿಗಳ ಪ್ರಯೋಗ, ಉದ್ದಿನ ವಿವಿಧ ತಳಿಗಳ ಪ್ರಯೋಗ, ಸೂರ್ಯಕಾಂತಿಯ ವಿವಿಧ ತಳಿಗಳ ಪ್ರಯೋಗ, ಹತ್ತಿಯಲ್ಲಿ ಕಳೆನಾಶಕದ ಪ್ರಯೋಗ, ಕಬ್ಬಿನ ವಿವಿಧ ತಳಿಗಳ ಪ್ರಯೋಗ, ಓಟ್ಸ್‌ನ ವಿವಿಧ ತಳಿಗಳ ಪ್ರಯೋಗ, ಆಲೂಗಡ್ಡೆಯಲ್ಲಿ ಡಯಟೋಮಸ್ ಅರ್ಥ್‌ನ ಬಳಕೆ, ಆಲೂಗಡ್ಡೆಯಲ್ಲಿ ಕಾಂಪೋಸ್ಟ್ ಟಿ ಬಳಕೆ ಮತ್ತು ಇತರೆ ತಂತ್ರಜ್ಞಾನಗಳ ಜೊತೆಗೆ ಹೊಸ ಸಸ್ಯನಾಶಕಗಳ ಬಳಕೆಯ ಕುರಿತು ಹಾಗೂ ಕೃಷಿ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಕೈಗೊಂಡಂತಹ ಪ್ರಯೋಗಗಳನ್ನು ಕುರಿತು ಚರ್ಚಿಸಲಾಯಿತು.

ರಾಷ್ಟ್ರೀಯ ಆಹಾರ ಸುರಕ್ಷತಾ ಮಿಷನ್ ಅಡಿಯಲ್ಲಿ ಕರ್ನಾಟಕ ಸರ್ಕಾರ, ಕೃಷಿ ಇಲಾಖೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳು ಕೈಗೊಂಡಂತಹ ಪ್ರಾತ್ಯಕ್ಷಿಕೆಗಳಾದ ಗುಳಿ ಪದ್ಧತಿಯಲ್ಲಿ ತೊಗರಿ ಬೇಸಾಯ, ಎಸ್.ಆರ್.ಐ. ಪದ್ಧತಿಯಲ್ಲಿ ಭತ್ತದ ಬೇಸಾಯ, ಕಿರುಧಾನ್ಯಗಳ ಬೀಜೋತ್ಪಾದನ ಘಟಕ, ದ್ವಿದಳ ಧಾನ್ಯಗಳ ಮತ್ತು ಎಣ್ಣೆ ಕಾಳುಗಳ ಪ್ರಾತ್ಯಕ್ಷಿಕಾ ಘಟಕಗಳಿಗೆ ಭೇಟಿ ನೀಡಲಾಯಿತು.

ಊ) ವಲಯ ಸಂಶೋಧನಾ ವಿಸ್ತರಣಾ ಪ್ರಾಯೋಜನೆಯ ಸಭೆಯಲ್ಲಿ ಮಂಡಿಸಿದ ಸಮಸ್ಯೆಗಳು ಮತ್ತು ಅಭಿಪ್ರಾಯಗಳು

ಬೆಳೆ ಅಭಿವೃದ್ಧಿ : ಸಿರಿ ಧಾನ್ಯ, ಆಹಾರ ಧಾನ್ಯ, ದ್ವಿದಳ ಧಾನ್ಯ ಮತ್ತು ಎಣ್ಣೆ ಕಾಳು ಬೆಳೆಗಳಲ್ಲಿ ಸಂಕರಣ / ಇನ್ನೂ ಹೆಚ್ಚು ಇಳುವರಿ ನೀಡುವ ತಳಿಗಳು ಬರಸಹಿಷ್ಣು ಕೀಟ ಮತ್ತು ರೋಗ ನಿರೋಧಕ, ಅಲ್ಪಾವಧಿಯ ತಳಿಗಳು ಅಗತ್ಯವಿದೆ.

ಬೆಳೆ ಉತ್ಪಾದನೆ : ತೊಗರಿ ನಾಟಿ ಮಾಡುವುದಕ್ಕಿಂತ ಊರುಕಾಳು ಬಿತ್ತನೆಯಲ್ಲಿ ಉತ್ತಮವಾದ ಫಲಿತಾಂಶ ಕಂಡು ಬಂದಿರುತ್ತದೆ, ಇದನ್ನು ಪರಿಶೀಸಬೇಕಾಗಿದೆ, ಕಡಿಮೆ ಖರ್ಚಿನಲ್ಲಿ ಉತ್ತಮವಾದ ಕಳೆ ನಿಯಂತ್ರಣ ಪದ್ದತಿಗಳ ಅಭಿವೃದ್ಧಿ.

ಬೆಳೆ ಸಂರಕ್ಷಣೆ : ಸೈನಿಕ ಹುಳುವಿನ ಭಾದೆ, ಬಾಳೆ, ಆಲೂಗೆಡ್ಡೆ ಹಾಗೂ ಇತರೆ ಬೆಳೆಗಳಲ್ಲೂ ಸಹ ಕಂಡು ಬಂದಿರುತ್ತದೆ. ಮೇವಿನ ಜೋಳದಲ್ಲಿ ಸೈನಿಕ ಹುಳುವಿನ ಭಾದೆ ಅತಿ ಹೆಚ್ಚಾಗಿ ಕಂಡು ಬಂದಿದ್ದು ಕೀಟ ನಾಶಕಗಳ ಬಳಕೆ ಸೂಕ್ತವಾಗಿಲ್ಲದ ಕಾರಣ ಜೈವಿಕ / ಯಾಂತ್ರಿಕ ಪದ್ದತಿ ಉತ್ತಮ ಪಡಿಸಬೇಕಾಗಿರುತ್ತದೆ. ಕ್ಯಾರೆಟ್‌ನಲ್ಲಿ ಕ್ಯಾರೆಟ್ ಜಿಗಿ ಹುಳು (ನೊಣ) ಕಂಡು ಬಂದಿರುತ್ತದೆ. ರಾಗಿ ಹಾಗೂ ಜೋಳದಲ್ಲಿ ಸೈನಿಕ ಹುಳುವಿನ ಬಾದೆ, ತೋಗರಿಯಲ್ಲಿ ಕಾಯಿಕೊರಕ ಬಾದೆ, ತೆಂಗಿನಲ್ಲಿ ಬಿಳಿ ನೊಣ, ಮಾವಿನಲ್ಲಿ ಜಿಗಿ ಹುಳು, ನೆಲಗಡಲೆಯಲ್ಲಿ

Farm trails on Maize: MAH-14-138 V/S Hema & Bio-96-81, Field Bean: HA-5 V/S HA-4, Maize: MAH-14-138 V/S Hema and Bio-9681, Fodder Oats: RO-11-1 V/S OS-6, Maize: MAH-14-138 V/S Hema and Bio-9681, Fodder Oats: RO-11-1 V/S OS-6, Field Bean: HA-5 V/S HA-4 varieties, use of diatomous earth in paddy, use of pre-emergent weedicide in ragi, use of pre-emergent weedicide in transplanted ragi, varietal trial in maize, inter crop in maize, varietal trial in black gram, varietal trial in green gram, varietal trial in sun flower, weedicide trial in cotton, varietal trial in Sugarcane, varietal trial in oat, use of diatomous earth in potato, Use of compost tea in Patato and other technologies including use of new herbicides proposed by the concerned scientists were discussed and trails were established by KSDA and KVKs.

Visited demonstration plots on dibbling method of redgram cultivation, SRI method of paddy cultivation, millets seed production plots, pulses and oil seed demonstrations organized under NFSM by KSDA and KVKs.

f) Field Problems and Feedback Presented at ZREP Meetings

Crop Improvement: Hybrid / High yielding varieties in cereals, pulses, oilseeds and millets. Drought tolerance, pest and disease resistant, short duration varieties as well as suitable varieties for by model monsoon distribution are required.

Crop Production: Dibbling method of sowing of redgram has given better results compared to transplanting method, hence assessment of technology is required. Development of better and low cost weed control methods are also required.

Crop Protection: Infestation of army worm in banana, potato and other crops. In fodder maize the use of insecticides to control army worm is not feasible and hence there is a need to standardize the bio-control and mechanized methods. Carrot leaf hopper has been identified. Army worm incidence in ragi and maize, pod borer in redgram, white flies in mango, leaf minor

ಎಲೆ ಸುರುಳಿಪೂಚಿ, ಹಿರಿಯೂರು ಭಾಗದ ಅಡಿಕೆ ತೋಟಗಳಲ್ಲಿ ಬಾಹುಲಿಗಳ ಕಾಟ ಹೆಚ್ಚಾಗಿದೆ. ತೊಗರಿಯಲ್ಲಿ ಸೊರಗು ರೋಗ ಹಾಗೂ ಬಂಜೆ ರೋಗ, ನೆಲಗಡಲೆಯಲ್ಲಿ ಸುಳಿ ಕೊಳೆಯುವ, ಬೇರು ಕೊಳೆಯುವ ಹಾಗೂ ಕಾಂಡ ಕೊಳೆಯುವ ರೋಗ ನೀರಾವರಿ ಪ್ರದೇಶದಲ್ಲಿ ಕಂಡು ಬಂದಿರುತ್ತದೆ. ಜೋಳದಲ್ಲಿ ಕಾಂಡ ಕೊಳೆಯುವ ಹುಳ, ಆಲೂಗೆಡ್ಡೆ ಎಲೆ ಅಂಗಮಾರಿರೋಗ, ಟೊಮಾಟೋ ಬೆಳೆಯಲ್ಲಿ ಫಿಜೇರಿಯಂ ಸೋರಗು ರೋಗ ಪಾಪ್ಕಾರ್ನ್‌ನಲ್ಲಿ ಸೋರಗು ರೋಗ ಕಂಡುಬಂದಿರುತ್ತದೆ. ರೋಗ ಮತ್ತು ಕೀಟಗಳ ಮುಂಜಾಗೃತ ಸಮೀಕ್ಷೆ ಬಹಳ ಅವಶ್ಯಕವಾಗಿರುತ್ತದೆ.

ಕೃಷಿ ಇಂಜಿನಿಯರಿಂಗ್ ಮತ್ತು ಸಂಸ್ಕರಣೆ : ಗುಜರಾತ್ ಬಾಯ್ಲರ್ ಬದಲಿಗೆ ಅಧಿಕ ಪ್ರಮಾಣದಲ್ಲಿ ಕೃಷಿ ತ್ಯಾಜ್ಯ, ಕಟ್ಟಿಗೆ, ಮರಮುಟ್ಟುಗಳನ್ನು ನೇರವಾಗಿ ಬಳಸಿ ಸ್ನಾನದ ನೀರು ಕಾಯಿಸುವ ಸಾಧನವನ್ನು ಸುಧಾರಿಸಬೇಕಾಗಿದೆ. ಕೂಲಿ ಕಾರ್ಮಿಕರ ಸಮಸ್ಯೆ ಇರುವುದರಿಂದ ಕಡಿಮೆ ವ್ಯಚ್ಛದ ಸಾಧನ ಅಭಿವೃದ್ಧಿ ಅಗತ್ಯ.

ಇತರೆ : ಕೃಷಿಯಲ್ಲಿ ಶುದ್ಧೀಕರಿಸಿದ ಕೊಳಚೆ ನೀರಿನ ಬಳಕೆಯ ಸಾಧಕ ಬಾದಕಗಳು. ನಗರ ತ್ಯಾಜ್ಯದಿಂದ ತಯಾರಾದ ಕಾಂಪೋಸ್ಟ್ ಬಳಕೆಯ ಪರಿಣಾಮಗಳು. ಸುಧಾರಿತ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ನಮೂದಿಸಿರುವ ಪ್ರಮುಖ ಬೆಳೆಗಳ ಬೇಸಾಯ ಕ್ರಮಗಳ ಮರುಪರಿಶೀಲನೆ / ಮರು ಮೌಲ್ಯಮಾಪನ ಪರೀಕ್ಷೆ.

4.4.11 ಕೃಷಿ ವಿಜ್ಞಾನ ಕೇಂದ್ರಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ದೇಶದಲ್ಲಿ ಕೃಷಿ ವಿಜ್ಞಾನ ಕೇಂದ್ರಗಳಿಗೆ ಜಾಲವನ್ನು ರಚಿಸಿದೆ. ತಂತ್ರಜ್ಞಾನಗಳ ಪರಿಶೀಲನೆ, ಪರಿಷ್ಕರಣೆ ಹಾಗೂ ಪ್ರಾತ್ಯಕ್ಷಿಕೆಯು ಕೃಷಿ ವಿಜ್ಞಾನ ಕೇಂದ್ರಗಳ ಉದ್ದೇಶವಾಗಿದೆ. ಕೃಷಿ ವಿಜ್ಞಾನ ಕೇಂದ್ರಗಳು, ಕ್ಷೇತ್ರ ಪರೀಕ್ಷೆ, ಮುಂಚೂಣಿ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಚಟುವಟಿಕೆಗಳನ್ನು ಕೈಗೊಳ್ಳುತ್ತದೆ. ಕೇಂದ್ರಗಳು ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು, ಸಾರ್ವಜನಿಕ, ಖಾಸಗಿ ಮತ್ತು ಸ್ವಯಂಸೇವ ವಲಯಗಳಲ್ಲಿ ಬೆಂಬಲ ಉಪಕ್ರಮಗಳಾಗಿ ಕೃಷಿ ತಂತ್ರಜ್ಞಾನಗಳ ಜ್ಞಾನ ಕೇಂದ್ರ ಮತ್ತು ಸಂಪನ್ಮೂಲ ಕೇಂದ್ರವಾಗಿಯೂ ಸಹ ಕಾರ್ಯ ನಿರ್ವಹಿಸುತ್ತವೆ. ಮುಂದೆ ಸೂಚಿಸಿದ ಉದ್ದೇಶಗಳೊಂದಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಡಿಯಲ್ಲಿ ಪ್ರಸ್ತುತ ಏಳು ಕೃಷಿ ವಿಜ್ಞಾನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಅಧ್ಯಾದೇಶಗಳು:

ಅ) ವಿವಿಧ ಬೇಸಾಯ ವ್ಯವಸ್ಥೆಗಳಡಿಯಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳುವುದು.

ಆ) ವಿವಿಧ ಬೆಳೆಗಳ ಉತ್ಪಾದನಾ ಸಾಮರ್ಥ್ಯ ಮತ್ತು ಉದ್ಯಮಗಳನ್ನು ಸ್ಥಾಪಿಸಲು ರೈತರ ಜಮೀನುಗಳಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.

ಇ) ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ, ತಂತ್ರಜ್ಞಾನ ಪರಿಶೀಲನೆ, ಪರಿಷ್ಕರಣೆ ಹಾಗೂ ಪ್ರಾತ್ಯಕ್ಷಿಕತೆಯ ಕೌಶಲ ಮತ್ತು ಅರಿವು ವೃದ್ಧಿಸಿಕೊಳ್ಳಲು ಮತ್ತು ವಿಸ್ತರಣಾ ಸಿಬ್ಬಂದಿಗೆ ಮೂಂಚೂಣಿ ಕ್ಷೇತ್ರದಲ್ಲಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಅವರನ್ನು ಪ್ರೋತ್ಸಾಹಿಸಲು ತರಬೇತಿಗಳನ್ನು ಆಯೋಜಿಸುವುದು.

in groundnut as well as bats problems in arecanut have been reported in parts of Hiriyur taluk. Wilt and sterility mosaic in redgram, bud necrosis, root rot and stem rot diseases in irrigated ground nut, stem borer in maize, leaf blight in potato, fusarium wilt in tamato and wilt in popcron were reported. A precautionary and a periodic survey on pest and disease control is essential.

Agricultural Engineering and Processing: In place of Gujarat boiler, bath water heating device has to be improvised to use the waste wood logs / poles / farm waste etc., which are in big size. Development of Labour saving and low cost implements is essential.

Others: Pros and cons of treated sewage water in agriculture, Effects of use of city compost, Revalidation / re-assessment /re- testing of recommended practices in POP at least for major crops were the problems.

4.4.11 Krishi Vigyna Kendras (KVKs)

The Indian Council of Agricultural Research (ICAR) has created network of KVKs in the country. The KVKs aims at assessment, refinement and demonstration of technologies & products. The activities of KVKs include on-farm testing, frontline demonstrations and training. The KVKs also work as resource and knowledge centre of agricultural technology for supporting initiatives of public, private and voluntary sectors for improving the agricultural economy of the district. At present seven KVKs are working under the jurisdiction of UAS-B with following mandates.

Mandates

a) Conducting on-farm testing to identify the location specificity of agricultural technologies under various farming systems.

b) Organizing frontline demonstrations to establish production potentials of various crops and enterprises on the farmers fields.

c) Organizing need based training for farmers to update their knowledge and skills in modern agricultural technologies related to technology assessment, refinement and demonstration and training of extension personnel to orient them in the frontier areas of technology development.

ಈ) ಸೂಕ್ತ ವಿಸ್ತರಣಾ ಕಾರ್ಯಕ್ರಮಗಳ ಮೂಲಕ ವಿವಿಧ ಗ್ರಾಹಕರ ಮಧ್ಯ ಸುಧಾರಿತ ಕೃಷಿ ತಂತ್ರಜ್ಞಾನಗಳಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವುದು.

ಉ) ಗುಣಮಟ್ಟದ ಬೀಜ, ಬಿತ್ತನೆ ಸಾಮಗ್ರಿ, ಜಾನುವಾರು ತಳಿಗಳು, ಪ್ರಾಣಿಜನ್ಯ ಉತ್ಪನ್ನಗಳು, ಜೈವಿಕ ಉತ್ಪನ್ನಗಳನ್ನು ಇತ್ಯಾದಿ ವಿವಿಧ ಗ್ರಾಹಕರ ಬೇಡಿಕೆಯ ಮೇರೆಗೆ ಉತ್ಪಾದಿಸಿ ವಿತರಿಸುವುದು.

ಊ) ಜಿಲ್ಲೆಯ ಕೃಷಿ ಆರ್ಥಿಕತೆಯನ್ನು ಸುಧಾರಿಸಲು ಸಾರ್ವಜನಿಕ, ಖಾಸಗಿ ಹಾಗೂ ಸ್ವಯಂ ಸೇವಾ ವಲಯಗಳಿಗೆ ಕೃಷಿ ತಂತ್ರಜ್ಞಾನ ಬೆಂಬಲ ಒದಗಿಸಲು ಸಂಪನ್ಮೂಲ ಹಾಗೂ ಜ್ಞಾನ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುದು.

ಈ ಮೇಲಿನ ಆಧ್ಯಾದೇಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಏಳು ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜಿಲ್ಲಾವಾರು ಇಂತಿವೆ: ಹಾಸನ–ಕಂದಲಿ, ತುಮಕೂರು–ಕೊನೆಹಳ್ಳಿ, ಚಾಮರಾಜನಗರ–ಹರದನಹಳ್ಳಿ, ಮಂಡ್ಯ–ವಿ.ಸಿ. ಫಾರಂ, ಬೆಂಗಳೂರು ಗ್ರಾಮೀಣ–ಹಾಡೋನಹಳ್ಳಿ, ಚಿಕ್ಕಬಳ್ಳಾಪುರ–ಚಿಂತಾಮಣಿ ಹಾಗೂ ರಾಮನಗರ–ಮಾಗಡಿ.

ಈ ಕೃಷಿ ವಿಜ್ಞಾನ ಕೇಂದ್ರಗಳು ವರದಿಯ ಅವಧಿಯಲ್ಲಿ ಈ ಮುಂದಿನ ಚಟುವಟಿಕೆಗಳನ್ನು ಕೈಗೊಂಡಿವೆ

4.4.11.1 ಕ್ಷೇತ್ರದಲ್ಲಿ ನಡೆಸಲಾದ ಪರೀಕ್ಷೆ

ವಿವಿಧ ಬೇಸಾಯ ವ್ಯವಸ್ಥೆಗಳಡಿಯಲ್ಲಿ ಸ್ಥಳ ನಿರ್ದಿಷ್ಟ ಕೃಷಿ ತಂತ್ರಜ್ಞಾನಗಳನ್ನು ಗುರುತಿಸಲು ಕ್ಷೇತ್ರದಲ್ಲಿಯೇ ಪರೀಕ್ಷೆಗಳನ್ನು ಕೈಗೊಳ್ಳಲಾಗಿತ್ತು. 2018–19ರಲ್ಲಿ, 97 ರೈತರನ್ನು ಒಳಗೊಂಡಂತೆ 26.2 ಹೆ. ಮತ್ತು 7 ಘಟಕಗಳು, ವಿವಿಧ ಶಿಸ್ತು/ಕ್ಷೇತ್ರಗಳಡಿಯಲ್ಲಿ 22 ತಂತ್ರಜ್ಞಾನಗಳನ್ನು ಪರಿಷ್ಕರಿಸಲಾಗಿದೆ. ವಿವರಗಳನ್ನು ಅನುಬಂಧ 3.11ರಲ್ಲಿ ನೀಡಲಾಗಿದೆ.

ಕ್ಷೇತ್ರದಲ್ಲಿ ನಡೆಸಲಾದ ಪರೀಕ್ಷೆಯ ಪ್ರಮುಖ ಸಂಶೋಧನೆಗಳು

ಖುಷ್ಕಿ ಬೇಸಾಯದಲ್ಲಿ ಬಹು ಬೆಳೆ ಪದ್ಧತಿಯಾದ – ಕ್ಷೇತ್ರ ಅವರೆ, ರಾಗಿ ಮತ್ತು ಎಳ್ಳು ಹೆಚ್ಚಿನ ಇಳುವರಿ ಮತ್ತು ಲಾಭ ದಾಖಲಿಸಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಕಡಲೆ ತಳಿಗಳಾದ ಜಾಕಿ–9218, ಜಿ.ಬಿ.ಎಂ–2 ತಳಿಗಳನ್ನು ಪರೀಕ್ಷಾ ತಳಿ (ಜೆ.ಜೆ–11)ಕ್ಕೆ ಹೋಲಿಸಿದಾಗ ಅಧಿಕ ಇಳುವರಿ (ಶೇ. 23.23) ದಾಖಲಿಸಿದೆ. ಉದ್ದಿನ ತಳಿಗಳಾದ ರಶ್ಮಿ–ಎಲ್.ಬಿ.ಜಿ–625, ಎಲ್.ಬಿ.ಜಿ–791 ಮತ್ತು ಕೆ.ವಿ–14–8 ಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸಲಾಯಿತು. ಎಲ್.ಬಿ.ಜಿ–791 ತಳಿಯು ಹಳದಿ ನಂಜಾಣುರೋಗ ಬಾದೆಗೆ ಸಹಿಷ್ಣುತೆ ಹೊಂದಿದ್ದು ಬೇರೆ ತಳಿಗಳಿಗಿಂತ ಅಧಿಕ ಇಳುವರಿಯನ್ನು (652 ಕೆಜಿ / ಹೆ.) ದಾಖಲಿಸಿದೆ. ಸಂಕರಣ ಮೆಣಸಿನಕಾಯಿ ತಳಿ ಕೆ.ಬಿ.ಸಿ.ಹೆಚ್–1, ಅರ್ಕಾ ಖ್ಯಾತಿ ತಳಿ ಹೋಲಿಸಿದಾಗ ಅದಕ್ಕಿಂತ ಶೇ. 14.50 ಹೆಚ್ಚಿನ ಇಳುವರಿ ನೀಡಿದೆ. ಈರುಳ್ಳಿ ಬೆಳೆಯಲ್ಲಿ ರಾಸಾಯನಿಕ ಗೊಬ್ಬರ 100:50:50 ಕಿ.ಗ್ರಾಂ/ಹೆ. ಜೊತೆಗೆ 30 ಕಿ.ಗ್ರಾಂ/ಹೆ. ಗಂಧಕ ಮತ್ತು ಅಜೋಸ್ಪೈರುಲಂ ಪಿ.ಎಸ್.ಬಿ.@5 ಕಿ.ಗ್ರಾಂ ವನ್ನು ಮಣ್ಣಿಗೆ ಸೇರಿಸುವುದರಿಂದ ಶೇ.23.39

d) Creating awareness about improved agricultural technologies among various clientels through an appropriate extension programmes.

e) Production of quality seeds, planting material, livestock breeds, animal products, bio-products etc. as per the demand and supply the same to different clienteles.

f) Work as resource and knowledge centre of agricultural technologies to support the initiatives of public, private and voluntary sectors for improving the agricultural economy of the district.

Keeping in view the above mandates, seven KVKs have been established under the jurisdiction of UAS, Bangalore in the districts *viz.,* Kandali (Hassan), Konehally (Tumakuru), Haradanahalli (Chamarajanagar), V.C.Farm (Mandya), Hadonahalli (Bengaluru Rural), Chintamani (Chickballapur) and Magadi (Ramanagara).

The following activities were carried out by seven KVKs during the period under report

4.4.11.1 On Farm Testing (OFTs)

On-Farm Testing were conducted to identify the location specificity of agricultural technologies under various farming systems. About 22 technologies were assessed under different disciplines / areas during 2018-19 involving 97 farmers in an area of 26.2 ha. and 7 units. The details are furnished in the Annexure 3.11.

Major findings of OFTs

Under rainfed conditions double cropping system – field bean, finger millet and nizer resulted in higher yields and returns. In Chamarajanagar dist. Bengal gram varieties Jaki-9218 & GBM-2 recorded higher yield (23.23 %) compared to check variety (JJ-11). Balck gram varities viz., Rashimi – LBG 625, LBG 791 and KV 14-8 were assessed. It was found that LBG 791 varitie recorded higher yield (652 kg. / ha.) in addition to resistant to yellow vine mosaic. Chilli hybrid KBCH-1 recorded higher yield (14.50%) compared to Arka Kyathi. In Onion recommended dose of fertilizer 100:50:50 kg. / ha., Sulphur 30 kg. / ha. and Azosprillum, PSP @ 5 kg mixed with Soil

ಹೆಚ್ಚಿನ ಇಳುವರಿ ಘಟಿಸಿದೆ ಹಾಗೂ ಗಡ್ಡೆಗಳನ್ನು ಹೆಚ್ಚಿನ ಕಾಲ (29 ದಿನ) ಶೇಖರಣಾ ಸಾಮರ್ಥ್ಯ ಹೊಂದಿದೆ. ಎಲೆಕೋಸಿನಲ್ಲಿ ಸಮಗ್ರ ಕೀಟ ನಿರ್ವಹಣಾ ಕ್ರಮಗಳಾದ ಕೀಟ ಆಕರ್ಷಕ ಬೆಳೆಯಾಗಿ ಸಾಸಿವೆ ಬೆಳೆ, ಮೋಹಕ ಬಲೆಗಳ ಬಳಕೆ, ಹಸಿರು ಅಂಟು ಚೀಟಿಗಳ ಬಳಕೆ ಹಾಗೂ ಸೀಮಿತವಾಗಿ ಕೀಟನಾಶಕಗಳ ಬಳಕೆಯಿಂದ ಎಲೆಕೋಸಿನ ವಜ್ರ ಬೆನ್ನಿನ ಪತಂಗವನ್ನು ಹತೋಟಿಯಿಂದ ಹೆಚ್ಚಿನ ಇಳುವರಿ (44.12 ಟ/ಹೆ.) ದಾಖಲಿಸಿದೆ. ರಾಗಿ ಬಿತ್ತನೆಯಲ್ಲಿ ಸುಧಾರಿತ ಮಾನವ ಚಾಲಿತ ಬೀಜ ಮತ್ತು ಗೊಬ್ಬರ ಬಿತ್ತನೆ ಕೂರಿಗೆ ಬಳಕೆಯಿಂದ ಬಿತ್ತನೆಯ ಶೇ. 50 ಕೂಲಿ ಆಳುಗಳ ಉಳಿತಾಯ ಹಾಗೂ ಬಿತ್ತನೆ ವೆಚ್ಚದಲ್ಲಿ ಉಳಿಸಲಾಯಿತು. ಹಿಪ್ಪುನೇರಳೆ ಮರಕಡ್ಡಿ ಪದ್ಧತಿಯಲ್ಲಿ ಅವರೆ (ಹೆಚ್.ಎ–4)ಯನ್ನು ಅಂತರಬೆಳೆಯಾಗಿ ಬೆಳೆದಾಗ 4.90 ಕ್ವಿ/ಹೆ. ಅವರೆ ಇಳುವರಿ ದಾಖಲಿಸಿದೆ, ರೇಷ್ಮೆ ಸೊಪ್ಪಿನ ಇಳುವರಿ 61.22 ಕ್ವಿ/ಹೆ. ಲಭಿಸಿತ್ತು. ಕೃಷಿ ಹೊಂಡದಲ್ಲಿ ತೆಲಪಿಯ ಮೀನು ಸಾಕಾಣಿಕೆಯಿಂದ ಹೆಚ್ಚಿನ ಇಳುವರಿ ಹಾಗೂ ಅಧಿಕ ಲಾಭ ವೆಚ್ಚ ಅನುಪಾತ ದಾಖಲಿಸಿದೆ.

4.4.11.2. ಮುಂಚೂಣಿ ಪ್ರಾತ್ಯಕ್ಷಿಕೆಗಳು

ಕೃಷಿ ವಿಜ್ಞಾನ ಕೇಂದ್ರಗಳು, ರುಜುವಾತಾದ ನೂತನ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆಗಾಗಿ ರೈತರ ಜಮೀನುಗಳಲ್ಲಿ ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಿತ್ತು. ಆಯೋಜಿಸಿದ ಮಂಚೂಣಿ ಪ್ರಾತ್ಯಕ್ಷಿಕೆಗಳ ವಿವರಗಳು ಅನುಬಂಧ 3.12ರಲ್ಲಿ ನೀಡಲಾಗಿದೆ. ಬೆಳೆ ಸುಧಾರಿಣೆ, ಉತ್ಪಾದನೆ, ಸಂರಕ್ಷಣೆ, ತೋಟಗಾರಿಕೆ, ಗೃಹ ವಿಜ್ಞಾನ, ಇಂಜಿನಿಯರಿಂಗ್, ಪ್ರಾಣಿ ವಿಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ 384.5 ಹೇ. ಪ್ರದೇಶದಲ್ಲಿ ಮತ್ತು 59 ಘಟಕಗಳಲ್ಲಿ 133 ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗಿತ್ತು. ಇದರಲ್ಲಿ 1264 ರೈತರು ಭಾಗಿಯಾಗಿದ್ದರು.

ಮಂಚೂಣಿ ಪ್ರಾತ್ಯಕ್ಷಿಕೆಗಳ ಮುಖ್ಯಾಂಶಗಳು:

1. ರಾಗಿ ತಳಿ ಎಂ.ಎಲ್–365ನ್ನು ಪರೀಕ್ಷಾ ತಳಿಗೆ ಹೋಲಿಸಿದಾಗ ಅಧಿಕ ಸಂಖ್ಯೆಯ ಟಸಲುಗಳನ್ನು (8) ಹೊಂದಿರುವದರೊಂದಿಗೆ ಶೇ.22.84 ಅಧಿಕ ಇಳುವರಿಯನ್ನು ದಾಖಲಿಸಿದೆ. ಬರ ಹಾಗೂ ಬೆಂಕಿರೋಗ ಸಹಿಷ್ಣುತೆ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಮೇವಿನ ಇಳುವರಿಯೂ ಸಹ ಉತ್ತಮವಾಗಿರುತ್ತದೆ.
2. ರಾಗಿಯ ಕೆಎಂಆರ್–340 ತಳಿಯು ಪರೀಕ್ಷಾ ತಳಿಗಿಂತ ಶೇ.14.94 ಹೆಚ್ಚಿನ ಇಳುವರಿ ನೀಡಿದೆ.
3. ತೃಣಧಾನ್ಯ ನವಣೆಯ ಡಿಹೆಚ್ಎಫ್ಟಿ–109–3 ತಳಿಯನ್ನು ಪರೀಕ್ಷಾ ತಳಿಗೆ (7.91 ಕ್ವಿ/ಹೆ.) ಹೋಲಿಸಿದಾಗ ಅಧಿಕ (9.23 ಕ್ವಿ/ಹೆ.) ಇಳುವರಿ ಲಭಿಸಿದೆ (ಶೇ. 16.68).
4. ತೊಗರಿ ಬಿ.ಆರ್.ಜಿ–5 ತಳಿಯನ್ನು 10.49 ಕ್ವಿ/ಹೆ. ಪರೀಕ್ಷಾ ತಳಿಗೆ (7.43 ಕ್ವಿ/ಹೆ.) ಹೋಲಿಸಿದಾಗ ಶೇ. 41.14 ಹೆಚ್ಚಿನ ಇಳುವರಿ ದಾಖಲಿಸಿತ್ತು, ಸೊರಗು ರೋಗ ನಿರೋಧಕ ಶಕ್ತಿಯನ್ನು ಹೊಂದಿರುತ್ತದೆ.
5. ಸಮಗ್ರ ಬೆಳೆ ನಿರ್ವಹಣೆ ಪದ್ಧತಿಯಲ್ಲಿ ಸಾಮೆ (OLM–203) ತಳಿಯು ಮತ್ತು ಮೌಲ್ಯವರ್ಧನೆಯಿಂದ ಹೆಚ್ಚಿನ ನಿವ್ವಳ ಆದಾಯ (ಶೇ. 29.58) ಫಲಿಸಿದೆ.

- ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಇವರು ವಿಶ್ವವಿದ್ಯಾನಿಲಯದ ಡಾ. ಹೆಚ್.ಬಿ.ಮಹೇಶ್, ಸಹಾಯಕ ಪ್ರಾಧ್ಯಾಪಕರು (ಅನುವಂಶೀಯ ಮತ್ತು ಸಸ್ಯ ಅಭಿವೃದ್ಧಿ) ಇವರ ಡಾಕ್ಟೋರಲ್ ಪ್ರಬಂಧಕ್ಕೆ 'ಜವಹರಲಾಲ್ ನೆಹರು ಪ್ರಶಸ್ತಿ' ಯನ್ನು ದಿನಾಂಕ 16.07.2018 ರಂದು ನೀಡಿ ಗೌರವಿಸಿದೆ

- ಡಾ. ರಾಧ, ಬಿ.ಎನ್, ಸಹಾಯಕ ಪ್ರಾಧ್ಯಾಪಕರು, ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ, ರೇಷ್ಮೆ ಮಹಾವಿದ್ಯಾಲಯ, ಚಿಂತಾಮಣಿ ಇವರಿಗೆ ಜಾಗತಿಕ ಆರ್ಥಿಕ ಕಾರ್ಯಕ್ರಮ ಸಂಶೋಧನಾ ಸಂಸ್ಥೆ, ಚೆನ್ನೈ ಇವರಿಂದ ಭಾರತ ರತ್ನ ಡಾ. ಆಬ್ದುಲ್ ಖಲಾಮ್ ಚಿನ್ನದ ಪದಕವನ್ನು 2018ರ ಜುಲೈ 28ರಂದು ನೀಡಿ ಸನ್ಮಾನಿಸಲಾಯಿತು.

- ಡಾ. ಪಿ. ವೆಂಕಟೇಶ್ ಮೂರ್ತಿ, ಪ್ರಾಧ್ಯಾಪಕರು, ತೋಟಗಾರಿಕೆ ವಿಭಾಗ, ಜಿಕೆವಿಕೆ ಇವರು ದಿನಾಂಕ 01.08.2018 ರಂದು ಮಹಾರಾಷ್ಟ್ರದ ಪುಣೆಯ ಸಂಶೋಧನೆ ಮತ್ತು ಜೀವ ವಿಜ್ಞಾನದಲ್ಲಿ ಪ್ರಗತಿ ಎಂಬ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ 2018ರ ಪರಿಸರ ಪ್ರಶಸ್ತಿ ಗಳಿಸಿದ್ದಾರೆ.

- ಡಾ. ಉಷಾ ರವೀಂದ್ರ, ಸಹ ಪ್ರಾಧ್ಯಾಪಕರು, ಆಹಾರ ವಿಜ್ಞಾನ ಮತ್ತು ಪೋಷಣೆ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ ಇವರು ಬೆಂಗಳೂರು ಹೆಚ್.ಬಿ.ಆರ್. ಲೇಔಟಿನ ಇನ್ನರ್ ವೀಲ್ಹ್ ಕಬ್ಲ್ಸನವರಿಂದ ಶಿಕ್ಷಕರ ದಿನದಂದು ಪ್ರಶಂಸನಾ ಪ್ರಮಾಣಪತ್ರ ಪಡೆದರು.

Eastern and un reached Regions problems, Prospects and policies" held during 3rd and 4th February, 2019 at ICAR-Research complex, Manipur centre, Lalmphelpat, Imphal, India.

- Students of Food Science & Nutrition, CoA, Hassan presented the Best Poster in the workshop on 'Nutrition Security for Planetary Health and Cake & Bakery Products' held on 21st February 2019, at UAS, Bangalore.

- Dr. Netravati Hiremath received Young Scientist Award for paper presented on "Phytic acid to iron molar ratio in finger millet [Eleusine coracana (L)]" in Women Science Congress held during the year 2018.

5.5 Recognitions /Awards Conferred on Faculty & Students

Many teachers have been bestowed with awards and were recognised for their contribution in the field of teaching/research/extension. The details are given below :

- Dr. H.B. Mahesh, Assistant Professor of G&PB was bestowed with 'Jawaharlal Nehru Award' for his outstanding Doctoral Research in Crop Science by the ICAR on 16th July, 2018

- Dr. Radha B.N, Assistant Professor of Seed Science & Technology, College of Sericulture, Chintamani was awarded Bharat Rathna Dr. Abdul Kalam Gold Medal Award at National Unity Conference by Global Economic programme Research association, Chennai on 28.07.2018

- Dr. P. Venkatesha Murthy, Prof. of Horticulture, College of Agriculture, GKVK, has been awarded with the ENVIRONMENTALIST AWARD 2018 at International Conference on Research intervention and advancements in life science at Pune, Maharashtra, India on August 01, 2018.

- Dr. Usha Ravindra, Associate Professor of Food Science & Nutrition, CoA, GKVK received a Certificate of appreciation on Teachers Day from Inner Wheel Club of HBR Layout, Bangalore.

- ಕರ್ನಾಟಕ ಸರ್ಕಾರದ ಅತ್ಯುನ್ನತ 'ಸರ್ ಸಿ.ವಿ.ರಾಮನ್ ರಾಜ್ಯ ಪ್ರಶಸ್ತಿ'ಯನ್ನು ಬೆಳೆ ಶರೀರ ಕ್ರಿಯಾಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಎನ್. ನಟರಾಜ್ ಕರಬ ಅವರಿಗೆ ದಿನಾಂಕ 06.08.2018 ರಂದು ಪ್ರಶಸ್ತಿ ನೀಡಿ ಗೌರವಿಸಲಾಗಿದೆ

- Dr. N. Nataraja Karaba, Professor of Crop Physiology was awarded 'Sir C.V. Raman State Award' instituted by GoK on 6th August, 2018

- ಡಾ. ಹೆಚ್.ಸಿ. ಪ್ರಕಾಶ್, ಪ್ರಾಧ್ಯಾಪಕರು, ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ ಇವರು ದಿನಾಂಕ 18.09.2018 ರಂದು 2018ನೇ ಸಾಲಿನ ವಲಯ ಪ್ರಶಸ್ತಿ ಸ್ಪರ್ಧೆಯಲ್ಲಿ ಐ.ಎಸ್.ಎಸ್.ಎಸ್. ಅತ್ಯುತ್ತಮ ಡಾಕ್ಟೊರಲ್ ಸಂಶೋಧನಾ ಪ್ರಶಸ್ತಿಗೆ ಭಾಜನರಾದರು.

- Dr. H.C.Prakasha, Professor of Soil Science and Agricultural Chemistry, College of Agriculture, GKVK received ISSS Best Doctoral Research Award and Zonal Award Contest – 2018 on 18.9.2018.

- ಹೈನುಗಾರಿಕೆ ವಿಭಾಗಕ್ಕೆ ಕೊಟ್ಟ ಕೊಡುಗೆಯನ್ನು ಗುರುತಿಸಿ ಡಾ. ಸುರೇಶ್. ಕೆ. ಬಿ. ರವರಿಗೆ ಅಂತರ್ ರಾಷ್ಟ್ರೀಯ ಗ್ರೀಸಾಸ್–2018 ಆರ್.ಎ.ಆರ್.ಐ. ದುರ್ಗಾಪುರ, ಜೈಪುರದಲ್ಲಿ 2018ರ ಅಕ್ಟೋಬರ್ 30ರಂದು ನಡೆದ ಸಮ್ಮೇಳನದಲ್ಲಿ "ಶ್ರೇಷ್ಠ ವಿಜ್ಞಾನಿ" ಪ್ರಶಸ್ತಿ ಲಭಿಸಿದೆ.

- Dr. Suresha, K.B. has been honored in recognition of his Excellence in Research in the field of Dairy Technology at International Conference on GRISAAS-2018 held at RARI Durgapura Jaipur on 30th October, 2018

- ಡಾ. ಕೆ.ಪಿ. ರಘುಪ್ರಸಾದ್, ಪ್ರಾಧ್ಯಾಪಕರು, ಕೃಷಿ ವಿಸ್ತರಣಾ ವಿಭಾಗ ಮತ್ತು ಡಾ. ಆರ್. ಮುತ್ತುರಾಜ್, ಸಹಾಯಕ ಪ್ರಾಧ್ಯಾಪಕರು, ಕೃಷಿ ಸೂಕ್ಷ್ಮಜೀವಿಶಾಸ್ತ್ರ ವಿಭಾಗ, ಕೃಷಿ ಕಾಲೇಜು, ಜಿಕೆವಿಕೆ; ಡಾ. ಕೆ.ಎಂ. ರಾಜಣ್ಣ, ತೋಟಗಾರಿಕೆಯ ಪ್ರಾಧ್ಯಾಪಕರು ಮತ್ತು ಡಾ. ವಿ. ವೆಂಕಟಾಚಲಪತಿ, ಬೇಸಾಯ ಶಾಸ್ತ್ರದ ಸಹಾಯಕ ಪ್ರಾಧ್ಯಾಪಕರು, ರೇಷ್ಮೆ ಮಹಾವಿದ್ಯಾಲಯ, ಚಿಂತಾಮಣಿ ಇವರುಗಳಿಗೆ 2017–18ರ ಐ.ಸಿ.ಎ.ಆರ್. ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ವಿಶ್ವವಿದ್ಯಾನಿಲಯವು ದಿನಾಂಕ 04.10.2018 ರಂದು ನಡೆದ 53ನೇ ಸಂಸ್ಥಾಪನಾ ದಿನಾಚರಣೆಯಂದು ನೀಡಿ ಗೌರವಿಸಲಾಗಿದೆ

- K.P. Raghuprasad, Professor (Agril. Extn.), Dr. R. Mutturaju, Assistant Professor (Agril. Microbiology), CoA, GKVK; Dr. K.M. Rajanna, Professor (Horticulture) and Dr. V. Venkatachalapathy, Assistant Professor (Agronomy), CoS, Chintamani were conferred with ICAR Best Teacher Award for 2017-18 during 53rd Foundation Day of UAS-B held on 4th October, 2018.

- ದಿನಾಂಕ 04.10.2018 ರಂದು ನಡೆದ 53ನೇ ಸಂಸ್ಥಾಪನಾ ದಿನಾಚರಣೆಯಂದು ಡಾ. ಎನ್.ಬಿ. ಪ್ರಕಾಶ್, ಪ್ರಾಧ್ಯಾಪಕರು, ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ಜಿಕೆವಿಕೆ ಇವರಿಗೆ ಡಾ. ಕಾಳಯ್ಯ ಕೃಷ್ಣಮೂರ್ತಿ ರಾಷ್ಟ್ರೀಯ ಸಂಶೋದನಾ ಪ್ರಶಸ್ತಿ ಮತ್ತು ಜುವಾರಿ ಅಗ್ರೊ ಇಂಡಸ್ಟ್ರೀಸ್ ರವರ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಯನ್ನು ಡಾ. ಸಿ.ಎಂ. ಸವಿತ, ಸಹ ಸಂಪಾದಕರು, ಸಂವಹನಾ ಕೇಂದ್ರ, ಜಿ,ಕೆ,ವಿ,ಕೆ ಇವರಿಗೆ ನೀಡಿ ಗೌರವಿಸಲಾಗಿದೆ

- Dr. N.B. Prakash, Professor of SS & AC was presented with 'Dr. Kalaiah Krishna Murthy National Research Award'. M/S Zuari Aro-Industries Limited 'Best Extension Worker Award' was bestowed to Dr. C.M. Savitha, Associate Editor during 53rd Foundation Day of UAS-B held on 4th October, 2018.

- ವಿಶ್ವವಿದ್ಯಾನಿಲಯದ ಗ್ರಂಥಪಾಲಕರಾದ ಡಾ. ದೇವರಾಜ್ ಇವರಿಗೆ ಐ.ಆರ್.ಡಿ.ಪಿ. ಗ್ರೂಪ್‌ನ 'ರಾಷ್ಟ್ರೀಯ ಅತ್ಯುತ್ತಮ ಗ್ರಂಥಪಾಲಕ ಪ್ರಶಸ್ತಿಯನ್ನು ದಿನಾಂಕ 28.10.2018 ರಂದು ನೀಡಲಾಗಿದೆ

- Dr. Devaraj, Librarian was bestowed with 'Best Librarian National Award' by the IRDP Group of Journals, Chennai on 28th October, 2018.

- ಡಾ. ಪಿ. ಕೆ ಬಸವರಾಜ, ಪ್ರಾಧ್ಯಾಪಕರು ಇವರಿಗೆ ಕೃಷಿ ವಿಶ್ವ ವಿದ್ಯಾನಿಲಯದ – ಹಳೆ ವಿದ್ಯಾರ್ಥಿ ಸಂಘದಿಂದ "ಡಾ. ದ್ವಾರಕಿನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಯನ್ನು 2018ರ ನವೆಂಬರ್ 9ರಂದು ನೀಡಿ ಗೌರವಿಸಲಾಗಿದೆ.

- Dr. P. K. Basavaraja has been awarded 'Dr. R. Dwarakinath Outstanding Extension Professional Award' at UAS, Alumni Association, Hebbal, Bangalore on 9th November, 2018

- ದಿನಾಂಕ 21–24 ನವಂಬರ್, 2018 ರಂದು ಮಧ್ಯಪ್ರದೇಶದ ಜಬ್ಬಲ್ಪುರದಲ್ಲಿ ನಡೆದ ಇಂಡಿಯನ್ ಸೊಸೈಟಿ ಆಫ್ ವೀಡ್ ಸೈನ್ಸ್ ಗೋಲ್ಡನ್ ಜುಬಿಲಿ ಇಂಟರ್ನ್ಯಾಷನಲ್ ಕಾನ್ಫರೆನ್ಸ್‌ನಲ್ಲಿ ವಿಶ್ವವಿದ್ಯಾನಿಲಯದ ಬೆಳೆ ಶಾಸ್ತ್ರದ ಮುಖ್ಯಸ್ಥರಾದ ಡಾ. ಜಿ.ಎನ್. ಧನಪಾಲ್‌ರವರಿಗೆ 'ಫೆಲೋ ಆಫ್ ಇಂಡಿಯನ್ ಸೊಸೈಟಿ ಆಫ್ ವೀಡ್ ಸೈನ್ಸ್ ಪ್ರಶಸ್ತಿ' ಯನ್ನು ನೀಡಿ ಗೌರವಿಸಲಾಗಿದೆ

- Dr. G.N. Dhanapal, Professor and University Head (Agronomy) was conferred with 'Fellow of Indian Society of Weed Science' award during Indian Society of Weed Science Golden Jubilee International Conference held from 21-24 November, 2018 at Jabalpur, Madhya Pradesh

- ಡಾ. ಎಂ.ಕೆ. ಪ್ರಸನ್ನಕುಮಾರ್, ಸಹ ಪ್ರಾಧ್ಯಾಪಕರು, ಸಸ್ಯರೋಗಶಾಸ್ತ್ರ ವಿಭಾಗ, ಕೃಷಿ ಕಾಲೇಜು, ಜಿಕೆವಿಕೆ ಇವರು ಸಸ್ಯರೋಗಶಧಾಸ್ತ್ರ ಕ್ಷೇತ್ರದಲ್ಲಿ ತಮ್ಮ ಗಮನಾರ್ಹ ಸಂಶೋಧನಾ ಕೊಡುಗೆಗಾಗಿ 2018ರ ನವೆಂಬರ್‌ನಲ್ಲಿ ಶ್ರೀ ವಿ.ಪಿ. ಗೋಖಲೆ ಪ್ರಶಸ್ತಿ–2018 ಪಡೆದಿರುತ್ತಾರೆ.

- ಡಾ. ಕೆ.ಆರ್. ಶ್ರೀನಿವಾಸ್, ವಿಜ್ಞಾನಿ (ಸಸ್ಯಸಂರಕ್ಷಣೆ), ಕೆವಿಕೆ, ಕೊನೆಹಳ್ಳಿ ಇವರಿಗೆ ಕೃಷಿಮೇಳ–2018ರಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಡಾ. ಆರ್ ದ್ವಾರಕಿನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

- ಡಾ. ನಟರಾಜ್ ಕರಬ, ಎನ್., ಪ್ರಾಧ್ಯಾಪಕರು, ಬೆಳೆ ಶರೀರ ಕ್ರಿಯಾಶಾಸ್ತ್ರ ಶಾಸ್ತ್ರ ವಿಭಾಗ ಇವರು ದಿನಾಂಕ 24.11.2018 ರಂದು ಕರ್ನಾಟಕ ಸರ್ಕಾರದಿಂದ 2017ರ ಸಾಲಿನ ಸಂಶೋಧನಾ ಪ್ರಕಟಣೆಗಾಗಿ ಎ.ಆರ್.ಪಿ. ಪ್ರಶಸ್ತಿಯನ್ನು ಪಡೆದಿರುವುದರ ಜೊತೆಗೆ ಸಸ್ಯ ಶರೀರ ಕ್ರಿಯಾಶಾಸ್ತ್ರ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ 2018ನೇ ಸಾಲಿಗೆ ಜೆ.ಸಿ. ಬೋಸ್– 2018 ಪ್ರಶಸ್ತಿಯನ್ನು ದಿನಾಂಕ 02.12.2018 ರಂದು ನವದೆಹಲಿಯಲ್ಲಿ ನಡೆದ ಭಾರತೀಯ ಸಸ್ಯ ಶರೀರಕ್ರಿಯಾಶಾಸ್ತ್ರ ಸಮಾವೇಶದಲ್ಲಿ ಪಡೆದಿರುತ್ತಾರೆ

- ಸಸ್ಯ ರೋಗಶಾಸ್ತ್ರ ವಿಜ್ಞಾನಕ್ಕೆ ನೀಡಿದ ಕೊಡುಗೆಯನ್ನು ಗುರುತಿಸಿ ಡಾ. ಎನ್. ಜಿ. ರವಿಚಂದ್ರ, ಜಂತುಹುಳು ತಜ್ಞ ಇವರಿಗೆ ನವದೆಹಲಿಯ ರಾಷ್ಟ್ರೀಯ ಪರಿಸರ ವಿಜ್ಞಾನ ಅಕಾಡೆಮಿಯವರು, 2018ರ ಡಿಸೆಂಬರ್‌ನಲ್ಲಿ ಎನ್.ಇ.ಎಸ್.ಎ. **"ಶ್ರೇಷ್ಠ ವಿಜ್ಞಾನಿ"** ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

- ದಿನಾಂಕ 5–7 ಡಿಸೆಂಬರ್, 2018 ರಂದು ಕೊಲ್ಕತ್ತದ ಹೈನು ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯದಲ್ಲಿ ಭಾರತೀಯ ವಿಸ್ತರಣಾ ಶಿಕ್ಷಣ ಸಂಘದವರು ಆಯೋಜಿಸಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ವಿಶ್ವವಿದ್ಯಾನಿಲಯದ ವಿಸ್ತರಣಾ ನಿರ್ದೇಶಕರಾದ ಡಾ. ಎಂ.ಎಸ್. ನಟರಾಜುರವರಿಗೆ 'ಜೀವಮಾನ ಸಾಧನೆಯ ಪ್ರಶಸ್ತಿ' ಯನ್ನು ನೀಡಿ ಗೌರವಿಸಲಾಗಿದೆ. ಇದೇ ಸಮ್ಮೇಳನದಲ್ಲಿ ಡಾ॥ ಕೆ. ವೆಂಕಟರಂಗನಾಯಕ್, ಪ್ರಾಧ್ಯಾಪಕರು, ದೂರ ಶಿಕ್ಷಣ ಘಟಕ, ಹೆಬ್ಬಾಳ ಇವರಿಗೆ ವಿಸ್ತರಣಾ ಸಹೋದ್ಯೋಗಿ ಪ್ರಶಸ್ತಿ –2018 ಯನ್ನು ನೀಡಿ ಗೌರವಿಸಲಾಗಿದೆ. ಡಾ॥ ಹೆಚ್.ಕೆ. ಪಂಕಜ, ಸಹಾಯಕ ಪ್ರಾಧ್ಯಾಪಕರು, ವಿಸ್ತರಣಾ ನಿರ್ದೇಶನಾಲಯ ಇವರಿಗೆ ಯುವ ವಿಜ್ಞಾನಿ ಪ್ರಶಸ್ತಿಯನ್ನು ಸಮ್ಮೇಳನದಲ್ಲಿ ನೀಡಿ ಗೌರವಿಸಲಾಗಿದೆ. ಡಾ. ಎನ್. ಮಂಜುಳ ಸಹಾಯಕ ಪ್ರಾಧ್ಯಾಪಕರು, ಕೃಷಿ ಸಂಶೋಧನಾ ಕೇಂದ್ರ, ಬಲಜಿಗಪಡೆ, ಚಿಕ್ಕಬಳ್ಳಾಪುರ ಇವರಿಗೆ 'ಅತ್ಯುತ್ತಮ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

- ದಿನಾಂಕ 21.02.2019 ರಂದು ಜಿಕೆವಿಕೆಯ ಬೇಸಾಯ ಶಾಸ್ತ್ರ ವಿಭಾಗದ ಡಾ. ಎಂ. ಆರ್. ಆನಂದ್, ಸಹ ಪ್ರಾಧ್ಯಾಪಕರು 'ಸುಸ್ಥಿರ ಪರಿಸರಕ್ಕಾಗಿ ಜೀವ ವಿಜ್ಞಾನದಲ್ಲಿ ನಾವೀನ್ಯತೆ' ಬಗ್ಗೆ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಯುವ ವಿಜ್ಞಾನಿ ಪ್ರಶಸ್ತಿಯನ್ನು ಪಡೆದರು.

- Dr. M.K. Prasanna Kumar, Associate Professor of Pl. Pathology, College of Agriculture, GKVK received Shri. VP Gokhale Award-2018 in recognition of significant research contribution in the area of *PhytopathologyI* during November, 2018

- Dr. K.R. Srinivasa, Scientist (Plant Protection), KVK, Konehalli was conferred with Dr. R. Dwarkinath Best Extension Worker award during Krishimela-2018 held at UAS, GKVK, Bengaluru

- Dr. Nataraja Karaba, N., Professor of Crop Physiology, College of Agriculture, GKVK was awarded ARP award for the year 2017 for Research Publications by Government of Karnataka on 24.11.2018. J. C. Bose Award-2018 was also presented to him at International Conference on Plant Physiology by Indian Society of Plant Physiology, New Delhi on 2.12.2018.

- Dr. N. G. Ravichandra, Nematologist received 'NESA Eminent Scientist Award' during Dec. 2018 from National Environment Science Academy, New Delhi for his outstanding contributions in the field of Plant Pathology.

- Dr. M.S. Nataraju, Director of Extension was conferred with the 'Life Time Achievement Award' for his contribution in the field of Agricultural Extension by the Indian Society of Extension Education (ISEE), New Delhi in the ISEE National Seminar held at West Bengal University of Animal & Fisheries Sciences (WBUAFS), Kolkata, from 5-7 December 2018. Dr. K.Venkataranga Naika, Professor, DEU, Hebbal received Extension Fellow Award during the National Seminar. Dr. H.K. Pankaja, Assistant Professor, Technical Officer, Office of Directorate of Extension was also conferred with Young Scientist Award during the National Seminar. Dr. N. Manjula, Assistant Professor, ARS Balajigapade also received Best KVK Scientist Award at National Seminar.

- Young Scientist Award was bestowed to Dr. M.R. Anand, Assistant Professor of Agronomy, College of Agriculture, GKVK during National conference on Innovations in Life Sciences for Sustainable Environment held on Feb. 21, 2019.

- ಬೆಳೆ ಶರೀರ ಕ್ರಿಯಾಶಾಸ್ತ್ರದ ಪಾಧ್ಯಾಪಕರಾದ ಡಾ. ಶೇಷಶಾಯಿ ರವರಿಗೆ ಭಾರತದ ರಾಷ್ಟ್ರೀಯ ಅಕಾಡೆಮಿಯ ಆಫ್ ವಿಜ್ಞಾನಗಳ ಫೆಲೋಷಿಪ್ ಪಡೆದಿರುತ್ತಾರೆ

- ದಿನಾಂಕ 15–16 ಫೆಬ್ರವರಿ, 2019 ರಂದು ಮಧ್ಯಪ್ರದೇಶದ ಜಬ್ಬಲಪುರದ ಜವಹರ್‌ಲಾಲ್ ನೆಹರು ಕೃಷಿ ವಿಶ್ವವಿದ್ಯಾಲಯ ದಲ್ಲಿ ನಡೆದ 4ನೇ ರಾಷ್ಟ್ರೀಯ ಯುವ ಸಮಾವೇಶದಲ್ಲಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ಅವರಿಗೆ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಕೊಡುಗೆಗಾಗಿ ಅತ್ಯುನ್ನತ 'ಹರಿತ್ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ

- ನವದೆಹಲಿಯ ಶ್ರೀ ಓಂ ಪ್ರಕಾಷ್ ಬಾಸಿನ್ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರತಿಷ್ಠಾನದವರು ವಿಶ್ವವಿದ್ಯಾನಿಲಯದ ಎಮಿರೈಟಿಸ್ ಪ್ರಾಧ್ಯಾಪಕರಾದ ಡಾ. ಎಂ. ಉದಯಕುಮಾರ್ ಅವರಿಗೆ 'ಶ್ರೀ ಓಂ ಪ್ರಕಾಷ್ ಬಾಸಿನ್ ಪ್ರಶಸ್ತಿ–2018' ಯನ್ನು ನೀಡಿ ಗೌರವಿಸಿದ್ದಾರೆ

- ದಿನಾಂಕ 15–16ರ ಫೆಬ್ರವರಿ, 2019 ರಂದು ಮಧ್ಯಪ್ರದೇಶದ ಜಬ್ಬಲಪುರದ ಜವಹರ್‌ಲಾಲ್ ನೆಹರು ಕೃಷಿ ವಿಶ್ವವಿದ್ಯಾಲಯ ದಲ್ಲಿ ನಡೆದ 4ನೇ ರಾಷ್ಟ್ರೀಯ ಯುವ ಸಮಾವೇಶದಲ್ಲಿ ವಿಶ್ವವಿದ್ಯಾನಿಲಯದ ಅಂತಿಮ ವರ್ಷದ ಪಿಎಚ್.ಡಿ. ವಿದ್ಯಾರ್ಥಿಯಾದ ಪ್ರವೀಣ್‌ರವರಿಗೆ ಅವರ ಕೊಡುಗೆಗಾಗಿ 'ಹರಿತ್ ಪುರಸ್ಕಾರ್' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

- ಬನಾರಸ್ ಹಿಂದು ವಿಶ್ವವಿದ್ಯಾನಿಲಯದಲ್ಲಿ 21ನೇ ಫೆಬ್ರವರಿ, 2019 ರಂದು ನಡೆದ 9ನೇ ರಾಷ್ಟ್ರೀಯ ಬೀಜ ಕಾಂಗ್ರೆಸ್‌ನಲ್ಲಿ ಪಿಎಚ್.ಡಿ.ಯ ಅಂತಿಮ ವರ್ಷದ ವಿದ್ಯಾರ್ಥಿನಿ ಶ್ರೀಮತಿ ಕೆ.ಡಿ. ರಜತರವರಿಗೆ 'ಸಂಕರಣ ಟೊಮ್ಯಾಟೊ ಬೀಜೋತ್ಪಾದನೆಗೆ ಪೋಷಕಾಂಶ ದ್ರಾವಣ ಹಾಗೂ ರಸಸಾರ ಮಾನಕೀಕರಣ' ಪ್ರಭಂದ ಮಂಡನೆಗೆ ಅತ್ಯುತ್ತಮ ಮೌಖಿಕ ನಿರೂಪಣೆ ಪ್ರಶಸ್ತಿ ದೊರಕಿರುತ್ತದೆ
- ಡಾ. ಎಸ್. ರಾಘವೇಂದ್ರ, ಸಹಾಯಕ ಪ್ರಾಧ್ಯಾಪಕರು ಅರಣ್ಯ ವಿಭಾಗ, ಕೃಷಿ ಮಹಾವಿದ್ಯಾಲಯ, ಹಾಸನ ಇವರಿಗೆ 'ಕೃಷಿಯಲ್ಲಿ ನವೋದ್ಯಮ ಪ್ರಾರಂಭ'ಕ್ಕೆ ಮಾರ್ಗದರ್ಶಿಯಾಗಿ ನೀಡಿದ ಸೇವೆಗೆ 2018–19 ನೇ ಸಾಲಿನ ಅತ್ಯುತ್ತಮ ದ್ವಿತೀಯ ಪ್ರಶಸ್ತಿ ಲಭಿಸಿದೆ.
- ಡಾ॥ ವಿ.ಎಲ್. ಮಧು ಪ್ರಸಾದ್, ಮುಖ್ಯ ಬೋಧಕರು, ರೈತ ತರಬೇತಿ ಸಂಸ್ಥೆ, ಜಿಕೆವಿಕೆ ಇವರಿಗೆ ಅತ್ಯುತ್ತಮ ವಿಜ್ಞಾನಿ–2018 ಪ್ರಶಸ್ತಿಯನ್ನು ಉಷ್ಣವಲಯದ ಕೃಷಿ ಸಮಾಜ, ನವದೆಹಲಿ ಇವರು ನೀಡಿ ಗೌರವಿಸಿದ್ದಾರೆ.
- ಡಾ. ನೇತ್ರಾವತಿ ಹಿರೇಮಠ, ಸಹ ಸಂಶೋಧಕರು ಇವರು 'ಜೀವನೋಪಾಯ ಮತ್ತು ಆಹಾರೆ ಸುರಕ್ಷತೆ' ಸಮ್ಮೇಳನದಲ್ಲಿ "ವಿವಿಧ ರಾಗಿ ಪ್ರಜಜನದ್ರವ್ಯದಲ್ಲಿರುವ ಸೂಕ್ಷ್ಮ ಪೋಷಕಾಂಶಗಳ

- The National Academy of Sciences, India (NASI) Fellowship was conferred to Prof. Sheshshayee, Professor of Crop Physiology.

- Dr. S. Rajendra Prasad, Hon'ble Vice-Chancellor was conferred with 'Harit Ratna Award' on the occasion of 4th National Youth Convention organised by AIASA, ICAR and JNKVV on 15th & 16th February, 2019 at Jawaharlal Nehru Krishi Vishwa Vidyalaya, Jabalpur, Madhya Pradesh for his outstanding contribution in curricular and non-curricular activities.

- Dr. M. Udayakumar, Emeritus Professor was conferred with prestigious award 'Shri Om Prakash Bhasin Award 2018' in the field of Agricultural and Allied Sciences by the Shri Om Prakash Bhasin Foundation for Science & Technology, New Delhi.

- Mr. Praveen, Ph.D. Scholar (Crop Physiology) was bestowed with 'Harit Puraskar' for his contribution in AIASA awareness and outreach activities at various campuses during the 4th National Youth Convention organised by AIASA, ICAR and JNKVV on 15th & 16th February, 2019 at Jawaharlal Nehru Krishi Vishwa Vidyalaya, Jabalpur, Madhya Pradesh.

- Mrs. Rajatha, K.D., III Ph.D. student of Seed Science and Technology has been awarded Best Oral Presentation award for "Standardization of Nutrient Solution and pH for hybrid Seed Production of Tomato" in the 9th National Seed Congress held on 21st February, 2019 at Banaras Hindu University, Varanasi.

- Dr. Raghavendra S. Assistant Professor of Farm Forestry, CoA, Hassan received 'Second Best Award' for serving as mentor for six 'Start- up Innovations in Agriculture' during the year

- Dr. V.L. Madhu Prasad, Chief Instructor, FTI, GKVK received Outstanding Scientist Award – 2018 by The Society of Tropical Agriculture, New Delhi.

- Dr. Netravati Hiremath received Young Scientist Award for thesis work on "Evaluation of finger millet [Eleusine coracana (L)] germplasm for

ಹಾಗೂ ಕಬ್ಬಿಣಾಂಶದ ಜೈವಿಕ ಲಭ್ಯತೆಯ ಮೌಲ್ಯಮಾಪನ" ಪ್ರಬಂಧ ಮಂಡನೆಗೆ ಯುವ ವಿಜ್ಞಾನಿ ಪ್ರಶಸ್ತಿ ಲಭಿಸಿದೆ

- ಹದಿನಾಲ್ಕನೇ ಕನ್ನಡ ವಿಜ್ಞಾನ ಸಮ್ಮೇಳನದಲ್ಲಿ ಶ್ರೀಮತಿ ಟಿ. ಜಯಂತಿರವರು ತಮ್ಮ ಪೋಸ್ಟ್ ಡಾಕ್ಟರೋಲ್ ಸಂಶೋಧನೆಯನ್ನು ಮಂಡಿಸಿ ಮಹಿಳಾ ವಿಜ್ಞಾನಿ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

5.6 ಸರ್ಕಾರದ ಮತ್ತು ಇತರ ಸಂಸ್ಥೆಗಳಿಗೆ ಅಧ್ಯಾಪಕರ ನಾಮ ನಿರ್ದೇಶನಗಳು

ಸರ್ಕಾರ ಮತ್ತು ಇತರ ಸಂಸ್ಥೆಗಳಿಗೆ ಅಧ್ಯಾಪಕರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ವಿವರಗಳು ಕೆಳಗಿನಂತಿವೆ :

- ಡಾ. ಎನ್.ಜಿ. ರವಿಚಂದ್ರ, ಪ್ರಾಧ್ಯಾಪಕರು ಮತ್ತು ಮುಖ್ಯಸರು, ಜಂತುಹುಳ–ಅಖಿಲ ಭಾರತ ಸುಸಂಘಟಿತ ಸಂಶೋಧನಾ ಪ್ರಾಯೋಜನೆ ಇವರು ನವದೆಹಲಿಯ ಭಾರತೀಯ ಕಾಫಿ ಸಂಶೋಧನಾ ಸಂಸ್ಥೆ ಪ್ರಕಟಿಸುವ ಪ್ರತಿಷ್ಠಿತ ಭಾರತೀಯ ಫೈಟೋಪೆಥಾಲಜಿ ಪತ್ರಿಕೆಗೆ ಸಂಪಾದಕರಾಗಿ ನಾಮನಿರ್ದೇಶನಗೊಂಡಿರುತ್ತಾರೆ.
- ಬೆಂಗಳೂರಿನ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಸಂಶೋಧನಾ ಪರಾಮರ್ಶನ ಸಮಿತಿಯು ಡಾ. ಆರ್. ಸಿ. ಗೌಡ ರವರನ್ನು ಪರಾಮರ್ಶನ ಸಮಿತಿಯ ಅಧ್ಯಕ್ಷರನ್ನಾಗಿ ಎರಡು ವರ್ಷದ ಅವಧಿಗೆ ನೇಮಿಸಿದ್ದಾರೆ.
- ಡಾ. ನಿರಂಜನ ಮೂರ್ತಿ, ಪ್ರಾದ್ಯಾಪಕರು, ಎ.ಐ.ಸಿ.ಆರ್.ಪಿ (ಸಂಭಾವ್ಯ ಬೆಳೆಗಳು) ಇವರನ್ನು ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ & ಅಭಿವೃದ್ಧಿ ಸಂಸ್ಥೆಯ ಸಂಶೋಧನಾ ಪರಾಮರ್ಶನ ಪರಿಷತ್‌ಗೆ ಸದಸ್ಯರಾಗಿ 3 ವರ್ಷಗಳ ಅವಧಿಗೆ ಹಾಗೂ ಕೇಂದ್ರ ರೇಷ್ಮೆ ಮಂಡಳಿಯ "ಅಖಿಲ ಭಾರತ ಸಂಯೋಜಿತ ಹಿಪ್ಪುನೇರಳೆ ಪ್ರಾಯೋಗಿಕಗಳಲ್ಲಿ ಹಿಪ್ಪುನೇರಳೆ ತಳಿಗಳನ್ನು ಅಧೀಕೃತಗೊಳಿಸುವ ಸಮಿತಿ" ಯು ಸದಸ್ಯರನ್ನಾಗಿಯೂ 3 ವರ್ಷಗಳ ಅವಧಿಗೆ ನಾಮ ನಿರ್ದೇಶನ ಮಾಡಲಾಗಿದೆ. ಕೇಂದ್ರ ಸರ್ಕಾರದ ಜೈವಿಕ ವಿಜ್ಞಾನ ಇಲಾಖೆಯಿಂದ ಬೆಂಗಳೂರಿನಲ್ಲಿರುವ ಮೊನ್ಸಾಂಟೊ ಸಂಶೋಧನಾ ಕೇಂದ್ರ, ಬೆಂಗಳೂರು ಇದರ ಐಬಿಎಸ್‌ಸಿ ಸಮಿತಿಯ ಡಿಬಿಟಿ ವತಿಯ ಸದಸ್ಯರಾಗಿ 3 ವರ್ಷಗಳ ಅವಧಿಗೂ ಸಹ ನಾಮ ನಿರ್ದೇಶನ ಮಾಡಲಾಗಿದೆ.
- ಡಾ. ಹೆಚ್.ಎಸ್. ಶಿವರಾಮು ಇವರು ಕರ್ನಾಟಕ ರಾಜ್ಯ ಪ್ರಕೃತಿ ವಿಕೋಪ ಉಸ್ತುವಾರಿ ಸಂಸ್ಥೆಯ ಕಾರ್ಯ ನಿರ್ವಾಹಕ/ ಆಯ್ಕೆ ಸಮಿತಿಯ ಸದಸ್ಯರಾಗಿ ನಾಮ ನಿರ್ದೇಶನಗೊಂಡಿದ್ದಾರೆ.

bioacessibility of iron" in the Conference held at Bihar from Society for Agriculture Innovation and Development, Ranchi on Livelihood and Food Security-2018.

- Smt. Jayanthi, T. received Women Scientist Award for her Post Doctorate research work presentation on the occasion of 14th Kannada Vignyan Sammelana held on 15th -16th September, 2018 at Kolar, Karnataka.

5. 6 Nominations of teachers for different assignment in Govt. and other agencies

The details of teachers who were nominated for different assignment in Government and other agencies as members during 2018-19 are presented here under

- Dr. N. G. Ravichandra, Professor & Head, AICRP on nematodes is nominated as the "Editor" for the prestigious Indian Phytopathology journal published from the IARI, New Delhi
- Dr. R. C. Gowda, is nominated as Chairman of research review committee (RRC) of Moriculture, Karnataka state Sericulture Research and Development Institute, Bangalore for period of 2 years from 2017-18 to 2019-20
- Dr. Niranjana Murthy, Professor & Head, AICRP on Potential Crops is nominated as Member of Research Review Council of Karnataka State Sericulture Research & Development Institute for a period of three years. He is nominated as Member of the Mulberry Variety Authorization Committee (MVAC) of Central Silk Board, GOI, Bangalore for a period of three years. is nominated as DBT Representative in the Institutional Biosafety Committee of Monsanto Holdings Pvt. Ltd, Monsanto Research Centre, Bangalore by the Department of Biotechnology, Government of India for a period of three years
- Dr. H S Shivaramu, Professor & Coordinator, AICRPM has been nominated as a member of the executive committee / selection committee of Karnataka State Natural Disaster Monitoring Centre, Bangalore.

- ಡಾ. ಮೂಡಲಗಿರಿಯಪ್ಪ, ಪ್ರಾಧ್ಯಾಪಕರು, ಎ.ಐ.ಸಿ.ಆರ್.ಪಿ (ಖುಷ್ಕಿ ಬೇಸಾಯ) ಇವರನ್ನು ಕೇಂದ್ರ ರೇಷ್ಮೆ ಮಂಡಳಿಯ "ಅಖಿಲ ಭಾರತ ಸಂಯೋಜಿತ ಹಿಪ್ಪುನೇರಳೆ ಪ್ರಾಯೋಗಿಕ ಗಳಲ್ಲಿ ಹಿಪ್ಪುನೇರಳೆ ತಳಿಗಳನ್ನು ಅಧಿಕೃತಗೊಳಿಸುವ ಸಮಿತಿ" ಸದಸ್ಯರನ್ನಾಗಿ 3 ವರ್ಷಗಳ ಅವಧಿಗೆ ನಾಮ ನಿರ್ದೇಶನ ಮಾಡಲಾಗಿದೆ.
- ಡಾ. ಪಳನಿಮುತ್ತು, ಪ್ರಾಧ್ಯಾಪಕರು, ಕೊಯ್ಲೋತ್ತರ ವಿಭಾಗ ಇವರನ್ನು ರಾಜ್ಯ ಮಟ್ಟದ ತಾಂತ್ರಿಕ ಕೃಷಿ ಸಂಸ್ಕರಣಾ ಘಟಕ ಸ್ಥಾಪಿಸುವ ಕಾರ್ಯಕ್ರಮದ ಸಮಿತಿಯ ಸದಸ್ಯರನ್ನಾಗಿ ಕೃಷಿ ಇಲಾಖೆ ವತಿಯಿಂದ ನಿಯೋಜಿಸಲಾಗಿದೆ ಹಾಗೂ ಕೃಷಿ ಯಂತ್ರೋಪಕರಣಗಳ ರಾಜ್ಯ ಮಟ್ಟದ ಸಬ್ಸಿಡಿ ಕಾರ್ಯಕ್ರಮದ ತಾಂತ್ರಿಕ ಸಮಿತಿಯ ಸದಸ್ಯರನ್ನಾಗಿ ರಾಜ್ಯ ಸರ್ಕಾರದ ತೋಟಗಾರಿಕೆ ಇಲಾಖೆವತಿಯಿಂದ ನಿಯೋಜಿಸಿ ಕೊಳ್ಳಲಾಗಿದೆ. ಇದಲ್ಲದೆ ರಾಜ್ಯ ಮಟ್ಟದ ಕೃಷಿ ಯಂತ್ರಧಾರೆ ಕಾರ್ಯಕ್ರಮದ ತಾಂತ್ರಿಕ ಸಮಿತಿಯ ಸದಸ್ಯರನ್ನಾಗಿ ಕೃಷಿ ಇಲಾಖೆ ವತಿಯಿಂದ ನಿಯೋಜಿಸಿಕೊಳ್ಳಲಾಗಿದೆ.
- ಡಾ. ವಸುಂಧರಾ ದೇವಿ, ಪ್ರಾಧ್ಯಾಪಕರು, ಪಶು ವಿಜ್ಞಾನ ಇವರನ್ನು ಪ್ರತಿಷ್ಠಿತ "ಸಿ.ಎ.ಬಿ ಹಾಗೂ ಐ.ಝೆಡ್.ಎ.ಬಿ" ನಿಯತಕಾಲಿಕೆಯ ಸಂಪಾದಕರಾಗಿ, ನಾಮ ನಿರ್ದೇಶನ ಮಾಡಲಾಗಿದೆ.
- ಕೃಷಿ ಮಹಾವಿದ್ಯಾಲಯ, ಹಾಸನದ ಡಾ. ಓ.ಆರ್. ನಟರಾಜು, ಪ್ರಾಧ್ಯಾಪಕರು ಪಶು ವಿಜ್ಞಾನ ಇವರು ಎಆರ್‌ಸಿಸಿ ನಿಯತ ಕಾಲಿಕೆಗಳಲ್ಲಿ ಸಂಪಾದಕರಾಗಿ ನಾಮನಿರ್ದೇಶನಗೊಂಡಿದ್ದಾರೆ.
- ಕೃಷಿ ಮಹಾವಿದ್ಯಾಲಯ, ಹಾಸನದ ಡಾ. ಉಮಾಶಂಕರ ಕುಮಾರ್, ಎನ್., ಸಹಾಯಕ ಪ್ರಾಧ್ಯಾಪಕರು, ಸಸ್ಯ ರೋಗ ಶಾಸ್ತ್ರ ವಿಭಾಗ ಇವರು ಎ.ಜೆ.ಎ.ಎಸ್. ನಲ್ಲಿ ನಿಯತಕಾಲಿಕೆಯ ಸಂಪಾದಕ ಮತ್ತು ವಿಮರ್ಶಕರಾಗಿ ನಿರ್ದೇಶನಗೊಂಡಿದ್ದಾರೆ.
- ರಾಷ್ಟ್ರೀಯ ಆಹಾರ ತಂತ್ರಜ್ಞಾನ ವಾಣಿಜ್ಯೋದ್ಯಮ ನಿರ್ವಹಣಾ ಸಂಸ್ಥೆ, ಹರಿಯಾಣದಲ್ಲಿ ಪರೀಕ್ಷಾ ನಿಯಂತ್ರಣಾಧಿಕಾರಿ ಹುದ್ದೆಗೆ ನೇಮಕಾತಿ ಮಾಡಲು ರಚಿಸಿರುವ ಸಮಿತಿಗೆ ಡಾ. ಕೆ.ಸಿ ನಾರಾಯಣಸ್ವಾಮಿ ಪರೀಕ್ಷಾ ನಿಯಂತ್ರಣಾಧಿಕಾರಿ, ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು ಇವರನ್ನು ಸದಸ್ಯರನ್ನಾಗಿ ನೇಮಿಸಲಾಗಿದ್ದು, ಅವರು ಈ ಸಮಿತಿಯ ಸದಸ್ಯರಾಗಿ ಆ ನೇಮಕಾತಿ ಪ್ರಕ್ರಿಯೆಯಲ್ಲಿ ಮಾರ್ಚ್ 2019 ರಲ್ಲಿ ಪಾಲ್ಗೊಂಡಿರುತ್ತಾರೆ.
- ಎಣ್ಣೆಕಾಳು ಬೆಳೆಗಳ ಕೀಟ ನಿರ್ವಹಣಾ ವಿಷಯಕ್ಕೆ ಸಂಬಂದಿಸಿದಂತೆ ಡಾ. ಕೆ.ಎಸ್. ಜಗದೀಶ್, ಪ್ರಾಧ್ಯಾಪಕರು ಮತ್ತು ಉಪ ಪರೀಕ್ಷಾ ನಿಯಂತ್ರಣಾಧಿಕಾರಿಯವರನ್ನು ಐ.ಸಿ.ಎ.ಆರ್–ಭಾರತೀಯ ಎಣ್ಣೆಕಾಳು ಸಂಶೋಧನಾ ಸಂಸ್ಥೆಯ, ಹೈದರಾಬಾದ್, ತೆಲಂಗಾಣದ ವತಿಯಿಂದ 'ಫೆಲೊ–ಆಫ್–ದಿ–ಇಂಡಿಯನ್ ಸೊಸೈಟಿ–ಆಫ್–ಆಯಿಲ್‌ಸೀಡ್ಸ್–ರೀಸರ್ಚ್' ಆಗಿ ಮೇ 2018 ರಂದು ನಾಮ ನಿರ್ದೇಶನ ಗೊಂಡಿರುತ್ತಾರೆ.

- Dr. Mudalgiriyappa, Professor & Coordinator, AICRPDA is nominated as Member of the Mulberry Variety Authorization Committee (MVAC) of Central Silk Board, GOI, Bangalore for a period of three years.
- Dr V. Palanimuthu, Professor, PHT is serving as a Member of State Level Technical Committee for KAPMC Programme for Installing Processing Units in APMCs. He is serving as a Member of State Level Technical Committee for Farm Machinery subsidy Programme under SMAM of KSDA & DoH. He is also serving as a Member of State Level Committee for Krishi Yantra Dhare (CHSC) of KSDA, GoK.
- Dr. M. Vasundara Devi, Professor of Animal Sciences is nominated as Honorary Editor for CAB abstracts and IZAB international journal.
- Dr. O.R. Nataraju, Professor of Animal Science, CoA, Hassan is nominated as Editor for ARCC Journal
- Dr. Umashankar Kumar N. Assistant Professor of Plant Pathology, CoA, Hassan is nominated as Reviewer and Editor of IJAS
- Dr. K.C. Narayanaswamy, Controller of Examinations has been nominated as a Member of Screening Committee for selection of Controller of Examinations at National Institute of Food Technology Entrepreneurship and Management (NIFTEM). He was also nominated as a member of the Selection Committee for selection of Controller of Examinations for NIFTEM (Deemed to be University and Autonomous Institute under Ministry of Food Processing Industries, Govt. of India) during March 2019.
- Dr. K.S. Jagadish, Professor and Deputy Controller of Examinations was nominated as the Fellow of the Indian Society of Oilseeds Research (FISOR) for outstanding contribution to the field of pest management in oilseeds in India by ICAR-IIOR, Rajendranagar, Hyderabad, Telangana during May,2018.

- ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯ ತಜ್ಞರ ಸಮಿತಿಯ ಸದಸ್ಯರಾಗಿ ಡಾ. ಕೆ.ಸಿ. ನಾರಾಯಣಸ್ವಾಮಿಯವರು ಜೂನ್ 2018ರಲ್ಲಿ ನೇಮಕಗೊಂಡಿರುತ್ತಾರೆ. ಇದರ ಅನ್ವಯ, ಹೈದರಾಬಾದ್‌ನ ಡಿ.ಎನ್.ಎ. ಫಿಂಗರ್ ಪ್ರಿಂಟ್ಸ್ ಮತ್ತು ತಪಾಸಣಾ ಕೇಂದ್ರದ ಸಂಸ್ಥೆಯು ಅನುವಂಶೀಯ ರೂಪಾಂತರಗೊಳಿಸಿದ ರೇಷ್ಮೆ ಹುಳುವಿನ ನಿಯಂತ್ರಿತ ಕ್ಷೇತ್ರ ಪ್ರಾತ್ಯಕ್ಷಿಕೆ (field evaluation) ವರದಿಯನ್ನು ಮೌಲ್ಯಮಾಪನ ಮಾಡಿರುತ್ತಾರೆ.

5.7 ಆಯೋಜಿಸಿದ ಇತರ ಕಾರ್ಯಕ್ರಮಗಳು

ವಿಶ್ವವಿದ್ಯಾನಿಲಯದ ಎಲ್ಲಾ ನಿರ್ದೇಶನಾಲಯಗಳು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿರುತ್ತಾರೆ. ಅವುಗಳ ವಿವರಗಳು ಕೆಳಗಿನಂತಿವೆ :

- ರಾಷ್ಟ್ರೀಯ ಬೀಜ ಪ್ರಾಯೋಜನೆಯು ದಿನಾಂಕ 02.03.2019 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೆಪಲ್ಲಿ ತಾಲ್ಲೂಕಿನ ಮುಲಂಗಿಚೆಟ್ಲಪಲ್ಲಿ ಗ್ರಾಮದಲ್ಲಿ ಸೂರ್ಯಕಾಂತಿಯ ಕೆ.ಬಿ.ಎಸ್.ಹೆಚ್.44 ಮತ್ತು ಕೆ.ಬಿ.ಎಸ್.ಹೆಚ್.53 ತಳಿಗಳ ಬೀಜೋತ್ಪಾದನೆಯ ಕ್ಷೇತ್ರೋತ್ಸವವನ್ನು ಆಯೋಜಿಸಿತ್ತು.

- ರೇಷ್ಮೆಕೃಷಿ ಮಹಾವಿದ್ಯಾಲಯ, ಚಿಂತಾಮಣಿ ಆವರಣದಲ್ಲಿ ಕಾಲೇಜು ಮತ್ತು ವಿದ್ಯಾರ್ಥಿನಿಲಯಗಳ ವಾರ್ಷಿಕೋತ್ಸವ ಸಮಾರಂಭವನ್ನು ದಿನಾಂಕ: 16.04.2019 ರಂದು ಆಯೋಜಿಸ ಲಾಯಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಎಸ್. ರಾಜೇಂದ್ರ ಪ್ರಸಾದ್, ಕುಲಪತಿಗಳು, ಕೃ.ವಿ.ವಿ. ಬೆಂಗಳೂರು ಇವರು ಭಾಗವಹಿಸಿದ್ದರು. ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದ್ದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

- ಯುವ ರೆಡ್‌ಕ್ರಾಸ್ ಸಂಸ್ಥೆ, ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಹಾಗೂ ಯುವ ವಿಭಾಗ, ಬ್ರಹ್ಮಕುಮಾರಿಸ್, ಮಂಡ್ಯ ಇವರ ಸಹಯೋಗದೊಂದಿಗೆ ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ, ಮಂಡ್ಯದಲ್ಲಿ ಅಖಿಲ ಭಾರತ ಯುವ ಸಬಲೀಕರಣ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಜೀವನದ ಸಮಗ್ರ ಅಭಿವೃದ್ಧಿಯಲ್ಲಿ ಸಾಮಾಜಿಕ ಮಾಧ್ಯಮಗಳ ಬಳಕೆ ಹಾಗೂ ಬದುಕಿನ ಅಮೂಲಾಗ್ರ ಅಭಿವೃದ್ಧಿ ಕುರಿತು ಬ್ರಹ್ಮಕುಮಾರಿ ಶ್ರೀ ನಿವೇದಿತಾ ಉಪನ್ಯಾಸವನ್ನು ನೀಡಿ, ಧ್ಯಾನದ ಪ್ರಾತ್ಯಕ್ಷಿಕೆ ನೀಡಿದರು.

- ವಿಶ್ವ ಭೂ ದಿನಾಚರಣೆಯ ಅಂಗವಾಗಿ ದಿನಾಂಕ 21–04–2018 ರಂದು "ಪ್ಲಾಸ್ಟಿಕ್ ಮಾಲಿನ್ಯ ಕೊನೆಗಾಣಿಸುವುದು" ಎಂಬ ಆಂದೋಲನವನ್ನು ಜಿಕೆವಿಕೆಯ ಕೃಷಿ ಕಾಲೇಜಿನ ಮಣ್ಣು ವಿಜ್ಞಾನ ಹಾಗೂ ಕೃಷಿ ರಸಾಯನಶಾಸ್ತ್ರ ವಿಭಾಗದಲ್ಲಿ ಆಯೋಜಿಸಲಾಯಿತು.

- ದಿನಾಂಕ 18.06.2018 ರಂದು ಡಾ. ಎಲ್.ಸಿ. ಕೋಲ್‌ಮನ್ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮವನ್ನು ಜಿಕೆವಿಕೆ ಕೃಷಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮವನ್ನು ಡಾ. ಎಂ.ಎಸ್. ನಟರಾಜ್, ಗೌರವಾನ್ವಿತ ಕುಲಪತಿಗಳು

- Dr. K.C. Narayanaswamy, Controller of Examinations was nominated by the Ministry of Science and Technology, DBT, GOI as a member of Expert Committee to evaluate the report on contained field trails of genetically engineered (GE) silkworm (*Bombyx mori*) conducted by Centre for DNA Fingerprinting and Diagnostics (CDFD), Hyderabad during June 2018

5.7 Other events organised

Several events were organised by different units of all the Directorates of the University and the details are presented here under :

- National Seed Project, UAS-B organized a field day on seed production of KBSH-44 and KBSH-53 Sunflower at Mullangichetlapalli village of Bagepalli Taluk, Chikkaballapura district on 2nd March, 2019.

- The College of Sericulture, Chintamani organized College & Hostel Day Celebration on 16.04.2019. Dr.S. Rajendra Prasad, Vice Chancellor, UAS-B inaugurated the programme. All the staff and students of College, ARS, KVK, Chintamani participated in the programme.

- All India Campaign for Youth Empowerment Program was jointly organized by Youth Red Cross Society, CoA, Mandya and Youth Wing, Brahmakumaris, Mandya for students of College of Agriculture, Mandya on 17.04.2018. The chief guest Brahmakumari Sri. Niveditha delivered lecture on how to make use of social media, holistic development of life and demonstrated meditation.

- Department of Soil Science and Agricultural Chemistry, College of Agriculture, GKVK organized 'End Plastic Pollution' Campaign on 21.04.2018 under World Earth Day Celebration.

- Dr. L.C. Coleman Lecture was organised at GKVK on 18.06.2018. Dr.Laurence Packer, Distinguished Research Professor, Department of Biology, York University, Toronto, Canada

ಉದ್ಘಾಟಿಸಿದರು ಹಾಗೂ ಕೆನಡಾ ದೇಶದ ಯಾರ್ಕ್ ವಿಶ್ವವಿದ್ಯಾನಿಲಯದ ಸಂಶೋಧನಾ ಪ್ರಾಧ್ಯಾಪಕರಾದ ಡಾ.ಲಾರೆನ್ಸ್‌ರವರು "ಜೇನುನೊಣಗಳ ಪ್ರಾಮುಖ್ಯತೆ ಹಾಗೂ ವೈವಿದ್ಯತೆ" ಎಂಬ ಉಪನ್ಯಾಸ ನೀಡಿದರು.

delivered the Guest Lecture on 'Bees-Importance and Diversity' presided by Dr. M.S. Nataraju, Vice-Chancellor of the University

- ದಿನಾಂಕ:26–06–2018 ರಂದು ಮಾನ್ಯ ಪ್ರಧಾನ ಮಂತ್ರಿಯವರು ರಾಮನಗರ ಜಿಲ್ಲೆ ರೈತರೊಂದಿಗೆ ವೀಡಿಯೋ ಸಮಾವೇಶದ ಮೂಲಕ ಭಾರತ ಸರ್ಕಾರದ ಬೆಳೆ ವಿಮೆ ಯೋಜನೆ ಮತ್ತು ಮಣ್ಣು ಪರೀಕ್ಷೆ ಚೀಟಿ ಕಾರ್ಯಕ್ರಮಗಳ ಬಗ್ಗೆ ನೇರ ಸಂವಾದ ನಡೆಸಿದರು.

- Hon'ble Prime Minister of India, interacted with farmers of Ramanagara through video conference on 26-06-2019 regarding Soil Health Card and Prime Minister Phasal Bheema Yojan, which was telecasted all over India

- ದಿನಾಂಕ 08.07.2018 ರಂದು ಗೌರಿಬಿದನೂರು ತಾಲ್ಲೂಕು ಹೊಸೂರು ಹೋಬಳಿಯ ಕಾಚಮಾಚನಹಳ್ಳಿಯಲ್ಲಿ ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮ–2018 ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಕೃಷಿ ಸಚಿವರಾದ ಶ್ರೀ ಎನ್. ಹೆಚ್. ಶಿವಶಂಕರ ರೆಡ್ಡಿ ಯವರು ಉದ್ಘಾಟಿಸಿದರು ಹಾಗೂ ಮುಖ್ಯ ಅತಿಥಿಗಳಾಗಿ ಡಾ. ಎಸ್. ರಾಜೇಂದ್ರ ಪ್ರಸಾದ್, ಡೀನ್ (ಕೃಷಿ) ರವರು ಭಾಗವಹಿಸಿದ್ದರು.

- RAWEP 2018 for final year Undergraduate students was organised at Kanchmachenahalli Village, Hosur Hobli, Gowribidanur Taluk. The programme was inaugurated on 8.7.2018by Shri N.H.Shivashankar Reddy. Hon'ble Minister for Agriculture and Dr. S. Rajendra Prasad, Dean (Agri.) was the Chief Guest.

- ದಿನಾಂಕ 04.10.2018 ರಂದು ವಿಶ್ವವಿದ್ಯಾನಿಲಯದ 53ನೇ ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಯಿತು. ಕರ್ನಾಟಕ ಸರ್ಕಾರದ ಮಾನ್ಯ ಕೃಷಿ ಸಚಿವರಾದ ಶ್ರೀ ಶಿವಶಂಕರ ರೆಡ್ಡಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಗುಜರಾತ್‌ನ ಆನಂದ್ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎನ್.ಸಿ. ಪಾಟೆಲ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಬದಲ್ಲಿ ನಾಗಮ್ಮ ದತ್ತಾತ್ರೇಯ ರಾವ್ ದೇಸಾಯಿ ಪ್ರಶಸ್ತಿ, ಡಾ. ಕಾಳಯ್ಯ ಕೃಷ್ಣಮೂರ್ತಿ ನ್ಯಾಷನಲ್ ರಿಸರ್ಚ ಪ್ರಶಸ್ತಿ, ಜುವಾರಿ ಅಗ್ರೋ ಇಂಡಸ್ಟ್ರೀಸ್ ರವರ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತತ ಪ್ರಶಸ್ತಿ, ಅತ್ಯುತ್ತಮ ಶಿಕ್ಷಕರ ಪ್ರಶಸ್ತಿ ಹಾಗೂ ಅತ್ಯುತ್ತಮ ಸೇವಾ ಸಿಬ್ಬಂದಿ ಪ್ರಶಸ್ತಿಗಳನ್ನು ಅರ್ಹರಿಗೆ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ರವರು ವಹಿಸಿದ್ದರು.

- The 53rd Foundation Day of the University was celebrated on 4th October, 2018. Sri. N.H. Shivashankara Reddy, Hon'ble Minister for Agriculture, GoK inaugurated the program. Dr. N.C. Patel, Vice-Chancellor, Anand Agricultural University, Anand, Gujarat, the chief guest of the function. On the occasion, 'Nagamma Dattatreya Rao Desai Award' , 'Dr. Kalaiah Krishna Murthy National Research Award', M/S Zuari Aro-Industries Limited 'Best Extension Worker Award', 'ICAR Best Teacher Awards' and Best Service Personnel Awards were given. Dr. S. Rajendra Prasad, Vice-Chancellor presided over the programme.

- ಕ್ಷೇತ್ರೋತ್ಸವ ಹಾಗೂ ರೈತರು ಮತ್ತು ವಿಜ್ಞಾನಿಗಳ ಸಂವಾದವನ್ನು ಕೃಷಿ ಸಂಶೋಧನಾ ಕೇಂದ್ರ, ಮಡೆನೂರಿನಲ್ಲಿ 4ನೇ ಡಿಸೆಂಬರ್, 2018 ರಂದು ಆಯೋಜಿಸಲಾಗಿತ್ತು.

- Organized Field day-cum-Farmers Scientists Interaction Session at ARS, Madenur on 4th December, 2018

- 13ನೇ ಡಿಸೆಂಬರ್ 2018ರಂದು 'ತೊಗರಿ ಬೆಳೆಯಲ್ಲಿ ಸುಧಾರಿತ ಬೀಜೋತ್ಪಾದನಾ ತಂತ್ರಗಳ' ಕ್ಷೇತ್ರೋತ್ಸವ ಮತ್ತು ತರಬೇತಿ ಕಾರ್ಯಕ್ರಮವನ್ನು ಜಕ್ಕನಹಳ್ಳಿ ಗ್ರಾಮ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಂತರ ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು.

- Organized Field day-cum-training programme on "Improved Seed production techniques in Redgram" at Jakkanahalli village, Nelamangala taluk, Bengaluru Rural district on 13th Dec., 2018

- 3ನೇ ಜನವರಿ, 2019ರಂದು – "ಕಡಲೆ ಕಾಳಿನಲ್ಲಿ ಸುಧಾರಿತ ಬೀಜೋತ್ಪಾದನಾ ತಂತ್ರಗಳ" ಕ್ಷೇತ್ರೋತ್ಸವ ಮತ್ತು ತರಬೇತಿ ಕಾರ್ಯಕ್ರಮವನ್ನು ಬೀಡಿಗಾನಹಳ್ಳಿ ಗ್ರಾಮ, ದೇವನಹಳ್ಳಿ ತಾಲ್ಲೂಕಿನಲ್ಲಿ ಆಯೋಜಿಸಲಾಗಿತ್ತು.

- Organized Field day-cum-training programme on "Improved Seed Production Techniques in Bengalgram" at Beediganahalli village, Devanahlli taluk on 3rd January, 2019

- ದಿನಾಂಕ 16.01.2019 ರಂದು ಜಿಕೆವಿಕೆ ಕೃಷಿ ಕಾಲೇಜು ಹಾಗೂ 44ನೇ ಹೆಚ್ಚುವರಿ ಮುಖ್ಯ ದಂಡಾಧಿಕಾರಿಗಳ ಕಛೇರಿಯ ಸಹಯೋಗದಲ್ಲಿ ಕಾನೂನು ಸಾಕ್ಷರತೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೌರವಾನ್ವಿತ ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್‌ರವರು ವಹಿಸಿದ್ದರು.

- Legal Literacy Programme was conducted on 16.01.2019 at GKVK in collaboration the Office of the XLIV Additional Chief Metropolitan Magistrate, Nrupathuna Road, Bengaluru. Dr. S. Rajendra Prasad, Vice-Chancellor presided over the programme.

- ಆಡಳಿತ ಕನ್ನಡ ಕಾರ್ಯಗಾರ ಉದ್ಘಾಟನಾ ಸಮಾರಂಭವನ್ನು 18.01.2019 ರಂದು ರೈತ ತರಬೇತಿ ಸಂಸ್ಥೆ, ಜಿಕೆವಿಕೆ ಬೆಂಗಳೂನಲ್ಲಿ ನೆರೆವೇರಿಸಲಾಗಿತ್ತು. ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳು ಡಾ. ಎಸ್. ರಾಜೇಂದ್ರ ಪ್ರಸಾದ್, ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಹಾಗೂ ಡಾ. ಬಿ.ಎನ್. ನಾಗರಾಜ, ಡೀನ್ (ಕೃಷಿ), ಕೃಷಿ ಮಹಾವಿದ್ಯಾಲಯ, ಜಿಕೆವಿಕೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವನ್ನು ಜರುಗಿಸಲಾಯಿತು.

- Workshop on 'Kannada in Administration' was organised on 18.01.2019 by the Department of Kannada Studies at FTI, GKVK. The programme was inaugurated by Professor S.G Siddaramaiah, President Kannada Development Authority, GoK. Dr. S. Rajendraprasad, Hon'ble Vice-Chancellor, UAS, Bangalore, was a Chief Guest and Dr. N. G.N. Nagaraja, Dean (Agri.) College of Agriculture presided over the programme.

- ಹಾಸನದ ಕೃಷಿ ಮಹಾವಿದ್ಯಾಲಯ, ಗ್ರಾಮೀಣ ಕೃಷಿ ಕಾರ್ಯಾನುಭವ ಕಾರ್ಯಕ್ರಮದ ಹಳ್ಳಿಗಳಾದ ಹಾಲೇನಳ್ಳಿ, ಹುಳುವಾರೆ, ಬಂಟರಳ್ಳಿ, ಮುತ್ತಿಗೆ, ಹಿರೇಹಳ್ಳಿ, ಮುತ್ತಿಗೆ, ಮತ್ತು ಡನಾಯಕನಹಳ್ಳಿ ಯಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ವಿವಿಧ ಬಗೆಯ ಸಸಿಗಳನ್ನು ನೆಡಲಾಯಿತು. ಈ ಹಳ್ಳಿಗಳಲ್ಲಿ ಆರು ಮಾನವ ಆರೋಗ್ಯ ತಪಾಸಣಾ ಶಿಬಿರಗಳನ್ನು ಸಹ ಆಯೋಜಿಸಲಾಗಿತ್ತು.

- College of Agriculture, Hassan organised Vanamahothsava/ Tree planting Campaign at six RAWEP villages *viz.,* Halenahalli, Huluvare, Bantarahalli, Muthige Hirehalli, Muthige and Danayakanahalli of Hassan district. Different biofuel seedlings like Neem, Honge, Jatropha, Surahonne and forest tree species were planted in these villages. Human health camps (6) were also organised in these villages.

- ಚಾಮರಾಜನಗರ (ತೆಂಗಿನ ಮರ ಹತ್ತುವುದು, ರೇಷ್ಮೆ ಕೃಷಿ), ಚಿಂತಾಮಣಿ (ಟ್ರ್ಯಾಕ್ಟರ್ ರೀಪೇರಿ, ಜೇನು ಸಾಕಣಿಕೆ ಮತ್ತು ನರ್ಸರಿ), ಮಂಡ್ಯ (ಅಣಬೆ ಬೇಸಾಯ), ಮಾಗಡಿ (ಸೂಕ್ಮ ನೀರಾವರಿ) ಜಿಲ್ಲೆಗಳ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ನಡೆಸಿದ ಕೌಶಲ್ಯ ತರಬೇತಿಯಲ್ಲಿ 25 ಯುವಕ / ಯುವತಿಯರಿಗೆ 25 ದಿನಗಳ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಕೌಶಲ್ಯ ತರಬೇತಿಗೆ ಹೆಚ್ಚಿನ ಒತ್ತನ್ನು ಕೊಡಲಾಯಿತು.

- The Krishi Vigyan Kendras of Chamarajanagara (Friends of coconut tree & Sericulture), Chintamani (Tractor Operator, Bee keeper and Nursery worker), Mandya (Mushroom grower) and Magadi (Micro irrigation) districts conducted skill training programmes for rural youth / women for a period of 25 days involving 25 participants per training wherein importance was given to skill teaching.

- ರಾಷ್ಟ್ರೀಯ ಬೀಜ ಪ್ರಾಯೋಜನೆಯು ದಿನಾಂಕ 02.03.2019 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೆಪಲ್ಲಿ ತಾಲ್ಲೂಕಿನ ಮುಲ್ಲಂಗಿಚೆಟ್ಲಪಲ್ಲಿ ಸೂರ್ಯಕಾಂತಿಯ ಕೆ.ಬಿ.ಎಸ್.ಹೆಚ್.–44 ಮತ್ತು ಕೆ.ಬಿ.ಎಸ್.ಹೆಚ್.–53 ತಳಿಗಳ ಕ್ಷೇತ್ರೋತ್ಸವವನ್ನು ಆಯೋಜಿಸಿತ್ತು.

- National Seed Project, UAS-B organized a field day on seed production of KBSH-44 and KBSH-53 Sunflower at Mullangichetlapalli village of Bagepalli Taluk, Chikkaballapura district on 2nd March, 2019

- ದಿನಾಂಕ: 28.03.2019 ಮತ್ತು 29.03.2019 ರಂದು ಕಾಲೇಜು ದಿನಾಚಾರಣೆ ಅಂಗವಾಗಿ ಕಾರ್ನಿವಲ್–2019 ಅನ್ನು ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿತ್ತು. ಕುಲಪತಿಗಳಾದ ಡಾ. ಎಸ್. ರಾಜೇಂದ್ರ ಪ್ರಸಾದ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಬಾರ್ಡ್‌ನ ಆರ್ಥಿಕ ಅಭಿವೃದ್ಧಿ ತಜ್ಞರು ಹಾಗೂ ಮಾಜಿ ಮುಖ್ಯ ಪ್ರಬಂಧಕರು ಆದ ಡಾ. ಆರ್.ಎಂ. ಕುಮ್ಮೂರ್‌ರವರು ಮುಖ್ಯ ಅತಿಥಿಗಳಾಗಿ ಹಾಗೂ ಜಿಕೆವಿಕೆ

- College Day 'CARNIVALE 2019' (UG & PG) was conducted on 28 & 29th March, 2019 at GKVK. Dr. S. Rajendra Prasad, Vice-Chancellor, UAS-B inaugurated the programme; Dr. R.M. Kummur, Economic Development Expert, former CGM, NABARD, Mumbai was

ಕೃಷಿ ಕಾಲೇಜಿನ ಡೀನ್‌ರಾದ ಡಾ. ಎಂ. ಬೈರೇಗೌಡರವರು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಬಿ.ಎನ್. ಸತ್ಯನಾರಾಯಣ, ಡೀನ್ (ಸ್ನಾತಕೋತ್ತರ) ರವರು ವಹಿಸಿದ್ದರು.

the Chief Guest; Dr. M. Byre Gowda, Dean (Agri.), CoA, GKVK was the Guest of Honour and Dr.B.N. Sathyanarayana, Dean (PGS), UAS-B presided over the programme.

5.8 ಆಯೋಜಿಸಿದ/ ಭಾಗವಹಿಸಿದ ಇತರ ಕಾರ್ಯಕ್ರಮಗಳು, ಕೈಗೊಂಡ ವಿಸ್ತರಣಾ ಚಟುವಟಿಕೆಗಳು ಹಾಗೂ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಯ ಪ್ರಕಟಣೆಗಳು

ಭಾಗವಹಿಸಿದ ಮತ್ತು ಆಯೋಜಿಸಿದ ಸಮಾವೇಶಗಳು, ವಿಚಾರ ಸಂಕಿರಣಗಳು, ತರಬೇತಿ ಕಾರ್ಯಕ್ರಮಗಳು; ಆಯೋಜಿಸಿದ ವಿಸ್ತರಣಾ ಚಟುವಟಿಕೆಗಳು ಮತ್ತು ವಿವಿಧ ಮಹಾವಿದ್ಯಾಲಯಗಳ/ ನಿರ್ದೇಶನಾಲಯಗಳ ಸಿಬ್ಬಂದಿಯ ಹೊರತಂದಿರುವ ಪ್ರಕಟಣೆಗಳನ್ನು ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

5.8 Abstract of different programmes organised/ participated, extension activities carried out and number of publications brought out by the faculty of UAS-B

Details of number of conferences /seminars / workshops /training programmes, etc. attended and organised; Extension activities organised and Number of Publications brought out by the faculty of all the Directorates and colleges are presented in the below tables



ನಾರ್ಥ್ ಬ್ಲಾಕ್, ಜಿ.ಕೆ.ವಿ.ಕೆ., ಬೆಂಗಳೂರು
North Block, GKVK, Bengaluru

ಕೋಷ್ಟಕ 46 : ಪ್ರಸ್ತುತ ವರ್ಷದಲ್ಲಿ ಬೋಧಕ ಸಿಬ್ಬಂದಿಗಳು ಆಯೋಜಿಸಿದ್ದ ಸಮಾವೇಶಗಳು/ವಿಚಾರ ಸಂಕಿರಣ/ಕಾರ್ಯಾಗಾರ/ಬೇಸಿಗೆ ಶಾಲೆಗಳು/ತರಬೇತಿ ಕಾರ್ಯಕ್ರಮಗಳು
Table 46 : Conferences / Seminars / Workshops / Summer schools / Training Programmes organised by the faculty during the year

ಕ್ರ.ಸಂ. / Sl. No.	ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates	ವಿಚಾರ ಸಂಕಿರಣಗಳು/ ಕಾರ್ಯಾಗಾರಗಳು / Seminars / Workshops	ತರಬೇತಿ ಕಾರ್ಯಕ್ರಮಗಳು / Training Programmes	ಸಮ್ಮೇಳನಗಳು / Conferences	ಬೇಸಿಗೆ/ಚಳಿಗಾಲದ ಶಾಲೆಗಳು / Summer / Winter Schools	ಇತರೆ / Others
1.	ಕೃಷಿ ಕಾಲೇಜು, ಬೆಂಗಳೂರು College of Agriculture, Bengaluru	11	21	1	1	8
2.	ಕೃಷಿ ಕಾಲೇಜು, ಮಂಡ್ಯ College of Agriculture, Mandya	1	13	–	–	–
3.	ಕೃಷಿ ಕಾಲೇಜು, ಹಾಸನ College of Agriculture, Hassan	2	68	–	4	–
4.	ಸಂಶೋಧನಾ ನಿರ್ದೇಶನಾಲಯ Directorate of Research	12	13	2	–	17
5.	ವಿಸ್ತರಣಾ ನಿರ್ದೇಶನಾಲಯ Directorate of Extension	5	622	–	1	–
	ಒಟ್ಟು / Total	**31**	**737**	**3**	**6**	**25**

ಕೋಷ್ಟಕ 47 : ಪ್ರಸ್ತುತ ವರ್ಷದಲ್ಲಿ ಬೋಧಕ ಸಿಬ್ಬಂದಿಗಳು ಭಾಗವಹಿಸಿದ್ದ ಸಮಾವೇಶ/ವಿಚಾರ ಸಂಕಿರಣ/ಕಾರ್ಯಾಗಾರ/ಬೇಸಿಗೆ ಶಾಲೆಗಳು/ತರಬೇತಿ ಕಾರ್ಯಕ್ರಮಗಳು

Table 47 : Conferences / Seminars / Workshops / Summer schools / Training Programmes attended by the faculty during the year

ಕ್ರ.ಸಂ. / Sl. No.	ಕಾಲೇಜುಗಳು ಮತ್ತು ಇತರ ನಿರ್ದೇಶನಾಲಯಗಳು / Colleges and other Directorates	ವಿಚಾರ ಸಂಕಿರಣಗಳು/ ಕಾರ್ಯಾಗಾರಗಳು / Seminars / Workshops	ತರಬೇತಿ ಕಾರ್ಯಕ್ರಮಗಳು / Training Programmes	ಸಮ್ಮೇಳನಗಳು / Conferences	ಬೇಸಿಗೆ/ಚಳಿಗಾಲದ ಶಾಲೆಗಳು / Summer / Winter Schools	ಇತರೆ / Others
1.	ಕೃಷಿ ಕಾಲೇಜು, ಬೆಂಗಳೂರು College of Agriculture, Bengaluru	40	37	74	1	28
2.	ಕೃಷಿ ಕಾಲೇಜು, ಮಂಡ್ಯ College of Agriculture, Mandya	17	7	6	–	–
3.	ರೇಷ್ಮೆಕೃಷಿ ಕಾಲೇಜು, ಚಿಂತಾಮಣಿ College of Sericulture, Chintamani	–	13	2	–	15
4.	ಕೃಷಿ ಕಾಲೇಜು, ಹಾಸನ College of Agriculture, Hassan	22	12	6	4	5
5.	ಶಿಕ್ಷಣ ನಿರ್ದೇಶನಾಲಯ Directorate of Education	3	–	2	–	–
6.	ಸಂಶೋಧನಾ ನಿರ್ದೇಶನಾಲಯ Directorate of Research	75	24	15	2	102
7.	ವಿಸ್ತರಣಾ ನಿರ್ದೇಶನಾಲಯ Directorate of Extension	20	67	8	2	–
	ಒಟ್ಟು / Total	**177**	**160**	**113**	**9**	**150**

ಕೋಷ್ಟಕ 48 : ಪ್ರಸ್ತುತ ವರ್ಷದಲ್ಲಿ ಬೋಧಕ ಸಿಬ್ಬಂದಿ ನಿರ್ವಹಿಸಿದ ವಿಸ್ತರಣಾ ಚಟುವಟಿಕೆಗಳು
Table 48 : Extension Activities carried out by the faculty during the year

ಕ್ರಸಂ. / Sl. No.	ಕಾಲೇಜುಗಳು ಮತ್ತು ಇತರೆ ನಿರ್ದೇಶನಾಲಯಗಳು / Colleges and other Directorates	ರೇಡಿಯೋ ಉಪನ್ಯಾಸ / Radio Talks	ದೂರದರ್ಶನ ಕಾರ್ಯಕ್ರಮಗಳು / TV Programs	ಕ್ಷೇತ್ರ ಭೇಟಿಗಳು / Field Visits	ಇತರ / Others (As Resource Persons/ Farm queries)
1.	ಕೃಷಿ ಕಾಲೇಜು, ಬೆಂಗಳೂರು College of Agriculture, Bengaluru	32	74	68	–
2.	ಕೃಷಿ ಕಾಲೇಜು, ಮಂಡ್ಯ College of Agriculture, Mandya	5	5	63	98 569
3.	ರೇಷ್ಮೆಕೃಷಿ ಕಾಲೇಜು, ಚಿಂತಾಮಣಿ College of Sericulture, Chintamani	1	–	38	–
4.	ಕೃಷಿ ಕಾಲೇಜು, ಹಾಸನ College of Agriculture, Hassan	14	9	139	309
5.	ಸಂಶೋಧನಾ ನಿರ್ದೇಶನಾಲಯ Directorate of Research	30	20	141	48
6.	ವಿಸ್ತರಣಾ ನಿರ್ದೇಶನಾಲಯ Directorate of Extension	25	8	2125	25
	ಒಟ್ಟು / Total	**107**	**116**	**2574**	**382**

ಕೋಷ್ಟಕ 49 : ಪ್ರಸ್ತುತ ವರ್ಷದಲ್ಲಿ ಬೋಧನಾ ಸಿಬ್ಬಂದಿ ಪ್ರಕಟಣೆಗಳ ವಿವರ
Table 49 : Publications by the faculty during the year

ಕ್ರ.ಸಂ. / Sl. No.	ಕಾಲೇಜುಗಳು ಮತ್ತು ನಿರ್ದೇಶನಾಲಯಗಳು / Colleges and Directorates	ಸಂಶೋಧನಾ ಪ್ರಬಂಧಗಳು/ ಲೇಖನಗಳು / Research Papers / Notes	ಜನಪ್ರಿಯ ಲೇಖನಗಳು / Popular Articles	ಪುಸ್ತಕಗಳು / ಬುಲೆಟಿನ್ಸ್ / Books / Bulletins	ಕರಪತ್ರಗಳು/ ಫೋಲ್ಡರ್‌ಗಳು / Leaflets / Folders	ಇತರ /Others Abstracts/ Chapter in Books, etc.
1.	ಕೃಷಿ ಕಾಲೇಜು, ಬೆಂಗಳೂರು College of Agriculture, Bengaluru	122	4	3	7	–
2.	ಕೃಷಿ ಕಾಲೇಜು, ಮಂಡ್ಯ College of Agriculture, Mandya	74	14	–	–	30
3.	ರೇಷ್ಮೆ ಕೃಷಿ ಕಾಲೇಜು, ಚಿಂತಾಮಣಿ College of Sericulture, Chintamani	15	1	3	1	–
4.	ಕೃಷಿ ಕಾಲೇಜು, ಹಾಸನ College of Agriculture, Hassan	45	9	2	2	4
5.	ಸಂಶೋಧನಾ ನಿರ್ದೇಶನಾಲಯ Directorate of Research	366	34	20	65	49
6.	ವಿಸ್ತರಣಾ ನಿರ್ದೇಶನಾಲಯ Directorate of Extension	74	62	17	183	78
7.	ಶಿಕ್ಷಣ ನಿರ್ದೇಶನಾಲಯ Directorate of Education	28	3	28	–	30
	ಒಟ್ಟು / Total	**724**	**127**	**73**	**258**	**191**

6. ಆರ್ಥಿಕ ಸಂಪನ್ಮೂಲ, ಹಂಚಿಕೆ, ಲೆಕ್ಕಪತ್ರ ಮತ್ತು ನಿರ್ವಹಣೆ
Financial Resources, Allocation, Accounting and Management

6.1 ಆರ್ಥಿಕ ಸಂಪನ್ಮೂಲ

ರಾಜ್ಯ ಸರಕಾರವು ಚಾಲ್ತಿಯಲ್ಲಿರುವ ಕಾರ್ಯಗಳನ್ನು ಮುಂದುವರೆಸಲು, ವೇತನ ಅನುದಾನದ ಅಡಿಯಲ್ಲಿ ನಿರ್ವಹಣಾ ಆರ್ಥಿಕ ನೆರವನ್ನು ಒದಗಿಸಿದೆ. ಸಾಮಾನ್ಯ ಅನುದಾನದಡಿಯಲ್ಲಿ ಅಸ್ತಿತ್ವದಲ್ಲಿರುವ ಕಾರ್ಯಕ್ರಮಗಳನ್ನು ಬಲಪಡಿಸಲು ಹಾಗೂ ಆಡಳಿತವನ್ನೊಳಗೊಂಡಂತೆ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳ ನವೀನ ಚಟುವಟಿಕೆಗಳನ್ನು ಕೈಗೊಳ್ಳಲು ಸಾಮಾನ್ಯ ಅನುದಾನವನ್ನು ಒದಗಿಸಿದೆ.

ವಿಸ್ತರಣಾ ಶಿಕ್ಷಣ ತರಬೇತಿ ಕಾರ್ಯಕ್ರಮಗಳು ಮತ್ತು ತಾತ್ಪೂರ್ತಿಕ ಸಂಶೋಧನಾ ಪ್ರಾಯೋಜನೆಗಳನ್ನು ಕೈಗೊಳ್ಳಲು ರಾಜ್ಯ ಅಭಿವೃದ್ಧಿ ಇಲಾಖೆಗಳು ಆರ್ಥಿಕ ನೆರವನ್ನು ಒದಗಿಸಿವೆ.

ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದುವರಿಸಲು ಮತ್ತು ನವೀನ ಬೋಧನಾ ಹಾಗೂ ವಿಸ್ತರಣಾ ಶಿಕ್ಷಣ ಕಾರ್ಯಕ್ರಮಗಳನ್ನು ಅಳವಡಿಸಲು ಧನಸಹಾಯ ಒದಗಿಸಿದೆ. ಅಖಿಲ ಭಾರತ ಸಹಯೋಜಿತ ಸಂಶೋಧನಾ ಯೋಜನೆಗಳಿಗೆ ಹಾಗೂ ತಾತ್ಪೂರ್ತಿಕ ಸಂಶೋಧನಾ ಪ್ರಾಯೋಜನೆಗಳಿಗೂ ಸಹ ಅನುದಾನವನ್ನು ಒದಗಿಸಿದೆ.

ಕೃಷಿಯಲ್ಲಿ ನಿರ್ದಿಷ್ಟ ಸಂಶೋಧನೆಗಳನ್ನು ಕೈಗೊಳ್ಳಲು ಭಾರತ ಸರಕಾರದ ವಿವಿಧ ಇಲಾಖೆಗಳು ಧನಸಹಾಯವನ್ನು ಒದಗಿಸಿವೆ.

ವಿಶ್ವವಿದ್ಯಾನಿಲಯದಲ್ಲಿ ಸಂಶೋಧನೆ ಮತ್ತು ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಲು ವಿವಿಧ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳು/ಏಜೆನ್ಸಿಗಳು ಆಗಾಗ್ಗೆ ಸಹ ಅನುದಾನ ಒದಗಿಸುತ್ತವೆ.

ಬೇಸಾಯ, ಬೀಜ ಮತ್ತು ಸಸಿಮಡಿ ಚಟುವಟಿಕೆ, ವಿದ್ಯಾರ್ಥಿ ಶುಲ್ಕ ಸಂಗ್ರಹಣೆ ಮುಂತಾದ ಆಂತರಿಕ ಸಂಪನ್ಮೂಲವನ್ನು ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಆದಾಯವನ್ನು ರೂಪಿಸಿಕೊಳ್ಳಲಾಗುತ್ತಿದೆ.

6.2 ಅನುದಾನಗಳ ಸ್ವೀಕೃತಿ 2018–19

6.2.1 ರಾಜ್ಯ ಸರ್ಕಾರದ ಅನುದಾನ

6.2.1.1 ವೇತನ ಅನುವಾದನ

ರಾಜ್ಯ ಸರ್ಕಾರವು 2018–19ನೇ ಸಾಲಿನಲ್ಲಿ ವೇತನ ಅನುದಾನವಾಗಿ 9733.87 ಲಕ್ಷ ರೂ.ಗಳನ್ನು ಮಂಜೂರು ಮಾಡಿದೆ.

6.2.1.2 ಸಾಮಾನ್ಯ ಅನುದಾನ

ರಾಜ್ಯ ಸರ್ಕಾರವು 2018–19ನೇ ಸಾಲಿನಲ್ಲಿ ಕೃಷಿ ಶಿಕ್ಷಣಕ್ಕಾಗಿ 794.00 ಲಕ್ಷ ರೂ.ಗಳನ್ನು ಮತ್ತು ಕೃಷಿ ಸಂಶೋಧನೆಗಾಗಿ 1900.00 ಲಕ್ಷ ರೂ.ಗಳನ್ನು ಒಟ್ಟು 2694.00 ಲಕ್ಷ ರೂ.ಗಳನ್ನು ಚಾಲ್ತಿಯಲ್ಲಿರುವ ಚಟುವಟಿಕೆಗಳ ಅಡಿಯಲ್ಲಿ ನಿರಂತರವಾಗಿ ನಡೆಯುತ್ತಿರುವ ಬೋಧನೆ,

6.1 Source of Finance

The State Government provided grants under Grant-in-aid salaries to continue the ongoing commitments under establishment. Further, the grants under Grant-in-aid general were provided for strengthening the existing programmes and to establish new activities under teaching, research and extension education programmes including general administration.

The State Govt. Departments provided certain grants to undertake Ad-hoc research schemes and extension educational activities.

Indian Council of Agricultural Research provided funds for the continuation of the existing schemes and establishment of new Teaching, Research and Extension Education Programmes. Grants were also provided under All India Co-ordinated Research Schemes and Ad-hoc Research programmes.

Several Departments of Government of India also provided financial assistance to conduct specific research in agriculture.

Grants are also, being provided quite often by several National and International Organizations/Agencies to conduct Research and Extension Programmes in the University.

Revenue is also generated by effectively utilizing the internal resources through crop cultivation, seed nursery activities, collection of student's fees etc.

6.2 Receipts 2018-19

6.2.1 Grants from State Government

6.2.1.1 Grant-in-Aid Salary

The State Government has released Rs.9733.87 lakh during 2018-19 as Grant-in-Aid salaries.

6.2.1.2 Grant-in-Aid General

The State Government has released Rs.794.00 lakhs towards Agricultural Education and Rs.1900.00 lakhs for Agricultural Research with a total of Rs.2694.00 lakhs during the year 2018-19 towards the continuation of ongoing activities under Teaching,

ಸಂಶೋಧನೆ, ವಿಸ್ತರಣಾ ಶಿಕ್ಷಣ ಹಾಗೂ ಸಾಮಾನ್ಯ ಆಡಳಿತಗಳಿಗೆ ಬಿಡುಗಡೆ ಮಾಡಿದೆ.

6.2.1.3 ರಾಜ್ಯ ಸರ್ಕಾರದ ಇಲಾಖೆಗಳ ಅನುದಾನದ ತಾತ್ಪೂರ್ತಿಕ ಯೋಜನೆಗಳು

2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಸರ್ಕಾರದ ಇಲಾಖೆಗಳಿಂದ ತಾತ್ಪೂರ್ತಿಕ ಸಂಶೋಧನಾ ಪ್ರಾಯೋಜನೆಗಳಿಗೆ 773.89 ಲಕ್ಷ ರೂ.ಗಳನ್ನು ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯ ಪ್ರಾಯೋಜನೆಗಳಿಗೆ 267.00 ಲಕ್ಷ ರೂ.ಗಳನ್ನು ಸ್ವೀಕರಿಸಿದೆ.

6.2.2 ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅನುದಾನಗಳು

ಭಾರತೀಯ ಕೃಷಿ ಅನುಸಂಧಾನ ಪರಿಷತ್ 2018–19ನೇ ಸಾಲಿನಲ್ಲಿ ಈ ಮುಂದೆ ವಿವರಿಸಿದ ಶೀರ್ಷಿಕೆಗಳಡಿ ರೂ.3749.18 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಿದೆ.

Research, Extension Education and General Administration.

6.2.1.3 Ad-hoc Schemes of Departments of State Government

University received Rs.773.89 lakhs towards ad-hoc research schemes from the Departments of State Government and Rs.267.00 lakhs under RKVY projects during the year 2018-19.

6.2.2 Grants from ICAR

Indian Council of Agricultural Research has released Rs.3749.18 lakh during the year 2018-19 under the following Tables.

ಕೋಷ್ಟಕ 50 : ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನಿಂದ ಸ್ವೀಕರಿಸಿದ ಧನಸಹಾಯ
Table 50 : Grants Received from ICAR

ಕ್ರ.ಸಂ. / Sl.No.	ಶೀರ್ಷಿಕೆಗಳು / Heads	ಬಿಡುಗಡೆ ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ) / Amount released in Lakhs
1.	ಕೃಷಿ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿ ಮತ್ತು ಸಬಲೀಕರಣ Development and strengthening of Agricultural Universities	965.04
2.	ತಾತ್ಪೂರ್ತಿಕ ಮತ್ತು ಅಖಿಲ ಭಾರತ ಸಂಯೋಜಿತ ಸಂಶೋಧನಾ ಪ್ರಾಯೋಜನೆಗಳು All India Co-ordinated Research Projects and Ad-hoc Projects	2784.18
	ಒಟ್ಟು / Total	**3749.18**

6.2.3 ಭಾರತ ಸರ್ಕಾರದ ಅನುದಾನ

2018–19ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಭಾರತ ಸರ್ಕಾರದ ವಿವಿಧ ಇಲಾಖೆಗಳಾದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ, ಜೈವಿಕ ತಂತ್ರಜ್ಞಾನ ಇಲಾಖೆ, ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್, ಕೃಷಿ ಮತ್ತು ಸಹಕಾರ ಮುಂತಾದ ಇಲಾಖೆಗಳಿಂದ ನಿರ್ದಿಷ್ಟ ಸಂಶೋಧನಾ ಕಾರ್ಯಕ್ರಮಗಳಿಗೆ 1215.66 ಲಕ್ಷ ರೂ.ಗಳ ಅನುದಾನವನ್ನು ಸ್ವೀಕರಿಸಿದೆ.

6.2.4 ಇತರೆ ನಿಯೋಗಳಿಂದ ಪ್ರಾಯೋಜಿತ ಪ್ರಾಯೋಜನೆಗಳು

2018–19ನೇ ಸಾಲಿನಲ್ಲಿ ಇತರ ಏಜೆನ್ಸಿಗಳಿಂದ 433.50 ಲಕ್ಷ ರೂ.ಗಳ ಮೊತ್ತದ ಧನಸಹಾಯವನ್ನು ಸ್ವೀಕರಿಸಿದೆ.

6.2.5. 2018–19ರ ಸಾಲಿನ ಸ್ವೀಕೃತಿಗಳ ಸಾರಾಂಶ (ತಾತ್ಕಾಲಿಕ)

ವಿಶ್ವವಿದ್ಯಾನಿಲಯವು 2018–19ರ ಸಾಲಿನಲ್ಲಿ ಸ್ವೀಕರಿಸಿದ ಒಟ್ಟು ಅನುದಾನದ (ತಾತ್ಕಾಲಿಕ) ವಿವರವನ್ನು ಕೋಷ್ಟಕ 50ರಲ್ಲಿ ನೀಡಲಾಗಿದೆ.

6.2.3 Grants from Government of India

During 2018-19, University received Rs.1215.66 lakhs from different Departments of Government of India *viz.,* Ministry of Science & Technology, Department of Biotechnology, CSIR, Department of Agriculture and Co-operation, etc. towards specific research programmes.

6.2.4 Schemes sponsored by other Agencies

The fund received by other agencies amounted to Rs.433.50 lakhs during 2018-19.

6.2.5 Summary of receipts for the year 2018-19 (Provisional)

Table 50 provides the details of total grants received (Provisional) by the University during 2018-19.

6.3 2018–19ನೇ ಸಾಲಿನ ಖರ್ಚು

6.3 Expenditure during 2018-19

6.3.1. ರಾಜ್ಯ ಸರಕಾರದ ಅನುದಾನಗಳು

6.3.1 Grants from State Government

6.3.1.1 ವೇತನ ಅನುದಾನ

ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ ಬಡ್ತಿಯ ನೀಡುವ ಮೂಲಕ ಮತ್ತು ಹೆಚ್ಚುವರಿ ಭತ್ಯೆ ಪಾವತಿಸುವ ನಿಟ್ಟಿನಲ್ಲಿ ಯೋಜನೇತರ ವೇತನದಡಿ ವೆಚ್ಚದ ಅಂಶ ಪ್ರತಿವರ್ಷ ಹೆಚ್ಚುತ್ತಲಿದೆ.

6.3.1.1 Grant-in-Aid Salary

On account of promotion of both Teaching and Non-teaching staff and payment of increased DA, the share of expenditure on salary under non-plan has been increasing year after year.

ಕೋಷ್ಟ 51 : ವಿವಿಧ ಮೂಲಗಳಿಂದ ಸ್ವೀಕರಿಸಿದ ಅನುದಾನ

Table 51 : Grants received from different sources

(ಲಕ್ಷ ರೂಗಳಲ್ಲಿ) / (Rs. in lakhs)

ಕ್ರ.ಸಂ. / Sl.No.		ಮೂಲ / Source	2018-19	ಶೇಕಡಾವಾರು ಪಾಲು / Per cent share
I		***ರಾಜ್ಯ ಸರ್ಕಾರ / State Government***		
	i	ಯೋಜನೇತರ ಅನುದಾನ Non-Plan Grants	19582.01	61.38
	ii	ಯೋಜನಾ ಅನುದಾನ Plan Grants	2694.00	8.44
	iii	ಗ್ರಾ.ಕೃ.ಕಾ.ಅ.(ರೈ.ಸಂ.ಕೇ.) RAWE (RSK's)	48.75	0.15
	iv	ತಾತ್ಪೂರ್ತಿಕ ಯೋಜನೆಗಳು Ad-hoc Schemes	773.89	2.43
		ಒಟ್ಟು - I / Total - I	**23098.65**	**72.40**
II		***ಭಾರತೀಯ ಕೃಷಿ ಅನುಸಂಧಾನ ಪರಿಷತ್ತು / ICAR***		
	i	ಅಭಿವೃದ್ಧಿ ಅನುದಾನ Development Grants	965.04	3.02
	ii	ಸಂಯೋಜಿತ ಸಂಶೋಧನಾ ಪ್ರಾಯೋಜನೆಗಳು Co-ordinated Research Projects	2784.14	8.73
		ಒಟ್ಟು - II / Total - II	**3749.18**	**11.75**
III		***ಭಾರತ ಸರ್ಕಾರ / Government of India***	1215.66	3.81
	i	ಇತರ ಏಜನ್ಸಿಗಳು Other Agencies	433.50	1.36
	ii	ಆಂತರಿಕ ಸ್ವೀಕೃತಿ Internal Receipts	2659.39	8.34
	iii	ರಾ.ಕೃ.ವಿ.ಯೋ. RKVY	267.00	0.84
	iv	ನಬಾರ್ಡ್ NABARD	51.50	0.16
	v	ಎಸ್.ಸಿ.ಪಿ.ಎಸ್./ಟಿ.ಎಸ್.ಪಿ. SCPS / TSP (IFSC ಕಾರ್ಯಕ್ರಮ, ಲ್ಯಾಪ್‌ಟಾಪ್ ಮತ್ತು EBl ಶುಲ್ಕಗಳು) (IFSC Programme, Laptop and EBl Charges)	430.00	0.16
		ಒಟ್ಟು - III / Total - III	**5057.05**	**15.85**
		ಒಟ್ಟು (I+II+III) / Grand Total (I+II+III)	**31904.88**	**100.00**

ಕೋಷ್ಟಕ 52 : ರಾಜ್ಯ ಸರ್ಕಾರದಿಂದ ಪಡೆದ ಅನುದಾನ (ಯೋಜನೇತರ) ವೆಚ್ಚ

(ಲಕ್ಷ ರೂಗಳಲ್ಲಿ) / (Rs. in lakhs)

Table 52 : Expenditure under grants received from State Government (Non-plan)

ಕ್ರ.ಸಂ. / Sl.No	ವರ್ಗ / Category	2010-11	2011-12	2012-13	2013-14	2014-15	2015-16	2016-17	2017-18	2018-19
1	ವೇತನ ವೆಚ್ಚ Salary Expenditure	10050.49 (99.11)	10906.17 (99.05)	13422.89 (99.15)	14386.15 (98.99)	15174.06 (98.36)	16637.70 (97.18)	18003.14 (99.15)	18378.62	18487.01
2	ವೇತನೇತರ ವೆಚ್ಚ Non salary Expenditure	89.61 (0.89)	104.03 (0.95)	114.00 (0.85)	146.94 (1.01)	253.33 (1.64)	482.42 (2.81)	153.38 (0.85)		
	ಒಟ್ಟು / Total	**10140.10**	**11010.20**	**13353.89**	**14533.09**	**15427.39**	**17120.15**	**18156.94**	**18378.62**	**18487.01**

(ಆವರಣದಲ್ಲಿ ನಮೂದಿಸಿರುವ ಸಂಖ್ಯೆಯು ಯೋಜನೇತರ ವೆಚ್ಚದಲ್ಲಿ ಶೇಕಡಾವಾರು ಹಂಚಿಕೆಗಳನ್ನು ಸೂಚಿಸುತ್ತದೆ.)

(Figures in bracket indicate per cent share to the total expenditure under non-plan)

6.3.1.2 ಸಾಮಾನ್ಯ ಅನುದಾನ

2018–19ನೇ ಸಾಲಿನಲ್ಲಿ ರಾಜ್ಯ ಸರಕಾರದ ಸಾಮಾನ್ಯ ಅನುದಾನದ 794.00 ಲಕ್ಷ ರೂ.ಗಳನ್ನು ಕೃಷಿ ಶಿಕ್ಷಣಕ್ಕೆ ಹಾಗೂ 1900.00 ಲಕ್ಷ ರೂ.ಗಳನ್ನು ಕೃಷಿ ಸಂಶೋಧನೆಗೆ ಸಂಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

6.3.1.3 ರಾಜ್ಯ ಸರಕಾರದ ಇಲಾಖೆಗಳಿಂದ ಅನುದಾನಿತ ತಾತ್ಪೂರ್ತಿಕ ಯೋಜನೆಗಳು

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯವು ರಾಜ್ಯ ಸರಕಾರದ ವಿವಿಧ ಇಲಾಖೆಗಳ ಅನುದಾನ ಹಾಗೂ ಹಿಂದಿನ ವರ್ಷದ ಖರ್ಚಾಗದೆ ಬಾಕಿ ಉಳಿದ ಹಣವನ್ನು ಬಳಸಿಕೊಂಡು ಒಟ್ಟು 1155.88 ಲಕ್ಷ ರೂ.ಗಳಿಂದ 45 ಪ್ರಾಯೋಜನೆಗಳನ್ನು ಕಾರ್ಯಗತಗೊಳಿಸಿದೆ.

2018–19ನೇ ಸಾಲಿನಲ್ಲಿ ನಬಾರ್ಡ್ ಅನುದಾನದಡಿಯಲ್ಲಿ 51.50 ಲಕ್ಷ ವೊತ್ತವನ್ನು ಮತ್ತು ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಅನುದಾನದಡಿಯಲ್ಲಿ 351.64 ಲಕ್ಷ ವೊತ್ತವನ್ನು ಖರ್ಚು ಮಾಡಲಾಗಿದೆ.

6.3.2. ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅನುದಾನಗಳು

ಅ) ಅಭಿವೃದ್ಧಿ ಅನುದಾನಗಳು : 2018–19ನೇ ಸಾಲಿನಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ಅನುಮೋದಿತ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ 965.04 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಆ) ಸಂಶೋಧನಾ ಪ್ರಾಯೋಜನೆಗಳು–ಭಾರತೀಯ ಕೃಷಿ ಅನುಸಂಧಾನ ಪರಿಷತ್ತು : ಹೊಸ ಹಾಗೂ ಮುಂದುವರಿದ ಕಾರ್ಯಕ್ರಮಗಳಿಗೆ 2018–19ನೇ ಸಾಲಿನಲ್ಲಿ 3014.91 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ (136 ಪ್ರಾಯೋಜನೆಗಳು).

6.3.3 ಭಾರತ ಸರಕಾರದ ವಿವಿಧ ಇಲಾಖೆಗಳ ಅನುದಾನದ ಯೋಜನೆಗಳು

ಭಾರತ ಸರಕಾರದ ವಿವಿಧ ಇಲಾಖೆಗಳ ಅನುದಾನದ ವಿವಿಧ ಪ್ರಾಯೋಜನೆಗಳಿಗೆ 1393.22 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ (144 ಪ್ರಾಯೋಜನೆಗಳು)

6.3.4 ಇತರ ಏಜೆನ್ಸಿಗಳ ಧನಸಹಾಯದ ಯೋಜನೆಗಳು

ಇತರ ಏಜೆನ್ಸಿಗಳ ಧನಸಹಾಯದಿಂದ 2018–19ನೇ ಸಾಲಿನಲ್ಲಿ ಒಟ್ಟು 69 ಪ್ರಾಯೋಜನೆಗಳು ಕಾರ್ಯಾಚರಣೆಯಲ್ಲಿದ್ದವು. ಈ ಯೋಜನೆಗಳಿಗೆ ಒಟ್ಟು 280.16 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

2018–19ರ ಅವಧಿಯಲ್ಲಿ ವಿಶ್ವವಿದ್ಯಾಲಯಕ್ಕೆ ಸ್ವೀಕೃತಿಗೊಂಡದ್ದು ಒಟ್ಟು 31856.13 ಲಕ್ಷ ರೂ.ಗಳು ಅದರಲ್ಲಿ 29488.36 ಲಕ್ಷ ರೂ.ಗಳು ಮೊತ್ತವು ಖರ್ಚಾಗಿದೆ.

6.3.1.2 Grant-in-Aid General

State Government Grant-in-Aid general grants of Rs.794.00 lakhs towards Agricultural Education and Rs.1900.00 lakhs towards Agricultural Research during the year 2018-19 have been fully utilized.

6.3.1.3 Ad-hoc Schemes funded by different Departments of State Government

University operated 45 projects funded by several Departments of State Govt. including RKVY and incurred an expenditure of Rs.1155.88 lakhs including utilization of the unspent balances of the previous year.

An amount of Rs.51.50 lakhs during 2018-19 has been spent under NABARD grants and Rs.351.64 lakhs spent under SCSP / TSP grants.

6.3.2 ICAR Grants

a) ***Development Grants :*** The amount spent during 2018-19 for several ICAR approved development programmes was Rs.965.04 lakhs.

b) ***Research Projects – ICAR :*** An amount of Rs.3014.91 lakhs during 2018-19 has been spent for continued and new programmes (136 projects).

6.3.3 Schemes Funded by various Departments of Government of India

An expenditure to the tune of Rs.1393.22 lakhs was spent in the various projects funded by several Departments of Government of India (144 projects).

6.3.4 Schemes Funded by other Agencies

A total of 69 projects were in operation during 2018-19 funded by other agencies. The amount spent in these projects was Rs.280.16 lakhs.

During 2018-19 the total receipt of the University was Rs.31856.13 lakhs out of that the expenditure was Rs.29488.36 lakhs.

6.4 ನಿವೃತ್ತಿ ಸೌಲಭ್ಯದ ಲೆಕ್ಕದ ವಿವರಗಳು

6.4.1 ಭವಿಷ್ಯ ನಿಧಿ

ಈ ನಿಧಿಯಲ್ಲಿ 01.04.2018ರಂತೆ ಒಟ್ಟು 997 ಖಾತೆಗಳಿದ್ದು, ಅವುಗಳಲ್ಲಿ 74 ಜಿ.ಪಿ.ಎಫ್. ಖಾತೆಗಳ 6,07,72,808.00 ರೂ.ಗಳ ಮೊತ್ತವನ್ನು ಅಂತಿಮ ಇತ್ಯರ್ಥಗೊಳಿಸಿ ನಿವೃತ್ತಿ ಹೊಂದಿದವರಿಗೆ/ ಸ್ವಯಂ ನಿವೃತ್ತಿ ಯೋಜನೆಯವರಿಗೆ/ಮೃತಪಟ್ಟ ಸಿಬ್ಬಂದಿಗಳ ಕುಟುಂಬದವರಿಗೆ ಪಾವತಿಸಲಾಗಿದೆ. ಇದರಂತೆ ದಿನಾಂಕ: 31.3.2019ರಂದು ಒಟ್ಟು 923 ಖಾತೆಗಳಿವೆ.

01.4.2018ರಿಂದ 31.3.2019ರ ಅವಧಿಯಲ್ಲಿ 305 ತಾತ್ಕಾಲಿಕ ಮುಂಗಡಗಳಿಗೆ ಹಾಗೂ 168 ಭಾಗಶಃ ಅಂತಿಮ ಹಿಂಪಡೆಯುವಿಕೆಗೆ 4,07,26,369.00 ರೂ.ಗಳ ಮೊತ್ತವನ್ನು ಹಾಗೂ 2,17,78,079.00 ರೂ.ಗಳನ್ನು ಅನುಕ್ರಮವಾಗಿ ಚಂದಾದಾರರಿಗೆ ಪಾವತಿಸಲಾಗಿದೆ.

6.4.2 ಕುಟುಂಬ ಕಲ್ಯಾಣ ನಿಧಿ

ಈ ನಿಧಿಯಲ್ಲಿ 1.4.2018ರಂತೆ 799 ಸದಸ್ಯರಿದ್ದರು. ನೌಕರರ ಪ್ರಯೋಜನಕ್ಕಾಗಿ ಗುಂಪು ಉಳಿತಾಯ ಲಿಂಕ್ಡ್ ವಿಮೆ ಯೋಜನೆ ಪರಿಚಯಿಸಿದುದರ ಪರಿಣಾಮವಾಗಿ ಈ ನಿಧಿಗೆ 1ನೇ ಆಗಸ್ಟ್ 1991ರಿಂದ ಜಾರಿಗೆ ಬರುವಂತೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವುದನ್ನು ನಿಲ್ಲಿಸಲಾಗಿದೆ. ಈ ನಿಧಿಯು 31.03.2019ರಂತೆ 799 ಖಾತೆಗಳನ್ನು ಹೊಂದಿದೆ.

6.4.3 ಗುಂಪು ಉಳಿತಾಯ ಲಿಂಕ್ಡ್ ವಿಮಾ ಯೋಜನೆ

ನೌಕರರ ಪ್ರಯೋಜನಕ್ಕಾಗಿ 1991 ಆಗಸ್ಟ್ 1ರಿಂದ ಜಾರಿಗೆ ಬರುವಂತೆ ಗುಂಪು ಉಳಿತಾಯ ಲಿಂಕ್ಡ್ ವಿಮಾ ಯೋಜನೆಯನ್ನು ಪರಿಚಯಿಸಲಾಗಿದೆ. 1.4.2018ಕ್ಕೆ 1093 ಸಿಬ್ಬಂದಿಗಳಿದ್ದರು. ನಿವೃತ್ತಿ/ ಮರಣ/ರಾಜೀನಾಮೆ ಸಂದರ್ಭದಲ್ಲಿ 1,47,96,205.00 ಮೊತ್ತದ 85 ಜನ ನೌಕರ ಹಕ್ಕೋತ್ತಾಯ ನಮೋನೆಗಳನ್ನು ಭಾರತದ ಭಾರತೀಯ ಜೀವ ವಿಮಾ ನಿಗಮಕ್ಕೆ ಸಲ್ಲಿಸಲಾಗಿದೆ. 31.3.2019ಕ್ಕೆ ಈ ಯೋಜನೆಯಲ್ಲಿ 1008 ಸಿಬ್ಬಂದಿಗಳು ಈ ಯೋಜನೆಯಲ್ಲಿದ್ದಾರೆ.

6.4.4 ನಿವೃತ್ತಿ ವೇತನ ನಿಧಿ

ವಿಶ್ವವಿದ್ಯಾಲಯವು 1.4.2018ಕ್ಕೆ 2106 ನಿಯಮಿತ ನಿವೃತ್ತಿ ಹಾಗೂ 1502 ಕುಟುಂಬ ನಿವೃತ್ತಿ ಒಳಗೊಂಡಂತೆ ಒಟ್ಟು 604 ನಿವೃತ್ತಿ ವೇತನದಾರರನ್ನು ಹೊಂದಿದೆ. 1.4.2018ರಿಂದ 31.3.2019ರವರೆಗಿನ ಅವಧಿಯಲ್ಲಿ 74 ಜನ ಹೊಸ ನಿವೃತ್ತಿ ವೇತನದಾರರ ಹಾಗೂ 31 ಜನ ಕುಟುಂಬ ವೇತನದಾರರ ವೇತನವನ್ನು ಆರಂಭಿಸಲಾಗಿದೆ. 39 ನಿವೃತ್ತ ವೇತನದಾರರ ಮತ್ತು 17 ಕುಟುಂಬ ವಿವೃತ್ತವೇತನಾದರ ವೇತನವನ್ನು ಅವರ ಮರಣ ಕಾರಣವಾಗಿ ನಿಲ್ಲಿಸಲಾಗಿದೆ. 7 ಜನರ ನಿವೃತ್ತವೇತನ ಮತ್ತು 9 ಜನರ ಕುಟುಂಬ ವೇತನದಾರರ ವೇತನವನ್ನು ಅವರ ಜೀವನ ಪ್ರಮಾಣ ಪತ್ರವನ್ನು ಸಲ್ಲಿಸದ್ದಕ್ಕೆ ವೇತನವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ. ಹೀಗಾಗಿ 31.3.2019ಕ್ಕೆ 1537 ನಿಯಮಿತ ಪಿಂಚಣಿದಾರರು ಹಾಗೂ 618 ಕುಟುಂಬ ಪಿಂಚಣಿದಾರರು ಒಳಗೊಂಡಂತೆ 2155 ಜನ ಪಿಂಚಣಿದಾರರಿದ್ದರು. 1.4.2018 ರಿಂದ 31.3.2019ರ ಅವಧಿಯಲ್ಲಿ 84,74,58,040.00 ಮೊತ್ತವನ್ನು ನಿವೃತ್ತಿ ವೇತನ, ಗ್ರ್ಯಾಚ್ಯುಟಿ ಮತ್ತು ಕಮ್ಯುಟೇಶನ್ ರೂಪದಲ್ಲಿ ಪಿಂಚಣಿದಾರರಿಗೆ / ಕುಟುಂಬ ಪಿಂಚಣಿದಾರಿಗೆ ಪಾವತಿಸಲಾಗಿದೆ.

6.4 Accounts Details of Retirement Benefits

6.4.1 Provident Fund

As on 01.04.2018 there were 997 accounts out of which, 74 GPF accounts amounting to Rs.6,07,72,808.00 were processed for final settlement and paid to the claimants due to retirement / VRS / death of the subscribers. Thus, as on 31.03.2019 there were 923 accounts.

